Bennett & Coleman
THE TIMES OF INDIA
ಬುಧವಾರ,29 ಏಪ್ರಿಲ್ 2026 | ಪುಟಗಳು: 18 | ಬೆಲೆ: ₹ 5.00
www.vijaykarnataka.com
c
VK
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA
ಸಂಪುಟ: 27 | ಸಂಚಿಕೆ: 118

ವಿಜಯ ಕರ್ನಾಟಕ

ಶತ್ರುಗಳ ಕೈಗೆ ಸಿಗದಂತೆ ನೀವೇ ಸ್ಫೋಟಿಸಿಕೊಳ್ಳಿ: ಸೈನಿಕರಿಗೆ ಉತ್ತರ ಕೊರಿಯಾ ಅಧ್ಯಕ್ಷ ಆದೇಶ

ನೀವು 'ಸಿಂಗಂ' ಆದರೆ ನಾನು 'ಪುಷ್ಪ': ಎನ್‌ಕೌಂಟರ್ ಸ್ಪೆಷಲಿಸ್ಟ್ ಖ್ಯಾತಿಯ ಐಪಿಎಸ್ ಅಧಿಕಾರಿ ಅಜಯ್ ಶರ್ಮಾಗೆ ಟಿಎಂಸಿ ನಾಯಕನ ಸವಾಲು

2009ರ ಬ್ಲಾಕ್‌ಬಸ್ಟರ್ ಚಿತ್ರ ತ್ರೀ ಈಡಿಯಟ್ಸ್ ಸೀಕ್ವೆಲ್ ಖಚಿತಪಡಿಸಿದ ಆಮೀರ್ ಖಾನ್

THE ORIGINAL ABHARAN® UDUPI | Head office and Registered office: Corporation Bank Road, Udupi-576101
Mangaluru: Shivbagh & Mannagudde | Shivamogga | Kundapur | Karkala | Byndoor | Hebri | Kumta | Chikmagalur | Padubidri
Brahmavara | Belthangady | Sagara | Thirthahalli | Jayanagar, Bengaluru | Goa: Panjim & Margao | Toll Free: 1800 5999 777 | www.abharan.com
Our Official Store in Bengaluru, Only at 5th Block, Jayanagar.

Bennett & Coleman THE TIMES OF INDIA
ಸಂಪಾದಕೀಯ EDITORIAL

ಶೈಕ್ಷಣಿಕ ವಲಯಕ್ಕೇ ಮಸಿ

ನಕಲಿ ಪದವಿಗಳ ಕರಾಳ ಜಾಲ ಅಕ್ಷಮ್ಯ

ರಾಜ್ಯದ ಸರಕಾರಿ ಪದವಿ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅತಿಥಿ ಉಪನ್ಯಾಸಕರ ಪಿಎಚ್.ಡಿ ಪ್ರಮಾಣಪತ್ರಗಳ ನೈಜತೆ ಪತ್ತೆಹಚ್ಚಲು ಕಾಲೇಜು ಶಿಕ್ಷಣ ಇಲಾಖೆ 'ಪ್ರಮಾಣಿತ ಕಾರ್ಯಾಚರಣೆಯ ವಿಧಾನ' (SOP) ಜಾರಿಗೆ ತಂದ ಬೆನ್ನಲ್ಲೇ, ಸುಮಾರು 400ಕ್ಕೂ ಹೆಚ್ಚು ಉಪನ್ಯಾಸಕರು ಏಕಾಏಕಿ ರಾಜೀನಾಮೆ ನೀಡಿರುವುದು ಆಘಾತಕಾರಿ ಮತ್ತು ನಾಚಿಕೆಗೇಡಿನ ಸಂಗತಿ. ತನಿಖೆಗೆ ಹೆದರಿ ಈ ರೀತಿ ಸಾಮೂಹಿಕವಾಗಿ ನಿರ್ಗಮಿಸಿರುವುದು, ಶೈಕ್ಷಣಿಕ ಕ್ಷೇತ್ರದಲ್ಲಿ ನಕಲಿ ಪದವಿಗಳ ಬೇರು ಎಷ್ಟು ಆಳವಾಗಿ ಬೇರೂರಿದೆ ಎಂಬುದಕ್ಕೆ ಸಾಕ್ಷಿ. ಜ್ಞಾನದ ದೇಗುಲಗಳೆಂದು ಕರೆಯಲಾಗುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರಾಗಬೇಕಾದವರೇ ಅಡ್ಡದಾರಿ ಹಿಡಿದಿರುವುದು ಇಡೀ ವ್ಯವಸ್ಥೆ ತಲೆತಗ್ಗಿಸುವ ವಿಚಾರವೂ ಹೌದು.

ವಿಶ್ವವಿದ್ಯಾಲಯ ಧನಸಹಾಯ ಆಯೋಗದ(ಯುಜಿಸಿ) ನಿಯಮಗಳ ಪ್ರಕಾರ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರಾಗಲು ನೆಟ್, ಕೆ-ಸೆಟ್ ಅಥವಾ ಪಿಎಚ್.ಡಿ ಕಡ್ಡಾಯ. ಆದರೆ, ಈ ಅರ್ಹತೆಯನ್ನು ಬೆವರು ಸುರಿಸಿ ಪಡೆಯುವ ಬದಲು, ಲಕ್ಷಾಂತರ ರೂಪಾಯಿ ಹಣ ನೀಡಿ ಹೊರರಾಜ್ಯಗಳ ವಿಶ್ವವಿದ್ಯಾಲಯಗಳಿಂದ ಅಂಗಡಿ ಸರಕಿನಂತೆ ಪಿಎಚ್.ಡಿ ಪದವಿ ಖರೀದಿಸಿರುವುದು ಅಕ್ಷಮ್ಯ ಅಪರಾಧ. ವರ್ಷಾನುಗಟ್ಟಲೆ ಸಂಶೋಧನೆ ನಡೆಸಿ, ಗ್ರಂಥಾಲಯಗಳಲ್ಲಿ ಅಧ್ಯಯನ ನಡೆಸಿ, ನೈಜ ದಾರಿಯಲ್ಲಿ ಪದವಿ ಪಡೆದ ಪ್ರತಿಭಾವಂತ ಅಭ್ಯರ್ಥಿಗಳಿಗೆ ಇವರು ಮಾಡಿದ್ದು ದ್ರೋಹವಲ್ಲವೇ? ಹಣ ನೀಡಿ ಪಿಎಚ್‌ಡಿ ಗಳಿಸುವ ಈ ಅಕ್ರಮ ದಾರಿಯು ಶೈಕ್ಷಣಿಕ ಗುಣಮಟ್ಟವನ್ನೇ ಹಳ್ಳ ಹಿಡಿಸುತ್ತಿರುವುದೂ ದುರಂತ.

ಇಲ್ಲಿ ಕೇವಲ ಹಣ ನೀಡಿ ಪದವಿ ಪಡೆದವರದ್ದು ಮಾತ್ರ ತಪ್ಪಲ್ಲ. ಅಕ್ರಮವಾಗಿ ಪದವಿ ಹಂಚುವ ವಿವಿಗಳು ಮತ್ತು ಇಂಥ ಅಕ್ರಮಗಳಿಗೆ ಸಾಕ್ಷಿಯಾಗಿಯೂ ಸುಮ್ಮನಿರುವ ವ್ಯವಸ್ಥೆಯೂ ಇದರ ಹೊಣೆ ಹೊರಲೇಬೇಕು. ಸಾಲಸೋಲ ಮಾಡಿ ಪದವಿ ಖರೀದಿಸಿದ್ದೇವೆ, ಅನಾರೋಗ್ಯ ಮುಂತಾದ ನೆಪಗಳನ್ನು ರಾಜೀನಾಮೆದಾರರಿಂದ ಕೇಳಿ ಇಂಥ ವಂಚನೆಯನ್ನು ಸಮರ್ಥಿಸಿಕೊಳ್ಳಲಾಗದು. ಕಾನೂನುಬಾಹಿರವಾಗಿ ಹುದ್ದೆ ಗಿಟ್ಟಿಸಿದವರು ತರಗತಿಯಲ್ಲಿ ಕುಳಿತು ವಿದ್ಯಾರ್ಥಿಗಳಿಗೆ ಯಾವ ನೈತಿಕತೆ ಬೋಧಿಸಬಲ್ಲರು? ಸಮಾಜಕ್ಕೆ ಇವರು ನೀಡುವ ಸಂದೇಶವಾದರೂ ಏನು?

ತನಿಖೆ ಆರಂಭವಾದ ತಕ್ಷಣ 400 ಮಂದಿ ರಾಜೀನಾಮೆ ನೀಡಿದ್ದಾರೆ ಎಂದರೆ, ಇಷ್ಟು ದಿನ ನಕಲಿ ದಾಖಲೆಗಳೊಂದಿಗೆ ಬೋಧನೆ ಮಾಡುತ್ತಿದ್ದವರನ್ನು ಗುರುತಿಸುವಲ್ಲಿ ಇಲಾಖೆ ಸಂಪೂರ್ಣ ವಿಫಲವಾಗಿದ್ದೇಕೆ? ಕೇವಲ ರಾಜೀನಾಮೆ ಸ್ವೀಕರಿಸಿದರೆ ಸಾಕೆ? ಈ ಬಗ್ಗೆ ಕಾಲೇಜು ಶಿಕ್ಷಣ ಇಲಾಖೆ ತನಿಖೆ ನಡೆಸಿ, ತಪ್ಪಿತಸ್ಥರು ಕಂಡು ಬಂದರೆ ಕ್ರಮ ಕೈಗೊಳ್ಳಲಿ. ಹೊರರಾಜ್ಯದ ಯಾವ ವಿವಿಗಳು ಇಂಥ ನಕಲಿ ಪದವಿಗಳ ಮಾರಾಟ ಜಾಲದಲ್ಲಿ ತೊಡಗಿವೆ ಎಂಬುದನ್ನು ಭೇದಿಸಿ, ಅವುಗಳ ವಿರುದ್ಧವೂ ಸರಕಾರ ಮತ್ತು ಯುಜಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿ. ಇಲ್ಲದಿದ್ದರೆ, ಪದವಿಗಳು ಕೇವಲ ಕಾಗದ ಪತ್ರಗಳಾಗುತ್ತವೆ. ಪ್ರತಿಭೆಗಿಂತ ಹಣವೇ ಶೈಕ್ಷಣಿಕ ಅರ್ಹತೆ ನಿರ್ಧರಿಸುವುದಾದರೆ ನಮ್ಮ ಮಕ್ಕಳೇಕೆ ಶಿಕ್ಷಣ ಪಡೆಯಬೇಕು ಎಂದು ಇತರೆ ಪೋಷಕರೂ ಯೋಚಿಸಿದರೆ ಗತಿಯೇನು? ಶೈಕ್ಷಣಿಕ ವ್ಯವಸ್ಥೆಗೆ ಮಸಿ ಬಳಿಯುವ ಕೆಲಸಗಳು ಕಟ್ಟುನಿಟ್ಟಾಗಿ ನಿಲ್ಲಲಿ.

ಬೋಧಿ ವೃಕ್ಷ

ವರ್ಣವೆಂದರೆ ವರ್ಗವಲ್ಲ

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ, ಸಮಾಜದ ನಾಲ್ಕು ಅಂಗಗಳಾದ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು ಮತ್ತು ಶೂದ್ರರನ್ನು ಸೃಷ್ಟಿಸಿದವನು ನಾನೇ ಎಂದು ಘೋಷಿಸುತ್ತಾನೆ. ಇಲ್ಲಿ ಬಳಸಲು ಸರಿಯಾದ ಪರಿಭಾಷೆ ಎಂದರೆ ಅಂಗಗಳು. ಇದು ವರ್ಗ ಅಥವಾ ವಿಭಾಗಗಳಿಂದಲೂ ಹೆಚ್ಚು ಸರಿಹೊಂದುವ ಪದ. ಈ ಪದಗಳು ಸಮಾಜದಲ್ಲಿ ಹಲವು ದಶಕಗಳಿಂದ ಅಶಾಂತಿ ಮತ್ತು ವಿವಾದಗಳಿಗೆ ಕಾರಣವಾಗಿರುವ ಪದಗಳಾಗಿವೆ.

ಜನರ ಗುಣಗಳು, ಆಸಕ್ತಿಗಳು ಹಾಗೂ ಅರ್ಹತೆಗಳನ್ನು ಆಧರಿಸಿ ಈ ನಾಲ್ಕು ಅಂಗಗಳನ್ನು ಶ್ರೀಕೃಷ್ಣ ಉಲ್ಲೇಖಿಸುತ್ತಾನೆ. ಕೆಳ ಮತ್ತು ಉನ್ನತ ವರ್ಗಗಳು ಎಂದು ಸೂಚಿಸಲಾದ ಜಾತಿ ಎಂಬ ಪದವು ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ಎಂದಿಗೂ ಒಂದು ಪರಿಕಲ್ಪನೆಯಾಗಿ ಅಸ್ತಿತ್ವದಲ್ಲಿ ಇಲ್ಲ. ಗುಲಾಬಿಯನ್ನು ಕಮಲಕ್ಕಿಂತ ಉತ್ತಮವೆಂದು ನಾವು ವರ್ಗೀಕರಿಸಬಹುದೇ? ಸೃಷ್ಟಿಯಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಸ್ಥಾನವಿದೆ.

ಪುರುಷ ಸೂಕ್ತವು ವಿರಾಟ್ ಪುರುಷನ ಮುಖದಿಂದ ಬ್ರಾಹ್ಮಣರು (ಬುದ್ಧಿವಂತ ವರ್ಗ), ಕೈಗಳಿಂದ ಕ್ಷತ್ರಿಯರು (ಯೋಧ ವರ್ಗ), ತೊಡೆಗಳಿಂದ ವೈಶ್ಯರು (ವ್ಯಾಪಾರಿಗಳು) ಮತ್ತು ಪಾದಗಳಿಂದ ಶೂದ್ರರು (ಕಾರ್ಮಿಕ ಶಕ್ತಿ) ಬಂದರೆಂದು ಹೇಳುತ್ತದೆ. ಒಬ್ಬ ವ್ಯಕ್ತಿಯು ತನ್ನ ತಲೆಗಿಂತ ತನ್ನ ಕಾಲುಗಳು ಕಡಿಮೆ ಎಂದು ಭಾವಿಸಿ, ಅವುಗಳನ್ನು ಬಿಟ್ಟುಕೊಡಲಾಗುವುದಿಲ್ಲ. ದೇಹಕ್ಕೆ ಪ್ರತಿಯೊಂದು ಅಂಗವೂ ಮುಖ್ಯವಾದಂತೆ, ಸಮಾಜದಲ್ಲಿ ಎಲ್ಲರೂ ಸಮಾನವಾಗಿ ಮುಖ್ಯರು. ನಾವು ಜನರನ್ನು ಅವರ ಸಹಜ ಯೋಗ್ಯತೆ ಮತ್ತು ಸಾಮರ್ಥ್ಯಗಳಿಗಾಗಿ ಗೌರವಿಸಬೇಕು. ಪ್ರತಿಯೊಬ್ಬರಿಗೂ ಅವರ ಹುಟ್ಟಿನ ಆಧಾರದ ಮೇಲೆ ಯಾವುದೇ ತಾರತಮ್ಯವಿಲ್ಲದೆ ಅವರ ಆಸಕ್ತಿಯ ಮಾರ್ಗವನ್ನು ಅನುಸರಿಸಲು ಅವಕಾಶ ನೀಡಬೇಕು. ಪ್ರಗತಿಗೆ ಅಡ್ಡಿಯನ್ನು ಉಂಟುಮಾಡಲು ತಾರತಮ್ಯ ಸೃಷ್ಟಿಸುವ ಬದಲು ಅವರ ಆಸಕ್ತಿಗಳನ್ನು ಪ್ರೋತ್ಸಾಹಿಸಬೇಕು.

ಸದ್ಗುರು ಶ್ರೀ ಮಧುಸೂದನ ಸಾಯಿ, ಸತ್ಯಸಾಯಿ ಗ್ರಾಮ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ

ವಿಕ ತಗೋ ಕನ್ನಡ

ಮುಸುಕಿನ ಗುದ್ದು

ಇದರ ಆಲಂಕಾರಿಕ ಅರ್ಥ: ''ಒಳಗೊಳಗೆ ಅನುಭವಿಸುವ ಹಿಂಸೆ, ಹೊರಗೆ ಕಾಣದ ನೋವು; ಕಣ್ಣಿಗೆ ಕಾಣದಂತೆ ಕೊಡುವ ಪೆಟ್ಟು.'' 'ಮುಸುಕಿನೊಳಗಿನ ಗುದ್ದು' ಎಂದರೆ ಇನ್ನಷ್ಟು ಸ್ಪಷ್ಟ. ಇದು ದೈಹಿಕ ತೊಂದರೆಗಿಂತ ಮಾನಸಿಕವಾಗಿ ಆಘಾತ ಮಾಡುತ್ತದೆ. ಶಂಕರ ಮೊಕಾಶಿ ಪುಣೇಕರರ 'ಗಂಗವ್ವ ಗಂಗಾಮಾಯಿ' ಕಾದಂಬರಿಯಲ್ಲಿ ಗಂಗವ್ವ-ರಾಘಪ್ಪನ ದೀರ್ಘದ್ವೇಷದ ಮಧ್ಯದಲ್ಲಿ, ಕಿಟ್ಟಿಯನ್ನು ತನ್ನ ಬುಟ್ಟಿಯೊಳಗೆ ಹಾಕಿಕೊಳ್ಳುವ ರಾಘಪ್ಪನ ಕೃತ್ಯಗಳು, ಗಂಗವ್ವನಿಗೆ ಸಹಿಸಲಾಗದ ಮುಸುಕಿನೊಳಗಿನ ಗುದ್ದು ಎಂದು ಓದುಗರಿಗೆ ತಿಳಿದುಹೋಗುತ್ತದೆ.

ಇದನ್ನೇ ಕೆ. ಸತ್ಯನಾರಾಯಣರ 'ನನ್ನ ಸೊಸೆಯ ಕಾಮನಬಿಲ್ಲು' ಕಥೆಯ ಸಾಲುಗಳಲ್ಲಿ ನೋಡಿ: ''... ಎಲ್ಲವೂ ಎಲ್ಲರಿಗೂ ಪ್ರತಿಷ್ಠೆಯ ವಿಷಯವೇ, ಯಾರದೂ ನೇರ ಮಾತಿಲ್ಲ, ಯಾರಲ್ಲೂ ನಿಷ್ಕಲ್ಮಷ ಮನಸ್ಸಿನ ಅಭಿಪ್ರಾಯವಿಲ್ಲ, ಎಲ್ಲವೂ ಮುಸುಕಿನೊಳಗಿನ ಗುದ್ದೇ. ಪ್ರೀತಿಯಿಲ್ಲದ ಮಾತುಗಳಿಗೆ ಪರಿಭಾಷೆಯ ಮುಖವಾಡ ಸರ್ವಜ್ಞತ್ವದ ಪೋಸು.''. - ಜಿ.ವಿ. ಅರುಣ

- ಪದ ಸೂಚಿಸಿದವರು: ರವೀಂದ್ರ ರೈ, ಬೆಂಗಳೂರು

ಬತ್ತಳಿಕೆ



ವಿಕ ಜೋಕ್ FALLS

ಸಂಗ್ಯಾ: ಮತದಾನದ ವಯಸ್ಸು 18, ಆದರೆ ಮದುವೆ ವಯಸ್ಸು ಏಕೆ 21?
ಡುಂಗ್ಯಾ: ಹೆಂಡತಿಯನ್ನು ನಿಭಾಯಿಸುವುದು, ದೇಶವನ್ನು ಮುನ್ನಡೆಸುವಷ್ಟು ಸಲೀಸಲ್ಲ, ಅದಕ್ಕೆ!

ಒಂದು ನಗರವನ್ನು ನಡುಗಿಸಲು ಭೂಕಂಪವೇ ಆಗಬೇಕೆಂದಿಲ್ಲ, ಕೆಲವೊಮ್ಮೆ ಸೂರ್ಯನೇ ಸಾಕು. ಈ ಸಲದ ಬಿಸಿಯು ಮಳೆಗಾಲ, ಚಳಿಗಾಲದ ಸವಾಲಿಗಿಂತಲೂ ಭಯಂಕರ. ಬೇಸಿಗೆಯ ಏಟು ಪ್ರವಾಹದಂತೆ ಕಣ್ಣಿಗೆ ಕಾಣುವುದಿಲ್ಲ, ಚಂಡಮಾರುತದಂತೆ ಶಬ್ದ ಮಾಡುವುದಿಲ್ಲ. ಮೊದಲು ದೇಹದ ನೀರನ್ನು ಕಸಿದುಕೊಳ್ಳುತ್ತದೆ, ನಂತರ ಉಸಿರನ್ನೇ ಭಾರವಾಗಿಸುತ್ತದೆ. ಕೊನೆಯಲ್ಲಿ ಬದುಕಿನ ಲಯವನ್ನೇ ಬದಲಾಯಿಸುತ್ತದೆ. ಈ ವರ್ಷದ ಇಂಥ ಬಿಸಿ ಪ್ರದೇಶದಲ್ಲಿ ಭಾರತವೇ ಅಗ್ರಸ್ಥಾನದಲ್ಲಿರುವುದು ಈಗಿನ ಎಚ್ಚರಿಕೆ.

ಬಿಸಿಲಿಗೆ ಬಾಡಿದ ಭಾರತ

ಟಾಪ್ 100 ಅತಿಬಿಸಿ ನಗರಗಳಲ್ಲಿ 95 ನಮ್ಮದೇ ನಗರಗಳು!

● ಪ್ರಮೋದ ಹರಿಕಾಂತ

ವಿಕ ಫೋಕಸ್

ಬೇಸಿಗೆಯ ಸ್ವರೂಪ ಬದಲಾಗಿ ಬಿಸಿಲಿಗೆ ರಸ್ತೆಗಳು ಖಾಲಿಯಾಗುತ್ತಿವೆ. ಅನಾರೋಗ್ಯದಿಂದ ಆಸ್ಪತ್ರೆಗಳಲ್ಲಿ ತುರ್ತು ವಿಭಾಗದಲ್ಲಿ ಕೆಲಸ ಹೆಚ್ಚಾಗಿದೆ. ರಸ್ತೆಗಳಲ್ಲಿ ನೀರಿನ ಟ್ಯಾಂಕರುಗಳ ಹಾಜರಾತಿ ಕಾಣಿಸುತ್ತಿದೆ. ಹಾಗೆ ಬಂದಿಳಿದ ಟ್ಯಾಂಕರ್‌ಗಳ ಹಿಂದೆ ಕೊಡಪಾನಗಳ ಜಗಳ ಜೋರಾಗಿದೆ. ರಾತ್ರಿಯಲ್ಲೂ ಟೈಲ್ಸುಗಳು, ಗೋಡೆಗಳು ಕಾದ ಕಾವಲಿಯಂತಾಗಿವೆ. ಏನಾಗಿದೆ ಈ ಭಾರತಕ್ಕೆ?

ಜಗತ್ತಿನ ಉಷ್ಣ ಪರಿಸ್ಥಿತಿ ಈಗ ಭಾರತದ ಬಾಗಿಲಿಗೆ ಬಂದು ನಿಂತಿದೆ. ಕೆಲ ದಿನಗಳಿಂದ ದಾಖಲಾಗುತ್ತಿರುವ ಗರಿಷ್ಠ ಉಷ್ಣಾಂಶ ದಾಖಲೆಯ ಜಗತ್ತಿನ 'ಟಾಪ್ 100 ಅತಿ ಬಿಸಿ ನಗರ'ಗಳ ಪಟ್ಟಿಯಲ್ಲಿ ಭಾರತದ 95-97 ನಗರಗಳು ಇವೆ. ಇವೆಲ್ಲವೂ ನಮ್ಮ ನಗರಗಳ ಭವಿಷ್ಯವನ್ನು ಕನ್ನಡಿಯ ಮುಂದೆ ನಿಲ್ಲಿಸಿದ ಕ್ಷಣ. ಎಕ್ಯೂಐ ಡಾಟ್ ಇನ್, ರಿಯಲ್-ಟೈಮ್ ಗ್ಲೋಬಲ್ ಟೆಂಪರೇಚರ್ ಟ್ರ್ಯಾಕಿಂಗ್ ಪೋರ್ಟಲ್ ಈ ಮಾಹಿತಿ ಪ್ರಕಟಿಸಿದೆ.

ಮಧ್ಯ ಭಾರತ ಕೆಂಡ

ಸಾಮಾನ್ಯವಾಗಿ ಜಗತ್ತಿನ ಅತಿ ಬಿಸಿ ಪ್ರದೇಶ ಪಟ್ಟಿಯಲ್ಲಿ ಆಫ್ರಿಕಾ, ಮಧ್ಯಪ್ರಾಚ್ಯ ದೇಶಗಳ ನಗರಗಳು ಹೆಚ್ಚು ಕಾಣುತ್ತವೆ. ಈ ಬಾರಿ ಭಾರತವು ಪಟ್ಟಿಯನ್ನು ಬಹುತೇಕ ಆವರಿಸಿದೆ. ಉತ್ತರ ಪ್ರದೇಶ, ಮಹಾರಾಷ್ಟ್ರ, ತೆಲಂಗಾಣ, ಮಧ್ಯಪ್ರದೇಶ, ಒಡಿಶಾ, ಛತ್ತೀಸ್‌ಗಢ ಮತ್ತು ರಾಜಸ್ಥಾನ ಸೇರಿ ಅನೇಕ ರಾಜ್ಯಗಳಲ್ಲಿ ಗರಿಷ್ಠ ತಾಪಮಾನ 42 ಡಿಗ್ರಿ ಸೆಲ್ಸಿಯಸ್ ದಾಟಿದೆ. ಹಲವು ನಗರಗಳು 45 ಡಿಗ್ರಿ ಸೆಲ್ಸಿಯಸ್‌ನಿಂದ 46 ಡಿಗ್ರಿ ಸೆಲ್ಸಿಯಸ್ ಹತ್ತಿರ ತಲುಪಿವೆ. ಬಾಂದಾ, ಫತೇಪುರ, ಇಟಾವಾ, ಔರಯ್ಯಾ, ಪ್ರಯಾಗರಾಜ್, ಅಕೋಲಾ, ಭುಸಾವಲ್, ಜಲಗಾಂವ್ ಮೊದಲಾದ ನಗರಗಳು ಅತ್ಯಂತ ಬಿಸಿಯ ಪಟ್ಟಿಯಲ್ಲಿ ಆರಂಭಿಕ ಸ್ಥಾನದಲ್ಲಿವೆ. ಇದರಲ್ಲಿ ಉತ್ತರ ಪ್ರದೇಶದ ಬಾಂದಾ ಮತ್ತು ಮಹಾರಾಷ್ಟ್ರದ ಅಕೋಲಾ ಹೆಸರುಗಳು ಪದೇಪದೆ ಬಿಸಿ ನಗರಗಳ ಸಾಲಿನಲ್ಲಿ ಕಾಣಿಸುತ್ತಿವೆ. 100 ನಗರಗಳ ಪಟ್ಟಿಯಲ್ಲಿ ಕರ್ನಾಟಕದ ನಗರಗಳು ಇಲ್ಲ. ಹಾಗಂತ ಬಿಸಿ ಗಾಳಿ ಅಪಾಯದಿಂದ ಕರ್ನಾಟಕ ಹೊರಗಿಲ್ಲ.

ಹೀಗಾಗಲು ಕಾರಣ ಏನು?

1 ಹೀಟ್ ಡೋಮ್: ಬಿಸಿ ಗಾಳಿ ಮೇಲಕ್ಕೆ ಏರಿದ ಬಳಿಕ ಹೊರಹೋಗದೆ ಒಂದು ಪ್ರದೇಶದ ಮೇಲೆ ಸಿಲುಕಿದಾಗ, ಆ ಪ್ರದೇಶ ದೊಡ್ಡ ಕುಕ್ಕರ್‌ನಂತೆ ಬಿಸಿಯಾಗುತ್ತದೆ. ಉತ್ತರ ಮತ್ತು ಮಧ್ಯ ಭಾರತದಲ್ಲಿ ಇದೇ ಮಾದರಿ ಕಂಡುಬಂದಿದೆ.

2 ಒಣ ಗಾಳಿ: ಮಧ್ಯ ಭಾರತ ಮತ್ತು ವಿದರ್ಭ ಭಾಗಗಳಿಂದ ಬೀಸುವ ಬಿಸಿಯ, ಒಣ ಗಾಳಿಗಳು ತೆಲಂಗಾಣ, ಮಹಾರಾಷ್ಟ್ರ, ಉತ್ತರ ಪ್ರದೇಶದ ತಾಪಮಾನವನ್ನು ಇನ್ನಷ್ಟು ಏರಿಸುತ್ತಿವೆ. ಮಳೆಯಿಲ್ಲದ ಸ್ವಚ್ಛ ಆಕಾಶ ಇದನ್ನು ಮತ್ತಷ್ಟು ತೀವ್ರಗೊಳಿಸಿದೆ.

3 ನಗರೀಕರಣ: ಕಾಂಕ್ರೀಟ್ ಕಟ್ಟಡಗಳು, ಟಾರ್ ರಸ್ತೆಗಳು, ಗಾಜಿನ ಕಟ್ಟಡಗಳು ಹಗಲು ಹೀರಿದ ಬಿಸಿಯನ್ನು ರಾತ್ರಿ ಬಿಡುಗಡೆ ಮಾಡುತ್ತವೆ. ಹೀಗಾಗಿ ನಗರಗಳು ರಾತ್ರಿ ಕೂಡ ತಂಪಾಗುವುದಿಲ್ಲ. ಮರಗಳ ಕೊರತೆ, ಭೂಗರ್ಭ ಜಲ ಕುಸಿತ, ಹಸಿರು ಪ್ರದೇಶಗಳ ನಾಶ ಬಿಸಿಯನ್ನು ಹೆಚ್ಚಿಸುತ್ತಿವೆ.

ಎಚ್ಚರಿಕೆ ದಿನಗಳು

ಈಗಿನ ಸ್ಥಿತಿ 'ಬಿಸಿಲು ಜಾಸ್ತಿ' ಆಗಿದೆ ಎಂಬ ಸರಳ ಬೆಳವಣಿಗೆ ಅಲ್ಲ, ಆರೋಗ್ಯದ ಮೇಲೆ ಪರಿಣಾಮ ಬೀರಬಲ್ಲದು. ಹವಾಮಾನ ಇಲಾಖೆಯು ಬಹುತೇಕ ದೇಶದೆಲ್ಲೆಡೆ ಬಿಸಿ ಗಾಳಿಯ ಎಚ್ಚರಿಕೆ ನೀಡಿದೆ. ಡಿಹೈಡ್ರೇಷನ್, ಹೀಟ್ ಸ್ಟ್ರೋಕ್, ಹೃದಯ ಸಂಬಂಧಿ ತೊಂದರೆಗಳು ಮತ್ತು ಹಿರಿಯರ ಆರೋಗ್ಯ ಹಾನಿ ಹೆಚ್ಚಾಗಬಹುದು ಎಂದು ಆರೋಗ್ಯ ಇಲಾಖೆಗಳು ಎಚ್ಚರಿಕೆ ನೀಡಿವೆ. ಸಾಮಾನ್ಯವಾಗಿ ಭಾರತದ ಉಷ್ಣತೆಯ ಗರಿಷ್ಠ ಹಂತ ಮೇ ತಿಂಗಳಲ್ಲಿ ಹೆಚ್ಚು ಇರುತ್ತದೆ. ಈಗಲೇ 45 ಡಿಗ್ರಿ ಸೆಲ್ಸಿಯಸ್ ದಾಟಿದರೆ, ಮುಂದಿನ ವಾರಗಳು ಅಗ್ನಿ ಪರೀಕ್ಷೆಯಂತಾಗಬಹುದು. ಮುಂಗಾರು ವಿಳಂಬವಾದರೆ ಪರಿಸ್ಥಿತಿ ಇನ್ನಷ್ಟು ಕಠಿಣವಾಗುವ ಅಪಾಯ ಇದೆ.





2026ರಲ್ಲಿ ಗರಿಷ್ಠ ಉಷ್ಣತೆ

ಭಾರತ: 47.6 ಡಿಗ್ರಿ ಸೆಲ್ಸಿಯಸ್ (ಉತ್ತರ ಪ್ರದೇಶದ ಬಾಂದಾ- ಏ.27)

ಕರ್ನಾಟಕ: 44 ಡಿಗ್ರಿ ಸೆಲ್ಸಿಯಸ್ (ಕಲಬುರಗಿ- ಏ.14)

ಎಲ್ ನಿನೊ ಪರಿಣಾಮವೇ?

ಜಗತ್ತಿನ ಮಳೆ, ಗಾಳಿ, ಚಂಡಮಾರುತ, ಬೇಸಿಗೆ ಮತ್ತು ಚಳಿಗಾಲದ ಸ್ವಭಾವವನ್ನೇ ಇದು ಬದಲಾಯಿಸಬಹುದಾದ 'ಎಲ್ ನಿನೊ' ಅಪಾಯ ಭಾರತದ ಮೇಲಿದೆ. ಇದರಿಂದ ಮಳೆ ಕೊರತೆ ಆಗುತ್ತದೆ. ಪ್ರಶಾಂತ ಮಹಾಸಾಗರದ ಮಧ್ಯ ಮತ್ತು ಪೂರ್ವ ಭಾಗದ ಸಮುದ್ರ ಮೇಲ್ಮೈ ಸಾಮಾನ್ಯಕ್ಕಿಂತ ಹೆಚ್ಚು ಬಿಸಿಯಾಗುವ ಹವಾಮಾನ ಘಟನೆಯನ್ನು ಎಲ್ ನಿನೊ ಎನ್ನುತ್ತಾರೆ. ಇದು ಈ ವರ್ಷದ ಮಳೆಗಾಲದ ಮೇಲೆ ಪರಿಣಾಮ ಬೀರುವ ಸಾಧ್ಯತೆ ಹೆಚ್ಚಿದೆ. ಆದಾಗ್ಯೂ, ಈಗಿನ ಬಿಸಿ ಗಾಳಿ ಸ್ಥಿತಿಗೆ 'ಎಲ್ ನಿನೊ' ಪರಿಣಾಮ ಕಾಣುತ್ತಿಲ್ಲ ಎನ್ನುತ್ತಾರೆ ಹವಾಮಾನ ಇಲಾಖೆ ಅಧಿಕಾರಿಗಳು.

ಬೇಸಿಗೆ ಬಿಸಿಗಾಳಿ ದುರಂತಗಳು

ಬಿಸಿಗಾಳಿ ಇವತ್ತಿನ ಸಂಕಟವೇನಲ್ಲ, ಈ ಸಂಕಟಕ್ಕೆ ನರಳಾಡಿದ ನಗರಗಳ ದೊಡ್ಡ ಕತೆಯೇ ಇದೆ.

ಶಿಕಾಗೊ- 1995



ಅಮೆರಿಕದ ಶಿಕಾಗೊ ನಗರವು 1995ರಲ್ಲಿ ಭೀಕರ ಹೀಟ್ ವೇವ್ ಎದುರಿಸಿತು. ಗರಿಷ್ಠ ತಾಪಮಾನ ಸುಮಾರು 41 ಡಿಗ್ರಿ ಸೆಲ್ಸಿಯಸ್ ಇದ್ದರೂ, ಆರ್ದ್ರತೆಯಿಂದ ಉಷ್ಣತೆ ಅನುಭವ 50 ಡಿಗ್ರಿ ಸೆಲ್ಸಿಯಸ್ ಮೀರಿ ಹೋಗಿತ್ತು. ಕೇವಲ ಐದು ದಿನಗಳಲ್ಲಿ 700ಕ್ಕೂ ಹೆಚ್ಚು ಜನರು ಮೃತಪಟ್ಟರು.

ಪ್ಯಾರಿಸ್- 2003



ಫ್ರಾನ್ಸ್ ಸೇರಿದಂತೆ ಯುರೋಪಿನ ಅನೇಕ ಭಾಗಗಳಲ್ಲಿ 2003ರಲ್ಲಿ ಗರಿಷ್ಠ ಉಷ್ಣತೆ 40 ಡಿಗ್ರಿ ಸೆಲ್ಸಿಯಸ್ ಮೀರಿತು. ಪ್ಯಾರಿಸ್ ನಗರದಲ್ಲಿ ಶವಾಗಾರಗಳು ತುಂಬಿ, ತಾತ್ಕಾಲಿಕ ಶೀತಗೃಹಗಳನ್ನು ಸಿದ್ಧಪಡಿಸಬೇಕಾಯಿತು. ಯುರೋಪಿನಲ್ಲಿ 35 ಸಾವಿರಕ್ಕೂ ಹೆಚ್ಚು ಜನ ಸಾವನ್ನಪ್ಪಿದರು.

ಅಹಮದಾಬಾದ್- 2010



ಅಹಮದಾಬಾದ್‌ನಲ್ಲಿ 2010, ಮೇ ನಲ್ಲಿ ತಾಪಮಾನ 46.8 ಡಿಗ್ರಿ ಸೆಲ್ಸಿಯಸ್ ತಲುಪಿತು. ಆ ತಿಂಗಳು 4462 ಜನ ಮೃತಪಟ್ಟರು. ಅದರಲ್ಲಿ ನೂರಾರು ಜನ ಬಿಸಿ ಗಾಳಿಯಿಂದ ಸತ್ತಿದ್ದಾರೆ ಎಂದು ವರದಿಯಾಗಿದೆ. ಭಾರತದಲ್ಲಿ ಮೊದಲ ಅಧಿಕೃತ 'ಹೀಟ್ ವೇವ್ ಕಾರ್ಯಸೂಚಿ' ಅಹಮದಾಬಾದ್‌ನಿಂದ ಜಾರಿಗೆ ಬಂತು.

ಕರಾಚಿ- 2015



ಪಾಕಿಸ್ತಾನದ ಕರಾಚಿಯಲ್ಲಿ ಗರಿಷ್ಠ ಉಷ್ಣತೆ 45 ಡಿಗ್ರಿ ಸೆಲ್ಸಿಯಸ್ ಏರಿತ್ತು. ರಂಜಾನ್ ಉಪವಾಸ, ವಿದ್ಯುತ್ ವ್ಯತ್ಯಯ, ನೀರಿನ ಕೊರತೆಯೊಂದಿಗೆ ಭೀಕರ ಪರಿಸ್ಥಿತಿ ಉಂಟಾಯಿತು. ಸಾವಿರಕ್ಕೂ ಅಧಿಕ ಜನ ಅಸುನೀಗಿದರು. ಬಿಸಿ ಗಾಳಿ ಜತೆಗೆ ಫ್ಯಾನ್ ಗಾಳಿ, ನೀರಿನ ಕೊರತೆಯೂ ಅಪಾಯ ತಂದಿತು ಎಂದು ವರದಿಯಾಗಿದೆ.

ಕರ್ನಾಟಕದಲ್ಲಿ ಮುಂದೇನು?

- ಒಂದು ವಾರ ಬಿಸಿ ಗಾಳಿ ಸಮಸ್ಯೆ.
- ಉಷ್ಣತೆ ಏರುವ ಲಕ್ಷಣ ಕಾಣುತ್ತಿಲ್ಲ.
- ದಕ್ಷಿಣ ಒಳನಾಡಿನಲ್ಲಿ ಮಳೆ ನಿರೀಕ್ಷೆ.
- ಕ್ರಮೇಣ ಉಷ್ಣತೆ ತಗ್ಗುವ ಸಾಧ್ಯತೆ.

(ಮಾಹಿತಿ: ಹವಾಮಾನ ಇಲಾಖೆ)

150 ವರ್ಷಗಳ ಹಿಂದೆ ಭಾರತಕ್ಕೆ ಇದೇ ಸ್ಥಿತಿ ಒದಗಿತ್ತು!

ಭಾರತದಲ್ಲಿ 1876-78ರ ಅವಧಿಯಲ್ಲಿ ಅಂದರೆ, 150 ವರ್ಷಗಳ ಹಿಂದೆ ಎಲ್ ನಿನೊ ಪರಿಣಾಮದಿಂದ ಭಾರತದಲ್ಲಿ ಭೀಕರ ಬರಗಾಲ ಸೃಷ್ಟಿಯಾಯಿತು. ಮಳೆ ಇಲ್ಲದೆ ಬೆಳೆ ನಾಶ ಆದವು. ನೀರಿನ ಮೂಲಗಳು ಬತ್ತಿದವು. ಇದ್ದ ನೀರು ಕಲುಷಿತಗೊಂಡವು. ದಕ್ಷಿಣ ಭಾರತ, ಮೈಸೂರು ಪ್ರದೇಶ, ಮದ್ರಾಸ್ ಪ್ರೆಸಿಡೆನ್ಸಿ, ಬಾಂಬೆ, ಹೈದರಾಬಾದ್ ಪ್ರಾಂತ್ಯಗಳಲ್ಲಿ ಆಹಾರ ಕೊರತೆ ಆಯಿತು. ಲಕ್ಷಾಂತರ ಜನರು ವಲಸೆ ಹೋದರು. ಆಗಿನ ಬ್ರಿಟಿಷ್ ಸರಕಾರದ ಆಡಳಿತ ವೈಫಲ್ಯದಿಂದ ಅಂದಾಜು 1 ಕೋಟಿ ಜನ ಅನಾರೋಗ್ಯದಿಂದ ಮೃತಪಟ್ಟರು. 1899, 1918, 1972, 1987, 2002, 2009, 2015-2017 ಹೀಗೆ ಅನೇಕ ಸಲ ಬರ ಸ್ಥಿತಿ ಸೃಷ್ಟಿಯಾಗಿವೆ. ಅದೇ ರೀತಿಯ 'ಎಲ್ ನೀನೊ' ಮತ್ತೆ ಶುರುವಾಗುತ್ತಿದೆ. ಮಳೆ ಕೊರತೆ ಆಗಲಿದೆ ಎನ್ನುವುದು ಈಗಿನ ಭಯ.

ಎಷ್ಟು ಗರಿಷ್ಠ ಬಿಸಿಲು ಗಿನ್ನೆಸ್ ದಾಖಲೆಯಾಗಿದೆ?

ಅಮೆರಿಕದ ಡೆತ್ ವ್ಯಾಲಿಯಲ್ಲಿ 1913 ಜುಲೈ 10ರಂದು ದಾಖಲಾದ 56.7 ಡಿಗ್ರಿ ಸೆಲ್ಸಿಯಸ್ ಗರಿಷ್ಠ ಉಷ್ಣತೆಯನ್ನು ಭೂಮಿ ಮೇಲಿನ ಗರಿಷ್ಠ ತಾಪಮಾನ ಎಂದು ಗಿನ್ನೆಸ್ ದಾಖಲೆಯಾಗಿದೆ. 1922ರಲ್ಲಿ ಲಿಬಿಯಾ ದೇಶದ ಎಲ್ ಅಝೀಝಿಯಾ ಪ್ರದೇಶದಲ್ಲಿ 58 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು. ಆದರೆ, ಅದರ ಅಳತೆ ಮಾನದಂಡದ ಬಗ್ಗೆ ಅನುಮಾನಗಳು ಇರುವ ಹಿನ್ನೆಲೆಯಲ್ಲಿ 2012ರಲ್ಲಿ ಅದನ್ನು ಬದಿಗಿಡಲಾಗಿದೆ. ಅಮೆರಿಕದ 56.7 ಡಿಗ್ರಿ ಸೆಲ್ಸಿಯಸ್ ಅನ್ನೇ 'ಗರಿಷ್ಠ ಉಷ್ಣತೆ' ಎಂದು ಅಧಿಕೃತಗೊಳಿಸಲಾಗಿದೆ.

ಭಾರತವೇ ಏಕೆ ಬಿಸಿ?

ಭಾರತದಲ್ಲಿ ಏಪ್ರಿಲ್, ಮೇ ತಿಂಗಳು ಬೇಸಿಗೆಯ ಅಧಿಕ ಉಷ್ಣಕಾಲ. ಭಾರತದಲ್ಲಿ ಗರಿಷ್ಠ ಉಷ್ಣತೆ ದಾಖಲಾಗುತ್ತಿರುವುದು ವಿಶೇಷ ಬೆಳವಣಿಗೆ ಅಲ್ಲ, ಬೇಸಿಗೆಯ ಈ ಅವಧಿಯಲ್ಲಿ ಇದು ಸಹಜ. ಜಗತ್ತಿನಲ್ಲಿ ತುಂಬಾ ವರ್ಷಗಳಿಂದ ಗರಿಷ್ಠ ಉಷ್ಣತೆ ಏರುತ್ತಿದೆ. ಬೀದರ್, ಕಲಬುರಗಿ, ರಾಯಚೂರು ಸೇರಿ ಕರ್ನಾಟಕದ ಕೆಲ ಜಿಲ್ಲೆಗಳಲ್ಲೂ ಅಧಿಕ ಉಷ್ಣತೆ ದಾಖಲಾಗುತ್ತಿದೆ. ಭಾರತದ ಬಿಸಿ ಗಾಳಿ ವಾತಾವರಣಕ್ಕೆ 100 ವರ್ಷಗಳ ಇತಿಹಾಸ ಇದೆ. ಎಲ್ ನಿನೊ ಪರಿಣಾಮದಿಂದ ಮಳೆ ಕೊರತೆ ಆಗಬಹುದು. ಭಾರತದ ಸದ್ಯದ ಸ್ಥಿತಿಗೆ ಎಲ್ ನಿನೊ ಕಾರಣ ಅಲ್ಲ, ಒಂದು ವಾರದ ನಂತರ ಉಷ್ಣತೆ ನಿಧಾನವಾಗಿ ಕಡಿಮೆಯಾಗುವ ಅಂದಾಜಿದೆ ಎಂದು ಭಾರತೀಯ ಹವಾಮಾನ ಇಲಾಖೆಯ ವಿಜ್ಞಾನಿ ಲತಾ ಶ್ರೀಧರ್ ತಿಳಿಸುತ್ತಾರೆ.

ಭಾರತದಲ್ಲಿ ಗರಿಷ್ಠ ಉಷ್ಣ ದಾಖಲಾದ ಟಾಪ್ 10 ಸ್ಥಳಗಳು (ಡಿಗ್ರಿ ಸೆಲ್ಸಿಯಸ್)

ರಾಜ್ಯ	ನಗರ	ಗರಿಷ್ಠ ಉಷ್ಣತೆ
ಉತ್ತರ ಪ್ರದೇಶ	ಬಾಂದಾ	47.6
ಮಹಾರಾಷ್ಟ್ರ	ಅಮರಾವತಿ	46.6
ಮಹಾರಾಷ್ಟ್ರ	ವಾರ್ಧಾ	46.6
ರಾಜಸ್ಥಾನ	ಜೈಸಲ್ಮೇರ್	46.4
ಮಹಾರಾಷ್ಟ್ರ	ಅಕೋಲಾ	46.3
ರಾಜಸ್ಥಾನ	ಬರ್ಮೇರ	46
ಮಧ್ಯಪ್ರದೇಶ	ಖಜುರಾಹೋ	46
ರಾಜಸ್ಥಾನ	ಬನಸ್ಥಾಲಿ ವಿದ್ಯಾಪೀಠ	45.7
ರಾಜಸ್ಥಾನ	ಕೋಟ	45.7
ಮಧ್ಯಪ್ರದೇಶ	ನವಗೊಂಗ	45.5

ಜಗತ್ತಿನ ಮೊದಲ 20 ಬಿಸಿ ನಗರಗಳು

ಬಾಂದಾ, ಪ್ರಯಾಗರಾಜ್, ಬಿಂಡ್ಕಿ, ಅಲಹಾಬಾದ್, ಫತೇಪುರ, ಇಟಾವಾ, ಕೃಪಾಳುಧಾಮ, ಮೊರಾದಾಬಾದ್, ಬರೇಲಿ, ಊಂಚಹಾರ್, ಔರಯ್ಯಾ, ಶಹಜಹಾನ್‌ಪುರ, ಬದಾಯೂ, ರಝ್ನಾ, ಮೈನ್‌ಪುರಿ, ಇಟಾ, ಒರ್ಚಿಹಾ, ಉಧಂಸಿಂಗ್ ನಗರ, ರುದ್ರಪುರ, ಮಿರ್ಜಾಪುರ.. ಇವೆಲ್ಲವೂ ಭಾರತದ ನಗರಗಳು. ಇವುಗಳ ಗರಿಷ್ಠ ಉಷ್ಣತೆ 45-46 ಡಿಗ್ರಿ ಸೆಲ್ಸಿಯಸ್.

pramod.harikant@timesofindia.com

ಸಂಗೀತ ಆರಾಧಿಸುವ ಜನಪ್ರತಿನಿಧಿಗಳು ಬೇಕಾಗಿದ್ದಾರೆ!

ಸ್ವಾತಿ ಮಳೆ
ಚಿತ್ರಾ ಸಂತೋಷ್

ಶ್ರುತಿಗೊಂಡ ಜೋಡಿ ತಂಬೂರಿಗಳು ಇಡೀ ಸಭಾಂಗಣದಲ್ಲಿ ಅನುರಣಿಸುತ್ತಿದ್ದರೆ, ಶ್ರೋತೃಗಳು ತಮ್ಮಿಷ್ಟದ ಗಾಯಕರ ಕಂಠದಿಂದ ಒಡಮೂಡುವ ಸಂಜೆ ಹೊತ್ತಿನ ರಾಗದ ನಿರೀಕ್ಷೆಯಲ್ಲಿದ್ದರು. ಪುರಿಯಾ ಧನಾಶ್ರೀ, ಮಾರ್ವ, ಬಿಹಾಗ್, ಶ್ಯಾಮ ಕಲ್ಯಾಣ, ಪೂರ್ವಿ, ಯಮನ್... ಮುಸ್ಸಂಜೆಗೆ ಮುದನೀಡುವ ಈ ರಾಗಗಳನ್ನು ಎಷ್ಟು ಸಲ ಕೇಳಿದರೂ ಮತ್ತಷ್ಟು ಕೇಳುವ ಖುಷಿ. ಶ್ರೋತೃಗಳಿಗೆ ಕೈಮುಗಿದ ಆ ಗಾಯಕರು ರಾಗ 'ಮಾರ್ವ'ಕ್ಕೆ ಸ್ವರಹಚ್ಚಿದರು. ಮಂದಗತಿಯ ಆಲಾಪನೆಯೊಂದಿಗೆ ರಾಗಕ್ಕೆ ಹೊಳಪು ತುಂಬುತ್ತಲೇ ಇನ್ನೇನೂ ಕಲಾವಿದ ತಾನೇ ರಾಗವಾಗುವ ಹೊತ್ತು, ಇತ್ತ ಶ್ರೋತೃಗಳೂ ರಾಗದೊಂದಿಗೆ ಅನುಸಂಧಿಸುವ ಅಪೂರ್ವ ಗಳಿಗೆಯದು.

ಆ ಕ್ಷಣವೇ ಕಛೇರಿಗೆ ಅತಿಥಿಗಳ ಆಗಮನವಾಯಿತು. ಜನಪ್ರಿಯ ಜನಪ್ರತಿನಿಧಿಯೊಬ್ಬರು ಅಂದಿನ ಕಛೇರಿಗೆ ಅತಿಥಿಗಳಾಗಿ ಬಂದಿದ್ದರು. ಕಛೇರಿ ಶುರುವಾಗುವ ಮೊದಲು ಬರಬೇಕಾದವರು ಅರ್ಧ ಕಛೇರಿ ಮುಗಿದ ಬಳಿಕ ಬಂದರು. ಕಛೇರಿಯನ್ನು ಅರ್ಧಕ್ಕೇ ನಿಲ್ಲಿಸಿದ ಆಯೋಜಕರು ಅತಿಥಿಗಳ ಕಿರು ಭಾಷಣಕ್ಕೆ ಅವಕಾಶ ಕೊಟ್ಟರು. ಆಯೋಜಕರಿಗದು ಅನಿವಾರ್ಯ ಆಗಿರಬಹುದು. ಆದರೆ, ಇದು ಕೇಳುಗರಿಗೂ ಕಿರಿಕಿರಿ, ಇತ್ತ ಕಲಾವಿದರಿಗೂ ಇರುಸುಮುರುಸು.

ಸಂಗೀತದಂಥ ಕಲಾಕಾರ್ಯಕ್ರಮಗಳಿಗೆ ಜನಪ್ರತಿನಿಧಿಗಳನ್ನು ಕರೆದಾಗ ಬಹಳಷ್ಟು ಕಡೆ ಇಂಥದ್ದೇ ಸನ್ನಿವೇಶ ಸೃಷ್ಟಿಯಾಗುತ್ತದೆ. ಕಛೇರಿಯ ನಡುವೆ ಭಾಷಣ, ಕಛೇರಿ ನಡೆಯುತ್ತಿರುವಾಗಲೇ ಎದ್ದು ನಡೆಯುವುದು, ಫೋನ್‌ನಲ್ಲಿ ಮಾತನಾಡುವುದು... ಇಂಥ ಪ್ರಸಂಗಗಳೆಲ್ಲಾ ಕಲಾವಿದರ ಮನಸ್ಥಿತಿಯನ್ನು ಕೆಡಿಸುತ್ತವೆ ಅಷ್ಟೇ ಅಲ್ಲ, ಆ ದಿನದ ಇಡೀ ಕಛೇರಿಯನ್ನೇ ಕೆಡಿಸಲೂಬಹುದು! ಹಾಗಾದರೆ ಶ್ರೋತೃಗಳು ಎದ್ದು ಹೋಗುವುದಿಲ್ಲವೇ ಎಂದು ಕೇಳಬಹುದು. ಆದರೆ, ಹೆಚ್ಚಿನ ಕಛೇರಿಗಳಲ್ಲಿ ಸಾಮಾನ್ಯವಾಗಿ ಶ್ರೋತೃಗಳು ಕಛೇರಿ ಆರಂಭವಾಗುವ ಮೊದಲು ಬಂದು, ಮುಗಿದ ಮೇಲೆಯೇ ಹೊರಡುವುದುಂಟು. ಅಂಥ 'ಕಾನ್‌ಸೇನರು' ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಲೂ ಇದ್ದಾರೆ. ಜನಪ್ರತಿನಿಧಿಗಳ ವಿಷಯಕ್ಕೆ ಬಂದರೆ ಸಂಗೀತದ ಅಭಿರುಚಿಯುಳ್ಳವರ ಸಂಖ್ಯೆ ಕಡಿಮೆಯಾಗಿದೆ. ಹಲವಾರು ವರ್ಷಗಳಿಂದ ಜಗತ್ತಿನ ಉದ್ದಗಲಕ್ಕೂ ಕಾರ್ಯಕ್ರಮ ನೀಡುತ್ತಾ ಬಂದಿರುವ ವಯಲಿನ್ ವಾದಕ ಮೈಸೂರು ಮಂಜುನಾಥ್ ಹೇಳುವ ಪ್ರಕಾರ; ''1960-80ರ ಸುಮಾರಿಗೆ ರಾಜಕಾರಣಿಗಳಲ್ಲಿ ಶಾಸ್ತ್ರೀಯ ಸಂಗೀತಾಸಕ್ತಿ ಹೆಚ್ಚಿತ್ತು. ಬಹಳಷ್ಟು ಮಂದಿ ತಮ್ಮ ರಾಜಕೀಯ ವಲಯದಲ್ಲಿಯೇ ಕಛೇರಿಗಳನ್ನು ಆಯೋಜಿಸುತ್ತಿದ್ದರು, ಸಾರ್ವಜನಿಕ ಕಛೇರಿಗಳಿಗೆ ಹಾಜರಾಗುತ್ತಿದ್ದರು, ಆದರೆ, ಈಗ ಅಂಥವರ ಸಂಖ್ಯೆ ಕಡಿಮೆ ಇದೆ,'' ಎಂದು ಹೇಳುತ್ತಾರೆ.

ವಿಧಾನಸೌಧದಲ್ಲಿ ಕಛೇರಿ ನೀಡಿದ ಬಂಗಾರಪ್ಪ: ಕೆಲ ದಶಕಗಳ ಹಿಂದೆ ನೋಡಿದರೆ ಶಾಸ್ತ್ರೀಯ ಸಂಗೀತದ ಆರಾಧಕರಾದ ಅನೇಕ ರಾಜಕಾರಣಿಗಳು ಸಿಗುತ್ತಿದ್ದರು. ಅಟಲ್ ಬಿಹಾರಿ ವಾಜಪೇಯಿ, ಇಂದಿರಾಗಾಂಧಿ, ಎಸ್.ಎಂ. ಕೃಷ್ಣ ಎಸ್. ಬಂಗಾರಪ್ಪ ಎಷ್ಟೊಂದು ಮಂದಿ ಇದ್ದಾರೆ? ರಾಜಕಾರಣಿಗಳಾಗಿದ್ದುಕೊಂಡು ಸಂಗೀತವನ್ನು ಪ್ರೀತಿಸುತ್ತಿದ್ದ, ಶ್ರದ್ಧೆಯ ಕೇಳುಗರಾಗಿದ್ದ ಒಂದಿಷ್ಟು ರಾಜಕಾರಣಿಗಳನ್ನು ನೆನಪಿಸಿಕೊಳ್ಳೋಣ.

ವಾಜಪೇಯಿಯವರು ಕೇವಲ ಕವಿಯಾಗಿರಲಿಲ್ಲ, ಅಪೂರ್ವ ಕೇಳುಗರೂ ಹೌದು. ಜಸ್‌ರಾಜರ ಗಾಯನ ಕೇಳಿ ''ನೀವು ಜಸ್‌ರಾಜ ಅಲ್ಲ, ರಸರಾಜ,'' ಎಂದಿದ್ದು ಇತಿಹಾಸ. ತನ್ನ ಕವಿತೆಗಳು ಕೊಳಲ ನಾದದಲ್ಲಿ ಕೇಳಬೇಕೆಂದು ಆಸೆಪಟ್ಟ ವಾಜಪೇಯಿ ಹರಿಪ್ರಸಾದ್ ಚೌರಾಸಿಯಾ ಅವರಲ್ಲಿ ಸಂಗೀತ ಸಂಯೋಜಿಸುವಂತೆಯೂ ಕೋರಿದ್ದರು. ಹಾಗೆಯೇ, ಭೀಮಸೇನರೆಂದರೆ ವಾಜಪೇಯಿಯವರಿಗೆ ಬಲು ಇಷ್ಟ. ಒಮ್ಮೆ ಜೋಷಿಯವರನ್ನು ಭೇಟಿಯಾದ ವೇಳೆ ಮಾತುಕತೆ ಎಲ್ಲಾ ಮುಗಿದು ಇನ್ನೇನೋ ಹೊರಡಬೇಕೆನ್ನುವಷ್ಟರಲ್ಲಿ ''ಜೋಷಿ ಜೀ, ಮೆಹಫಿಲ್ ಕಾ ಮೂಡ್ ಹೈ,'' ಎಂದು ಕೇಳಿಕೊಂಡಾಗ ಭೀಮಸೇನರು ಮನೆಯಲ್ಲಿಯೇ ಕಛೇರಿ ಆರಂಭಿಸಿದ್ದನ್ನು ಹಿಂದೊಮ್ಮೆ ಭೀಮಸೇನರ ಪುತ್ರ ಶ್ರೀನಿವಾಸ ಜೋಷಿಯವರು ಮಾಧ್ಯಮಗಳೊಂದಿಗೆ ಹಂಚಿಕೊಂಡಿದ್ದರು.

ಇನ್ನು ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಎಸ್. ಬಂಗಾರಪ್ಪ ಅವರು ಸ್ವತಃ ಸಂಗೀತ ಕಲಿತವರು. ಚಿಕ್ಕಂದಿನಿಂದಲೂ ದೊಡ್ಡಾಟ, ಸಣ್ಣಾಟಗಳು, ನಾಟಕಗಳ ಪ್ರೀತಿ ಬೆಳೆಸಿಕೊಂಡಿದ್ದ ಬಂಗಾರಪ್ಪನವರು ಶಿವಮೊಗ್ಗದ ವೇಣುಗೋಪಾಲ್ ಮತ್ತು ಬೆಂಗಳೂರಿನ ಶೇಷಾದ್ರಿ ಗವಾಯಿಗಳ ಬಳಿ ಸಂಗೀತ ಕಲಿತಿದ್ದರು. ''ಅಪ್ಪ ಅಂತೂ ಕುಂದಗೋಳ, ಪುಣೆಯ ಸವಾಯಿ ಗಂಧರ್ವ, ಗದಗದ ಸಂಗೀತೋತ್ಸವಗಳನ್ನು ತಪ್ಪಿಸಿಕೊಳ್ಳುತ್ತಿರಲಿಲ್ಲ, ಜಸ್‌ರಾಜ್, ಬಿಸ್ಮಿಲ್ಲಾಖಾನ್, ಭೀಮಸೇನರ ಕಛೇರಿಗಳಿಗೆಲ್ಲಾ ನಮ್ಮನ್ನೂ ಕರೆದುಕೊಂಡು ಹೋಗುತ್ತಿದ್ದರು. ಶಾಸಕರಾಗಿದ್ದಾಗ ಮೊತ್ತಮೊದಲ ಬಾರಿಗೆ ವಿಧಾನಸೌಧದಲ್ಲಿ ಸಂಗೀತ ಕಛೇರಿ ನೀಡಿದ ಹೆಗ್ಗಳಿಕೆ ಅವರದ್ದು,'' ಎಂದು ಬಂಗಾರಪ್ಪ ಅವರ ಪುತ್ರ ಕುಮಾರ ಬಂಗಾರಪ್ಪ ತಂದೆಯವರನ್ನು ನೆನೆಸಿಕೊಂಡರು. ಕುಮಾರ ಬಂಗಾರಪ್ಪ ಕೂಡ ಪಂ. ಪರಮೇಶ್ವರ ಹೆಗಡೆಯವರ ಬಳಿ ಹಿಂದೂಸ್ತಾನಿ ಸಂಗೀತ ಕಲಿತವರು.

ಇನ್ನು ಎಸ್.ಎಂ. ಕೃಷ್ಣ ಬಗ್ಗೆ ಹೇಳಬೇಕೆ? ರಾಜಕಾರಣದಲ್ಲಿ ಅಷ್ಟೊಂದು ಸಕ್ರಿಯರಾಗಿದ್ದರೂ ದೇಶದ ಜನಪ್ರಿಯ ಸಂಗೀತ ಕಛೇರಿಗಳಿಗೆ ಖುದ್ದು ಹಾಜರಾಗುತ್ತಿದ್ದರು. ಸಂಗೀತದ ಮೇಲಿನ ಪ್ರೀತಿಯಿಂದಾಗಿ ತಮ್ಮ ಮಕ್ಕಳ ಮದುವೆಯಲ್ಲಿಯೂ ಶಾಸ್ತ್ರೀಯ ಸಂಗೀತ ಕಛೇರಿ ಇರಿಸಿದ್ದರು. ಮೈಸೂರು ಸಹೋದರರ ವಯಲಿನ್ ವಾದನದ ಅಭಿಮಾನಿಯಾಗಿದ್ದ ಕೃಷ್ಣ ಅವರು, ಅವರ ಸಾಕಷ್ಟು ಕಛೇರಿಗಳಿಗೆ ಹಾಜರಾಗಿದ್ದರು. ''ಕಛೇರಿಗೆ ಬಂದು ಮುಗಿಯುವ ತನಕ ಇರುತ್ತಿದ್ದರು. ತುರ್ತಾಗಿ ಹೋಗುವ ಅನಿವಾರ್ಯತೆ ಇದ್ದಾಗ ಕಛೇರಿಯ ಒಂದು ಹಂತ ಮುಗಿದ ಬಳಿಕ ಎದ್ದು ನಮಗೆ ನಮಸ್ಕರಿಸಿ ಹೊರಡುವುದು ಕೃಷ್ಣ ಅವರ ರೂಢಿಯಾಗಿತ್ತು,'' ಎಂದು ನೆನಪಿಸಿಕೊಂಡರು ಮೈಸೂರು ಮಂಜುನಾಥ್.

ಇಂದಿರಾಗಾಂಧಿಗೆ ರಾಗದ ಅರ್ಪಣೆ: ರಾಷ್ಟ್ರಪತಿಗಳಾಗಿದ್ದ ಬಾಬು ರಾಜೇಂದ್ರ ಪ್ರಸಾದ್ ಅವರು ಸ್ವತಃ ತಾವೇ ದತ್ತಾತ್ರೇಯ ಪರ್ವತೀಕರ ಅವರಿಂದ ದತ್ತವೀಣೆ ಕಲಿತಿದ್ದರು. ಇಂದಿರಾಂಧಿ ಕೂಡ ಶಾಸ್ತ್ರೀಯ ಸಂಗೀತದ ಅಭಿಮಾನಿಯಾಗಿದ್ದು, ಎಂ.ಎಸ್. ಸುಬ್ಬುಲಕ್ಷ್ಮಿ ಅವರನ್ನು ''ಸಂಗೀತಲೋಕದ ಮಹಾರಾಣಿ,'' ಎಂದು ಕೊಂಡಾಡಿದ್ದರು. ಆಕಾಶವಾಣಿಯ ಕಲಾವಿದರನ್ನು ಕಾಯಂ ಮಾಡಿದ ಇಂದಿರಾಗಾಂಧಿ, ಕನ್ನಡ ನೆಲದ ಮಧುರದನಿ ಮನ್ಸೂರರ ವಚನಗಳನ್ನು ಇಷ್ಟಪಟ್ಟು ಆಲಿಸುತ್ತಿದ್ದವರು. ಇಂದಿರಾ ಅವರು ಕಲಾವಿದರ ಮೇಲಿಟ್ಟ ಪ್ರೀತಿಗಾಗಿ ಅವರ ಹೆಸರಿನಲ್ಲಿ 'ಇಂದಿರಾ' ತಾಳವನ್ನು ಹುಟ್ಟುಹಾಕಿದವರು ಹೆಸರಾಂತ ತಬಲಾ ವಾದಕ ಪಂ. ಶೇಷಗಿರಿ ಹಾನಗಲ್. ಸರೋದ್ ವಾದಕ ಅಮ್ಜದ್ ಅಲಿ ಖಾನ್ ಇಂದಿರಾ ಅವರಿಗಾಗಿಯೇ 'ಪ್ರಿಯದರ್ಶಿನಿ' ಎನ್ನುವ ರಾಗ ಸೃಷ್ಟಿಸಿದರು. ಕೇವಲ ಶಾಸ್ತ್ರೀಯ ಸಂಗೀತ ಮಾತ್ರವಲ್ಲ ಛತ್ತೀಸ್‌ಗಢದ ಯಾವುದೋ ಮೂಲೆಯಲ್ಲಿ ಪ್ರಚಲಿತವಿದ್ದ 'ಪಾಂಡವಾಣಿ'ಯಂಥ ಜನಪದೀಯ ಕಲೆಗೂ ಪ್ರೀತಿಯಿಂದ ಕಿವಿಯಾದವರು. ಬಾಂಗ್ಲಾ ವಿಮೋಚನೆ ಸಂದರ್ಭದಲ್ಲಿ ಮನಸು ಹಗುರಾಗಿಸಿಕೊಳ್ಳಲು ಇಂದಿರಾಗಾಂಧಿ ಶಾಸ್ತ್ರೀಯ ಸಂಗೀತವನ್ನೇ ಆಲಿಸುತ್ತಿದ್ದರಂತೆ! ಜವಾಹರಲಾಲ್ ನೆಹರೂ ಅವರಲ್ಲಿಯೂ ಇಂಥದ್ದೊಂದು ಉತ್ತಮ ಕೇಳುಗನಿದ್ದ. ಹಾಗೆಯೇ ಸಂಗೀತವದು ಪದಗಳಿಲ್ಲದ ಪ್ರಾರ್ಥನೆ,'' ಎಂದವರು ಸರ್ವಪಳ್ಳಿ ರಾಧಾಕೃಷ್ಣನ್.

ಇನ್ನು ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವರಾಗಿದ್ದ ಡಾ.ಬಿ.ವಿ. ಕೇಸ್ಕರ್ ಅವರ ಕಾಲದಲ್ಲಿ ಶಾಸ್ತ್ರೀಯ ಸಂಗೀತಕ್ಕೆ ಸಂಬಂಧಿಸಿದಂತೆ ಸಾಕಷ್ಟು ಬದಲಾವಣೆಗಳಾದವು. ಆಕಾಶವಾಣಿಗಳಲ್ಲಿ ಸಂಗೀತ ಸಮ್ಮೇಳನ, ವಾರಕ್ಕೊಮ್ಮೆ ನಡೆಯುವ 'ನ್ಯಾಷನಲ್ ಪ್ರೋಗ್ರಾಂ' ರೂವಾರಿ ಇವರೇ. ಆದರೆ, ಆಕಾಶವಾಣಿಯಲ್ಲಿ ಸಿನಿಮಾ ಗೀತೆಗಳನ್ನು ನಿಷೇಧಿಸಿದ್ದು ಬಹುದೊಡ್ಡ ವಿವಾದವೂ ಆಯಿತು. ಆದರೆ, ರಾಜಮನೆತನಗಳ ಅಳಿವಿನ ನಂತರ ಸಂಕಷ್ಟಕ್ಕೀಡಾದ ಶಾಸ್ತ್ರೀಯ ಸಂಗೀತಕ್ಕೆ ಆಕಾಶವಾಣಿ ಮೂಲಕ ಜೀವ ತುಂಬಿದವರು ಕೇಸ್ಕರ್ ಎಂದೇ ಹೇಳಬೇಕು. ಆದರೆ, ಈಗ ಇಂಥ ಜನಪ್ರತಿನಿಧಿಗಳ ಬೆರಳೆಣಿಕೆಯಷ್ಟೂ ಇಲ್ಲ. ನಮ್ಮ ಶಾಸ್ತ್ರೀಯ ಸಂಗೀತ ವಿವಿಗಳ ಪರಿಸ್ಥಿತಿ, ಶಾಸ್ತ್ರೀಯ ಸಂಗೀತ ಪ್ರಶಸ್ತಿಗಳನ್ನು ನೀಡುವ ಪರಿಪಾಠ, ಅಲ್ಲೊಂದಿಷ್ಟು ಪ್ರಭಾವಿಗಳ ಕರಾಮತ್ತು, ಕಲಾವಿದರನ್ನು ಗೌರವಿಸುವ ರೀತಿ... ಇದನ್ನೆಲ್ಲಾ ನೋಡಿದಾಗ ಬಹುಮುಖ್ಯವಾಗಿ ಕಲಾ ಆರಾಧಕ ರಾಜಕಾರಣಿಗಳು ತುರ್ತಾಗಿ ಬೇಕಾಗಿದ್ದಾರೆ. ಕೇಳ್ಮೆಯ ಜಾಣ್ಮೆಯೊಂದು ಅವರಲ್ಲಿದ್ದರೆ ಬಹುಶಃ ಶಾಸ್ತ್ರೀಯ ಸಂಗೀತಕ್ಕೆ ಒಂದಿಷ್ಟು ದಕ್ಕಬಹುದೇನೋ, ಕನಿಷ್ಠ ಪಕ್ಷ ಪ್ರೀತಿಸಿ, ಗೌರವಿಸಿದರೂ ಸಾಕು.

chitravathi.k@timesofindia.com

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಕಚೇರಿ ವಿಳಾಸ:- ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಬುಧವಾರ,29 ಏಪ್ರಿಲ್ 2026 | ಪುಟಗಳು: 18 | ಬೆಲೆ: ₹ 5.00
ಸಂಪುಟ: 27 | ಸಂಚಿಕೆ: 118
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ



ಕೇಜ್ರಿವಾಲ್ ಹಾದಿ ತುಳಿದ ಸಿಸೋಡಿಯಾ, ಹೈಕೋರ್ಟ್ ವಿಚಾರಣೆ ಎದುರಿಸಲು ನಕಾರ

₹13,835 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	₹15,093 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	ಬೆಂಗಳೂರು ದರ	₹2,60,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಕೊಲ್ಲೂರು ಮೂಕಾಂಬಿಕೆಯ ದರ್ಶನ ಪಡೆದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್

ವಿಕ ಹೊಂಗಿರಣ

ಭಯ ಎಲ್ಲಿ
ಕೊನೆಗೊಳ್ಳುತ್ತದೆಯೋ,
ಜೀವನ ಅಲ್ಲಿಂದ
ಪ್ರಾರಂಭವಾಗುತ್ತದೆ.
- ಓಶೊ

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹ 95/- ಕೋಲಾರ 93/- ತುಮಕೂರು 93/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹135/-
ಕೋಲಾರ 133/- ತುಮಕೂರು 133/-
ವಿಥ್ ಸ್ಕಿನ್ ₹190/- ಕೋಲಾರ 188/- ತುಮಕೂರು 188/-
ವಿಥೌಟ್ ಸ್ಕಿನ್ ₹217/- ಕೋಲಾರ 214/- ತುಮಕೂರು 214/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಪಹಲ್ಗಾಮ್ ಮಾದರಿ ದಾಳಿ

ಮುಂಬಯಿ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಮಾದರಿಯಲ್ಲೇ ಮಹಾರಾಷ್ಟ್ರದ ಮುಂಬಯಿನಲ್ಲಿ ಮಾರಣಹೋಮಕ್ಕೆ ಯತ್ನಿಸಿದ ಶಂಕಿತ ಐಸಿಸ್ ಉಗ್ರನನ್ನು ಬಂಧಿಸಲಾಗಿದೆ.

ಕಲ್ಮಾ ಪಠಿಸಲು ಒಪ್ಪದ ಇಬ್ಬರು ಭದ್ರತಾ ಸಿಬ್ಬಂದಿಗೆ ಚಾಕು ಇರಿದ ಜೈಬ್ ಜುಬೇರ್ ಅನ್ಸಾರಿಯನ್ನು ಪೊಲೀಸರು ಬಂಧಿಸಿದ್ದಾರೆ. ಸ್ನಾತಕೋತ್ತರ ಪದವೀಧರನಾದ ಆರೋಪಿ, ಕೆಲಸ ಸಿಗದೆ ಮೂಲಭೂತ ವಾದಿಯಾಗಿ ಬದಲಾಗಿದ್ದ ಎಂಬ ಸಂಗತಿ ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಸೋಮವಾರ ಬೆಳಗಿನ ಜಾವ 4 ಗಂಟೆ ಸಮಯದಲ್ಲಿ ಠಾಣೆಯ ನಯ ನಗರದ ಮೀರಾ ಭಯಂದರ್ ಪ್ರದೇಶದ ನಿರ್ಮಾಣ ಹಂತದ ಕಟ್ಟಡದ ಬಳಿ ಘಟನೆ ನಡೆದಿದೆ. ವಿವರ»12

ಎಲ್‌ಪಿಜಿ ಬುಕಿಂಗ್: ಹಾಲಿ ರೂಲ್ಸ್ ಕಾಯಂ

ಹೊಸದಿಲ್ಲಿ: ಗೃಹ ಬಳಕೆ ಎಲ್‌ಪಿಜಿಗೆ ಸಂಬಂಧಿಸಿದಂತೆ, ಹರ್ಮುಜ್ ಬಿಕ್ಕಟ್ಟಿನ ಸಮಯದಲ್ಲಿ ಸರಕಾರ ಇತ್ತೀಚೆಗೆ ಜಾರಿಗೊಳಿಸಿದ ಹೊಸ ನಿಯಮಗಳೇ ಮೇ 1ರಿಂದ ಕಾಯಂ ಆಗಿ ಮುಂದುವರಿಯಲಿವೆ. ನಗರ ಪ್ರದೇಶಗಳಲ್ಲಿ 25 ದಿನಗಳು, ಗ್ರಾಮೀಣ ಭಾಗದಲ್ಲಿ 45 ದಿನಗಳ ಬುಕಿಂಗ್ ಅಂತರ ಮುಂದುವರಿಯಲಿದೆ. ಜತೆಗೆ ಸಿಲಿಂಡರ್ ಡೆಲಿವರಿಗೆ 'ಒಟಿಪಿ' ಕಡ್ಡಾಯ. ವಿವರ»06

ಕೆಎಸ್‌ಡಿಎಲ್: 2,016 ಕೋಟಿ ರೂ ವಹಿವಾಟು »07

6 ಕಲಾವಿದರಿಗೆ ಲಲಿತಕಲಾ ಅಕಾಡೆಮಿ ಗರಿ »07

ಪಶ್ಚಿಮ ಬಂಗಾಳದಲ್ಲಿ ಮತದಾನ, ಎಕ್ಸಿಟ್ ಪೋಲ್ ಇಂದು »12

ಪೆಟ್ರೋಲ್, ಡೀಸೆಲ್ ದರ ಏರಿಕೆಯಿಲ್ಲ | ಪಂಚರಾಜ್ಯ ಚುನಾವಣೆ ಅಂತ್ಯದ ಬೆನ್ನಲ್ಲೇ ಕೇಂದ್ರ ಸ್ಪಷ್ಟನೆ
ಹಲವು ರಾಜ್ಯಗಳಲ್ಲಿ ಆತಂಕದ ಖರೀದಿ ಹಿನ್ನೆಲೆ | ವದಂತಿ ನಂಬದಿರಲು ಸಚಿವಾಲಯ ಮನವಿ

ಸದ್ಯಕ್ಕಿಲ್ಲ ಇಂಧನಾಘಾತ

ಹೊಸದಿಲ್ಲಿ: ಜಾಗತಿಕವಾಗಿ ಕಚ್ಚಾತೈಲ ಬೆಲೆ ಏರಿಕೆ ನಡುವೆಯೂ, ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳ ಮಾಡುವುದಿಲ್ಲ ಎಂದು ಕೇಂದ್ರ ಸರಕಾರ ಮಂಗಳವಾರ ಭರವಸೆ ನೀಡಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದಾಗಿ ಜಾಗತಿಕ ಕಚ್ಚಾತೈಲ ದರ ಭಾರಿ ಏರಿಕೆಯಾಗಿದ್ದು, ರಿಟೇಲ್ ದರ ಏರಿಕೆಗೆ ಸರಕಾರ ಪಂಚರಾಜ್ಯ ಚುನಾವಣೆಯ ಕೊನೆಯ ಹಂತದ ಮತದಾನಕ್ಕಾಗಿ ಕಾಯುತ್ತಿದೆ. ಏ.29ರ ಬಳಿಕ ಯಾವುದೇ ಕ್ಷಣದಲ್ಲಾದರೂ ಪೆಟ್ರೋಲ್, ಡೀಸೆಲ್ ದರ ಏರಿಕೆ ಮಾಡಬಹುದೆಂಬ ವದಂತಿಗಳು ಹರಿದಾಡುತ್ತಿವೆ. ಈ ಹಿನ್ನೆಲೆಯಲ್ಲಿ ಸರಕಾರ ಸ್ಪಷ್ಟನೆ ನೀಡಿದೆ.

ಅಲ್ಲದೆ, ಆಂಧ್ರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಪೆಟ್ರೋಲ್, ಡೀಸೆಲ್ ದರ ಏರಿಕೆಯ ಆತಂಕದಿಂದ ಜನರು ಬಂಕ್‌ಗಳ ಮುಂದೆ ಸಾಲುಗಟ್ಟಿದ್ದು, ಮುಂಗಡ ಖರೀದಿಗೆ ಮುಂದಾಗಿದ್ದಾರೆ. ಪ.ಬಂಗಾಳದಲ್ಲಿ ಕೊನೆಯ ಹಂತದ ಮತದಾನದ ದಿನಾಂಕ (ಏ.29) ಸಮೀಪಿಸುತ್ತಿದ್ದಂತೆ ಈ ಆತಂಕ ಮತ್ತಷ್ಟು ಹೆಚ್ಚಾಗಿದ್ದು, ಮೂರು ದಿನಗಳಿಂದ ರಾಜ್ಯದಲ್ಲಿ 400ಕ್ಕೂ ಹೆಚ್ಚು ಬಂಕ್‌ಗಳು ಮುಚ್ಚಿವೆ. ಅದರಲ್ಲೂ ಡೀಸೆಲ್ ಬೇಡಿಕೆ ಶೇ. 30–33ರಷ್ಟು ಹೆಚ್ಚಾಗಿದೆ ಎಂದು ವರದಿಯಾಗಿದೆ.

''ಕೆಲವೆಡೆ ಜನರು ಆತಂಕದಿಂದ ಪೆಟ್ರೋಲ್, ಡೀಸೆಲ್ ಖರೀದಿಗೆ ಮುಂದಾಗಿರುವುದು ಗಮನಕ್ಕೆ ಬಂದಿದೆ. ರಾಜ್ಯ ಸರಕಾರಗಳ ಜತೆ ಈ ಸಂಬಂಧ ನಿರಂತರ ಸಂಪರ್ಕದಲ್ಲಿದ್ದೇವೆ. ಎಲ್ಲಾ ರಿಟೇಲ್ ಮಳಿಗೆಗಳ ಮೇಲೆ ನಿಗಾ ಇರಿಸಲಾಗಿದ್ದು, ಯಾವುದೇ ಬಂಕ್ ಮುಚ್ಚದಂತೆ ತಡೆಯಲು ಆದ್ಯತೆ ಮೇರೆಗೆ ಇಂಧನ ಪೂರೈಕೆ ಮಾಡಲಾಗುತ್ತಿದೆ,'' ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ಮಂಗಳವಾರ ತಿಳಿಸಿದ್ದಾರೆ.

''ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿ ದಾಸ್ತಾನು ಸಾಕಷ್ಟಿದ್ದು, ಜನರು ವದಂತಿ ನಂಬಿ ಆತಂಕದ ಖರೀದಿಗೆ ಮುಂದಾಗಬಾರದು. ಇಂಧನ ಬೆಲೆ ಯಥಾಸ್ಥಿತಿಯಲ್ಲಿ ಇರಲಿದೆ,'' ಎಂದು ಆಶ್ವಾಸನೆ ನೀಡಿದ್ದಾರೆ.

$114 ದಾಟಿದ ಕಚ್ಚಾತೈಲ

ಕಳೆದ ವರ್ಷ ಏಪ್ರಿಲ್‌ನಲ್ಲಿ ಪ್ರತಿ ಬ್ಯಾರಲ್‌ಗೆ 70 ಡಾಲರ್ ಆಸುಪಾಸಿನಲ್ಲಿದ್ದ ಜಾಗತಿಕ ಕಚ್ಚಾತೈಲ ದರ ಅಮೆರಿಕ-ಇರಾನ್ ಯುದ್ಧದ ಹಿನ್ನೆಲೆಯಲ್ಲಿ 114 ಡಾಲರ್ ಗಡಿ ದಾಟಿದೆ. ಮಂಗಳವಾರವೂ ದರ 2% ಏರಿಕೆಯಾಗಿದೆ.

ಒಪೆಕ್ ತೊರೆದ ಯುಎಇ

ಇರಾನ್-ಅಮೆರಿಕ ಸಂಘರ್ಷದ ನಡುವೆ ಪ್ರಮುಖ ಪೆಟ್ರೋಲಿಯಂ ಉತ್ಪಾದಕ ದೇಶವಾದ ಸಂಯುಕ್ತ ಅರಬ್ ಸಂಸ್ಥಾನವು ಕಚ್ಚಾತೈಲ ರಫ್ತು ದೇಶಗಳ ಒಕ್ಕೂಟದಿಂದ(ಒಪೆಕ್) ಹೊರಬಂದಿದೆ. ಒಕ್ಕೂಟದ ನಿರ್ಬಂಧಕ್ಕೆ ಒಳಪಡದೆ ತೈಲ ಉತ್ಪಾದನೆ ವಿಚಾರದಲ್ಲಿ ಸ್ವತಂತ್ರ ನಿರ್ಧಾರ ಕೈಗೊಳ್ಳಲು ಇದರಿಂದ ನೆರವಾಗಲಿದೆ.

ತೈಲ ಕಂಪನಿಗಳಿಗೆ ಭಾರಿ ನಷ್ಟ

ಮೂಲಗಳ ಪ್ರಕಾರ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ಏರಿಕೆಯಾದರೂ ರೀಟೇಲ್ ದರ ಯಥಾಸ್ಥಿತಿಯಿಂದಾಗಿ ಸರಕಾರಿ ಸ್ವಾಮ್ಯದ ಇಂಧನ ಮಾರಾಟ ಸಂಸ್ಥೆಗಳು ಪ್ರತಿನಿತ್ಯ ಒಟ್ಟಾರೆ 2,400 ಕೋಟಿ ರೂ. ನಷ್ಟ ಅನುಭವಿಸುತ್ತಿವೆ. ಪ್ರತಿ ಲೀಟರ್ ಪೆಟ್ರೋಲ್ ಮೇಲೆ 20 ರೂ. ಹಾಗೂ ಪ್ರತಿ ಲೀಟರ್ ಡೀಸೆಲ್ ಮೇಲೆ 100 ರೂ. ವರೆಗೂ ನಷ್ಟವಾಗುತ್ತಿದೆ ಎಂದು ಕೆಲ ದಿನಗಳ ಹಿಂದೆ ಪೆಟ್ರೋಲಿಯಂ ಸಚಿವಾಲಯವೇ ಹೇಳಿತ್ತು. 2022ರ ಏಪ್ರಿಲ್ ಬಳಿಕ ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಏರಿಕೆ ಮಾಡಿಲ್ಲ.



ಏರ್‌ಲೈನ್ಸ್ ತುರ್ತು ಕರೆ

ವಿಮಾನ ಹಾರಾಟಕ್ಕೆ ಬಳಸುವ ಇಂಧನ 'ಎಟಿಎಫ್' ದರ ದಾಖಲೆ ಮಟ್ಟದಲ್ಲಿ ಜಿಗಿಯುತ್ತಿರುವ ಕಾರಣ, ಕಾರ್ಯಾಚರಣೆಯನ್ನೇ ನಿಲ್ಲಿಸುವ ಪರಿಸ್ಥಿತಿ ಬಂದಿದೆ ಎಂದು ವಿಮಾನಯಾನ ಸಂಸ್ಥೆಗಳು ಸರಕಾರದ ಬಳಿ ಅಸಹಾಯಕತೆ ತೋಡಿಕೊಂಡಿವೆ. ಎಟಿಎಫ್ ಬೆಲೆ ಕಿಲೋ ಲೀಟರ್‌ಗೆ 2 ಲಕ್ಷ ರೂ. ದಾಟಿದ್ದು, ಕೆಲವೊಮ್ಮೆ ಜಾಗತಿಕ ಮಟ್ಟದಲ್ಲಿ ದರ ಇಳಿದರೂ ಭಾರತದಲ್ಲಿ ಕಡಿಮೆಯಾಗುತ್ತಿಲ್ಲ. ಕಾರ್ಯಾಚರಣೆಯಲ್ಲಿ ಭಾರಿ ನಷ್ಟವಾಗುತ್ತಿದೆ ಎಂದು ಏರ್‌ಲೈನ್ಸ್ ಒಕ್ಕೂಟ ಸರಕಾರಕ್ಕೆ ಪತ್ರ ಬರೆದಿದೆ.

400 ಗೆಸ್ಟ್ ಟೀಚರ್ಸ್ ಔಟ್

ಪಿಎಚ್‌ಡಿ ನೈಜತೆ ಪರೀಕ್ಷೆಯಲ್ಲಿ ಅತಿಥಿ ಉಪನ್ಯಾಸಕರು ಫೇಲ್
ಎಸ್‌ಒಪಿ ಜಾರಿ ಬೆನ್ನಲ್ಲೆ ರಾಜೀನಾಮೆ ನೀಡಿ ಮನೆಗೆ ಹೋದರು
ಉದ್ಯೋಗಕ್ಕಾಗಿ ಹಣ ನೀಡಿ ನಕಲಿ ಪದವಿ ಪತ್ರ ಖರೀದಿಸಿದ್ದರೆ?

■ **ವೆಂ.ಸುನೀಲ್ ಕುಮಾರ್** ಕೋಲಾರ
sunil.kumar14@timesofindia.com

ರಾಜ್ಯದ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅತಿಥಿ ಉಪನ್ಯಾಸಕರ ನಕಲಿ 'ಪಿಎಚ್‌ಡಿ' ಸಂಚಲನ ಮೂಡಿಸಿದೆ. ಸರಕಾರದ ಕಟ್ಟುನಿಟ್ಟಿನ ದಾಖಲೆ ಪರಿಶೀಲನೆಗೆ ಬೆದರಿ ಸರಕಾರಿ ಪದವಿ ಕಾಲೇಜುಗಳ 400ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ನಾನಾ ಕಾರಣಗಳನ್ನು ಮುಂದಿಟ್ಟುಕೊಂಡು ರಾಜೀನಾಮೆ ನೀಡಿರುವುದು ಹಲವು ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ.

ಅತಿಥಿ ಉಪನ್ಯಾಸಕರ ದಾಖಲೆಗಳ ಪರಿಶೀಲನೆಗಾಗಿ ಸರಕಾರ ಪ್ರಮಾಣಿತ ಕಾರ್ಯವಿಧಾನ (ಎಸ್‌ಒಪಿ) ಜಾರಿಗೊಳಿಸಿದ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದ್ದು, ತಮ್ಮ ಕೆಲಸ ಉಳಿಸಿಕೊಳ್ಳಲು ಸಾಕಷ್ಟು ಅತಿಥಿ ಉಪನ್ಯಾಸಕರು ನಕಲಿ ಪಿಎಚ್‌ಡಿಗೆ ಮೊರೆ ಹೋಗಿರುವುದು ದಾಖಲೆಗಳಿಂದ ಬೆಳಕಿಗೆ ಬಂದಿದೆ.

''ಕಾಲೇಜು ಶಿಕ್ಷಣ ಇಲಾಖೆ ಎಸ್‌ಒಪಿ ಜಾರಿಗೊಳಿಸಿದ ಸಂದರ್ಭದಲ್ಲಿ 25ಕ್ಕೂ ಹೆಚ್ಚು ಅತಿಥಿ ಉಪನ್ಯಾಸಕರು ಸಲ್ಲಿಸಿದ ಪಿಎಚ್‌ಡಿ ಪ್ರಮಾಣಪತ್ರಗಳು ನಕಲಿ ಎನ್ನುವುದು ದೃಢವಾಗಿದೆ. ಉಳಿದಂತೆ 350ಕ್ಕೂ ಹೆಚ್ಚು ಜನರು ಅನಾರೋಗ್ಯ, ವೈಯಕ್ತಿಕ ಕಾರಣ, ಬೇರೆ ಕೆಲಸ ಸಿಕ್ಕಿದ ಕಾರಣ ನೀಡಿ ರಾಜೀನಾಮೆ ನೀಡಿದ್ದಾರೆ. 30ಕ್ಕೂ ಹೆಚ್ಚು ಉಪನ್ಯಾಸಕರು ದೀರ್ಘಕಾಲದಿಂದ ಗೈರು ಹಾಜರಾಗಿದ್ದಾರೆ,'' ಎಂದು ಕಾಲೇಜು ಶಿಕ್ಷಣ ಇಲಾಖೆ ಅಧಿಕಾರಿಯೊಬ್ಬರು ವಿಜಯ ಕರ್ನಾಟಕಕ್ಕೆ ತಿಳಿಸಿದರು. »07

15 ದಿನಗಳಲ್ಲಿ ಪಿಎಚ್‌ಡಿ!

ಅತಿಥಿ ಉಪನ್ಯಾಸಕರ ಹುದ್ದೆ ಗಿಟ್ಟಿಸಿಕೊಳ್ಳಲು ಹಾಗೂ ಸೇವೆಯಲ್ಲಿ ಮುಂದುವರಿಯಲು ಪಿಎಚ್‌ಡಿ ಅಗತ್ಯ. ಇದನ್ನು ಬಂಡವಾಳವಾಗಿಸಿಕೊಂಡ ಕೆಲ ಮಧ್ಯವರ್ತಿಗಳು ಉಪನ್ಯಾಸಕರ ಬಳಿ ಬಣ್ಣದ ಮಾತುಗಳಾಡಿ, ಹೊರ ರಾಜ್ಯದ ವಿವಿಯಿಂದ ನೈಜತೆಯಿರುವ ಪಿಎಚ್‌ಡಿ ಕೊಡಿಸುವುದಾಗಿ ಭರವಸೆ ನೀಡಿದ್ದು, ಕೆಲವರಿಂದ ಬರೋಬ್ಬರಿ 5-7 ಲಕ್ಷ ರೂ. ವರೆಗೆ ಹಣ ಪಡೆದುಕೊಂಡಿದ್ದಾರೆ. ಅದರಂತೆ ಹಣ ಕೊಟ್ಟವರಿಗೆ 15 ದಿನಗಳಲ್ಲಿ ಪಿಎಚ್‌ಡಿ ಪದವಿ ಪ್ರಮಾಣಪತ್ರ, ಕೋರ್ಸ್‌ವರ್ಕ್, ಸಲ್ಲಿಸಿದ ಪ್ರಬಂಧ ಸೇರಿದಂತೆ ಬೇಕಾದ ಎಲ್ಲ ದಾಖಲೆಗಳನ್ನು ಸಿದ್ಧಪಡಿಸಿ ನೀಡಿದ್ದಾರೆ. ಅದನ್ನೇ ಕಾಲೇಜು ಶಿಕ್ಷಣ ಇಲಾಖೆಗೆ ಸಲ್ಲಿಸಿ ಬಹುತೇಕರು ಉಪನ್ಯಾಸಕ ಹುದ್ದೆಯನ್ನು ಪಡೆದುಕೊಂಡಿದ್ದರು.

ಅತಿಥಿ ಉಪನ್ಯಾಸಕರು ಸಲ್ಲಿಸಿದ ದಾಖಲೆಗಳ ಪರಿಶೀಲನೆಗೆ ಎಸ್‌ಒಪಿ ಜಾರಿಗೊಳಿಸಿದ ಸಂದರ್ಭದಲ್ಲಿ ನಕಲಿ ಪಿಎಚ್‌ಡಿ ಸಲ್ಲಿಸಿರುವುದು ಕಂಡುಬಂದಿದೆ. ಅಂತಹವರನ್ನು ಕೆಲಸದಿಂದ ತೆಗೆಯಲಾಗುತ್ತಿದೆ.

-ಟಿ.ಆರ್.ಶೋಭಾ ಮುಖ್ಯ ಆಡಳಿತಾಧಿಕಾರಿ ಕಾಲೇಜು ಶಿಕ್ಷಣ ಇಲಾಖೆ

ಸಿಎಂ ಸಿದ್ದರಾಮಯ್ಯ ಎಲ್ಲದಕ್ಕೂ ಸಿದ್ಧ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಬಣಗಳ ನಡುವೆ ನಾಯಕತ್ವ ಗೊಂದಲ ಮುಂದುವರಿದಿದ್ದು, ಸಿಎಂ ಆಪ್ತ ಕೆ. ಎನ್. ರಾಜಣ್ಣ ಅವರು, ''ಅಧಿಕಾರದಲ್ಲಿ ಮುಂದುವರಿಕೆ ಅಥವಾ ಪದತ್ಯಾಗ- ಎರಡೂ ಆಯ್ಕೆಗೆ ಸಿದ್ದರಾಮಯ್ಯ ಅವರು ಮಾನಸಿಕವಾಗಿ ಸಿದ್ಧರಾಗಿದ್ದಾರೆ. ರಾಹುಲ್ ಗಾಂಧಿ ನೀಡುವ ಸೂಚನೆ ಪಾಲಿಸಲಿದ್ದಾರೆ,'' ಎಂದು ಹೇಳಿದ್ದಾರೆ.

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರನ್ನೇ ಮುಂದುವರಿಸಬೇಕು ಎಂಬುದು ನಮ್ಮ ಆಗ್ರಹ ಎಂದು ಮಾಜಿ ಸಚಿವರೂ ಆದ ಕೆ.ಎನ್.ರಾಜಣ್ಣ ಎಚ್ಚರಿಸಿದ್ದಾರೆ.ಇದೇ ವೇಳೆ, ದಲಿತ ಮುಖ್ಯಮಂತ್ರಿ ಹಕ್ಕೊತ್ತಾಯಕ್ಕೆ ತಾವು ಈಗಲೂ ಬದ್ಧವಾಗಿದ್ದೇವೆ ಎಂದು ರಾಜಣ್ಣ ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮೇ ಒಳಗೆ ಗೊಂದಲ ಪರಿಹಾರ

ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ಮೇ ಅಂತ್ಯದೊಳಗೆ ನಾಯಕತ್ವ ಗೊಂದಲದ ಬಗ್ಗೆ ಹೈಕಮಾಂಡ್ ವರಿಷ್ಠರು ಸೂಕ್ತ ತೀರ್ಮಾನ ಪ್ರಕಟಿಸಬಹುದು

-ಕೆ. ಎಚ್. ಮುನಿಯಪ್ಪ ಸಚಿವ, ದಿಲ್ಲಿಯಲ್ಲಿ ಹೇಳಿದ್ದು

ಡಿ.ಕೆ. ಶಿವಕುಮಾರ್ ಅವರು ಮೇ 15ರೊಳಗೆ ಸಿಎಂ ಆಗಲಿದ್ದಾರೆ. ರಾಜ್ಯದಲ್ಲಿ ಬದಲಾವಣೆ ಅಗತ್ಯವಿದ್ದು, ಜನರು ಕೂಡ ಇದನ್ನೇ ಬಯಸುತ್ತಿದ್ದಾರೆ

-ಇಕ್ಬಾಲ್ ಹುಸೇನ್ ಶಾಸಕ, ರಾಮನಗರ

ಒಳಮೀಸಲು ಜಾರಿ ನೇಮಕಾತಿ ಸುಸೂತ್ರ

ಬೆಂಗಳೂರು: ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲು ಜಾರಿ ಮಾಡಿ ಸರಕಾರ ಮಂಗಳವಾರ ಆದೇಶ ಹೊರಡಿಸಿದೆ. ಇದರೊಂದಿಗೆ, ಹಣಕಾಸು ಇಲಾಖೆ ಅನುಮೋದನೆ ಪಡೆದಿರುವ ಒಟ್ಟು 56,432 ಹುದ್ದೆಗಳ ನೇರ ನೇಮಕ ಪ್ರಕ್ರಿಯೆಗೆ ಚಾಲನೆ ದೊರಕಿದೆ.

ಪರಿಶಿಷ್ಟ ಜಾತಿಗೆ ಲಭ್ಯವಿರುವ ಒಟ್ಟು ಶೇ.15ರಷ್ಟು ಮೀಸಲು ಪ್ರಮಾಣದಲ್ಲಿ ಪ್ರವರ್ಗ -'ಎ' (ಎಡಗೈ ಮತ್ತು ಸಂಬಂಧಿತ ಜಾತಿಗಳು), ಪ್ರವರ್ಗ- 'ಬಿ' (ಬಲಗೈ ಮತ್ತು ಸಂಬಂಧಿತ ಜಾತಿಗಳು) ಹಾಗೂ ಪ್ರವರ್ಗ- 'ಸಿ' (ಸ್ಪೃಶ್ಯ ಹಾಗೂ 59 ಅಲೆಮಾರಿ ಜಾತಿಗಳು) ಕ್ರಮವಾಗಿ ಶೇ.5.25, ಶೇ.5.25 ಮತ್ತು ಶೇ.4.50 ಪ್ರಮಾಣದಲ್ಲಿ ಒಳ ಮೀಸಲು ಜಾರಿಗೊಳಿಸಲಾಗಿದೆ.

ಉದ್ಯೋಗ ಹಾಗೂ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶಕ್ಕೆ ಈ ಒಳ ಮೀಸಲು ಅನ್ವಯ ಆಗಲಿದೆ. ಕಳೆದ ಏ.24ರಂದು ವಿಶೇಷ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಒಳ ಮೀಸಲು ಹಂಚಿಕೆ ಆದೇಶ ಹೊರಬಿದ್ದಿದೆ.

ತೀವ್ರ ತಾಪಮಾನಕ್ಕೆ ಕಾರ್ಮಿಕ ಸಾವು?

■ **ವಿಕ ಸುದ್ದಿಲೋಕ** ರಾಯಚೂರು

ತಾಲೂಕಿನ ಯಾಪಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನರೇಗಾ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕ ಹುಸೇನಪ್ಪ ಮಡಿವಾಳ(50) ಅವರು ಸೋಮವಾರ ದಿಢೀರ್ ಕುಸಿದು ಮೃತಪಟ್ಟಿದ್ದು, ಬಿರುಬಿಸಿಲಿನ ತಾಪವೇ ಅವರ ಸಾವಿಗೆ ಕಾರಣವಿರಬಹುದೆಂದು ಶಂಕಿಸಲಾಗಿದೆ.

ನಾಲ್ಕು ದಿನಗಳಿಂದ ರಾಳ್ಳಕುಂಟಾ ಕೆರೆ ಅಭಿವೃದ್ಧಿ ಕಾಮಗಾರಿಯಲ್ಲಿ ದುಡಿಯುತ್ತಿದ್ದ ಹುಸೇನಪ್ಪ ಅವರು ಹಾಜರಾತಿಯ ಫೋಟೊ ತೆಗೆಯುವ ಸಮಯದಲ್ಲಿ ದಿಢೀರ್ ಕುಸಿದು ಬಿದ್ದರು. ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುವಾಗ ಕೊನೆಯುಸಿರೆಳೆದರು.

''ಮನರೇಗಾ ನಿಯಮಾವಳಿ ಪ್ರಕಾರ ಕೆಲಸದ ಸ್ಥಳದಲ್ಲಿ ಕುಡಿಯುವ ನೀರು ಹಾಗೂ ನೆರಳಿನ ವ್ಯವಸ್ಥೆ ಮಾಡಿರಲಿಲ್ಲ. 44 ಡಿಗ್ರಿ ತಾಪಮಾನದಲ್ಲಿ ಕೆಲಸ ಮಾಡುತ್ತಿದ್ದರು,'' ಎಂದು ಮನರೇಗಾ ಕಾರ್ಮಿಕರು ಆರೋಪಿಸಿದರು.

ಒಡಿಶಾದಲ್ಲಿ ಮನಕಲಕುವ ಘಟನೆ | ಮೃತ ಅಕ್ಕನ 20,000 ರೂ. ಹಿಂಪಡೆಯಲು ಬುಡಕಟ್ಟು ವ್ಯಕ್ತಿಯ ಪರದಾಟ

ಪ್ರೂಫ್ ತೋರಿಸಲು ಬ್ಯಾಂಕ್‌ಗೆ ಅಸ್ಥಿಪಂಜರ!

ಭುವನೇಶ್ವರ: ಬ್ಯಾಂಕ್ ಅಧಿಕಾರಿಗಳು ನಿಯಮಾವಳಿಗಳ ಕುರಿತು ಗ್ರಾಹಕರಿಗೆ ಸಹನೆಯಿಂದ ತಿಳಿಸಿ ಹೇಳದಿದ್ದರೆ ಏನಾಗುತ್ತದೆ ಎನ್ನುವುದಕ್ಕೆ ಒಡಿಶಾದಲ್ಲಿ ನಡೆದ ಈ ಘಟನೆಯೇ ಸಾಕ್ಷಿ!

ಮೃತ ಸಹೋದರಿಯ ಠೇವಣಿ ಹಣ ಹಿಂಪಡೆಯಲು ಬುಡಕಟ್ಟು ಸಮುದಾಯದ ವ್ಯಕ್ತಿಯೊಬ್ಬರು ಆಕೆಯ ಅಸ್ಥಿಪಂಜರವನ್ನೇ ಬ್ಯಾಂಕ್‌ಗೆ ಹೊತ್ತು ತಂದ ಘಟನೆ ಒಡಿಶಾದ ಕಿಯೋಂಜಾರ್ ಜಿಲ್ಲೆಯ ಮಲ್ಲಿಪಾಶಿಯಲ್ಲಿ ವರದಿಯಾಗಿದೆ.

ಡಯನಾಲಿ ಗ್ರಾಮದ ಜೀತು ಮುಂಡಾ ಅವರ ಸಹೋದರಿ ಕರ್ಲಾ ಮುಂಡಾ ಅವರು ಗ್ರಾಮೀಣ ಬ್ಯಾಂಕ್‌ನ ಮಲ್ಲಿಪಾಶಿ ಶಾಖೆಯಲ್ಲಿ 20 ಸಾವಿರ ರೂ. ಹಣ ಠೇವಣಿ ಇಟ್ಟಿದ್ದರು. ಅನಾರೋಗ್ಯಕ್ಕೆ ತುತ್ತಾದ ಕರ್ಲಾ ಅವರು ಕಳೆದ ಜನವರಿ 26 ರಂದು ಮೃತಪಟ್ಟಿದ್ದರು.

ಸಹೋದರಿ ನಿಧನ ಬಳಿಕ ಠೇವಣಿ ಹಣ ಪಡೆಯಲು ಜೀತು ಮುಂಡಾ ಹಲವು ಬಾರಿ ಬ್ಯಾಂಕ್ ಕದ ತಟ್ಟಿದ್ದಾರೆ. ಸರಿಯಾದ ಮಾಹಿತಿ ನೀಡದ ಬ್ಯಾಂಕ್ ಸಿಬ್ಬಂದಿ ದಾಖಲೆ ಸಲ್ಲಿಸಿ ಹಣ ತೆಗೆದುಕೊಂಡು ಹೋಗುವಂತೆ ಹೇಳಿದ್ದಾರೆ. ಹಣ ಪಡೆಯುವ ದಾರಿ ಕಾಣದ ಜೀತು ಪದೇಪದೆ ಬ್ಯಾಂಕ್‌ಗೆ ಎಡತಾಕುತ್ತಿದ್ದರು. ಅದೊಂದು ದಿನ ಅಧಿಕಾರಿ, ''ಸಹೋದರಿ ಮೃತಪಟ್ಟಿರುವ ದಾಖಲೆ ಬೇಕು ಅಥವಾ ಸಹೋದರಿಯನ್ನೇ ಕರೆದುಕೊಂಡು ಬರಬೇಕು,'' ಎಂದು ಕೋಪದಿಂದ ಹೇಳಿದ್ದಾರೆ. ಅದನ್ನು ಗಂಭೀರವಾಗಿ ಪರಿಗಣಿಸಿದ ಜೀತು ಮುಂಡಾ, ನೇರವಾಗಿ ಸ್ಮಶಾನಕ್ಕೆ ತೆರಳಿದರು. ಸಮಾಧಿ ಅಗೆದು ಕೊಳೆತ ಸ್ಥಿತಿಯಲ್ಲಿದ್ದ ಸಹೋದರಿಯ ಅಸ್ಥಿ ಪಂಜರ ಹೊತ್ತು ಬ್ಯಾಂಕ್‌ಗೆ ಬಂದಿದ್ದಾರೆ.

ಸಿಬ್ಬಂದಿಗೆ ತೋರಿಸಿ, ''ಇವಳೇ ನಮ್ಮ ಸಹೋದರಿ. ಅವಳು ಮೃತಪಟ್ಟಿರುವುದಕ್ಕೆ ಇದೇ ಸಾಕ್ಷಿ. ನಿಮಗೆ ನಂಬಿಕೆ ಬಂದಿದ್ದರೆ ನಮ್ಮ ಠೇವಣಿ ಹಣ ಹಿಂದಿರುಗಿಸಿ,'' ಎಂದು ಮನವಿ ಮಾಡಿದರು.

ಅಸ್ಥಿಪಂಜರ ಕಂಡು ಭಯ ಭೀತರಾದ ಬ್ಯಾಂಕ್ ಸಿಬ್ಬಂದಿ ಬಾಗಿಲು ಹಾಕಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ದೌಡಾಯಿಸಿದ ಪೊಲೀಸರು, ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ನಿರ್ವಹಿಸಿದರು. ಬ್ಯಾಂಕ್ ಸಿಬ್ಬಂದಿ ಜತೆ ಮಾತುಕತೆ ನಡೆಸಿದ ಬಳಿಕ, ''ನಿಮ್ಮ ಠೇವಣಿ ಹಣ ಮರಳಿಸಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ,'' ಎಂದು ಜೀತು ಮುಂಡಾಗೆ ಭರವಸೆ ನೀಡಿದರು. ವಿಷಯ ತಿಳಿದ ಬ್ಯಾಂಕ್ ಹಿರಿಯ ಅಧಿಕಾರಿಗಳು ಶಾಖಾ ಸಿಬ್ಬಂದಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಅಸ್ಥಿ ಪಂಜರ ಹೊತ್ತುಕೊಂಡು ಹೋಗುತ್ತಿರುವ ಜೀತು ಮುಂಡಾ ಅವರ ವಿಡಿಯೊಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಗ್ರಾಮೀಣ ಬ್ಯಾಂಕ್‌ಗಳ ಅವ್ಯವಸ್ಥೆ, ಸಿಬ್ಬಂದಿಯ ಕರ್ತವ್ಯ ಲೋಪ ಬಹಿರಂಗವಾಗಿದೆ.

ಅಲ್ಲದೇ, ಬುಡಕಟ್ಟು ಜನ ಹೆಚ್ಚಿರುವ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ತವರು ಕ್ಷೇತ್ರದಲ್ಲೇ ಘಟನೆ ನಡೆದಿರುವುದು ಮುಜುಗರ ತಂದಿದೆ.

The first university in India unifying industry and academia

MASTER OF RELEVANCE

Courses for building future-relevance in a rapidly shifting business world

Offered by
Ramaiah Institute of Science and Management (RISM) in collaboration with University at Albany

The world over, industries are evolving faster than institutional curriculums. The question, therefore, that students should be asking themselves isn't whether they'll be ready at the end of the course, it is if they'll be relevant.

At RISM, our education model is anchored in a curriculum co-developed with industry and academic partners, integrating interdisciplinary learning, industry-sponsored Centres of Excellence, and hands-on exposure to build future-relevant real-world capabilities.

No matter which globally benchmarked, innovative, industry-driven programme you choose to pursue at RISM, you will become a Master of Relevance.

Programmes offered
BTech: Computer Science & AI | Aerospace Engineering | Electrical Sciences
Business: BBA | MBA

Salient features
Academic Partnership: curriculum co-developed with SUNY Albany (one of the world's leading public research universities, based in New York)
Curriculum Design: programmes focused on future-relevant industries
Learning Model: industry exposure integrated throughout the programme journey
Translational Research: focus on commercialisation of academic research
Mentor Professors: India's first institutionalised Mentor Professor model
Campus: located within India's fastest-growing industrial corridor

For further information, visit
www.rism.org.in

Introducing
RAMAIAH INSTITUTE OF SCIENCE & MANAGEMENT
In collaboration with
UNIVERSITY AT ALBANY
STATE UNIVERSITY OF NEW YORK

Scan the QR Code to view the pre-registration / application page.

Contact Numbers:
73533 34533 / 73533 05533
Pre-Registration Email:
preregistration@rism.org.in

ಸುಳ್ಳು ದೂರುದಾರರಿಗೆ 1.57 ಲಕ್ಷ ರೂ. ದಂಡ

ಕಾನೂನು ದುರುಪಯೋಗ ಮಾಡಿಕೊಳ್ಳುವವರಿಗೆ ಯಾದಗಿರಿ ಜಿ.ಪಂ ಸಿಇಒ ಎಚ್ಚರಿಕೆ

ಯಾದಗಿರಿ: ಸುಳ್ಳು ದೂರು ನೀಡಿದ 24 ದೂರುದಾರರಿಗೆ 1,57,475 ರೂ. ದಂಡ ವಸೂಲಾತಿಗೆ ಜಿ.ಪಂ ಸಿಇಒ ಲವೀಶ ಒರಡಿಯಾ ನೋಟಿಸ್ ಜಾರಿ ಮಾಡಿದ್ದಾರೆ.

ಈ ಕುರಿತು ಮಾಹಿತಿ ನೀಡಿರುವ ಸಿಇಒ, ''ಜಿ.ಪಂ ಯೋಜನೆ, ಅಭಿವೃದ್ಧಿ ಕಾಮಗಾರಿಗಳ ಕುರಿತು ಸುಳ್ಳು ದೂರು ನೀಡಿದವರಿಂದ ದಂಡ ವಸೂಲಿ ಸಂಬಂಧ ನೋಟಿಸ್ ನೀಡಲಾಗಿದ್ದು, ಉತ್ತರ ಸಲ್ಲಿಸಲು ಕಾಲಾವಕಾಶ ನೀಡಲಾಗಿದೆ. ಸಮರ್ಪಕ ಉತ್ತರ ಸಲ್ಲಿಸದಿದ್ದಲ್ಲಿ ಮುಂದೆ ಅವರು ಸಲ್ಲಿಸುವ ಯಾವುದೇ ದೂರನ್ನು ಪರಿಗಣಿಸದಂತೆ ಜಿ.ಪಂ ಮತ್ತು ಅಧೀನ ಕಚೇರಿಗಳಲ್ಲಿ ದಾಖಲಿಸಲಾಗುವ ಕಪ್ಪು ಪಟ್ಟಿಗೆ ಸೇರಿಸಲಾಗುವುದು,'' ಎಂದು ಎಚ್ಚರಿಕೆ ನೀಡಿದ್ದಾರೆ.

''ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಿಗೆ ಕರ್ನಾಟಕ ರಕ್ಷಣಾ ಸೇನೆ ಜಿಲ್ಲಾಧ್ಯಕ್ಷ ಪ್ರಭುಗೌಡ ವಕ್ರಾಣಿ ದೂರು ಸಲ್ಲಿಸಿದಾಗ, ಸಚಿವರ ನಿರ್ದೇಶನದಂತೆ ತನಿಖಾ ಪ್ರಕ್ರಿಯೆ ಆರಂಭಿಸಲಾಯಿತು. ಈ ಸಂದರ್ಭದಲ್ಲಿ ದೂರು ಹಿಂಪಡೆಯಲಾಗಿದೆ. ಅಮೂಲ್ಯ ಸಮಯ ಮತ್ತು ಸಂಪನ್ಮೂಲಗಳ ದುರ್ಬಳಕೆ ತಡೆಯಲು ಭಾರತೀಯ ನ್ಯಾಯ ಸಂಹಿತೆ 2023ರ ಅನ್ವಯ ಕಾನೂನು ಕ್ರಮ ಕೈಗೊಳ್ಳಬಹುದಾಗಿದೆ. ಆದ್ದರಿಂದ, ಮೊದಲು ದೂರು ಸಲ್ಲಿಸಿ ನಂತರ ಹಿಂಪಡೆದ ಹಾಗೂ ಸುಳ್ಳು ದೂರು ನೀಡಿದ 24 ದೂರುದಾರರಿಗೆ ವಸೂಲಾತಿ ನೋಟಿಸ್ ಜಾರಿ ಮಾಡಲಾಗಿದೆ,'' ಎಂದು ತಿಳಿಸಿದ್ದಾರೆ.

ಇಂಟರ್ ನ್ಯಾಷನಲ್ ಟೂರ್ಸ್

ನಮ್ಮ ಗ್ಯಾರಂಟಿ

₹20,000 + ₹5000 ವರೆಗೆ ವಿಶೇಷ ರಿಯಾಯಿತಿ*

ಷರತ್ತುಗಳು ಅನ್ವಯಿಸುತ್ತದೆ*

ವಿದೇಶಿ ಪ್ರವಾಸದಲ್ಲಿ ವೈಭವೋಪೇತ ತಾರಾ ಹೋಟೆಲ್‌ಗಳಲ್ಲೇ ವಾಸ್ತವ್ಯಮಾಡಿ.

ಅಡಿಗಾಸ್ ಊಟ ಉಪಹಾರಗಳಲ್ಲಿ, ವಾಸ್ತವ್ಯದಲ್ಲಿ ದುಬಾರಿ ಎಂದು ಯಾವುದೇ ಕಾರಣಕ್ಕೂ ಗುಣ ಮಟ್ಟದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ.

ಪ್ರವೇಶ ಶುಲ್ಕ ದುಬಾರಿಯೆಂದು ವಿಶ್ವ ವಿಖ್ಯಾತ, ಐತಿಹಾಸಿಕ ಪ್ರಸಿದ್ಧ, ಜನಪ್ರಿಯ ತಾಣಗಳನ್ನು ಕೈ ಬಿಡಬೇಡಿ. ಅಡಿಗಾಸ್ ನ ಪ್ರವಾಸಿ ದರದಲ್ಲಿ ಇವೆಲ್ಲ ಒಳಗೊಂಡಿವೆ.

ಅಡಿಗಾಸ್ ಸೀಮಿತ ಅವಧಿಗೆ ವಿಶೇಷ ರಿಯಾಯಿತಿಯನ್ನು ಘೋಷಿಸಿದೆ.
ಈ ಸುವರ್ಣಾ ವಕಾಶವನ್ನು ಕಳೆದುಕೊಳ್ಳಬೇಡಿ.. ತ್ವರೆ ಮಾಡಿ.

01 ಆಸ್ಟ್ರೇಲಿಯಾ — 13 ದಿನಗಳು
ಸಿಡ್ನಿ, ಬ್ಲೂ ಮೌಂಟೇನ್, ಮೆಲ್ಬೋರ್ನ್, ಗ್ರೇಟ್ ಓಷನ್ ರೋಡ್, ಫಿಲಿಪ್ ಐಲ್ಯಾಂಡ್, ಕೇರ್ನ್ಸ್, ಕುರಾಂಡಾ, ಗ್ರೇಟ್ ಬ್ಯಾರಿಯರ್ ರೀಫ್, ಗೋಲ್ಡ್ ಕೋಸ್ಟ್, ಬ್ರಿಸ್ಬೇನ್
ದಿನಾಂಕ : AUG 16*, 30. SEP 13, 27. OCT 4, 18. NOV 8, 15, 22. DEC 6, 13.
70222 59008

02 ನ್ಯೂಝಿಲ್ಯಾಂಡ್ — 10 ದಿನಗಳು
ಆಕ್ಲ್ಯಾಂಡ್, ರೋಟೋರೂವಾ, ಕ್ವೀನ್ಸ್ ಟೌನ್, ಲೇಕ್ ಟೆಕಾಪೋ, ಮೌಂಟ್ ಕುಕ್,ಅರಾಕಿ ನ್ಯಾಷನಲ್ ಪಾರ್ಕ್, ಲೇಕ್ ಪುಕಾಕಿ, ಫಿಯರ್ಡ್ ಲ್ಯಾಂಡ್ ನ್ಯಾಷನಲ್ ಪಾರ್ಕ್, ಲೇಕ್ ತೆ ಆನು, ಎಗಲಿಂಟನ್ ವ್ಯಾಲಿ, ಮಿರರ್ ಲೇಕ್, ಹಾಲಿಫೋರ್ಡ್ ರಿವರ್, ಹೋಮರ್ ಟನೆಲ್, ಮಿಲ್ ಫೋರ್ಡ್ ಸೌಂಡ್, ಕ್ರೈಸ್ಟ್ ಚರ್ಚ್
ದಿನಾಂಕ : AUG 28*. SEP 11, 25. OCT 9, 16, 30. NOV 20, 27. DEC 4.
70222 59008

03 ಕೈಲಾಸ ಮಾನಸ ಸರೋವರ ಯಾತ್ರಾ — 10 ದಿನಗಳು
ಹೆಲಿಕಾಪ್ಟರ್ ಹಾಗು ವಿಮಾನದಲ್ಲಿ
✓ ನೇಪಾಳ ಗಂಜ್ - ಸಿಮಿಕೋಟ್ - ನೇಪಾಳ ಗಂಜ್ - ವಿಮಾನ ಪ್ರಯಾಣ
✓ ಸಿಮಿಕೋಟ್ - ಹಿಲ್ಸಾ - ಸಿಮಿಕೋಟ್ - ಹೆಲಿಕಾಪ್ಟರ್ ಪ್ರಯಾಣ
✓ ಚೀನಾ - ಟಿಬೆಟ್ ಪ್ರದೇಶ - ಬಸ್ಸಿನಲ್ಲಿ ಪ್ರಯಾಣ
ದಿನಾಂಕ : JUL 4, 12, 25*. AUG 2, 10, 24. SEP 1, 9, 18, 22.
70222 59003

04 ಆಸ್ಟ್ರೇಲಿಯಾ & ನ್ಯೂಝಿಲ್ಯಾಂಡ್ — 22 ದಿನಗಳು
ಸಿಡ್ನಿ, ಮೆಲ್ಬೋರ್ನ್, ಕೇರ್ನ್ಸ್, ಗೋಲ್ಡ್ ಕೋಸ್ಟ್, ಬ್ರಿಸ್ಬೇನ್, ಆಕ್ಲ್ಯಾಂಡ್, ರೋಟೋರೂವಾ, ಕ್ವೀನ್ಸ್ ಟೌನ್, ಮಿಲ್ ಫೋರ್ಡ್ ಸೌಂಡ್, ಲೇಕ್ ಟೆಕಾಪೋ, ಮೌಂಟ್ ಕುಕ್, ಕ್ರೈಸ್ಟ್ ಚರ್ಚ್.
ದಿನಾಂಕ: AUG 16*, 30. SEP 13, 27. OCT 4, 18. NOV 8, 15, 22. DEC 6.
70222 59008

05 ಇಂಗ್ಲೆಂಡ್ ಮತ್ತು ಯುರೋಪ್ — 9 / 13 / 16 ದಿನಗಳು
ಇಂಗ್ಲೆಂಡ್ , ಫ್ರಾನ್ಸ್, ಬೆಲ್ಜಿಯಂ, ನೆದರ್ ಲ್ಯಾಂಡ್ಸ್, ಲಿಕ್ಟನ್ ಸ್ಟನ್, ಲಕ್ಸಮ್ ಬರ್ಗ್, ಆಸ್ಟ್ರಿಯ, ಜರ್ಮನಿ, ಸ್ವಿಝರ್ ಲ್ಯಾಂಡ್, ಇಟಲಿ, ವ್ಯಾಟಿಕನ್.
ದಿನಾಂಕ : AUG 11*, 25. SEP 15, 29. OCT 13, 27. NOV 10.
70222 59008

06 ಸಿಂಗಾಪುರ್- ಮಲೇಷಿಯಾ-ಥೈಲ್ಯಾಂಡ್ — 4 / 5 / 8 / 12 / 16 ದಿನಗಳು
ಸಿಂಗಾಪುರ್: ಯೂನಿವರ್ಸಲ್ ಸ್ಟುಡಿಯೋ, ಸೆಂಟೋಸಾ ಐಲ್ಯಾಂಡ್, ಕೇಬಲ್ ಕಾರ್, ಗಾರ್ಡನ್ಸ್ ಬೈ ದ ಬೇ, ಸಿಂಗಾಪುರ್ ಓಷನೇರಿಯಂ, ಬರ್ಡ್ ಪ್ಯಾರಡೈಸ್, ಪ್ರಿಡೇ ಟೇರ್ಸ್ ಆನ್ ವಿಂಗ್ಸ್, ದ ಕಾರ್ಟ್ಸ್, ದಿ ಕೆವಂಜ್, ಜೈಂಟ್ ಪಂಡಾ ಫಾರೆಸ್ಟ್, ಟ್ರಾಮ್ ರೈಡ್, ನೈಟ್ ಸಫಾರಿ. **ಮಲೇಷಿಯಾ:** ಕೌಲಾಲಂಪುರ್ ಸಿಟಿ ಟೂರ್, ಪುತ್ರಜಯ, ಜೆಂಟಿಂಗ್ ಹೈ ಲ್ಯಾಂಡ್. **ಥೈಲ್ಯಾಂಡ್:** ಪಟ್ಟಾಯ, ಕೋರಲ್ ಐಲ್ಯಾಂಡ್, ಅಲ್ಕಝರ್ ಶೋ, ನೋಂಗ್ ನೂಚ್ ವಿಲೇಜ್, ಬ್ಯಾಂಕಾಕ್ ಸಿಟಿ ಟೂರ್, ಸಫಾರಿ ವರ್ಲ್ಡ್, ಮರೈನ್ ಪಾರ್ಕ್.
ದಿನಾಂಕ : JUN 4, 18. JUL 2*, 16. AUG 6, 13, 20. SEP 3, 17, 24. OCT 1, 15, 29. NOV 5, 19, 26. DEC 3, 10.
74833 66378

07 ಸೌತ್ ಆಫ್ರಿಕಾ — 10 ದಿನಗಳು
ಸನ್ ಸಿಟಿ, ಪಿಲಾನ್ಸ್ ಬರ್ಗ್, ಮಾಬುಲ, ಜಾರ್ಜ್, ಮೊಸಲ್ ಬೇ, ಕೇಪ್ ಟೌನ್, ಟೇಬಲ್ ಮೌಂಟೈನ್, ಹೌಟ್ ಬೇ, ಸೀಲ್ ಐಲ್ಯಾನ್ಡ್, ಚಾಪ್ ಮಾನ್ ಪೀಕ್ ಡ್ರೈವ್, ಪೆಂಗ್ವಿನ್ಸ್ ಅಟ್ ಬೌಲ್ಡರ್ಸ್ ಬೀಚ್
ದಿನಾಂಕ : AUG 16, 30. SEP 20, 27*. OCT 4, 18. NOV 8, 15, 22. DEC 6, 13.
702225 9008

08 ಬಾಲಿ - ದ ಲ್ಯಾಂಡ್ ಆಫ್ ಗಾಡ್ಸ್ — 5 / 7 / 9 ದಿನಗಳು
ಡೆನ್ ಪಸರ್, ನುಸಾ ಪೆನಿಡಾ ಐಲ್ಯಾಂಡ್, ಕಿಂತಾಮಣಿ, ಉಬುದ್, ಗರುಡ ವಿಷ್ಣು ಕಲ್ಚರಲ್ ಪಾರ್ಕ್, ತನಾಹ್ ಲಾಟ್, ಬೆರಾಟನ್ ಲೇಕ್, ಉಲಾನ್ ದಾನು, ತಮನ್ ಆಯುನ್, ತಂಜುಂಗ್ ಬೆನೋವಾ ಬೀಚ್, ಉಲು ವಾಟು, ಬೈಸಾಕಿ, ತೀರ್ಥ ಎಂಪುಲ್, ತೀರ್ಥ ಗಂಗಾ, ಕಿಂಗ್ ಪ್ಯಾಲೇಸ್, ಬ್ಯಾಟ್ ಕೇವ್ಸ್ ಟೆಂಪಲ್.
ದಿನಾಂಕ : MAY 4, 11, 18. JUN 1, 15. JUL 6, 20. AUG 3, 17. SEP 7, 14, 21*. OCT 5, 12, 26. NOV 2, 9, 16, 23. DEC 7, 14.
93641 04366

09 ವಿಯೆಟ್ನಾಮ್ - ಕಾಂಬೋಡಿಯಾ — 4 / 6 / 7 / 10 / 12 ದಿನಗಳು
ವಿಯೆಟ್ನಾಮ್: ಹಾನೋಯ್, ನಿನ್ ಬಿನ್, ಹೊಲಾಂಗ್ ಬೇ, ದ ನಾಂಗ್, ಹೊಯ್ ಆನ್, ಬಾ ನಾ ಹಿಲ್ಸ್, ಮೆಕಾಂಗ್ ಡೆಲ್ಟಾ, ಹೊಚಿಮಿನ್ ಸಿಟಿ, ಕು ಚಿ ಟನಲ್ಸ್. **ಕಾಂಬೋಡಿಯಾ:** ನೊಮ್ ಫೆನ್, ಸಿಯಾಮ್ ರೀಪ್, ಅಂಕೋರ್ ವಾಟ್, ಟೋನ್ಲೆ ಸಾಪ್, ಥೌಸಂಡ್ ಲಿಂಗ ರಿವರ್,
ದಿನಾಂಕ: MAY 14, 21. JUN 4, 18. JUL 9, 23. AUG 6, 13, 20. SEP 10, 17, 24*. OCT 1, 15, 29. NOV 5, 19, 26. DEC 3, 10
93640 88424

10 ನೇಪಾಳ - ಮುಕ್ತಿನಾಥ - ಜನಕಪುರ — 5/9 ದಿನಗಳು
ಲುಂಬಿನಿ, ಪೋಕ್ರಾ, ಜೋಮ್ ಸಮ್, ಮುಕ್ತಿನಾಥ, ಫೀವಾ ಲೇಕ್, ಮನೋಕಾಮನ, ಕಟ್ಮಂಡು, ಭಕ್ತಪುರ, ಡೋಲೇ ಶ್ವರ ಮಹಾದೇವ, ಜನಕಪುರ
ದಿನಾಂಕ: MAY 7, 21. JUN 4, 18. JUL 9, 23. AUG 13*, 27. SEP 10, 24. OCT 1, 22, 29. NOV 12, 26.
70222 59007

ಬಸವನಗುಡಿ 080 – 26616678
ಮಲ್ಲೇಶ್ವರಂ 080 – 23346678
ರಾಜರಾಜೇಶ್ವರಿ ನಗರ 080 - 2669 6678
ವಿಜಯನಗರ 080 - 23356678
ಹುಬ್ಬಳ್ಳಿ 0836 – 2256678

ಕೆ. ನಾಗರಾಜ ಅಡಿಗ
ಸಂಸ್ಥಾಪಕರು, ಅಡಿಗಾಸ್ ಯಾತ್ರಾ,

ಅಡಿಗಾಸ್ ಯಾತ್ರಾ

+91 94494 78944
www.adigasyatra.com
News Website : www.adigasyatranews.com
care@adigasyatra.com
Follows Us :
Facebook Instagram News Website Youtube

ತಜ್ಞರ ಸಮಿತಿಯಿಂದ ಅಧ್ಯಯನ, ಪ್ರಸ್ತಾವನೆ ಸಿದ್ಧತೆ
ಬೆಳೆಗಾರರಲ್ಲಿ ಜಾಗತಿಕ ಮಾರುಕಟ್ಟೆ ಬಲದ ಆಶಾಭಾವ

ವಿಜಯಪುರ ದ್ರಾಕ್ಷಿಗೆ ಜಿಐ ನಿರೀಕ್ಷೆ

■ **ಮಂಜುನಾಥ ಕೊಣಸೂರು** ವಿಜಯಪುರ
manjunatha.kp@timesofindia.com

ವಿಶೇಷ ರುಚಿ, ಪೌಷ್ಟಿಕಾಂಶಗಳ ಆಗರವಾಗಿರುವ ವಿಜಯಪುರ ಭಾಗದಲ್ಲೇ ಬೆಳೆದು, ತಯಾರಾಗುವ ಒಣದ್ರಾಕ್ಷಿಗೆ ಜಿಐ (ಭೌಗೋಳಿಕ ಮಾನ್ಯತೆ) ಟ್ಯಾಗ್ ಕೊಡಿಸುವ ಪ್ರಯತ್ನ ನಡೆದಿದೆ. ಜಿಐ ಟ್ಯಾಗ್ ಸಿಕ್ಕರೆ ಇಂಡಿಯ ಕಾಗ್ಜಿ ನಿಂಬೆಯಂತೆ ಒಣದ್ರಾಕ್ಷಿಗೂ ಜಾಗತಿಕ ಮಾರುಕಟ್ಟೆ ಜಾಲ ಸಿಗುವ ಆಶಾಭಾವ ಬೆಳೆಗಾರರಲ್ಲಿ ಮೂಡಿದೆ.

ಬಾಗಲಕೋಟೆಯ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಂಶೋಧನಾ ವಿಭಾಗದ ನಿರ್ದೇಶಕ ಡಾ.ಬಿ.ಫಕ್ರುದ್ದೀನ್ ನೇತೃತ್ವದ 9 ಸದಸ್ಯರ ಸಮಿತಿಯು ವಿಜಯಪುರದ ಒಣದ್ರಾಕ್ಷಿಗೆ ಜಿಐ ಟ್ಯಾಗ್ ಪಡೆದುಕೊಳ್ಳುವ ನಿಟ್ಟಿನಲ್ಲಿ ಪ್ರಸ್ತಾವನೆ ಸಿದ್ಧಪಡಿಸುತ್ತಿದೆ.

ಹಣ್ಣು ವಿಜ್ಞಾನ, ಅರ್ಥಶಾಸ್ತ್ರ, ಮಾರುಕಟ್ಟೆ, ಜೀವ ರಸಾಯನ ಶಾಸ್ತ್ರ, ತಳಿಶಾಸ್ತ್ರ, ತೋಟಗಾರಿಕೆ ತಜ್ಞರನ್ನೊಳಗೊಂಡ ಸಮಿತಿಯು ಜಿಐ ಟ್ಯಾಗ್ ಪ್ರಸ್ತಾವನೆ ಸಿದ್ಧಪಡಿಸಲು 6 ತಿಂಗಳಿಂದ ವಿಜಯಪುರದ ದ್ರಾಕ್ಷಿ ಹಾಗೂ ಒಣದ್ರಾಕ್ಷಿ ಮೇಲೆ ಅಧ್ಯಯನ ಕೈಗೊಂಡಿದೆ. ಈ ಭಾಗದ ದ್ರಾಕ್ಷಿಯು ವೈಜ್ಞಾನಿಕವಾಗಿ ಹಾಗೂ ಐತಿಹಾಸಿಕವಾಗಿ ಇತರ ಭಾಗದ ದ್ರಾಕ್ಷಿಗಿಂತ ವಿಭಿನ್ನ, ವಿಶೇಷತೆ ಹೊಂದಿದೆ ಎಂಬುದರ ಬಗ್ಗೆ ದಾಖಲೆ ಸಮೇತ ಮಾಹಿತಿ ಕಲೆಹಾಕುತ್ತಿದೆ.

ಜಿಐ ಟ್ಯಾಗ್ ಲಾಭ ಏನು?: ಹವಾಗುಣ ಹಾಗೂ ಮಣ್ಣಿನ ಗುಣದಿಂದ ವಿಶೇಷ ರುಚಿಯ ವಿಜಯಪುರ ದ್ರಾಕ್ಷಿ ವಿದೇಶಗಳಿಗೆ ರಫ್ತಾಗುತ್ತಿದೆ. ಆದರೆ, ಒಣದ್ರಾಕ್ಷಿ ಉದ್ಯಮಕ್ಕೆ ಸೂಕ್ತ ಮಾರುಕಟ್ಟೆ, ಕೋಲ್ಡ್ ಸ್ಟೋರೇಜ್ ವ್ಯವಸ್ಥೆ ಇಲ್ಲದೆ ಮಹಾರಾಷ್ಟ್ರದ ಬ್ರ್ಯಾಂಡ್‌ನಡಿ ಮಾರಾಟವಾಗುತ್ತಿದೆ. ಒಂದು ವೇಳೆ ಜಿಐ ಟ್ಯಾಗ್ ಸಿಕ್ಕರೆ ಸ್ಥಳೀಯ ರೈತರ ಉತ್ಪನ್ನಕ್ಕೆ ವಿಶ್ವದಾದ್ಯಂತ ಮಾರುಕಟ್ಟೆ ಜಾಲ ಸಿಗಲಿದೆ ಎಂದು ತೋಟಗಾರಿಕೆ ವಿಜ್ಞಾನಿಗಳು ತಿಳಿಸಿದರು.

''ವಿಜಯಪುರ ದ್ರಾಕ್ಷಿಯು ಇತರ ಭಾಗದ ದ್ರಾಕ್ಷಿಗಿಂತ ವಿಶೇಷತೆ ಹೊಂದಿದ್ದರ ಬಗ್ಗೆ ತಾಂತ್ರಿಕವಾಗಿ ಹಾಗೂ ಐತಿಹಾಸಿಕ ದಾಖಲೆ ಒದಗಿಸುವುದು ಅತ್ಯಗತ್ಯ. ಈ ನಿಟ್ಟಿನಲ್ಲಿ ನಮ್ಮ ತಂಡವು ರೈತರಿಂದ ಮಾಹಿತಿ ಸಂಗ್ರಹ ಹಾಗೂ ಈ ಭಾಗದಲ್ಲಿ ದ್ರಾಕ್ಷಿ ಬೆಳೆ ಹೇಗೆ ಅಭಿವೃದ್ಧಿ ಹೊಂದಿದೆ ಎಂಬುದರ ಬಗ್ಗೆ ಐತಿಹಾಸಿಕ ದಾಖಲೆಗಳನ್ನು ಹುಡುಕುತ್ತಿದೆ,'' ಎಂದು ಸಮಿತಿಯ ಮುಖ್ಯಸ್ಥ ಡಾ.ಫಕ್ರುದ್ದೀನ್ ತಿಳಿಸಿದರು.

ಆಗಬೇಕಿದೆ ರಸಾಯನಿಕ ಅಂಶದ ಪರೀಕ್ಷೆ: ಒಣದ್ರಾಕ್ಷಿಯಲ್ಲಿನ ಪೌಷ್ಟಿಕಾಂಶ ಹಾಗೂ ಅದರಲ್ಲಿ ಉಳಿದುಕೊಳ್ಳುವ ರಾಸಾಯನಿಕ ಅಂಶದ ಬಗ್ಗೆ ಪರೀಕ್ಷೆ ಆಗಬೇಕಿದೆ. ಇದು ಮಧ್ಯಪ್ರಾಚ್ಯ , ಯುರೋಪ್ ಹಾಗೂ ಉತ್ತರ ಅಮೆರಿಕ ರಾಷ್ಟ್ರಗಳಿಗೆ ರಫ್ತು ಮಾಡಲು ಸಹಕಾರಿಯಾಗಲಿದೆ. ಗುಣಮಟ್ಟದ ದ್ರಾಕ್ಷಿ ಉತ್ಪಾದನೆಗೆ ಆಗಾಗ್ಗೆ ಮಣ್ಣು ಪರೀಕ್ಷೆ ನಡೆಸಲಾಗುತ್ತಿದೆ.

- ವಿಜಯಪುರ ಭಾಗದ ದ್ರಾಕ್ಷಿ ಒಣ ಹವಾಗುಣದಲ್ಲಿ ಬೆಳೆಯಲಿದ್ದು, ಸಕ್ಕರೆ ಅಂಶ ಹೆಚ್ಚಿರುತ್ತದೆ
- ಬೇರೆ ಭಾಗದ ದ್ರಾಕ್ಷಿಗಿಂತ ಹೆಚ್ಚು ಕಾರ್ಬೋಹೈಡ್ರೇಟ್ಸ್
- ಕಡಿಮೆ ಕೊಬ್ಬಿನಾಂಶ ಹಾಗೂ ಕೊಲೆಸ್ಟ್ರಾಲ್
- ಉತ್ತಮ ಬಣ್ಣ, ಸುವಾಸನೆ
- ಹೆಚ್ಚುದಿನ ಕೆಡದೆ ಗುಣಮಟ್ಟ ಹೊಂದಿರುತ್ತದೆ

ಪವರ್‌ಫುಲ್ ಪೌಷ್ಟಿಕಾಂಶ

- ಪೊಟ್ಯಾಷಿಯಂ ಹಾಗೂ ಕಬ್ಬಿಣಾಂಶ ಹೆಚ್ಚಿರುತ್ತದೆ, ಹೃದಯ ಆರೋಗ್ಯಕ್ಕೆ ಹಾಗೂ ಹಿಮೊಗ್ಲೋಬಿನ್ ಹೆಚ್ಚಳಕ್ಕೆ ಪೂರಕ
- 100 ಗ್ರಾಂ ಒಣದ್ರಾಕ್ಷಿಯಲ್ಲಿ 700–750 ಮಿಲಿ ಗ್ರಾಂ ಪೊಟ್ಯಾಷ್, 90–100 ಮಿಲಿ ಗ್ರಾಂ ಪಾಸ್ಪರಸ್, 30–35 ಮಿಲಿ ಗ್ರಾಂ ಮೆಗ್ನೀಷಿಯಂ, 50–65 ಮಿಲಿ ಗ್ರಾಂ ಕ್ಯಾಲ್ಸಿಯಂ, 1.5–2 ಮಿಲಿ ಗ್ರಾಂ ಕಬ್ಬಿಣಾಂಶ ಇರುತ್ತದೆ. 75–80 ಕಾರ್ಬೋಹೈಡ್ರೇಟ್ಸ್, 60–65 ಮಿಲಿ ಗ್ರಾಂ ಸಕ್ಕರೆ ಅಂಶ, 3–4 ಗ್ರಾಂ ನಾರಿನಂಶ, 3–4 ಗ್ರಾಂ ಪ್ರೊಟೀನ್, 1.5–2 ಗ್ರಾಂ ಮಿನರಲ್ಸ್ ಇರುತ್ತದೆ

17,000 ಹೆಕ್ಟೇರ್‌ನಲ್ಲಿ ಬೆಳೆ

ರಾಜ್ಯದಲ್ಲೇ ಅತಿ ಹೆಚ್ಚು ದ್ರಾಕ್ಷಿಯನ್ನು ವಿಜಯಪುರ ಜಿಲ್ಲೆಯಲ್ಲಿ ಬೆಳೆಯಾಗುತ್ತಿದೆ. ಜಿಲ್ಲಾದ್ಯಂತ 17 ಸಾವಿರ ಹೆಕ್ಟೇರ್‌ನಲ್ಲಿ ದ್ರಾಕ್ಷಿ ಬೆಳೆ ಇದೆ. 5 ಲಕ್ಷ ಟನ್‌ಗೂ ಹೆಚ್ಚು ಒಣದ್ರಾಕ್ಷಿ ಉತ್ಪಾದನೆಯಾಗುತ್ತಿದೆ. ಜಿಐ ಟ್ಯಾಗ್ ಸಿಕ್ಕರೆ ವಿಜಯಪುರ ದ್ರಾಕ್ಷಿಗೆ ಜಾಗತಿಕ ಮಾರುಕಟ್ಟೆ ಸಂಪರ್ಕ ದೊರೆತು ರೈತರಿಗೆ ಅನುಕೂಲವಾಗಲಿದೆ. ಸವಣೂರಿನ ವೀಳ್ಯದೆಲೆ, ಕುಮಟಾದ ಈರುಳ್ಳಿ, ತಿಪಟೂರಿನ ತೆಂಗು, ಕೊಬ್ಬರಿ, ಗೌರಿಬಿದನೂರಿನ ಮೆಣಸಿನಕಾಯಿ ಸೇರಿ 23 ಬೆಳೆಗಳಿಗೆ ಜಿಐ ಟ್ಯಾಗ್ ಕೊಡಿಸುವ ಪ್ರಯತ್ನ ನಡೆದಿದೆ ಎಂದು ಬಾಗಲಕೋಟೆ ತೋಟಗಾರಿಕೆ ವಿವಿ ವಿಜ್ಞಾನಿಗಳು ತಿಳಿಸಿದರು.

> ವಿಜಯಪುರದ ದ್ರಾಕ್ಷಿ ಹಾಗೂ ಒಣದ್ರಾಕ್ಷಿಗೆ ಜಿಐ ಟ್ಯಾಗ್ ಪಡೆದುಕೊಳ್ಳಲು ತಜ್ಞರ ಸಮಿತಿಯಿಂದ ಅಧ್ಯಯನ, ತಾಂತ್ರಿಕ ಹಾಗೂ ಐತಿಹಾಸಿಕ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಪ್ರಸ್ತಾವನೆಗೆ ಸಿದ್ಧತೆ ಕೈಗೊಳ್ಳಲಾಗಿದೆ.
> **-ಡಾ.ಬಿ.ಫಕ್ರುದ್ದೀನ್** ಸಂಶೋಧನಾ ನಿರ್ದೇಶಕ, ತೋಟಗಾರಿಕೆ ವಿವಿ, ಬಾಗಲಕೋಟೆ

ತೋಟಗಾರಿಕೆ ವಿವಿ, ಸರಕಾರಿ ಸಂಸ್ಥೆಗಳು ಹಾಗೂ ರೈತ ಉತ್ಪಾದಕ ಕಂಪನಿಗಳ ಸಹಯೋಗದಲ್ಲಿ ಸಾವಯವ ದ್ರಾಕ್ಷಿ ಬೆಳೆಯಲು ರೈತರಿಗೆ ಜಾಗೃತಿ ಮೂಡಿಸಲಾಗುತ್ತಿದೆ.

ಭಾರತ ನೃತ್ಯ ವೈಭವ

ನೃತ್ಯ ಕಲೆ ಸಂಸ್ಕೃತಿ, ಇತಿಹಾಸ, ಭಾವನೆ ಮತ್ತು ಸಾಮಾಜಿಕ ಒಗ್ಗಟ್ಟಿನ ಅಭಿವ್ಯಕ್ತಿ. ಏ.29 ವಿಶ್ವನೃತ್ಯ ದಿನ. 'ಸಮುದಾಯಗಳನ್ನು ಬೆಸೆಯಲು ವೈವಿಧ್ಯಮಯ ನೃತ್ಯ ಪ್ರಕಾರಗಳ ಪ್ರದರ್ಶನ, ನೃತ್ಯವನ್ನು ಸಾರ್ವತ್ರಿಕ ಭಾಷೆಯಾಗಿ ಆಚರಿಸುವುದು' 2026ನೇ ಸಾಲಿನ ಧ್ಯೇಯ ವಾಕ್ಯ.

ಜಗತ್ತಿನ ರಾಷ್ಟ್ರಗಳಲ್ಲಿ 2,500ಕ್ಕೂ ಅಧಿಕ ನೃತ್ಯ ಶೈಲಿಗಳು ವಿವಿಧ ಸಂಸ್ಕೃತಿಗಳಲ್ಲಿ ಕಂಡು ಬರುತ್ತವೆ. ಪ್ರತಿಯೊಂದು ಶೈಲಿಗೂ ತನ್ನದೇ ಆದ ಇತಿಹಾಸ, ಅಭಿವ್ಯಕ್ತಿ ಇದೆ. ಭಾರತ ನೃತ್ಯ ಕಲೆಯಲ್ಲಿ ಅತ್ಯಂತ ಶ್ರೀಮಂತ ದೇಶ. 450 ಹೆಚ್ಚು ನೃತ್ಯ ಪ್ರಾಕಾರಗಳಿವೆ. ಭರತನಾಟ್ಯ, ಕಥಕ್, ಕಥಕ್ಕಳಿ ಕೂಚಿಪುಡಿ, ಒಡಿಸ್ಸಿ, ಮಣಿಪುರಿ, ಮೋಹಿನಿಯಾಟ್ಟಂ, ಸತ್ರಿಯ ಪ್ರಮುಖ ಶಾಸ್ತ್ರೀಯ ನೃತ್ಯ ಪ್ರಕಾರವಾಗಿವೆ. ನೃತ್ಯ ಈಗ ಆಧುನಿಕ ಉದ್ಯಮವಾಗಿದೆ, ದೊಡ್ಡ ಆರ್ಥಿಕ ಚಟುವಟಿಕೆಯಾಗಿ ಬೆಳೆಯುತ್ತಿದೆ.

ಪ್ರಯೋಜನ

- **ದೈಹಿಕ ಆರೋಗ್ಯ:** ಹೃದಯದ ಆರೋಗ್ಯ ಸುಧಾರಣೆ, ತೂಕ ನಿಯಂತ್ರಣ, ಸ್ನಾಯುಗಳ ಬಲವರ್ಧನೆ.
- **ಮಾನಸಿಕ ಆರೋಗ್ಯ:** ಒತ್ತಡ ನಿವಾರಣೆ, ಆತ್ಮವಿಶ್ವಾಸ ಹೆಚ್ಚಳ, ಮನೋಸ್ಥಿತಿ ಸುಧಾರಣೆ.
- **ಸಾಂಸ್ಕೃತಿಕ ಸಂರಕ್ಷಣೆ:** ಪರಂಪರೆಯ ಉಳಿವು, ಹೊಸ ಪೀಳಿಗೆಗೆ ಸಂಸ್ಕೃತಿ ಪರಿಚಯ.
- **ಆರ್ಥಿಕ ಅವಕಾಶಗಳು:** ಕಲಾವಿದರು, ಶಿಕ್ಷಕರು, ಕೊರಿಯೋಗ್ರಾಫರ್‌ಗಳಿಗೆ ಉದ್ಯೋಗ, ಪ್ರವಾಸೋದ್ಯಮ ವೃದ್ಧಿ.
- **ಶಿಕ್ಷಣ ಮತ್ತು ವ್ಯಕ್ತಿತ್ವ ವಿಕಾಸ:** ಶಿಸ್ತು ಮತ್ತು ನಿಯಮ, ತಂಡದಲ್ಲಿ ಕೆಲಸ ಮಾಡುವ ಸಾಮರ್ಥ್ಯ, ಸೃಜನಶೀಲತೆ.

ಭಾರತದ ಜನಪದ ನೃತ್ಯಗಳು

ಯಕ್ಷಗಾನ (ಕರ್ನಾಟಕ), ಭಾಂಗ್ರಾ (ಪಂಜಾಬ್), ಗಾರ್ಭಾ (ಗುಜರಾತ್), ಘೂರ್ಮ (ರಾಜಸ್ಥಾನ)

- **ಪಾಶ್ಚಾತ್ಯ ನೃತ್ಯ:** ಬ್ಯಾಲೆ ಪಾಶ್ಚಾತ್ಯ ಶೈಲಿ, ಒಪೆರಾ ಡಾನ್ಸ್
- **ಜನಪದ ನೃತ್ಯ:** ಆಫ್ರಿಕಾ, ಲ್ಯಾಟಿನ್ ಅಮೆರಿಕ, ಯುರೋಪ್
- **ಆಧುನಿಕ ನೃತ್ಯ:** ಹಿಪ್ ಹಾಪ್, ಜಾಝ್, ಕಂಟೆಂಪರರಿ, ಫ್ಯೂಷನ್
- **ಸಾಮಾಜಿಕ ನೃತ್ಯ:** ಸಾಲ್ಸಾ, ಟಾಂಗೊ

ಸಮಕಾಲೀನ ಸವಾಲುಗಳು

- ಪರಂಪರೆಯ ನೃತ್ಯಗಳಿಗೆ ಕಡಿಮೆ ಆದ್ಯತೆ, ಡಿಜಿಟಲ್ ಯುಗದಲ್ಲಿ ಗಮನಾಭಾವ, ಕಲಾವಿದರ ಆದಾಯ ಅಸ್ಥಿರತೆ, ತರಬೇತಿ ವೆಚ್ಚ ಹೆಚ್ಚಳ.

ಜಾಗತಿಕ ಮಟ್ಟದಲ್ಲಿ ನೃತ್ಯ, ಸಂಗೀತ, ಮನರಂಜನೆ ಮತ್ತು ವೇದಿಕೆ ಪ್ರದರ್ಶನಗಳ ಒಟ್ಟು ಮೌಲ್ಯವು 4–8 ಲಕ್ಷ ಕೋಟಿ ರೂ.ಗಳಷ್ಟಿದೆ.

ಭಾರತದಲ್ಲಿ ನೃತ್ಯ ಮತ್ತು ಸಂಬಂಧಿತ ಮನರಂಜನೆ ಉದ್ಯಮದ ಮೌಲ್ಯ 10–20 ಸಾವಿರ ಕೋಟಿ ರೂ. ಗಳಾಗಿದೆ. ಬಾಲಿವುಡ್ ಸಿನಿಮಾಗಳು ಮತ್ತು ರಿಯಾಲಿಟಿ ಶೋಗಳು ಈ ನಿಟ್ಟಿನಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

ಮಾಹಿತಿ: ಎಸ್.ಜಿ.ಕುರ್ಯ ಉಡುಪಿ

ಸಕ್ಕರೆ ಕಾಯಿದೆ ಪರಿಷ್ಕರಣೆ ಮುನ್ನ ಅಭಿಪ್ರಾಯ ಪಡೆಯಲಿ

ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹ

■ **ವಿಕ ಸುದ್ದಿಲೋಕ** ಮೈಸೂರು

ಕೇಂದ್ರ ಸರಕಾರವು 1966ರ ಸಕ್ಕರೆ ನಿಯಂತ್ರಣ ಕಾಯಿದೆಯನ್ನು ಪರಿಷ್ಕರಣೆ ಮಾಡುವ ಮುನ್ನ ರಾಜ್ಯ ಸರಕಾರ, ಸಂಘ–ಸಂಸ್ಥೆಗಳ ಅಭಿಪ್ರಾಯ ಹಾಗೂ ಸಲಹೆ ಪಡೆಯಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.

''ರಾಜ್ಯ ಸರಕಾರವು ಈ ಕುರಿತು ವಿಷಯ ಪರಿಣತರು, ಕಬ್ಬು ಬೆಳೆಗಾರರ ಸಂಘದ ರೈತ ಮುಖಂಡರು, ಆಡಳಿತಗಾರರು, ಕಾನೂನು ಸಲಹೆಗಾರರು ಒಳಗೊಂಡ ಸಮಿತಿ ರಚಿಸಿ. ವರದಿ ತಯಾರಿಸಿ ಕೇಂದ್ರಕ್ಕೆ ಕಳುಹಿಸಬೇಕು,'' ಎಂದು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

''ಕಬ್ಬಿನ ಎಫ್‌ಆರ್‌ಪಿ ನಿಗದಿ ಮಾಡುವಾಗ ಕಬ್ಬಿನಿಂದ ಉತ್ಪತ್ತಿಯಾಗುವ ಸಿಪ್ಪೆ ಮತ್ತು ಅದರಿಂದ ಉತ್ಪಾದನೆಯಾಗುವ ವಿದ್ಯುತ್, ಮೊಲಾಸಿಸ್‌ನಿಂದ ಉತ್ಪತ್ತಿಯಾಗುವ ಮದ್ಯಸಾರ, ಎಥನಾಲ್ ಹಾಗೂ ಬಯೋ ಕಾಂಪೋಸ್ಟ್ ಗೊಬ್ಬರಗಳ ಲಾಭವನ್ನು ಲೆಕ್ಕ ಹಾಕಿ, ಕಬ್ಬಿನ ಎಫ್‌ಆರ್‌ಪಿ ನಿಗದಿ ಮಾಡಬೇಕು. ಕಬ್ಬಿನಿಂದ ಬರುವ ಸಕ್ಕರೆ ಇಳುವರಿ ಪ್ರಮಾಣವನ್ನು ಕನಿಷ್ಠ ಶೇ. 9ಕ್ಕೆ ನಿಗದಿ ಮಾಡಬೇಕು. ಕಬ್ಬಿನ ಎಫ್‌ಆರ್‌ಪಿಯನ್ನು ರೈತರ ಹೊಲದಲ್ಲಿನ ದರ ಎಂದು ನಿಗದಿ ಮಾಡಬೇಕು,'' ಎಂದರು.

''ಕಬ್ಬಿಗೆ ಆಕಸ್ಮಿಕವಾಗಿ ಬೆಂಕಿ ಬಿದ್ದಾಗ ಇಂತಹ ಕಬ್ಬನ್ನು ನುರಿಸಿದ ಸಕ್ಕರೆ ಕಾರ್ಖಾನೆಗಳು ರೈತರಿಗೆ ಎಫ್ ಆರ್‌ಪಿಯಲ್ಲಿ ಶೇ.25ರಷ್ಟು ಕಡಿತ ಮಾಡುವ ಪದ್ಧತಿ ತಪ್ಪಿಸಬೇಕು. ಕಬ್ಬನ್ನು 12 ತಿಂಗಳ ವಾಯಿದೆ ಒಳಗೆ ಕಟಾವು ಮಾಡಬೇಕು. ಅನೇಕ ವೇಳೆ 14–15 ತಿಂಗಳು ವಿಳಂಬವಾಗಿ ಕಟಾವು ಮಾಡಿದಾಗ ರೈತ ಕಬ್ಬಿನ ಸಾಲಕ್ಕೆ ಬ್ಯಾಂಕ್‌ಗಳು ವಿಧಿಸುವ ಹೆಚ್ಚುವರಿ ಬಡ್ಡಿಯನ್ನು ಕಾರ್ಖಾನೆಗಳು ಪಾವತಿಸಬೇಕು,'' ಎಂದು ಒತ್ತಾಯಿಸಿದರು.

''ನೂತನ ಕಾರ್ಖಾನೆಗಳ ಆರಂಭಕ್ಕೆ 25 ಕಿ.ಮೀ. ವ್ಯಾಪ್ತಿ ಮಿತಿಯನ್ನು ತೆಗೆದು ಹಾಕಬೇಕು. ಹೆಚ್ಚು ಕಾರ್ಖಾನೆಗಳು ಆರಂಭವಾದಾಗ ರೈತರಿಗೆ ಸ್ಪರ್ಧಾತ್ಮಕ ಬೆಲೆ ಸಿಗುತ್ತದೆ. ರಂಗರಾಜನ್ ವರದಿಯಲ್ಲಿಯೂ ಇದೇ ಪ್ರಸ್ತಾಪ ಇದೆ. ಕಬ್ಬು ಬೆಳೆಗಾರರಿಗೆ ಕಾರ್ಖಾನೆ ವ್ಯಾಪ್ತಿಯ ಮೀಸಲು ಪ್ರದೇಶ ನಿರ್ಧಾರ ಮಾಡಬಾರದು. ರೈತರಿಗೆ ಕಾರ್ಖಾನೆ ಜತೆ ಒಪ್ಪಂದ ಮಾಡಿಕೊಳ್ಳುವ ಮುಕ್ತ ಅವಕಾಶ ಇರಬೇಕು,'' ಎಂದು ಆಗ್ರಹಿಸಿದರು.

''ಬ್ಯಾಂಕ್‌ಗಳಲ್ಲಿ ಹಾಗೂ ಖಾಸಗಿ ಫೈನಾನ್ಸ್‌ಗಳಲ್ಲಿ ರೈತರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಮೇ 7ರಂದು ಬೆಂಗಳೂರಿನಲ್ಲಿ ಆರ್‌ಬಿಐ ಮುಖ್ಯಸ್ಥರನ್ನು ಭೇಟಿ ಮಾಡಲಾಗುವುದು,'' ಎಂದರು.

ಕೆರೆಗೆ ಜಾರಿ ಬಿದ್ದು ಮರಿಯಾನೆ ಸಾವು

ಸಿದ್ದಾಪುರ (ಕೊಡಗು): ವಾಲ್ನೂರು ತ್ಯಾಗತ್ತೂರು ಗ್ರಾ.ಪಂ ವ್ಯಾಪ್ತಿಯ ಅಭ್ಯತ್ ಮಂಗಲದಲ್ಲಿ ನೀರು ಕುಡಿಯಲು ತೆರಳಿದ ಮರಿಯಾನೆ ಕೆರೆಗೆ ಜಾರಿ ಬಿದ್ದು ಮೃತಪಟ್ಟಿದೆ.

ಭಾನುವಾರ ತಡರಾತ್ರಿ ಅಭ್ಯತ್ ಮಂಗಲ ವ್ಯಾಪ್ತಿಯ ಪುಷ್ಪಾ ಎಸ್ಟೇಟ್‌ನ ಕೆರೆಯಲ್ಲಿ ನೀರು ಕುಡಿಯಲು ತೆರಳಿದ ಕಾಡಾನೆಗಳ ಗುಂಪಲ್ಲಿದ್ದ 3 ತಿಂಗಳ ಗಂಡು ಮರಿ ಕಾಲು ಜಾರಿ ಕೆರೆಗೆ ಬಿದ್ದಿದೆ. ಕಾಡಾನೆಗಳು ಮರಿ ಆನೆಯನ್ನು ಮೇಲಕ್ಕೆತ್ತಲು ಹರಸಾಹಸಪಟ್ಟರೂ ಪ್ರಯೋಜನವಾಗಿಲ್ಲ. ಹೀಗಾಗಿ ಮರಿ ಆನೆ ಮೃತಪಟ್ಟಿದೆ. ಬೆಳಗ್ಗೆ ಕಾರ್ಮಿಕರು ಕೆಲಸಕ್ಕೆ ತೆರಳಿದ್ದ ವೇಳೆ ಕೆರೆಯಲ್ಲಿ ಮರಿ ಆನೆ ಮೃತದೇಹ ಕಂಡು ಅರಣ್ಯಾಧಿಕಾರಿಗಳಿಗೆ ಮಾಹಿತಿ ನೀಡಿದರು.

ಅರಣ್ಯಾಧಿಕಾರಿ ಅಟ್ಟಾಡಿಸಿದ ಕಾಡಾನೆ: ಕಾಡಾನೆ ಮರಿ ಮೃತಪಟ್ಟ ಸ್ಥಳಕ್ಕೆ ತೆರಳಿದ್ದ ಉಪವಲಯ ಅರಣ್ಯಾಧಿಕಾರಿ ಸಚಿನ್ ನೇತೃತ್ವದ ತಂಡ ಕಳೇಬರ ಮೇಲಕ್ಕೆತ್ತಿ ಮರಣೋತ್ತರ ಪರೀಕ್ಷೆ ನಡೆಸುತ್ತಿದ್ದಾಗ ಕಾಫಿ ತೋಟದಲ್ಲಿದ್ದ ಕಾಡಾನೆಗಳು ಕೆರೆ ಸಮೀಪಕ್ಕೆ ಬಂದು ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಅಟ್ಟಿಸಿಕೊಂಡು ಹೋದವು. ಕೂದಲೆಳೆ ಅಂತರದಲ್ಲಿ ಸಿಬ್ಬಂದಿ ಪಾರಾಗಿದ್ದಾರೆ. ಮರಿಯಾನೆ ಸಾವಿನಿಂದ ಕಾಡಾನೆಗಳು ರೋಷಗೊಂಡಿದ್ದವು.

ಉರುಳಿಗೆ ಸಿಲುಕಿ ಜಿಂಕೆ ಸಾವು: ಒಬ್ಬನ ಬಂಧನ

ಚಾಮರಾಜನಗರ: ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಕೆ.ಗುಡಿ ವನ್ಯಜೀವಿ ವಲಯದ ಅಟ್ಟಗೂಳಿಪುರ ಗಸ್ತಿನ ಕೆಂಪಯ್ಯನ ಕಟ್ಟೆ ಬಳಿ ಉರುಳಿಗೆ ಸಿಲುಕಿ ಹೆಣ್ಣು ಜಿಂಕೆ ಮೃತಪಟ್ಟಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಒಬ್ಬನನ್ನು ಬಂಧಿಸಿದ್ದಾರೆ. ರಂಗಸಂದ್ರ ಗ್ರಾಮದ ಸುರೇಶ್ (45) ಆರೋಪಿ. ಈತ ಅರಣ್ಯ ಪ್ರದೇಶದೊಳಗೆ ಬೇಟೆಯಾಡಲು ಹಾಕಿದ್ದ ಉರುಳಿಗೆ ಜಿಂಕೆಯೊಂದು ಸಿಲುಕಿ ಮೃತಪಟ್ಟಿತ್ತು.

ಎಸ್ಸೆಸ್ಸೆಲ್ಸಿ: 90ಕ್ಕೆ ಬದಲಾಗಿ 46 ಅಂಕ!

ಸಂತೆಬೆನ್ನೂರು (ದಾವಣಗೆರೆ): ಚನ್ನಗಿರಿ ತಾಲೂಕಿನ ಸಂತೆಬೆನ್ನೂರು ಸರಕಾರಿ ಪ್ರೌಢಶಾಲೆಯ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿನಿ ತೇಜಸ್ವಿನಿ ವಿಜ್ಞಾನದಲ್ಲಿ 46 ಅಂಕ ಬಂದಿದೆ ಎಂದು ಉತ್ತರ ಪತ್ರಿಕೆಯ ಸ್ಕ್ಯಾನ್ ಪ್ರತಿ ತರಿಸಿಕೊಂಡಾಗ ಲೋಪ ಕಂಡುಬಂದಿದೆ. 90 ಅಂಕ ಗಳಿಸಿದ್ದರೂ ನಮೂದು ಮಾಡುವಾಗ 46 ಅಂಕ ಎಂದಾಗಿದೆ. ಹಿಂದಿ ಪತ್ರಿಕೆಯಲ್ಲಿ 5 ಅಂಕದ ಎರಡು ಪ್ರಶ್ನೆಗಳಿಗೆ ಮೌಲ್ಯಮಾಪನ ಮಾಡಿಲ್ಲ, ತೇಜಸ್ವಿನಿ ಕನ್ನಡ 120, ಇಂಗ್ಲಿಷ್ 93, ಸಮಾಜ 85, ಗಣಿತ 82, ಹಿಂದಿ 91 ಅಂಕ ಪಡೆದಿದ್ದಾಳೆ.

ಗ್ರಾಮದಲ್ಲಿ ಪುಸ್ತಕ, ಪೆನ್ನು ಮಾರುವ ಸಣ್ಣ ಅಂಗಡಿ ಇಟ್ಟುಕೊಂಡಿರುವ ಬಡ ಕುಟುಂಬದ ತಂದೆ–ತಾಯಿಗೆ ಇಬ್ಬರು ಮಕ್ಕಳಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿನಿ ತೇಜಸ್ವಿನಿ ಗಳಿಸಿದ ಅಂಕಗಳನ್ನು ಕಂಪ್ಯೂಟರ್‌ಗೆ ನಮೂದಿಸುವ ವೇಳೆ ಆಗಿರುವ ಲೋಪ ಸರಿಪಡಿಸಬೇಕು ಎಂದು ಈ ಭಾಗದ ಸಾರ್ವಜನಿಕರು ಆಗ್ರಹಿಸಿದ್ದಾರೆ.

Published for the Proprietors, Metropolitan Media Company Limited, by Lokesh K V at No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No.9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph:08042200500) Regd. Office: No.74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol.27 Issue No.118

ಸಮಸ್ಯೆ ಇತ್ಯರ್ಥಕ್ಕೆ ಪಟ್ಟು | ತಹಸೀಲ್ದಾರ್, ಎಸಿ ಮನವಿಗೂ ಮಣಿಯದ ಜನರು

ಗಣತಿಗೆ ಸಂಗಾನಟ್ಟಿಯಲ್ಲಿ ಬಹಿಷ್ಕಾರ

ಶಿವಲಿಂಗ ಸಿದ್ನಾಳ ಮಹಾಲಿಂಗಪುರ (ಬಾಗಲಕೋಟೆ)
shivusidnal@gmail.com

ರಬಕವಿ-ಬನಹಟ್ಟಿ ತಾಲೂಕಿನ ಪುಟ್ಟಹಳ್ಳಿ ಸಂಗಾನಟ್ಟಿ ಗ್ರಾಮಸ್ಥರು ಜನಗಣತಿಯನ್ನು ಬಹಿಷ್ಕರಿಸಿದ್ದಾರೆ. ತೋಟದ ವಸತಿಯಲ್ಲಿರುವ ತಮ್ಮೂರಿನ ರಹವಾಸಿ ಸ್ಥಳವನ್ನು ಪಕ್ಕದ ಢವಳೇಶ್ವರ ಗ್ರಾಮ ವ್ಯಾಪ್ತಿಗೆ ಸೇರಿಸಿದ್ದನ್ನು ಖಂಡಿಸಿ ಗ್ರಾಮಸ್ಥರು ಈ ನಿರ್ಧಾರ ಕೈಗೊಂಡಿದ್ದಾರೆ. ಇದು ಗಣತಿದಾರರು ಹಾಗೂ ಅಧಿಕಾರಿಗಳಿಗೆ ತಲೆನೋವಾಗಿ ಪರಿಣಮಿಸಿದೆ.

ಜನಸಂಖ್ಯೆ ಒಂದು ಕಡೆ, ಮತದಾನ ಮತ್ತೊಂದು ಕಡೆ: ಈ ಗ್ರಾಮ 2,500 ಮತದಾರರು ಮತ್ತು 6 ಗ್ರಾ.ಪಂ ಸದಸ್ಯರನ್ನು ಒಳಗೊಂಡಿದೆ. ಆಡಳಿತಾತ್ಮಕವಾಗಿ ಮದಬಾವಿ ಗ್ರಾ.ಪಂ ವ್ಯಾಪ್ತಿಗೆ ಸೇರಿದೆ. ದಶಕಗಳ ಹಿಂದೆ ಸಂಗಾನಟ್ಟಿ ಗ್ರಾಮಕ್ಕೆ ಮಂಜೂರಾಗಿದ್ದ ಸರಕಾರಿ ಪ್ರೌಢಶಾಲೆಗೆ ಜಾಗದ ಕೊರತೆ ಕಂಡು ಬಂದಾಗ 80 ಮನೆ ಕೆಡವಿ ಜಾಗ ನೀಡಲಾಗಿತ್ತು. ಆಗ ಮನೆ ತ್ಯಾಗ ಮಾಡಿದವರು ತೋಟದ ವಸತಿಗಳಲ್ಲಿ ನೆಲೆಸಿದ್ದಾರೆ. ಆ ತೋಟದ ವಸತಿ ಜಾಗ ನೆರೆಯ ಢವಳೇಶ್ವರ ಗ್ರಾಮದ ಸರಹದ್ದಿಗೆ ಸೇರಿದ್ದರಿಂದ ಅಲ್ಲಿನ 236 ಮನೆಗಳಲ್ಲಿ ವಾಸಿಸುತ್ತಿರುವ 1,335 ಜನಸಂಖ್ಯೆ ಢವಳೇಶ್ವರ ಗ್ರಾ.ಪಂ ವ್ಯಾಪ್ತಿಗೆ ಸೇರಿಸಲಾಗಿದೆ. ತೋಟದ ವಸತಿ ನಿವಾಸಿಗಳು ಮದಬಾವಿ ಗ್ರಾ.ಪಂ ವ್ಯಾಪ್ತಿಯ ಸಂಗಾನಟ್ಟಿ ವಾರ್ಡ್‌ನಲ್ಲಿ ಮತ ಚಲಾಯಿಸಿದರೂ ಅಲ್ಲಿನ ಜನಸಂಖ್ಯೆಯನ್ನು ಮಾತ್ರ ಢವಳೇಶ್ವರ ಗ್ರಾ.ಪಂ ವ್ಯಾಪ್ತಿಯಲ್ಲಿ ಪರಿಗಣಿಸಲಾಗುತ್ತಿದೆ. ಇದರಿಂದ ಸಂಗಾನಟ್ಟಿ ಗ್ರಾಮದ ಅಭಿವೃದ್ಧಿಗೆ ತೊಂದರೆ ಎದುರಾಗಿದೆ ಎಂಬುದು ಗ್ರಾಮಸ್ಥರ ವಾದ.

ಇಂದು ಡಿಸಿ ನೇತೃತ್ವದಲ್ಲಿ ಚರ್ಚೆ?

ರಬಕವಿ-ಬನಹಟ್ಟಿ ತಾಲೂಕಿನಲ್ಲಿ 136 ಬ್ಲಾಕ್ ಪೈಕಿ ಸಂಗಾನಟ್ಟಿಯ 5 ಬ್ಲಾಕ್‌ಗಳು ಜನಗಣತಿಗೆ ತಲೆನೋವಾಗಿವೆ. ಜನಗಣತಿಗೆ ಗ್ರಾಮಸ್ಥರು ದಿಢೀರ್ ವಿರೋಧ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಚರ್ಚಿಸಲು ಏ.29ರಂದು ಜಿಲ್ಲಾಧಿಕಾರಿ ನೇತೃತ್ವದಲ್ಲಿ ಅಧಿಕಾರಿಗಳ ಜತೆ ಸಭೆ ನಡೆಯಲಿದೆ ಎನ್ನಲಾಗಿದೆ.

ಸಂಗಾನಟ್ಟಿ ಗ್ರಾಮಕ್ಕೆ ಸೇರಬೇಕಿದ್ದ ಜನಸಂಖ್ಯೆಯನ್ನು ಢವಳೇಶ್ವರ ಗ್ರಾ.ಪಂ ವ್ಯಾಪ್ತಿಗೆ ಸೇರಿಸಿದ್ದರಿಂದ ನಮಗೆ ಕಡಿಮೆ ಅನುದಾನ ಹಂಚಿಕೆಯಾಗುತ್ತಿದೆ. ಢವಳೇಶ್ವರ ಗ್ರಾ.ಪಂಗೆ ಸೇರಿದ ಸಂಗಾನಟ್ಟಿಯ 236 ಮನೆಗಳ 1,335 ಜನಸಂಖ್ಯೆಯನ್ನು ನಮ್ಮ ಗ್ರಾ.ಪಂಗೆ ಸೇರಿಸಿದರೆ ಈ ತಾಂತ್ರಿಕ ಸಮಸ್ಯೆ ನಿವಾರಣೆಯಾಗಲು ಸಾಧ್ಯ . ದಶಕಗಳಿಂದ ಈ ಬಗ್ಗೆ ಅಧಿಕಾರಿಗಳ ಗಮನಕ್ಕೆ ತಂದರೂ ಯಾರೂ ಸ್ಪಂದಿಸಿಲ್ಲ. ಹೀಗಾಗಿ ಈ ಬಾರಿ ಜನಗಣತಿ ಬಹಿಷ್ಕರಿಸಿದ್ದೇವೆ.

-ಬಸವರಾಜ ನಾಗನೂರ
ಮದಬಾವಿ ಗ್ರಾಪಂ ಮಾಜಿ ಅಧ್ಯಕ್ಷ

ಅಪ್ರಾಪ್ತ ಗರ್ಭಿಣಿಯರಿಗೆ ಸ್ಕ್ಯಾನಿಂಗ್: ಮೂವರು ವೈದ್ಯರ ಬಂಧನ

ವಿಕ ಸುದ್ದಿಲೋಕ ಮಂಡ್ಯ

24 ಅಪ್ರಾಪ್ತ ಗರ್ಭಿಣಿಯರಿಗೆ ಸ್ಕ್ಯಾನಿಂಗ್ ಮಾಡಿದ ಆರೋಪದ ಮೇಲೆ ಕೆ.ಆರ್.ಪೇಟೆಯ ಮೂವರು ವೈದ್ಯರನ್ನು ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್.ಪೇಟೆಯ ಚೇತನ ಮೆಟರ್ನಿಟಿ ಸೆಂಟರ್‌ನ ಡಾ.ದಿವ್ಯಾ ಚೇತನ, ನಾವಿ ಡಯಾಗ್ನಸ್ಟಿಕ್ ಸೆಂಟರ್‌ನ ಡಾ.ಹರ್ಷಿತ್ ಮತ್ತು ಕುಶಾಲ್ ಡಯಾಗ್ನೊಸ್ಟಿಕ್ ಸೆಂಟರ್‌ನ ಡಾ.ಹರೀಶ್ ಬಂಧಿತರು. ಮೂವರನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ. ಸರಕಾರಿ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ಪ್ರಿಯಾಂಕಾ ಅವರಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ.

ಪಟ್ಟಣ ಮತ್ತು ಗ್ರಾಮಾಂತರ ಠಾಣೆಗಳಲ್ಲಿ ಒಟ್ಟು 17 ಆರೋಪಿಗಳ ವಿರುದ್ಧ 12 ಪ್ರತ್ಯೇಕ ಎಫ್‌ಐಆರ್‌ಗಳು ದಾಖಲಾಗಿವೆ. ಸರಕಾರಿ ವೈದ್ಯೆ, ಮೂವರು ಖಾಸಗಿ ವೈದ್ಯರು, ಕಿರಿಯ ಮಹಿಳಾ ಆರೋಗ್ಯ ಸಹಾಯಕಿ, ಆಶಾ ಕಾರ್ಯಕರ್ತೆ ಹಾಗೂ ಇತರ ವ್ಯಕ್ತಿಗಳ ವಿರುದ್ಧ ದೂರು ದಾಖಲಾಗಿದೆ. ಲೋಕಾಯುಕ್ತ ಸಂಸ್ಥೆಯಲ್ಲೂ ಸ್ವಯಂಪ್ರೇರಿತ ಪ್ರಕರಣ ದಾಖಲಾಗಿದೆ.

ಏನಿದು ಪ್ರಕರಣ?: ಕೆ.ಆರ್.ಪೇಟೆ ಸೇರಿದಂತೆ ಮಂಡ್ಯ ಜಿಲ್ಲೆಯ ಹಲವೆಡೆ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಅಕ್ರಮವಾಗಿ ಭ್ರೂಣಲಿಂಗ ಪತ್ತೆ ಮಾಡಲಾಗುತ್ತಿದೆ. ತಾಲೂಕು ಸಾರ್ವಜನಿಕ ಆಸ್ಪತ್ರೆಗಳಲ್ಲಿ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಯಂತ್ರಗಳನ್ನು ಬಳಸಿಕೊಂಡು ಲಿಂಗ ಪತ್ತೆ ಮಾಡಲಾಗುತ್ತಿದೆ ಎಂದು ಲೋಕಾಯುಕ್ತಕ್ಕೆ ಸಾರ್ವಜನಿಕರಿಂದ ದೂರು ಸಲ್ಲಿಕೆಯಾಗಿದ್ದವು.

ಈ ಹಿನ್ನೆಲೆಯಲ್ಲಿ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ.ವೀರಪ್ಪ ಅವರು ಏ.16ರಂದು ಸ್ಕ್ಯಾನಿಂಗ್ ಸೆಂಟರ್‌ಗಳು, ಸಾರ್ವಜನಿಕ ಆಸ್ಪತ್ರೆಗಳು ಮತ್ತು ಡಿಎಚ್‌ಒ ಕಚೇರಿ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ಶೋಧನಾ ವಾರಂಟ್ ಹೊರಡಿಸಿದ್ದರು. ಅದರಂತೆ ಲೋಕಾಯುಕ್ತ ಅಧಿಕಾರಿಗಳು ಜಿಲ್ಲೆಯ 9 ಸ್ಥಳಗಳಲ್ಲಿ ದಾಳಿ ನಡೆಸಿ ಲೋಕಾಯುಕ್ತಕ್ಕೆ ವರದಿ ಸಲ್ಲಿಸಿದ್ದರು.

ಶೋಧನಾ ಕಾಲದಲ್ಲಿ ಕೆಲವು ಸರಕಾರಿ ನೌಕರರು ಅಧಿಕಾರ ದುರುಪಯೋಗಪಡಿಸಿಕೊಂಡಿರುವುದು ಮತ್ತು ಅಪರಾಧಿಕ ಕೃತ್ಯ ನಡೆಸಿರುವುದು ಕಂಡು ಬಂದ ಅಂಶಗಳನ್ನು ಲೋಕಾಯುಕ್ತ ಅಧಿಕಾರಿಗಳು ವರದಿಯಲ್ಲಿ ದಾಖಲಿಸಿದ್ದರು. 7 ಪ್ರಕರಣಗಳಲ್ಲಿ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಗರ್ಭಿಣಿಯರ ಸ್ಕ್ಯಾನಿಂಗ್ ಮಾಡಿರುವುದು, 64 ಪ್ರಕರಣಗಳಲ್ಲಿ 18ರಿಂದ 20 ವರ್ಷದೊಳಗಿನ ಯುವತಿಯರ ವಯಸ್ಸಿನ ದೃಢೀಕರಣ ದಾಖಲಾತಿ ಪಡೆಯದೆ ಸ್ಕ್ಯಾನಿಂಗ್ ಮಾಡಿರುವ ಪ್ರಮುಖ ಅಂಶಗಳನ್ನು ಉಲ್ಲೇಖಿಸಿದ್ದರು.

ಜತೆಗೆ, ಅಲ್ಲಿನ ನ್ಯೂನತೆಗಳ ಬಗ್ಗೆ ಒಟ್ಟು 12 ಪ್ರಕರಣಗಳನ್ನು ಕೆ.ಆರ್.ಪೇಟೆ ಟೌನ್ ಮತ್ತು ಗ್ರಾಮಾಂತರ ಠಾಣೆಯಲ್ಲಿ ದಾಖಲಿಸಿದ್ದರು.

8,000 ಪೊಲೀಸ್ ನೇಮಕಾತಿ ಶೀಘ್ರ: ಡಾ.ಜಿ.ಪರಮೇಶ್ವರ್

ಕಲಬುರಗಿ: ಪರಿಶಿಷ್ಟ ಜಾತಿಯಲ್ಲಿನ ಒಳ ಮೀಸಲು ಹಂಚಿಕೆ ಪ್ರಮಾಣ ಸಮಸ್ಯೆ ನಿವಾರಣೆಯಾಗಿದ್ದು, 8,000 ಪೊಲೀಸ್ ಅಧಿಕಾರಿ-ಸಿಬ್ಬಂದಿ

ನೇಮಕಾತಿಗೆ ಶೀಘ್ರವೇ ಚಾಲನೆ ನೀಡಲಾಗುವುದು ಎಂದು ಡಾ.ಜಿ.ಪರಮೇಶ್ವರ್ ಹೇಳಿದರು.

ಹೊರವಲಯದ ನಾಗನಹಳ್ಳಿ ಪೊಲೀಸ್ ತರಬೇತಿ ಮಹಾವಿದ್ಯಾಲಯದ ಮಧುಕರ ಶೆಟ್ಟಿ ಕವಾಯತು ಮೈದಾನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ 13ನೇ ತಂಡದ ಪಿಎಸ್‌ಐ (ಸಿವಿಲ್), 12ನೇ ತಂಡದ ಆರ್‌ಎಸ್‌ಐ, ಸ್ಪೆಷಲ್ ಆರ್‌ಎಸ್‌ಐ ಹಾಗೂ 6ನೇ ತಂಡದ ಪಿಎಸ್‌ಐ (ಕೆಎಸ್‌ಐಎಸ್‌ಎಫ್) ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥಸಂಚಲನದಲ್ಲಿ ವಿವಿಧ ತುಕಡಿಗಳನ್ನು ವೀಕ್ಷಿಸಿ ಪ್ರಶಿಕ್ಷಣಾರ್ಥಿಗಳಿಂದ ಗೌರವ ವಂದನೆ ಸ್ವೀಕರಿಸಿ ಮಾತನಾಡಿದರು.

''ಎಲ್ಲರಿಗೂ ಖಾಕಿ ಹಾಕಲು ಅವಕಾಶವಿಲ್ಲ. ಸಿಕ್ಕಿರುವ ಅವಕಾಶವನ್ನು ನೊಂದವರ ಕಣ್ಣೀರು ಒರೆಸುವ, ಸಮಯೋಚಿತ ಪರಿಹಾರ ಒದಗಿಸುವುದಕ್ಕೆ ನೀವು ಬಳಸಿಕೊಳ್ಳಬೇಕು. ತುಳಿತಕ್ಕೊಳಗಾದಂತಹ ಬಡವರು, ಅಲ್ಪಸಂಖ್ಯಾತರು, ಎಸ್‌ಸಿ-ಎಸ್‌ಟಿ ಜನರನ್ನು ಮುಖ್ಯವಾಹಿನಿಗೆ ತರಲು ನೆರವಾಗುವ ಮೂಲಕ ಪೊಲೀಸರು ಸೇವಾ ಧರ್ಮ ಪಾಲಿಸಬೇಕು,'' ಎಂದು ಕರೆ ನೀಡಿದರು.

ಗೃಹ ಸಚಿವ ಡಾ.ಜಿ.ಪರಮೇಶ್ವರ ಪೊಲೀಸ್ ಇಲಾಖೆಗೆ ಸಂಬಂಧಿಸಿದ ಹ್ಯಾಂಡ್ ಬುಕ್ ಬಿಡುಗಡೆ ಮಾಡಿದರು. ರಾಜ್ಯದ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ ಭಾಗವಹಿಸಿದ್ದರು.

ನ್ಯಾಯ ಒದಗಿಸುವಲ್ಲಿ ರಾಜ್ಯ ನಂಬರ್ ಒನ್

''ನೊಂದವರಿಗೆ ನ್ಯಾಯ ಒದಗಿಸುವಲ್ಲಿ ಕರ್ನಾಟಕ ಪೊಲೀಸ್ ನಂಬರ್-1 ಸ್ಥಾನದಲ್ಲಿದೆ ಎಂದು ಕಳೆದ ವರ್ಷ ಇಂಡಿಯಾ ಜಸ್ಟೀಸ್ ಎಂಬ ಸಂಸ್ಥೆ ತನ್ನ ವರದಿಯಲ್ಲಿ ಉಲ್ಲೇಖಿಸಿದೆ. ಇದಲ್ಲದೆ ರಾಯಚೂರು ಜಿಲ್ಲೆಯ ಕವಿತಾಳ ಠಾಣೆ ಇಡೀ ದೇಶದಲ್ಲಿಯೆ 3ನೇ ಮಾದರಿ ಠಾಣೆ ಎಂದು ಗುರುತಿಸಲಾಗಿದೆ. ಇಂಥ ಠಾಣೆಗಳು ರಾಜ್ಯದಲ್ಲಿ ಹೆಚ್ಚಲಿ,'' ಎಂದು ಪರಮೇಶ್ವರ್ ಹೇಳಿದರು.

ಚಿಕ್ಕನಾಯಕನಹಳ್ಳಿಯಲ್ಲಿ ಗಾಳಿ-ಮಳೆ: ಮರದ ಕೊಂಬೆ ಬಿದ್ದು ವೃದ್ಧ ಬಲಿ

ವಿಕ ಸುದ್ದಿಲೋಕ ಚಿಕ್ಕನಾಯಕನಹಳ್ಳಿ (ತುಮಕೂರು)

ಚಿಕ್ಕನಾಯಕನಹಳ್ಳಿಯಲ್ಲಿ ಮಂಗಳವಾರ ಸಂಜೆ ಸುರಿದ ಬಿರುಗಾಳಿ ಮಳೆಗೆ ಮರದ ಕೊಂಬೆ ಮುರಿದು ಬಿದ್ದು ವ್ಯಕ್ತಿಯೊಬ್ಬ ಮೃತಪಟ್ಟಿರುವ ಘಟನೆ ನಡೆದಿದೆ.

ಚಿಕ್ಕನಾಯಕನಹಳ್ಳಿ ಟೌನ್‌ನಲ್ಲಿ ವಾಸವಾಗಿದ್ದ ಖಾಸಗಿ ಬಸ್ ಮಾಲೀಕ ಪುಟ್ಟಯ್ಯ (70) ಮೃತರು. ರಾತ್ರಿ 7 ಗಂಟೆ ಸಮಯದಲ್ಲಿ ತೋಟದಿಂದ ಮನೆಗೆ ಹಿಂದಿರುವಾಗ ಗಾಳಿ ಮಳೆಯಿಂದ ಮರದ ಕೊಂಬೆ ತಲೆ ಮೇಲೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

VK ಜಾಬ್ಸ್ ಗೆಲುವಿನ ಮೆಟ್ಟಿಲು

एचएलएल लाइफ़केयर लिमिटेड (भारत सरकार का उद्यम)
HLL Lifecare Limited (A Government of India Enterprise)
CIN: U25193 KL 1966 GOI 002621
Corporate & Regd. Office: Poojappura, Thiruvananthapuram-695 012, Kerala

WALK-IN SELECTION FOR PHARMACIST

HLL Lifecare Limited (HLL), has set up AMRIT Pharmacies at **NIMHANS Hospital, Bengaluru, and Janasanjeevini Generic Drug Stores at various Government Hospitals across Karnataka**. Applications are invited from qualified, dynamic, and performance-driven Pharmacist professionals for engagement on a **Fixed Term Contract (FTC)** basis for the following positions.

Sl No.	Position	Qualification & Experience
1	Assistant Pharmacist	D.Pharm/B.Pharm Fresher's can apply
2	Pharmacist Grade IV	D.Pharm/B.Pharm with minimum 2 years post qualification experience in retail pharmacy
3	Pharmacist Grade III	D.Pharm/B.Pharm with minimum 4 years post qualification experience in retail pharmacy
4	Pharmacist Grade II	D.Pharm/B.Pharm with minimum 6 years post qualification experience in retail pharmacy
5	Pharmacist Grade I	D.Pharm/B.Pharm with minimum 8 years post qualification experience in retail pharmacy

Date of Walk-In Selection: 04.05.2026 From 10.00 AM to 12 PM
Venue: AMRIT Pharmacy, Near OPD Premises, NIMHANS Hospital, Bengaluru – 29
Age Limit: The maximum age limit is **37 years as of 01.05.2026.**
Submission of a valid Pharmacy Council Registration Certificate of Karnataka is mandatory for all Pharmacist positions.
For more details on eligibility criteria and to download the application form, please visit: www.lifecarehll.com/careers
Contact No: 9188401559, Email: rbdhr@lifecarehll.com
स्वस्थ पीढ़ियों के लिए नवान्वेषण | Innovating for Healthy Generations

VK ಜಾಬ್ಸ್
ಜಾಹೀರಾತಿಗಾಗಿ ಸಂಪರ್ಕಿಸಿ
080-40877666
080-40877543

KLE SOCIETY
BELAGAVI, KARNATAKA, INDIA
Tel: 0831-2404040 | Web: klesociety.org
318 Institutions | 1,48,000 Students | 18,000 Faculties

Applications are invited for the post of Lecturers to be filled in the Bangalore institutions.
TEACHING POSTS

KLE Society's PU Colleges
2nd Block Rajajinagar, Bengaluru - 560010
SENIOR LECTURERS IN COMMERCE, ECONOMICS & COMPUTER SCIENCE

KLES' Independent PU College
Nagarabhavi, Bengaluru
SENIOR LECTURERS IN BUSINESS STUDIES, KANNADA, ENGLISH & COMPUTER SCIENCE

- Should be versatile and committed at last 3 years of teaching experience.
- Salary commensurate with experience and performance in selection test and Interview.

KLE Society's S. Nijalingappa College
2nd Block Rajajinagar, Bengaluru - 560010

- **Commerce :** To teach B.Com/ M.Com students
  Qualification: Master's degree in Commerce (M.Com) with 55% of marks from recognized University.
  Preferred Candidates: Qualified with KSET/NET/ Ph.D. & experience.
- **Journalism** To teach BA students
  Qualification : Master's degree in Arts (MA) with 55% of marks from recognized University.
  Preferred Candidates: Qualified with KSET/NET/Ph.D & experience.

Candidates with teaching and industry experience will be preferred
Salary: Commensurate with quality and work experience.
Interested candidates may send resume along with scanned copies of all relevant documents and testimonials to
Email: klesncrecruitment@gmail.com
last date for application: 06th May 2026.
for further details contact : 94498 52171
Belagavi
Date : 29/04/2026
Amit P. Kore
Board of Management KLE Society, Belagavi

ಡಿಸಿಎಂ ಪಟ್ಟು, ಸಿಎಂ ಆಪ್ತರ ಪ್ರತಿತಂತ್ರ | ಮೇ ತಿಂಗಳೊಳಗೆ ಗೊಂದಲ ಪರಿಹಾರ ಎಂದ ಮುನಿಯಪ್ಪ | ಖರ್ಗೆ ಬಳಿಕ ದಿಲ್ಲಿಯಲ್ಲಿ ಸುರ್ಜೇವಾಲಾ ಭೇಟಿಯಾದ ಮಹದೇವಪ್ಪ | ಬದಲಾವಣೆಯಿಂದ ಪಕ್ಷದ ಭವಿಷ್ಯಕ್ಕೆ ಹೊಡೆತದ ಎಚ್ಚರಿಕೆ ನೀಡಿದ ರಾಜಣ್ಣ | ಒಂದೇ ಕಾರಿನಲ್ಲಿ ಪ್ರಯಾಣಿಸಿ ಗಮನ ಸೆಳೆದ ಸಿಎಂ, ಡಿಸಿಎಂ

ನಿಗೂಢ ಹಂತಕ್ಕೆ ಪವರ್ ಶೇರಿಂಗ್ ಗೊಂದಲ

■ **ವಿಕ ಸುದ್ದಿಲೋಕ** ಬೆಂಗಳೂರು

ಸರಕಾರಕ್ಕೆ ಮೂರು ವರ್ಷ ತುಂಬುವ ಮುನ್ನ ಮೇ 2ನೇ ವಾರದಲ್ಲಿ ನಾಯಕತ್ವ ಬದಲಾವಣೆ ಅಥವಾ ಸಂಪುಟ ಪುನಾರಚನೆ ನಿರೀಕ್ಷೆ ನಡುವೆ ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಚಟುವಟಿಕೆಗಳು ಬಿರುಸಾಗಿವೆ. ನಾಯಕತ್ವಕ್ಕಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಪಟ್ಟಿಗೆ ಪ್ರತಿಯಾಗಿ ಸಿಎಂ ಸಿದ್ದರಾಮಯ್ಯ ಅವರ ಆಪ್ತರು ದಿಲ್ಲಿ ಹೈಕಮಾಂಡ್ ಅಂಗಳದಲ್ಲಿ 'ಅಹಿಂದ' ಅಸ್ತ್ರ ಪ್ರಯೋಗಿಸುತ್ತಿದ್ದಾರೆ. ಹೀಗಾಗಿ, 'ಪವರ್ ಶೇರಿಂಗ್' ಗೊಂದಲ ಇನ್ನಷ್ಟು ತೀವ್ರಗೊಂಡಿದೆ.

ಮೇ 15ಕ್ಕೆ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಅಧಿಕಾರದ ಕನವರಿಕೆಗೆ ಹೈಕಮಾಂಡ್ ಕಡೆಯಿಂದ ಉಡುಗೊರೆ ಸಿಗಲಿದೆ ಎಂಬ ನಿರೀಕ್ಷೆಯಲ್ಲಿ ಅವರ ಆಪ್ತರಿದ್ದಾರೆ. ಮತ್ತೊಂದೆಡೆ, ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ತರಾತುರಿಯ ತೀರ್ಮಾನವು ಭವಿಷ್ಯದಲ್ಲಿ ಪಕ್ಷಕ್ಕೆ ದುಬಾರಿ ಆಗಬಹುದು ಎಂದು ಸಿಎಂ ಆಪ್ತರ ಬಳಗದ ಕೆ.ಎನ್.ರಾಜಣ್ಣ ಎಚ್ಚರಿಕೆ ನೀಡಿರುವುದು ಗಮನ ಸೆಳೆದಿದೆ. ಸಿದ್ದರಾಮಯ್ಯ ಪದತ್ಯಾಗ ಮಾಡಿದರೆ 'ಅಹಿಂದ' ವರ್ಗಗಳ ಸಮಾಧಾನಕ್ಕಾಗಿ ದಲಿತರಿಗೆ ಸಿಎಂ ಅವಕಾಶ ಬೇಕು ಎಂಬ ಪ್ರತಿಪಾದನೆ ಮೂಲಕ 'ನಾಯಕತ್ವ ಗೊಂದಲ'ಕ್ಕೆ ಹೊಸ ತಿರುವು ನೀಡುವ ಪ್ರಯತ್ನ ಮಾಡಿದ್ದಾರೆ.

ಈ ಮಧ್ಯೆ, ದಿಲ್ಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿ ಮಾಡಿ ಚರ್ಚಿಸಿರುವ ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಅವರು, ''ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ಮೇ ಅಂತ್ಯದೊಳಗೆ ನಾಯಕತ್ವ ಗೊಂದಲದ ಬಗ್ಗೆ ಎಐಸಿಸಿ ಹೈಕಮಾಂಡ್ ವರಿಷ್ಠರು ಸೂಕ್ತ ತೀರ್ಮಾನ ಪ್ರಕಟಿಸಬಹುದು,'' ಎಂದು ಹೇಳಿದ್ದಾರೆ.

ಅಹಿಂದ ಅಸ್ತ್ರ: ನಾಯಕತ್ವ ಪಟ್ಟಕ್ಕಾಗಿ ಡಿ.ಕೆ.ಶಿವಕುಮಾರ್ ಪಟ್ಟು ಬಿಗಿಗೊಳಿಸುತ್ತಲೇ ದಿಲ್ಲಿಗೆ ದೌಡಾಯಿಸಿದ್ದ ಸಿಎಂ ಆಪ್ತ ಸಚಿವರಾದ ಸತೀಶ್ ಜಾರಕಿಹೊಳಿ, ಎಚ್.ಸಿ.ಮಹದೇವಪ್ಪ ಹಾಗೂ ಹಿರಿಯ ಶಾಸಕ ಬಸವರಾಜ ರಾಯರೆಡ್ಡಿ ಅವರು ಹೈಕಮಾಂಡ್‌ಗೆ ಪರಿಣಾಮಗಳ ಬಗ್ಗೆ ಸೂಚ್ಯವಾಗಿ ಮನವರಿಕೆ ಮಾಡಿಕೊಡಲು ಮುಂದಾಗಿದ್ದಾರೆ. ಸೋಮವಾರ ಮಲ್ಲಿಕಾರ್ಜುನ ಖರ್ಗೆ ಅವರನ್ನು ಜಾರಕಿಹೊಳಿ ಮತ್ತು ಮಹದೇವಪ್ಪ ಭೇಟಿಯಾಗಿ ಮಾತುಕತೆ ನಡೆಸಿದ್ದರು. ಸಚಿವ ಸಂಪುಟ ಪುನಾರಚನೆಗೆ ಅವಕಾಶದ ಜತೆಗೆ, 'ಅಹಿಂದ'ಕ್ಕೆ 25 ವರ್ಷ ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಹುಬ್ಬಳ್ಳಿಯಲ್ಲಿ ಉದ್ದೇಶಿತ ಸಮಾವೇಶಕ್ಕೆ ವರಿಷ್ಠರ ಸಮ್ಮತಿ ಕೋರಿದ್ದಾರೆ. ಮಂಗಳವಾರ ಜಾರಕಿಹೊಳಿ ಅವರು ನಡೆ ಗುಪ್ತವಾಗಿದ್ದರೆ, ಮಹದೇವಪ್ಪ ಅವರು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದ್ದಾರೆ.

ತಿಂಗಳಲ್ಲಿ ಪರಿಹಾರ: ದಿಲ್ಲಿಯಲ್ಲಿ ಎಐಸಿಸಿ ನಾಯಕರನ್ನು ಭೇಟಿಯಾದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವ ಕೆ.ಎಚ್. ಮುನಿಯಪ್ಪ,''ಸರಕಾರ ಒಳ್ಳೆಯ ಕೆಲಸ ಮಾಡುತ್ತಿದ್ದು, ಗ್ಯಾರಂಟಿ ಯೋಜನೆಗಳ ಮೂಲಕ ಕೋಟ್ಯಂತರ ಜನರ ಬದುಕಿನಲ್ಲಿ ಬದಲಾವಣೆ ತಂದಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ ನಾಯಕತ್ವ ಗೊಂದಲದಿಂದ ಸರಕಾರದ ವರ್ಚಸ್ಸಿಗೆ ಡ್ಯಾಮೇಜ್ ಆಗಬಾರದು. ಈ ವಿಚಾರದಲ್ಲಿ ವರಿಷ್ಠರು ತಡಮಾಡದೆ ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು,'' ಎಂದರು.

''ಮುಖ್ಯಮಂತ್ರಿ ಬದಲಾವಣೆ ಮಾಡಬೇಕಾ ಅಥವಾ ಬೇಡವಾ ಎಂಬುದು ಹೈಕಮಾಂಡ್ ವಿವೇಚನೆಗೆ ಬಿಟ್ಟ ವಿಚಾರ. ಸಿದ್ದರಾಮಯ್ಯ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಪವರ್ ಶೇರಿಂಗ್ ಮಾತುಕತೆ ಆಗಿದ್ದರೆ, ಅದು ಹೈಕಮಾಂಡ್ ನಾಯಕರ ಮನಸ್ಸಿನಲ್ಲಿರುತ್ತದೆ,'' ಎಂದು ಹೇಳಿದರು.

ಒಂದೇ ಕಾರಿನಲ್ಲಿ ಪ್ರಯಾಣದ ಕುತೂಹಲ: 'ಪವರ್ ಶೇರಿಂಗ್ ಫೈಟ್' ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಒಂದೇ ಕಾರಿನಲ್ಲಿ ಪ್ರಯಾಣಿಸಿ ಒಟ್ಟಿಗಿದ್ದೇವೆ ಮತ್ತು ನಮ್ಮಲ್ಲಿ ಯಾವ ಗೊಂದಲವೂ ಇಲ್ಲ ಎಂಬ ಸಂದೇಶ ನೀಡಲು ಪ್ರಯತ್ನಿಸಿರುವುದು ಗಮನ ಸೆಳೆದಿದೆ.

ಲೋಕಭವನದಲ್ಲಿ ಕಾರ್ಯಕ್ರಮ ಮುಗಿಸಿಕೊಂಡು ಸಿಎಂ ಮತ್ತು ಡಿಸಿಎಂ ಇಬ್ಬರೂ ವಿಧಾನಸೌಧಕ್ಕೆ ಒಂದೇ ಕಾರಿನಲ್ಲಿ ಬಂದರು. ಅಷ್ಟೇ ಅಲ್ಲದೆ, ವಿಧಾನಸೌಧದ ಸಿಎಂ ಕಚೇರಿಯಲ್ಲಿ ಇಬ್ಬರೂ ಕೆಲಹೊತ್ತು ಚರ್ಚೆ ನಡೆಸಿದ್ದು ವಿಶೇಷವಾಗಿದೆ.

ಎಲ್ಲದಕ್ಕೂ ಸದ್ಯ ಹೈಕಮಾಂಡ್ ಉತ್ತರ

ಕಲಬುರಗಿ: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರದಲ್ಲಿ ಆದಷ್ಟು ಬೇಗ ಹೈಕಮಾಂಡ್ ಉತ್ತರ ಕೊಡಲಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.

''ಈಗ ಸರಕಾರದಲ್ಲಿ ಯಾವುದೇ ಗೊಂದಲ ಇಲ್ಲ, ಮಾತು ಕೊಟ್ಟಂತೆ ಜನಸೇವೆ ಮಾಡುತ್ತಿದ್ದೇವೆ. ಸದ್ಯ ನಾನಂತೂ ದಿಲ್ಲಿಗೆ ಹೋಗುತ್ತಿಲ್ಲ,'' ಎಂದು ಹೇಳಿದರು. ''ದಿಲ್ಲಿಗೆ ಹೋಗಬಾರದು ಎಂದೇನು ಇಲ್ಲವಲ್ಲ, ಅಲ್ಲಿಗೆ ನಾವು ಯಾರೇ ಹೋದರೂ ನಮ್ಮ ಎಐಸಿಸಿ ಕಚೇರಿಯಿದೆ. ಅಲ್ಲಿಗೆ ಹೋಗಿ ರಾಜಕೀಯ ಚರ್ಚೆ ಮಾಡುತ್ತೇವೆ,'' ಎಂದರು.

'ಮೇ 15ರೊಳಗೆ ಡಿಕೆಶಿ ಸಿಎಂ'

ಬೆಂಗಳೂರು ದಕ್ಷಿಣ (ರಾಮನಗರ): ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮೇ 15ರೊಳಗೆ ಮುಖ್ಯಮಂತ್ರಿ ಆಗಲಿದ್ದಾರೆ. ರಾಜ್ಯದಲ್ಲಿ ಬದಲಾವಣೆ ಅಗತ್ಯವಿದ್ದು, ಜನರು ಕೂಡ ಇದನ್ನೇ ಬಯಸುತ್ತಿದ್ದಾರೆ ಎಂದು ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

'ಮೇ 15ರೊಳಗೆ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕಾರ ಲಭಿಸಲಿದೆ ಎಂಬ ಆಸೆಯಲ್ಲಿದ್ದೇವೆ. ನಮ್ಮ ನಾಯಕರೇ ದಿಲ್ಲಿ ಪ್ರವಾಸದ ವೇಳೆ ಈ ವಿಚಾರವಾಗಿ ಎಲ್ಲವನ್ನು ಕೂಲಂಕಷವಾಗಿ ವಿವರಿಸಿದ್ದಾರೆ. ಹಾಗಾಗಿ ಎಲ್ಲವನ್ನು ನಾನೇ ಹೇಳಬೇಕೆಂಬ ಅವಶ್ಯಕತೆ ಇಲ್ಲ,'' ಎಂದು ಹೇಳಿದ್ದಾರೆ.

ಸಚಿವ ಸ್ಥಾನ ನನ್ನ ಹಕ್ಕು: ಬೇಳೂರು

ಶಿಕಾರಿಪುರ (ಶಿವಮೊಗ್ಗ): ಬಾಗಲಕೋಟೆ ಮತ್ತು ದಾವಣಗೆರೆ ಉಪಚುನಾವಣೆ ಫಲಿತಾಂಶದ ನಂತರ ಸಂಪುಟ ವಿಸ್ತರಣೆಯಾಗುವ ಸಾಧ್ಯತೆಯಿದ್ದು, ನಾನು ಕೂಡ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿ ಎಂದು ಶಾಸಕ ಗೋಪಾಲಕೃಷ್ಣ ಬೇಳೂರು ತಿಳಿಸಿದರು.

ಪಟ್ಟಣದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಮೂರು ಬಾರಿ ಶಾಸಕರಾಗಿದ್ದು, ಸಚಿವ ಸ್ಥಾನ ಕೇಳುವುದು ನನ್ನ ಹಕ್ಕು. ಎರಡೂವರೆ ವರ್ಷದ ನಂತರ ಹೊಸಬರಿಗೆ ಸಚಿವ ಸ್ಥಾನ ಕೊಡಬೇಕು. ಆದರೆ ಈಗ ಮೂರು ವರ್ಷ ತುಂಬುತ್ತಿದೆ. ಈಗಲಾದರೂ ಹೊಸಬರಿಗೆ ಅವಕಾಶ ನೀಡಬೇಕು ಎಂಬುದು ನನ್ನ ಅಭಿಪ್ರಾಯ,'' ಎಂದರು.

ಸಿದ್ದು ಮುಂದುವರಿಕೆಗೆ ರಾಜಣ್ಣ ಆಗ್ರಹ

ಆತುರದ ನಿರ್ಧಾರ ಪಕ್ಷದ ಭವಿಷ್ಯಕ್ಕೆ ಮಾರಕ ಎಚ್ಚರಿಕೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರನ್ನೇ ಮುಂದುವರಿಸಬೇಕು ಎಂಬುದು ನಮ್ಮ ಆಗ್ರಹವಾಗಿದ್ದು, ಈ ವಿಚಾರದಲ್ಲಿ ಆತುರದಲ್ಲಿ ತೆಗೆದುಕೊಳ್ಳುವ ತೀರ್ಮಾನವು ಪಕ್ಷದ ಭವಿಷ್ಯದ ಮೇಲೆ ಪರಿಣಾಮ ಬೀರಬಹುದು ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಎಚ್ಚರಿಸಿದ್ದಾರೆ.

''ಅಧಿಕಾರದಲ್ಲಿ ಮುಂದುವರಿಕೆ ಅಥವಾ ಪದತ್ಯಾಗ ಎರಡೂ ಆಯ್ಕೆಗೆ ಸಿದ್ದರಾಮಯ್ಯ ಅವರು ಮಾನಸಿಕವಾಗಿ ಸಿದ್ಧರಾಗಿದ್ದು, ರಾಹುಲ್ ಗಾಂಧಿ ಅವರು ನೀಡುವ ಯಾವುದೇ ಸೂಚನೆ ಪಾಲನೆ ಮಾಡಲಿದ್ದಾರೆ. ಎಐಸಿಸಿ ವರಿಷ್ಠರು ಸಾಧಕ-ಬಾಧಕ ನೋಡಿ ಸೂಕ್ತ ತೀರ್ಮಾನ ತೆಗೆದುಕೊಳ್ಳುವ ವಿಶ್ವಾಸವಿದೆ,'' ಎಂದು ತಿಳಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ನಾಯಕತ್ವದ ವಿಚಾರದಲ್ಲಿ ಸಿದ್ದರಾಮಯ್ಯ ಅವರದ್ದು ಮುಕ್ತ ಮನಸ್ಸು. ಪಕ್ಷದ ಹಿತದೃಷ್ಟಿಯಿಂದ ವರಿಷ್ಠರು ನೀಡುವ ಯಾವುದೇ ಸೂಚನೆ ಪಾಲಿಸಲು ಅವರು ಸಿದ್ಧರಿದ್ದಾರೆ. ಗೊಂದಲವನ್ನು ಹೈಕಮಾಂಡ್ ಬೇಗ ಬಗೆಹರಿಸಿದರೆ ಒಳ್ಳೆಯದು,'' ಎಂದು ಹೇಳಿದರು.

> ಮೇ 4ರ ನಂತರ ರಾಜ್ಯ ಸರಕಾರದಲ್ಲಿ ಬದಲಾವಣೆ ಆಗಲಿದೆ, ಸಿದ್ದರಾಮಯ್ಯ 15 ದಿನದ ಸುಲ್ತಾನ್. ರಾಜ್ಯ ಸರಕಾರದಲ್ಲಿ ಕುರ್ಚಿ ಕಿತ್ತಾಟ ನಡೆದಿದೆ, ವಿಧಾನಸೌಧದಲ್ಲಿ ಆಡಳಿತವಿಲ್ಲದಂತಾಗಿದೆ. ಸಿದ್ದರಾಮಯ್ಯನವರ ಕುರ್ಚಿ ಫಲಿತಾಂಶವೂ ಪ್ರಕಟವಾಗುತ್ತದೆ. ಸಿಎಂ ಆಗಲು ಡಿಸಿಎಂ ಶಿವಕುಮಾರ್ ಶಾಲು ಹಾಕಿಕೊಂಡು ಕುಳಿತಿದ್ದಾರೆ. ಆಡಳಿತ ಮಾತ್ರ ಸಂಪೂರ್ಣ ಕುಸಿದುಹೋಗಿದೆ
>
> -**ಗೋವಿಂದ ಕಾರಜೋಳ** ಬಿಜೆಪಿ ಸಂಸದ

ದಲಿತ ಸಿಎಂ ಬೇಡಿಕೆ: ''2013-18ರ ಅವಧಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೂ ಮತ್ತು ಈಗಿನ ಸಿದ್ದರಾಮಯ್ಯ ಅವರಿಗೂ ಬಹಳ ವ್ಯತ್ಯಾಸವಿದೆ. ಅಹಿಂದ ವರ್ಗದ ನಿರೀಕ್ಷೆಗಳು ಈಡೇರಿಲ್ಲ. ಹಾಗಾಗಿ, ದಲಿತ ಮುಖ್ಯಮಂತ್ರಿ ಹಕ್ಕೊತ್ತಾಯಕ್ಕೆ ನಾವು ಈಗಲೂ ಬದ್ಧವಾಗಿದ್ದೇವೆ. ಈ ವಿಚಾರವನ್ನೂ ಪಕ್ಷದ ವರಿಷ್ಠರ ಗಮನಕ್ಕೆ ತರಲಾಗಿದೆ,'' ಎಂದು ರಾಜಣ್ಣ ಹೇಳಿದರು.

''ಸರಕಾರ ಇನ್ನಷ್ಟು ಕ್ರಿಯಾಶೀಲವಾಗಿ ಕೆಲಸ ಮಾಡಲು ಸದ್ಯದ ನಾಯಕತ್ವ ಗೊಂದಲ ಶೀಘ್ರ ಬಗೆಹರಿಯಬೇಕು. ಗೊಂದಲ ಮತ್ತಷ್ಟು ಮುಂದುವರಿದರೆ ಪಕ್ಷದ ಮೇಲೆ ದೊಡ್ಡ ಮಟ್ಟದ ಡ್ಯಾಮೇಜ್ ಆಗಲಿದೆ. ಮುಂದಿನ ಚುನಾವಣೆಗೆ ಇನ್ನು ಎರಡು ವರ್ಷಗಳ ಸಮಯವಿದ್ದು, ಹೊಸಬರಿಗೆ ಸಂಪುಟದಲ್ಲಿ ಅವಕಾಶ ನೀಡುವ ಜತೆಗೆ, ಗೊಂದಲ ಬಗೆಹರಿಸಿಕೊಂಡು ಉತ್ತಮ ಆಡಳಿತ ನೀಡುವ ಅಗತ್ಯವಿದೆ,'' ಎಂದು ಪ್ರತಿಪಾದಿಸಿದರು.

40 ಕಾಂಗ್ರೆಸ್ ಶಾಸಕರು ಮತ್ತೆ ದಿಲ್ಲಿಗೆ?

■ **ವಿಕ ಸುದ್ದಿಲೋಕ** ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ.ಶಿವಕುಮಾರ್ ಬಣಗಳ ನಡುವೆ ನಾಯಕತ್ವ ಗೊಂದಲ ಮುಂದುವರಿಕೆ ನಡುವೆ ಸಚಿವ ಸಂಪುಟ ಪುನಾರಚನೆ ಬೇಡಿಕೆಗಾಗಿ ಆಡಳಿತಾರೂಢ ಕಾಂಗ್ರೆಸ್‌ನ ಹಿರಿಯ ಶಾಸಕರು ಪಟ್ಟು ಮುಂದುವರಿಸಿದ್ದಾರೆ.

ಆಡಳಿತದಲ್ಲಿ ಕ್ರಿಯಾಶೀಲತೆಗಾಗಿ ಸಂಪುಟ ಪುನಾರಚನೆ ಆಗಬೇಕು. ಕ್ಯಾಬಿನೆಟ್‌ನಿಂದ ಹೊರಗಿರುವ ಅರ್ಹ ಮತ್ತು ಅನುಭವಿಗಳಿಗೆ ಅವಕಾಶ ಕೊಡಬೇಕು ಎಂಬ ಬೇಡಿಕೆಯನ್ನು ವರಿಷ್ಠ ನಾಯಕರಿಗೆ ನೆನಪಿಸಲು ಮೇ 4ರ ಬಳಿಕ ಮತ್ತೆ ದಿಲ್ಲಿಗೆ ತೆರಳಲು ಹಿರಿಯ ಶಾಸಕರ ತಂಡ ತಯಾರಿ ನಡೆಸಿದೆ.

2-3 ಸಲಕ್ಕಿಂತ ಹೆಚ್ಚು ಬಾರಿ ಗೆದ್ದಿರುವ ಹಿರಿಯ ಶಾಸಕರಿಗೆ ಸಚಿವ ಸಂಪುಟದಲ್ಲಿ ನಂತರ ಅವಕಾಶ ನೀಡಲಾಗುವುದು ಎಂಬ ಭರವಸೆಯನ್ನು ಈಡೇರಿಸಲು ಈಗ ಸಕಾಲವಾಗಿದೆ. ಮೇ 20ರಂದು ಪಕ್ಷದ ಸರಕಾರಕ್ಕೆ 3 ವರ್ಷಗಳು ತುಂಬುತ್ತಿರುವ ಹಿನ್ನೆಲೆಯಲ್ಲಿ ಕ್ಯಾಬಿನೆಟ್ ಪುನಾರಚನೆ ಆಗಬೇಕು. ತಗ್ಗಿರುವ ಪಕ್ಷ ಮತ್ತು ಸರಕಾರದ ವರ್ಚಸ್ಸು ಮರುಗಳಿಸಲು ಇದರಿಂದ ಸಾಧ್ಯವಾಗುತ್ತದೆ ಎಂಬ ವಾದವನ್ನು ವರಿಷ್ಠರ ಮುಂದಿಡಲು ಈ ಶಾಸಕರ ತಂಡ ಬಯಸಿದೆ.

> ಮೇ 15ರೊಳಗೆ ಸಂಪುಟ ಪುನಾರಚನೆ ಆಗಲಿದೆ ಎಂಬ ಖಚಿತ ಭರವಸೆ ಇದೆ. ನಾಯಕತ್ವ ಬದಲಾವಣೆ ಹೈಕಮಾಂಡ್ ವಿವೇಚನೆಗೆ ಬಿಟ್ಟ ವಿಚಾರವಾಗಿದೆ. ಆದರೆ, 2028ರಲ್ಲಿ ಪಕ್ಷ ಮತ್ತೆ ಅಧಿಕಾರಕ್ಕೆ ಬರಬೇಕಾದರೆ ಕ್ಯಾಬಿನೆಟ್ ಸರ್ಜರಿ ಆಗಲೇಬೇಕಿದೆ.
>
> -**ನಾರಾಯಣಸ್ವಾಮಿ** ಬಂಗಾರಪೇಟೆ ಶಾಸಕ

ಕಳೆದ ಬಜೆಟ್ ಅಧಿವೇಶನದಲ್ಲಿ ಡಿನ್ನರ್ ಮೀಟಿಂಗ್ ಮಾಡಿ ಚರ್ಚಿಸಿದ್ದ 35ಕ್ಕೂ ಹೆಚ್ಚು ಶಾಸಕರು, ದಿಲ್ಲಿಗೆ ತೆರಳಿ ತಮ್ಮ ಹಕ್ಕೊತ್ತಾಯವನ್ನು ವರಿಷ್ಠರ ಎದುರು ಮಂಡಿಸಿದ್ದರು. ಈಗ, ಮೇ 4ರಂದು ನಾನಾ ರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ಬಳಿಕ ಮತ್ತೊಮ್ಮೆ ದಿಲ್ಲಿಗೆ ತೆರಳಿ ಹೈಕಮಾಂಡ್ ನಾಯಕರನ್ನು ಭೇಟಿ ಮಾಡಲು ನಿರ್ಧರಿಸಿದ್ದಾರೆ. ಬಂಗಾರಪೇಟೆ ಶಾಸಕ ನಾರಾಯಣಸ್ವಾಮಿ, ಬೇಳೂರು ಗೋಪಾಲಕೃಷ್ಣ, ಅಶೋಕ್ ಪಟ್ಟಣ ಮತ್ತಿತರ ಶಾಸಕರು ಈ ನಿರ್ಧಾರವನ್ನು ತಿಳಿಸಿದ್ದಾರೆ.

ಇಲ್ಲಿನ ಸ್ಪೆಷಲ್ ತಿಂಡಿ ಯಾವುದು?

ನಮಗೆ ಪರಿಚಿತವಿರುವ ಹೋಟೆಲ್ಲಾದರೆ ಅಲ್ಲಿ ಯಾವ ತಿಂಡಿ ಹೆಚ್ಚು ರುಚಿಕರವಾಗಿರುತ್ತದೆ ಎಂಬುದು ಗೊತ್ತಿದ್ದು, ಅದನ್ನೇ ಆರ್ಡರ್ ಮಾಡಿ ಸವಿಯಬಹುದು. ಹೊಸದಾದ ಹೋಟೆಲ್ ಆಗಿದ್ದರೆ, ಪ್ರವಾಸದಲ್ಲಿದ್ದಾಗ ಯಾವುದೋ ಒಂದು ಉಪಹಾರಗೃಹಕ್ಕೆ ಹೋಗಬೇಕಾದ ಸಂದರ್ಭವು ಒದಗಿಬಂದಾಗ ಏನು ಮಾಡುವುದು? ಪ್ರವಾಸವು ಹೆಚ್ಚಾಗಿರುವ ಈ ಕಾಲದಲ್ಲಿ ಇದಕ್ಕೆ ಉತ್ತರ ಕಂಡುಕೊಳ್ಳುವುದು ಬಹಳ ಅವಶ್ಯ. 'ಇದು ಇಲ್ಲಿ ಜಾಸ್ತಿ ಮಾರಾಟವಾಗುವುದು' ಎಂದು ಒಂದು ಬಗೆಯ ಅಥವಾ ಹಲವು ಬಗೆಯ ತಿಂಡಿಗಳ ಪಟದ ಬದಿಗೆ ಬರೆದಿರುವುದನ್ನು ಜೊಮ್ಯಾಟೊ, ಸ್ವಿಗ್ಗಿ ತರಹದ ಇ-ಫುಡ್ ಆ್ಯಪ್ ಬಳಸಿದವರು ಗಮನಿಸಿರಬಹುದು. ನಮ್ಮಂತೆ ಸಾವಿರಾರು ಜನರು ಕೊಡುವ ಆರ್ಡರ್ ಮೇಲೆ ಎಐ ಇದನ್ನು ನಿರ್ಧರಿಸುತ್ತದೆ. ಬಹಳಷ್ಟು ಜನರಿಗೆ ಇದು ಬಹಳ ಸಹಾಯಕಾರಿಯಾಗಿ ಕಾಣಿಸಿದೆ. ಇಂಥದ್ದೇ ಒಂದು ಸೌಲಭ್ಯ, ಎಲ್ಲಾ ದರ್ಶಿನಿ, ಹೋಟೆಲ್‌ಗಳಲ್ಲಿದ್ದರೆ? ಅಲ್ಲಿ ಹೋದಾಗ ವೇಟರ್ ಹತ್ತಿರ ''ಇಲ್ಲಿಯ ಸ್ಪೆಷಲ್ ತಿಂಡಿ ಯಾವುದು?,'' ಎಂದು ಪ್ರಶ್ನೆ ಕೇಳುವ ಮುಜುಗರವೇ ಇಲ್ಲ, ಅಲ್ವಾ?

ವಿಕ AI ಲೋಕ



ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ **ವಿಕ್ರಂ ಜೋಶಿ** ಎಐ ವಿಶ್ಲೇಷಕರು

ಕುಕ್ಕರ್ ಬಾಂಬ್ ಸಮರ್ಥಕರು ಕ್ಷಮೆ ಕೇಳಲಿ

ಬೆಂಗಳೂರು: ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರಿಕ್‌ಗೆ ಎನ್ಐಎ ವಿಶೇಷ ನ್ಯಾಯಾಲಯ 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ. ನಮ್ಮ ಕೇಂದ್ರೀಯ ತನಿಖಾ ಸಂಸ್ಥೆಗಳ ದಕ್ಷತೆ ಮತ್ತು ನ್ಯಾಯಾಂಗದ ಈ ಕಠಿಣ ನಿಲುವು ಸಮಾಜಕ್ಕೆ ಭರವಸೆ ನೀಡಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಸಂದೇಶ ಹೊಂಚಿಕೊಂಡಿರುವ ಅವರು, ''ದೇಶದ ಭದ್ರತೆಗೆ ಸವಾಲೆಸೆಯುವ ಇಂತಹ ವಿಚ್ಛಿದ್ರಕಾರಿ ಶಕ್ತಿಗಳಿಗೆ ನಮ್ಮ ವ್ಯವಸ್ಥೆಯಲ್ಲಿ ಸ್ಥಾನವಿಲ್ಲ ಎಂಬುದನ್ನು ನ್ಯಾಯಾಲಯದ ತೀರ್ಪು ಸಾಬೀತುಪಡಿಸಿದೆ,'' ಎಂದು ತಿಳಿಸಿದ್ದಾರೆ. ''ಆದರೆ ಈ ಪ್ರಕರಣ ಸಂದರ್ಭದಲ್ಲಿ ಕೇವಲ ತಮ್ಮ ಓಲೈಕೆ ರಾಜಕೀಯಕ್ಕಾಗಿ, ದೇಶವಿರೋಧಿ ಶಕ್ತಿಗಳನ್ನು ಬೆಂಬಲಿಸಿ ಆರೋಪಿಗಳನ್ನು 'ಬ್ರದರ್ಸ್' ಎಂದವರು, ಸ್ಫೋಟವನ್ನು 'ಆಕಸ್ಮಿಕ' ಎಂದು ಕರೆದು ಭಯೋತ್ಪಾದನೆಯನ್ನು ಸಮರ್ಥಿಸಿಕೊಂಡ ಕಾಂಗ್ರೆಸ್ ನಾಯಕರಲ್ಲಿ ಕನಿಷ್ಠ ನೈತಿಕತೆ ಉಳಿದಿದ್ದರೆ ನಾಡಿನ ಕ್ಷಮೆ ಕೇಳಬೇಕು,'' ಎಂದು ಒತ್ತಾಯಿಸಿದ್ದಾರೆ.



'ಸ್ಟಾರ್ಟ್‌ಅಪ್‌ನಲ್ಲಿ ಬೆಂಗಳೂರೇ ಲೀಡರ್'

ಬೆಂಗಳೂರು: ದೇಶದ ಸ್ಟಾರ್ಟ್‌ಅಪ್ ಇಕೋ ಸಿಸ್ಟಂಗಳಲ್ಲಿ ಬೆಂಗಳೂರು ನಾಯಕತ್ವ ಮುಂದುವರಿದಿದೆ ಎಂದು ಮಾಹಿತಿ ಮತ್ತು ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.

''ಅಮೆರಿಕ, ಯುರೋಪ್ ಹಾಗೂ ಚೀನಾದ ಹೊರಗೆ ಅತಿದೊಡ್ಡ ಸ್ಟಾರ್ಟ್‌ಅಪ್ ಕೇಂದ್ರವಾಗಿ ಬೆಂಗಳೂರು ರೂಪುಗೊಂಡಿದ್ದು, ಜಾಗತಿಕ ಮಟ್ಟದಲ್ಲಿ 5ನೇ ಅತಿದೊಡ್ಡ ಯುನಿಕಾರ್ನ್ ಕೇಂದ್ರವಾಗಿದೆ,'' ಎಂದು ಸಚಿವರು ತಿಳಿಸಿದ್ದಾರೆ.

''ಈ ಹಣಕಾಸು ವರ್ಷದಲ್ಲಿ ರಾಜ್ಯದ ಸ್ಟಾರ್ಟಪ್ ವಲಯದಲ್ಲಿ ಒಟ್ಟು 89 ಹೂಡಿಕೆ ಒಪ್ಪಂದಗಳ ಮೂಲಕ 823 ದಶಲಕ್ಷ ಡಾಲರ್ ಹೂಡಿಕೆಯಾಗಿದೆ. ದಿಲ್ಲಿ, ಮುಂಬಯಿಗೆ ಹೋಲಿಸಿದರೆ ಬೆಂಗಳೂರು ಮುಂದಿದೆ. ಇದು ಬೆಂಗಳೂರು ನಗರದ ಸ್ಟಾರ್ಟ್‌ಅಪ್ ಇಕೋ ಸಿಸ್ಟಂ ಉತ್ತಮವಾಗಿರುವುದನ್ನು ದೃಢಪಡಿಸಿದೆ,'' ಎಂದು ಹೇಳಿದ್ದಾರೆ.

ಕುಡಿಯುವ ನೀರಿನ ಬಿಕ್ಕಟ್ಟು ನೀಗಿಸಲು ತುರ್ತು ಕ್ರಮಕ್ಕೆ ಅಶೋಕ್ ಆಗ್ರಹ

ಪ್ರತಿ ಕ್ಷೇತ್ರಕ್ಕೆ ₹10 ಕೋಟಿ ಅನುದಾನ ನೀಡಿ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದೆಲ್ಲೆಡೆ ಬರಗಾಲದ ಸ್ಥಿತಿ ಕಂಡುಬರುತ್ತಿದ್ದರೆ, ಸಚಿವರು ಅಧಿಕಾರಕ್ಕಾಗಿ ದಿಲ್ಲಿ ಪ್ರವಾಸ ಕೈಗೊಳ್ಳುತ್ತಿರುವುದು ಖಂಡನೀಯ. ಕಾಂಗ್ರೆಸ್ ಸರಕಾರ ಕುಡಿಯುವ ನೀರಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ 10 ಕೋಟಿ ರೂ. ಅನುದಾನ ಬಿಡುಗಡೆ ಮಾಡಬೇಕು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆಗ್ರಹಿಸಿದರು.

ವಿಧಾನಸೌಧದಲ್ಲಿ ಮಂಗಳವಾರ ಮಾತನಾಡಿದ ಅವರು, ''ಕಾಂಗ್ರೆಸ್‌ನ ನಾಯಕತ್ವವನ್ನು ಧಿಕ್ಕರಿಸಿ ಶಾಸಕರು ದಿಲ್ಲಿಗೆ ಹೋಗುತ್ತಿದ್ದು, ಸಿಎಂ ಸಿದ್ದರಾಮಯ್ಯನವರ ನಾಯಕತ್ವಕ್ಕೆ ಮೂರು ಕಾಸಿನ ಬೆಲೆಯಿಲ್ಲ ಎಂಬುದು ಸಾಬೀತಾಗಿದೆ. ಒಳಮೀಸಲಿನ ಸಂಬಂಧ ನಡೆದ ವಿಶೇಷ ಸಂಪುಟ ಸಭೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಪಾಲ್ಗೊಂಡಿರಲಿಲ್ಲ. ಅವರು ದಿಲ್ಲಿಯಲ್ಲಿದ್ದಾಗ ಇತ್ತ ಸಂಪುಟ ಸಭೆ ನಡೆಸಿದ್ದು, ಕಾಂಗ್ರೆಸ್‌ನಲ್ಲಿ ಎರಡು ಬಣ ಸೃಷ್ಟಿಯಾಗಿದೆ ಎಂದೇ ಅರ್ಥ,'' ಎಂದು ಹೇಳಿದರು.

''ರಾಜ್ಯದೆಲ್ಲೆಡೆ ಬರಗಾಲ ಸ್ಥಿತಿ ಕಂಡುಬರುತ್ತಿದ್ದು, ನೀರಿಗಾಗಿ ಹಾಹಾಕಾರ ಹೆಚ್ಚಿದೆ. ಜಾನುವಾರುಗಳಿಗೆ ನೀರು ಸಿಗುತ್ತಿಲ್ಲ, ಜನರಿಗೆ ಕುಡಿಯಲು ನೀರು ದೊರೆಯುತ್ತಿಲ್ಲ, ಇಂತಹ ಸಂದರ್ಭದಲ್ಲಿ ಸಚಿವರು ದಿಲ್ಲಿ ಯಾತ್ರೆ ಮಾಡಿದರೆ, ಇದು ಜನರ ಪಾಲಿಗೆ ಸತ್ತ ಸರಕಾರ ಎಂದೇ ಹೇಳಬೇಕು,'' ಎಂದು ಕಿಡಿಕಾರಿದರು.

ಗುಂಡಿ ದುರಸ್ತಿಗೆ ಬೋಗಸ್ ಬಿಲ್: ''ಬೆಂಗಳೂರಿನಲ್ಲಿ ರಸ್ತೆಗುಂಡಿಗಳನ್ನು ಮುಚ್ಚಿರುವುದಾಗಿ ಸರಕಾರ ಹೇಳುತ್ತಿದ್ದರೂ ಸಾಕಷ್ಟು ಗುಂಡಿಗಳಿವೆ. ಗುಂಡಿ ಮುಚ್ಚುವುದರಲ್ಲೂ ಹಣ ಮಾಡುವುದು ಹೇಗೆ ಎಂಬುದನ್ನು ಸರಕಾರ ತೋರಿಸಿಕೊಟ್ಟಿದೆ. ಬೆಂಗಳೂರಿನ ಶಾಸಕರ ಸದನ ಸಮಿತಿ ರಚಿಸಿದರೆ ವರದಿ ನೀಡಿ ಹೇಗೆ ಬೋಗಸ್ ಬಿಲ್ ಮಾಡಲಾಗಿದೆ ಎಂದು ತಿಳಿಸಿಕೊಡಲಾಗುವುದು,'' ಎಂದು ಸವಾಲು ಹಾಕಿದರು.

ಉಮರ್ ಅನುಮತಿ ಬೇಡ: ''ಉಮರ್ ಖಾಲಿದ್ ಕುರಿತ ಕಾರ್ಯಕ್ರಮಕ್ಕೆ ಸರಕಾರ ಅನುಮತಿ ನೀಡಬಾರದು. ದೇಶದ್ರೋಹದ ಪ್ರಕರಣದಲ್ಲಿ ಜೈಲಿನಲ್ಲಿರುವ ಆತನನ್ನು ವೈಭವೀಕರಿಸಬೇಕಿಲ್ಲ, ಪೊಲೀಸ್ ಇಲಾಖೆ ಅನುಮತಿ ರದ್ದುಪಡಿಸದಿದ್ದರೆ ಮುಂದೆ ಪೊಲೀಸ್ ಅಧಿಕಾರಿಗಳೇ ಇದಕ್ಕೆ ಉತ್ತರ ನೀಡಬೇಕಾಗುತ್ತದೆ,'' ಎಂದರು.

ಕಾಡಾನೆ ಪುನರ್ವಸತಿ ಕೇಂದ್ರ

■ **ವಿಕ ಸುದ್ದಿಲೋಕ** ಹಾಸನ

ಭದ್ರಾ ಅಭಯಾರಣ್ಯದಲ್ಲಿ ಎಲಿಫೆಂಟ್ ಸಾಫ್ಟ್ ರಿಲೀಸ್ ಸೆಂಟರ್(ಆನೆ ಪುನರ್ವಸತಿ ಕೇಂದ್ರ)ನಿರ್ಮಾಣ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಆರು ತಿಂಗಳ ಬಳಿಕ ಜಿಲ್ಲೆಯಲ್ಲಿರುವ ಒಂದಷ್ಟು ಆನೆಗಳನ್ನು ಸ್ಥಳಾಂತರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣೇಗೌಡ ಹೇಳಿದರು.



ನಗರದ ಅರಣ್ಯಭವನದ ಕಂಟ್ರೋಲ್ ರೂಂನಲ್ಲಿ ಸಿಸಿಎಫ್ ಹಾಗೂ ಡಿಎಫ್ಒ ಅವರೊಂದಿಗೆ ಮಂಗಳವಾರ ಚರ್ಚೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ''ಆನೆ ಪುನರ್ವಸತಿ ಕೇಂದ್ರದಲ್ಲಿ ಕಾಡಾನೆಗಳ ಪೋಷಣೆಗೆ ಹೈಕೋರ್ಟ್ ಕೆಲವು ಮಾರ್ಗಸೂಚಿಗಳನ್ನು ನೀಡಿದೆ. ರಾಜ್ಯ ಸರಕಾರದ ಬಳಿ ಹಣದ ಲಭ್ಯತೆ ಹಾಗೂ ಕೋರ್ಟ್‌ನ ಮಾರ್ಗಸೂಚಿಯಂತೆ ಮುಂದಿನ ತಿಂಗಳಲ್ಲಿ ಕಾರ್ಯರೂಪಕ್ಕೆ ತರಲು ಪ್ರಯತ್ನ ನಡೆದಿದೆ,''ಎಂದು ತಿಳಿಸಿದರು.

''ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ, ಎತ್ತಿನಹೊಳೆ ಯೋಜನೆ, ಅರಣ್ಯದಲ್ಲಿ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿಗಳಿಂದ ಕಾಡಾನೆಗಳ ಸಂಚಾರಕ್ಕೆ ಅಡ್ಡಿಯಾಗಿದೆ ಎಂಬ ಸಂಗತಿ ಒಪ್ಪಿಕೊಳ್ಳಲೇಬೇಕಿದೆ. 1980ರ ವನ್ಯಜೀವಿ ಸಂರಕ್ಷಣೆ ಕಾಯಿದೆ ಜಾರಿ ಬಳಿಕವೂ ವನ್ಯಜೀವಿಗಳ ಸಂತತಿ ವೃದ್ಧಿಸಿದೆ. ಈ ಎಲ್ಲ ಕಾರಣದಿಂದ ವನ್ಯಪ್ರಾಣಿ-ಮಾನವ ಸಂಘರ್ಷ ಮರುಕಳಿಸುತ್ತಿದೆ,'' ಎಂದರು.

ಸತ್ಯವತಿ ಮುಖ್ಯ ಮಾಹಿತಿ ಆಯುಕ್ತೆ?

ಬೆಂಗಳೂರು: ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಆಯ್ಕೆ ಸಂಬಂಧ ಸಿಎಂ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಮಿತಿ ಸಭೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಜಿ.ಸತ್ಯವತಿ ಅವರ ಹೆಸರು ಬಹುತೇಕ ಅಂತಿಮಗೊಂಡಿದೆ. ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ಹಿರಿಯ ಸಚಿವ ಕೆ.ಜೆ.ಜಾರ್ಜ್, ಸರಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಪಾಲ್ಗೊಂಡಿದ್ದ ಸಭೆಯಲ್ಲಿ ಹಲವರ ಹೆಸರು ಪ್ರಸ್ತಾಪವಾಯಿತು. ನಿವೃತ್ತ ಐಎಎಸ್ ಅಧಿಕಾರಿಗಳಾದ ಜಿ.ಸತ್ಯವತಿ, ಎನ್.ಜಯರಾಂ ಅವರ ಹೆಸರು ಪ್ರಮುಖವಾಗಿ ಪ್ರಸ್ತಾಪವಾಗಿದ್ದು, ಸಾಕಷ್ಟು ಚರ್ಚೆ ಬಳಿಕ ಒಮ್ಮತದಿಂದ ಸತ್ಯವತಿ ಅವರ ಹೆಸರನ್ನು ಅಂತಿಮಗೊಳಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಮಾಹಿತಿ ಕಾರ್ಯಾಲಯಕ್ಕೆ ಮಂಕು

ಕಚೇರಿಗೆ ಬಾರದ ಕಾರ್ಯದರ್ಶಿಯನ್ನು ಬದಲಾಯಿಸಲು ಆಯುಕ್ತರ ಒತ್ತಾಯ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯ ಮಾಹಿತಿ ಆಯೋಗವು ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಲ್ಪಿಸಬೇಕಾದ ಕಾರ್ಯದರ್ಶಿ ಕಚೇರಿಗೆ ಬರದೇ ನಿರ್ಲಕ್ಷ್ಯ ತೋರಿದ್ದು, ಆಡಳಿತಾತ್ಮಕ ಕೆಲಸಕ್ಕೆ ದೊಡ್ಡ ಹಿನ್ನಡೆಯಾಗಿದೆ. ಆದ್ದರಿಂದ ತಪ್ಪಿತಸ್ಥ ಅಧಿಕಾರಿ ವಿರುದ್ಧ ಕ್ರಮ ಕೈಗೊಂಡು, ಪೂರ್ಣ ಪ್ರಮಾಣದ ಕಾರ್ಯದರ್ಶಿ ನೇಮಕ ಮಾಡುವಂತೆ ಆಯೋಗದ ಆಯುಕ್ತರು ರಾಜ್ಯ ಸರಕಾರ ಮತ್ತು ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ.

ಕಳೆದ ಡಿಸೆಂಬರ್‌ನಲ್ಲಿಯೇ ಪ್ರಭಾರ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಬಿ.ಸಿ. ಸತೀಶ್ ಈವರೆಗೂ ಆಯೋಗದ ಕಚೇರಿಗೆ ಕಾಲಿಟ್ಟಿಲ್ಲ, ಇದರಿಂದ ಆಯೋಗದ ಬಹುಪಾಲು ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ. ಇದಲ್ಲದೆ, ಇತ್ತೀಚೆಗೆ ಆಯೋಗದ ಕಾರ್ಯವೈಖರಿಯ ಬಗ್ಗೆ ನಡೆದ ಸಭೆಗೂ ಗೈರಾಗಿದ್ದಾರೆ. ಆಯೋಗವು ಎದುರಿಸುತ್ತಿರುವ ಆಡಳಿತಾತ್ಮಕ ಸಮಸ್ಯೆ, ವಿದ್ಯುತ್ ಹಾಗೂ ನೆಟ್‌ವರ್ಕ್ ಸಮಸ್ಯೆಗಳಿಗೂ ಪರಿಹಾರ ಕಲ್ಪಿಸಿಲ್ಲ. ಮಾತ್ರವಲ್ಲದೆ, ಸರಕಾರ ವೃಂದ ಮತ್ತು ನೇಮಕಾತಿ ವರದಿ ತಯಾರಿಕೆಯಲ್ಲೂ ಕರ್ತವ್ಯ ನಿರ್ಲಕ್ಷಿಸಿರುವುದು ಸಾಬೀತಾಗಿದೆ. ಈ ಹಿನ್ನೆಲೆಯಲ್ಲಿ ತಕ್ಷಣವೇ ಅವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಯುಕ್ತರು ಸಭೆಯಲ್ಲಿ ಒಮ್ಮತದ ತೀರ್ಮಾನ ತೆಗೆದುಕೊಂಡಿದ್ದಾರೆ.

ಕಾರ್ಯದರ್ಶಿಯ ಬೇಜವಾಬ್ದಾರಿ: ಕಾರ್ಯದರ್ಶಿ ಸತೀಶ್ ಅವರ ಬೇಜವಾಬ್ದಾರಿಯಿಂದಾಗಿ ಆಯೋಗದ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದಿದೆ. ವೃಂದ ಮತ್ತು ನೇಮಕಾತಿಯ ವರದಿ ತಯಾರಿಕೆಗೆ ಸಂಬಂಧಿಸಿದಂತೆ ಅನುಭವಿ ಅಧಿಕಾರಿಗಳ ನೆರವು ಪಡೆಯಲು ನಿರ್ದೇಶನ ನೀಡಲಾಗಿತ್ತು. ಆದರೆ, ಕಾರ್ಯದರ್ಶಿ ಸತೀಶ್ ಅವರು ಕ್ರಮ ಕೈಗೊಳ್ಳದೇ ನಿರ್ಲಕ್ಷ್ಯತೆ ವಹಿಸಿರುವುದು ದೃಢಪಟ್ಟಿದೆ. ವಿವಿಧ ರಾಜ್ಯದ ಮಾಹಿತಿ ಆಯುಕ್ತರ ಸಭೆಗೂ ಹಾಜರಾಗದೇ ಶಿಷ್ಟಾಚಾರ ಉಲ್ಲಂಘಿಸಿದ್ದಾರೆ. ಮಾಹಿತಿ ಹಕ್ಕು ಅಧಿನಿಯಮ 2005ರಡಿ ಸ್ವಯಂ ಪ್ರೇರಣೆಯಿಂದ ಕಚೇರಿ ಮಾಹಿತಿ ಹಾಗೂ ಕಡತಗಳನ್ನು ಗಣಕೀಕರಣಗೊಳಿಸಿ, ವಿಷಯ ಸೂಚಿಯೊಂದಿಗೆ ಕಡತ ನಿರ್ವಹಣೆ, ಅನುಷ್ಠಾನಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ. ಇದು ಆಯೋಗದ ಮುಜುಗರಕ್ಕೆ ಕಾರಣವಾಗಿದೆ. ಈ ಎಲ್ಲದರ ಬಗ್ಗೆ ರಾಜ್ಯ ಮುಖ್ಯ ಕಾರ್ಯದರ್ಶಿಗೆ ವರದಿ ಸಲ್ಲಿಸಲು ಮಾಹಿತಿ ಆಯೋಗದ ಆಯುಕ್ತರು ನಿರ್ಧರಿಸಿದ್ದಾರೆ.

ದಂಡ ಸಂಗ್ರಹಿಸದ ಅಧಿಕಾರಿಗಳು: ಮೇಲ್ಮನವಿದಾರರಿಗೆ ತಿಳಿವಳಿಕೆ ಪತ್ರ, ಆದೇಶಗಳನ್ನು ಸರಿಯಾದ ಸಮಯದಲ್ಲಿ ರವಾನಿಸಲು ಯಾವುದೇ ರೀತಿ ಮಾನದಂಡ ರೂಪಿಸಿಲ್ಲ. ಇಷ್ಟ ಬಂದಂತೆ ನಿರ್ವಹಣೆ ಮಾಡಲಾಗುತ್ತಿದೆ. ಇದು ಆಯೋಗದ ಕಾರ್ಯವೈಖರಿಯನ್ನೇ ಪ್ರಶ್ನೆ ಮಾಡುವಂತಾಗಿದೆ. ವಿದ್ಯುತ್ ಮತ್ತು ನೆಟ್‌ವರ್ಕ್ ಸಮಸ್ಯೆಯಿಂದಾಗಿ ಮೇಲ್ಮನವಿ ವಿಚಾರಣೆ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಈ ಬಗ್ಗೆ ಕಾರ್ಯದರ್ಶಿ ಗಮನಕ್ಕೆ ತಂದರೂ ಪರಿಹಾರ ಕಲ್ಪಿಸಿಲ್ಲ. ಮಾಹಿತಿ ನೀಡದ ಅಧಿಕಾರಿಗಳಿಗೆ ದಂಡ ವಿಧಿಸಿದ್ದನ್ನು ಸಂಗ್ರಹಿಸುವುದು ಆಯೋಗದ ಕಾರ್ಯದರ್ಶಿ, ರಿಜಿಸ್ಟ್ರಾರ್ ಅವರ ಕರ್ತವ್ಯವಾಗಿದೆ. ಆದರೆ, ಅದನ್ನು ನಿರ್ವಹಿಸುತ್ತಿಲ್ಲ, ಇದರಿಂದಾಗಿ ಸುಮಾರು ಎಂಟು ಕೋಟಿ ದಂಡವು ಸಂಗ್ರಹಣೆ ಆಗದೇ ಇರುವುದರಿಂದ ರಾಜ್ಯ ಮಾಹಿತಿ ಆಯುಕ್ತರ ಆದೇಶಗಳಿಗೆ ಕಿಮ್ಮತ್ತಿಲ್ಲದಂದಾಗಿದೆ. ಆಯೋಗದ ಅಧಿಕಾರಿಗಳು ಮಾಹಿತಿ ಹಕ್ಕು ನಿಯಮ ಉಲ್ಲಂಘಿಸುತ್ತಿದ್ದಾರೆ. ಆದ್ದರಿಂದ ಅಂತಹ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯ ಮಾಹಿತಿ ಆಯುಕ್ತರು ಸರಕಾರವನ್ನು ಒತ್ತಾಯಿಸಿದ್ದಾರೆ.

ಆಯುಕ್ತರ ಅಧಿಕಾರ ಮೊಟಕು: ಪ್ರಸ್ತುತ ಕರ್ನಾಟಕ ಮಾಹಿತಿ ಆಯೋಗದ ಕಾರ್ಯದರ್ಶಿಗಳು ಯಾವುದೇ ಆಡಳಿತಾತ್ಮಕ ವಿಷಯಗಳನ್ನು ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅನುಮೋದನೆಗೆ ತರುತ್ತಿಲ್ಲ. ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಸಂವಿಧಾನಾತ್ಮಕವಾಗಿ ನೇಮಕಗೊಂಡ ರಾಜ್ಯ ಮಾಹಿತಿ ಆಯುಕ್ತರಿಗೆ ಆಯೋಗದಲ್ಲಿ ಕಿಂಚಿತ್ತೂ ಗೌರವ ನೀಡುತ್ತಿಲ್ಲ, ಮಹಿಳಾ ಶೌಚಾಲಯ ನಿರ್ವಹಣೆಗೆ ನಿರ್ಲಕ್ಷ್ಯ. ಅಧಿಕಾರಿಗಳಿಗೆ ಬಯೊಮೆಟ್ರಿಕ್ ಹಾಜರಾತಿ ಕಡ್ಡಾಯವಾಗಿದ್ದರೂ ಪಾಲನೆ ಆಗುತ್ತಿಲ್ಲ, ಕಂಪ್ಯೂಟರ್, ಪ್ರಿಂಟರ್ಸ್ ಸಮಸ್ಯೆ ನಿವಾರಣೆಗೆ ಲಕ್ಷಾಂತರ ಹಣ ಬಂದರೂ, ಸಂಪೂರ್ಣ ಬದಲಾಯಿಸಿಲ್ಲ. ಹಣ ದುರ್ಬಳಕೆ ಮಾಡಿಕೊಂಡಿರುವ ಶಂಕೆಯಿದೆ. 2023-24ರಲ್ಲಿ ನೇಮಿಸಿಕೊಂಡ ಹೊರಗುತ್ತಿಗೆ ಏಜೆನ್ಸಿಯನ್ನೇ ನಿಯಮ ಮೀರಿ ಮುಂದುವರೆಸಲಾಗುತ್ತಿದೆ ಎಂಬ ಆರೋಪಿಸಿದ್ದಾರೆ.

> **ನಶಿಸುತ್ತಿರುವ ಕಡತಗಳು**
>
> ಮೇಲ್ಮನವಿ ವಿಚಾರಣೆ ನಂತರದ ಆದೇಶಗಳನ್ನು ಆಯೋಗದ ಜಾಲತಾಣದಲ್ಲಿ ಅಳವಡಿಸುವುದು ಕಡ್ಡಾಯ. ಆದರೆ, ಆದೇಶಗಳನ್ನು ಮೇಲ್ಮನವಿದಾರರು ತಮ್ಮ ಐಪಿಟಿ, ನಂಬರ್‌ಗಳ ಮೂಲಕ ವೀಕ್ಷಣೆ ಮಾಡುವ ಅವಕಾಶವನ್ನು ರದ್ದುಪಡಿಸಲಾಗಿದೆ. ಪ್ರತಿವಾದಿಗಳಿಗೆ ವಿಧಿಸಿರುವ ದಂಡ ಹಾಗೂ ಪರಿಹಾರಗಳನ್ನೂ ಮೇಲ್ಮನವಿದಾರರು ಮಾಹಿತಿ ಜಾಲದಲ್ಲಿ ವೀಕ್ಷಿಸಲು ಸಾಧ್ಯವಾಗುತ್ತಿಲ್ಲ. ಆಯೋಗದ ಮಾಹಿತಿ ಜಾಲವು ಸಾರ್ವಜನಿಕರಿಗೋಸ್ಕರ ನಿರ್ವಹಣೆ ಆಗಬೇಕು. ಆದರೆ, ಸಾರ್ವಜನಿಕರು ವೀಕ್ಷಣೆ ಅವಕಾಶ ರದ್ದುಗೊಳಿಸಿರುವುದು ಸರಿಯಾದ ಕ್ರಮವಲ್ಲ ಎಂದು ಆಪಾದಿಸಿದ್ದಾರೆ.

ಸದೃಢ ಸಮಾಜಕ್ಕಾಗಿ ಶಿಕ್ಷಣದ ಬಲವರ್ಧನೆ ಅಗತ್ಯ ಎಂದು ಪ್ರತಿಪಾದಿಸಿದ ಸಿದ್ದರಾಮಯ್ಯ

ಶಾಲಾ ಶಿಕ್ಷಣಕ್ಕೆ ಅಷ್ಟ ಗ್ಯಾರಂಟಿ ಭರವಸೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಸರಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಅದಕ್ಕೆ ಪೂರಕ ಸೌಲಭ್ಯ, ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಎಂಟು ಗ್ಯಾರಂಟಿಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಸದೃಢ ಸಮಾಜಕ್ಕಾಗಿ ಶಿಕ್ಷಣದ ಗ್ಯಾರಂಟಿ ಎಂಬುದಾಗಿ ಎಂಟು ಗ್ಯಾರಂಟಿಗಳನ್ನು ಪ್ರಕಟಿಸಿರುವ ಸಿಎಂ, ಮೂರು ವರ್ಷಗಳಲ್ಲಿ ಕರ್ನಾಟಕದ ಶಾಲಾ ವ್ಯವಸ್ಥೆಯು ದೇಶದಲ್ಲೇ ಅತ್ಯುತ್ತಮ ಸರಕಾರಿ ಶಾಲಾ ವ್ಯವಸ್ಥೆಯಾಗಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಹಾಗಾಗಿ ಪೋಷಕರು ತಮ್ಮ ಮಕ್ಕಳನ್ನು ಸರಕಾರಿ ಶಾಲೆಗಳಿಗೆ ದಾಖಲಿಸಿ ಸೌಲಭ್ಯ ಪಡೆಯುವಂತೆ ಮನವಿ ಮಾಡಿದ್ದಾರೆ.

ಶಿಕ್ಷಕರ ಕೊರತೆ ನಿವಾರಿಸುವುದು. ಎಲ್ಲ ಶಾಲೆಗಳಲ್ಲಿ ಕನ್ನಡದ ಜತೆಗೆ ಇಂಗ್ಲಿಷ್ ಮಾಧ್ಯಮ ವ್ಯವಸ್ಥೆ. ಕೆಪಿಎಸ್ ಶಾಲೆ ಮಕ್ಕಳಿಗೆ ಉಚಿತ ವಾಹನ ಸೇವೆ. ಚಿಕ್ಕಂದಿನಿಂದಲೇ ಕಂಪ್ಯೂಟರ್, ಎಐ ಕಲಿಕೆ ವ್ಯವಸ್ಥೆ, ಬೋಧನೆಗಷ್ಟೇ ಶಿಕ್ಷಕರ ಸೇವೆ ಸೀಮಿತಗೊಳಿಸುವುದು. ಪೋಷಕರು-ಶಿಕ್ಷಕರ ನಿರಂತರ ಸಭೆ ಹಾಗೂ ಕೌಶಲ್ಯ ಶಿಕ್ಷಣದ ಜತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಕಲ್ಪಿಸುವ ಭರವಸೆಯನ್ನು ಸ್ವತಃ ಮುಖ್ಯಮಂತ್ರಿಗಳು ನೀಡಿದ್ದಾರೆ.

ಈ ಸಂಬಂಧ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಸಿದ್ದರಾಮಯ್ಯ, ''ಎಸ್ಸೆಸ್ಸೆಲ್ಸಿಯಲ್ಲಿ ಶೇ.94.1 ಹಾಗೂ ಪಿಯುನಲ್ಲಿ ಶೇ.86.48 ಫಲಿತಾಂಶ ನೀಡುವ ಮೂಲಕ ರಾಜ್ಯದ ಮಕ್ಕಳು ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ಅದರಲ್ಲೂ ಸರಕಾರಿ ಶಾಲೆಗಳ ವಿದ್ಯಾರ್ಥಿಗಳ ಸಾಧನೆ ಬೆರಗು ಮೂಡಿಸಿದೆ. ಈ ಸಾಧನೆಗಳು ನಮ್ಮ ಸರಕಾರಿ ಶಾಲಾ ವ್ಯವಸ್ಥೆಯ ಬಲವನ್ನು ತೋರಿಸುತ್ತವೆ. ಇದರಿಂದ ಪ್ರೇರಿತನಾಗಿ ಎಂಟು ಅಂಶಗಳ ಕಾರ್ಯಕ್ರಮವನ್ನು ನೀಡುತ್ತಿದ್ದೇನೆ. ತ್ವರಿತ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುತ್ತೇನೆ,'' ಎಂದು ವಾಗ್ದಾನ ನೀಡಿದ್ದಾರೆ.

''ಉತ್ತಮ ಶಿಕ್ಷಣ ಪಡೆಯಲು ನಮ್ಮ ಸರಕಾರ ಸಕಲ ಸವಲತ್ತುಗಳನ್ನೂ ನೀಡುತ್ತಿದೆ. ಉಚಿತ ಪಠ್ಯಪುಸ್ತಕ, ಶೂ, ಬಿಸಿಯೂಟ, ಹಾಲು, ರಾಗಿ ಮಾಲ್ಟ್, ಬಾಳೆಹಣ್ಣು, ವಿದ್ಯಾರ್ಥಿವೇತನ ಇವಿಷ್ಟೇ ಅಲ್ಲದೇ, ಸುಸಜ್ಜಿತ ಶಾಲಾ ಕೊಠಡಿಗಳು, ಆಟದ ಮೈದಾನ, ಗ್ರಂಥಾಲಯಗಳು, ವಿಜ್ಞಾನ ಲ್ಯಾಬ್‌ಗಳು ಸೇರಿದಂತೆ ಮಕ್ಕಳ ಕಲಿಕೆಗೆ ಅಗತ್ಯವಿರುವ ಎಲ್ಲಾ ಸೌಕರ್ಯಗಳನ್ನು ಒದಗಿಸಿಕೊಡಲಾಗಿದೆ,'' ಎಂದು ವಿವರಿಸಿದ್ದಾರೆ.

ಸಾಂದರ್ಭಿಕ ಚಿತ್ರ

8 ಶಿಕ್ಷಣ ಗ್ಯಾರಂಟಿಗಳು

- ಶಿಕ್ಷಕರ ಕೊರತೆ ಇನ್ನಿಲ್ಲ- 5ನೇ ತರಗತಿವರೆಗೆ ತರಗತಿಗೊಬ್ಬರು ಹಾಗೂ 6ನೇ ತರಗತಿಯಿಂದ ವಿಷಯಕ್ಕೊಬ್ಬರಂತೆ ಶಿಕ್ಷಕರ ನೇಮಕ
- ಪೋಷಕರು ಬಯಸುವ ಮಾಧ್ಯಮ- ಎಲ್ಲ ಶಾಲೆಗಳಲ್ಲೂ ಕನ್ನಡದ ಜತೆಗೆ ಇಂಗ್ಲಿಷ್ ಮಾಧ್ಯಮ ಲಭ್ಯ.
- ಕೆಪಿಎಸ್ ವಿದ್ಯಾರ್ಥಿಗಳಿಗೆ ಉಚಿತ ವಾಹನ ವ್ಯವಸ್ಥೆ
- ಡಿಜಿಟಲ್ ಶಿಕ್ಷಣ- 1ನೇ ತರಗತಿಯಿಂದ ಕಂಪ್ಯೂಟರ್ ಹಾಗೂ 3ನೇ ತರಗತಿಯಿಂದ ಎಐ ಕಲಿಕೆ. 3 ವರ್ಷಗಳಲ್ಲಿ ಎಲ್ಲ ಕೆಪಿಎಸ್ ಶಾಲೆಗಳಿಗೆ ಕಂಪ್ಯೂಟರ್ ಶಿಕ್ಷಕರ ನೇಮಕ
- ಕಲೆ ಮತ್ತು ದೈಹಿಕ ಶಿಕ್ಷಣ- ಸಂಗೀತ, ಕಲೆ ಮತ್ತು ದೈಹಿಕ ಶಿಕ್ಷಣಕ್ಕೆ ಪ್ರತ್ಯೇಕ ಶಿಕ್ಷಕರ ನೇಮಕ
- ಶೈಕ್ಷಣಿಕೇತರ ಹೊರೆ ಮುಕ್ತಿ - ಶಿಕ್ಷಕರು ಬೋಧನೆಗಷ್ಟೇ ಸೀಮಿತ
- ತಿಂಗಳಿಗೊಮ್ಮೆ ಕಡ್ಡಾಯವಾಗಿ ಪೋಷಕರು-ಶಿಕ್ಷಕರ ಸಭೆ
- ಕೌಶಲ್ಯ ಮತ್ತು ಸ್ಪರ್ಧಾತ್ಮಕ ತರಬೇತಿ- 6ನೇ ತರಗತಿಯಿಂದಲೇ ವೃತ್ತಿ ಕೌಶಲ ಶಿಕ್ಷಣ ಮತ್ತು ಭವಿಷ್ಯದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿಶೇಷ ತರಬೇತಿ

ತಾಕತ್ತಿದ್ದರೆ ನಟ ಚೇತನ್ ಚುನಾವಣೆಗೆ ಸ್ಪರ್ಧಿಸಲಿ

■ **ವಿಕ ಸುದ್ದಿಲೋಕ** ಮೈಸೂರು

ನಟ ಚೇತನ್ ಅಹಿಂಸಾ ಮನೆಯಲ್ಲಿ ಕುಳಿತುಕೊಂಡು 'ಎಕ್ಸ್'ನಲ್ಲಿ ಪೋಸ್ಟ್ ಮಾಡುವ ಬದಲು ಚುನಾವಣೆಯಲ್ಲಿ ಬಂದು ಸ್ಪರ್ಧಿಸಲಿ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸವಾಲು ಹಾಕಿದರು.

■ ನಿಖಿಲ್ ಕುಮಾರಸ್ವಾಮಿ ಸವಾಲು

ಡಾ.ರಾಜಕುಮಾರ್ ಸ್ಮಾರಕಕ್ಕೆ ಸರಕಾರ ನೀಡಿರುವ ಜಾಗದ ಕುರಿತು ಚೇತನ್ ಮಾಡಿದ್ದ ಆಕ್ಷೇಪಕ್ಕೆ ಮೈಸೂರಿನಲ್ಲಿ ತಿರುಗೇಟು ನೀಡಿದ ಅವರು, ''ಚೇತನ್ ಅಹಿಂಸಾ ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ. ನನಗೂ ಬರವಣಿಗೆ ಗೊತ್ತು. ಅವರಂತೆ ನಾನೂ ಸಾವಿರ ಎಕ್ಸ್‌ನಲ್ಲಿ ಬರೆಯುತ್ತೇನೆ. ಇದರ ಬದಲು ಅವರಿಗೆ ತಾಕತ್ತು ಇದ್ದರೆ ಯಾವುದಾದರೊಂದು ಕ್ಷೇತ್ರದಲ್ಲಿ ಚುನಾವಣೆಗೆ ಸ್ಪರ್ಧಿಸಲಿ,'' ಎಂದು ಆಹ್ವಾನ ನೀಡಿದರು.

''ಕನ್ನಡದ ಮೇರು ನಟರಾದ ಡಾ.ರಾಜಕುಮಾರ್, ವಿಷ್ಣುವರ್ಧನ್, ಅಂಬರೀಶ್ ಅವರು ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇದೇ ಕಾರಣದಿಂದ ಇವರೆಲ್ಲ ನಿಧನರಾದಾಗ ರಾಜ್ಯ ಸರಕಾರ ಸೂಕ್ತ ಗೌರವ ನೀಡಿದೆ. ಅಂಬರೀಶಣ್ಣ ನಿಧನರಾದಾಗಲೂ ಕುಮಾರಣ್ಣ ಸಿಎಂ ಆಗಿದ್ದರು. ಆಗಲೂ ಅಂಬರೀಶ್ ಅವರಿಗೆ ಸೂಕ್ತ ಗೌರವ ನೀಡಿದರು. ಇದರಲ್ಲಿ ತಪ್ಪೇನಿದೆ,'' ಎಂದು ಪ್ರಶ್ನಿಸಿದರು.

ಪ್ರಶ್ನೆ: ವ್ಯಾಪಾರದಲ್ಲಿ ಏಳಿಗೆ ಇಲ್ಲ.

ಜನ್ಮದಿನಾಂಕ: 12.05.1986

ನಕ್ಷತ್ರ: ಅನುರಾಧ

ಪರಿಹಾರ: ನಿಮ್ಮ ಕುಂಡಲಿ ಪ್ರಕಾರ ಕುಜ, ಶುಕ್ರರೊಂದಿಗೆ ಇದ್ದಾರೆ. ವ್ಯಾಪಾರ-ವ್ಯವಹಾರಗಳಲ್ಲಿ ಯಾರಿಗೂ ಮನಸ್ಸು ನೋಯಿಸದೇ ಮುಂದುವರಿಸಿದಲ್ಲಿ ಒಳ್ಳೆಯ ಲಾಭವನ್ನು ಪಡೆಯುವ ಕಾಲ. ಆದರೆ, ಗುರುವು ಅಷ್ಟಮದಲ್ಲಿದ್ದು ಗುರು ಬಲ, ಶನಿ ಬಲ ಎರಡೂ ಇಲ್ಲದ್ದರಿಂದ ವ್ಯವಹಾರಗಳಲ್ಲಿ ಬಹಳ ಎಚ್ಚರಿಕೆಯಿಂದ ಸಾಗಬೇಕು. ಗುರು ದತ್ತಾತ್ರೇಯನ ದರ್ಶನ ಪಡೆಯಿರಿ. ಲಕ್ಷ್ಮೀ ನರಸಿಂಹನನ್ನು ಪೂಜಿಸಿ, ಪ್ರಾರ್ಥಿಸಿ.

ನೀವೂ ಪ್ರಶ್ನೆ ಕೇಳಬಹುದು...

ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 29-04-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ವಸಂತ. **ಮಾಸ:** ವೈಶಾಖ. **ಪಕ್ಷ:** ಶುಕ್ಲ. **ಮಳೆ ನಕ್ಷತ್ರ:** ಭರಣಿ. **ನಿತ್ಯನಕ್ಷತ್ರ:** ಹಸ್ತ.
ತಿಥಿ: ತ್ರಯೋದಶಿ. **ಯೋಗ:** ಹರ್ಷಣ. **ಕರಣ:** ಕೌಲವ.
ವಾರ: ಬುಧವಾರ.

ರಾಹು ಕಾಲ: ಮ. 12.00 - 1.30
ಗುಳಿಕ ಕಾಲ: ಬೆ. 10.30-12.00
ಯಮಗಂಡ ಕಾಲ: ಬೆ. 7.30-9.00
ಸೂರ್ಯ ಉದಯ: ಬೆ.6.01
ಸೂರ್ಯ ಅಸ್ತ: ಸಂ. 6.33

ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಮುಖಂಡರ ನಿರ್ಣಯ

ಒಳಮೀಸಲು ಅನ್ಯಾಯ, ಹೋರಾಟ

■ **ವಿಕ ಸುದ್ದಿಲೋಕ** ಬೆಂಗಳೂರು

ಪರಿಶಿಷ್ಟ ಜಾತಿಗಳ ಮೀಸಲು ವರ್ಗೀಕರಣದಲ್ಲಿ ಬಂಜಾರ, ಭೋವಿ, ಕೊರಮ, ಕೊರಚ ಮತ್ತು ಅಲೆಮಾರಿ ಸೂಕ್ಷ್ಮ ಸಮುದಾಯಗಳಿಗೆ ರಾಜ್ಯ ಸರಕಾರದಿಂದ ಅನ್ಯಾಯವಾಗಿದೆ. ಇದನ್ನು ಮರು ಪರಿಶೀಲಿಸಬೇಕು. ಇಲ್ಲದಿದ್ದರೆ ನ್ಯಾಯಾಲಯದ ಮೊರೆ ಹೋಗಲು ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಮುಖಂಡರ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ನಗರದ ಗಾಂಧಿ ಭವನದಲ್ಲಿ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಸರ್ದಾರ್ ಸೇವಾಲಾಲ್ ಸ್ವಾಮೀಜಿ ನೇತೃತ್ವದಲ್ಲಿ ಮಂಗಳವಾರ ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಬಂಜಾರ, ಭೋವಿ, ಕೊರಚ, ಕೊರಮ ಮತ್ತು ಸೂಕ್ಷ್ಮ ಸಮುದಾಯಗಳ ಮುಖಂಡರ ಸಭೆ ನಡೆಯಿತು. ಇತ್ತೀಚೆಗೆ ಸಚಿವ ಸಂಪುಟದಲ್ಲಿ ಸರಕಾರ ಅಂಗೀಕರಿಸಿದ ಒಳಮೀಸಲು ಸಂಬಂಧ ಹಲವು ವಿಚಾರಗಳ ಬಗ್ಗೆ ಚರ್ಚಿಸಲಾಯಿತು.

ಸಂವಿಧಾನದ ನಿಯಮಗಳು ಮತ್ತು ಸುಪ್ರೀಂಕೋರ್ಟ್ ತೀರ್ಪಿನ ವಿರುದ್ಧವಾಗಿ ರಾಜ್ಯ ಸರಕಾರ ವರ್ಗೀಕರಣ ಮಾಡಿರುವುದು ಸಮರ್ಥನೀಯವಲ್ಲ, ಇದು ಏಕಪಕ್ಷೀಯ ಮತ್ತು ತಾರತಮ್ಯದಿಂದ ಕೂಡಿದೆ. ಇದನ್ನು ಸರಿಪಡಿಸುವವರೆಗೂ ಹೋರಾಟ ಮಾಡುತ್ತೇವೆ. ಒಳಮೀಸಲು ಒಳಗೆ ಮತ್ತೊಂದು ಒಳಮೀಸಲು ಮಾಡಲು ಹೊರಟಿರುವುದು ಕಾನೂನಿನ ಸ್ಪಷ್ಟ ಉಲ್ಲಂಘನೆಯಾಗಿದೆ ಎಂದು ಸೂಕ್ಷ್ಮ ಸಮುದಾಯಗಳು ವಿರೋಧಿಸಿವೆ.

ಸಭೆಯಲ್ಲಿ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಮಾತನಾಡಿದರು.

ಹೋಮೋಜೀನಿಯಸ್ ಜಾತಿಗಳನ್ನು ಒಂದು ಗುಂಪು ಮಾಡಬೇಕು ಎಂಬುದಕ್ಕೆ ವಿರುದ್ಧವಾಗಿ ಮೂರು ಗುಂಪುಗಳನ್ನು ರಚಿಸಲಾಗಿದೆ. ಪ್ರವರ್ಗ 'ಸಿ' ಗುಂಪಿನಲ್ಲಿ ಬಲಗೈ ಸಂಬಂಧಿತ 16 ಜಾತಿಗಳು ಮತ್ತು ಎಡಗೈ ಸಂಬಂಧಿತ 9 ಜಾತಿಗಳು ಮಿಶ್ರಣಗೊಂಡಿವೆ. ಇವುಗಳನ್ನು ಬೇರ್ಪಡಿಸಬೇಕು. ನ್ಯಾ. ನಾಗಮೋಹನ್‌ದಾಸ್ ಆಯೋಗದ ವರದಿಯ ಪ್ರಕಾರ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಅತೀ ಹಿಂದುಳಿದಿರುವ ಪ್ರವರ್ಗ 'ಸಿ' ಗುಂಪಿಗೆ ಶೇ.5ಕ್ಕೂ ಹೆಚ್ಚು ಮೀಸಲು ಹಂಚಿಕೆ ಮಾಡಬೇಕು. ಅತಿ ಹಿಂದುಳಿದಿರುವ ಈ 64 ಜಾತಿಗಳನ್ನು ಒಳಗೊಂಡ ಈ ಗುಂಪನ್ನು ನ್ಯಾಯಬದ್ಧವಾಗಿ ಮೊದಲನೆಯ ಗುಂಪು ಎಂದು ನಮೂದಿಸಬೇಕು. ಪ್ರವರ್ಗ 'ಸಿ' ನಲ್ಲಿ ಒಳಮೀಸಲು ಒಳಗೆ ಮತ್ತೊಂದು ಒಳಮೀಸಲು ಮಾಡಬಾರದು.

ಸಿಎಂ, ಡಿಸಿಎಂ ಮತ್ತು ಸಚಿವ ಸಂಪುಟದ ಸದಸ್ಯರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಡಲಾಗುವುದು. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದಲ್ಲಿ ಹೋರಾಟ ರೂಪಿಸಲಾಗುವುದು ಎಂದು ಮುಖಂಡರು ಎಚ್ಚರಿಕೆ ನೀಡಿದರು.

ಮಾಜಿ ಶಾಸಕ ಭೀಮನಾಯಕ, ತಾಂಡಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಜಯದೇವ ನಾಯ್ಕ, ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ರವಿಕುಮಾರ್, ಕರ್ನಾಟಕ ಮೀಸಲಾತಿ ಸಂರಕ್ಷಣಾ ಒಕ್ಕೂಟದ ಕಾರ್ಯಾಧ್ಯಕ್ಷ ರಾಘವೇಂದ್ರ ನಾಯ್ಕ, ಕರ್ನಾಟಕ ಕೊರಚ ಮಹಾಸಭಾ ಅಧ್ಯಕ್ಷ ಆದರ್ಶ ಯಲ್ಲಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ಅನಂತನಾಯ್ಕ ಎನ್. ಇದ್ದರು.

ಐಐಜಿಜೆ ಉಡುಪಿ ಕ್ಯಾಂಪಸ್ ಉದ್ಘಾಟನೆ

■ ವೃತ್ತಿಪರ ತರಬೇತಿಯಿಂದ ಬದುಕಿನಲ್ಲಿ ಬದಲಾವಣೆ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸಲಹೆ

ಜುವೆಲ್ಲರಿ ಪ್ರದರ್ಶನ ವೀಕ್ಷಿಸಿದ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್.

■ **ವಿಕ ಸುದ್ದಿಲೋಕ** ಉಡುಪಿ

''ಯುವ ಜನತೆ ಗಳಿಕೆ, ಪ್ರಗತಿ ಮೂಲಕ ಸಮಾಜಕ್ಕೆ ಕೊಡುಗೆ ನೀಡಬೇಕು,'' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸಲಹೆ ನೀಡಿದರು.

ಜೆಮ್ಸ್ ಆ್ಯಂಡ್ ಜುವೆಲ್ಲರಿ ಎಕ್ಸ್‌ಪೋರ್ಟ್ ಪ್ರಮೋಶನ್ ಕೌನ್ಸಿಲ್ (ಜಿಜೆಇಪಿಸಿ) ವತಿಯಿಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜೆಮ್ಸ್ ಆ್ಯಂಡ್ ಜುವೆಲ್ಲರಿ ಉಡುಪಿ ಕ್ಯಾಂಪಸ್ ಅನ್ನು ಮಂಗಳವಾರ ಉದ್ಘಾಟಿಸಿ, ಅಂಬಲಪಾಡಿ ಬೈಪಾಸ್ ಬಳಿಯ ಶ್ಯಾಮಿಲಿ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮಾತನಾಡಿದರು.

''ಮಾರುಕಟ್ಟೆ ಬೇಡಿಕೆಗೆ ಅನುಗುಣವಾಗಿ ವೃತ್ತಿಪರ ತರಬೇತಿ ಕಡಿಮೆ ಶುಲ್ಕದಲ್ಲಿ ದೊರೆಯುವ ಅಗತ್ಯವಿದೆ. ಆಭರಣ ತಯಾರಿ ಕಲೆ ಮತ್ತು ಕೌಶಲದಿಂದ ದಕ್ಷಿಣ ಭಾರತದಲ್ಲಿ ಚಿನ್ನಾಭರಣಗಳ ಖರೀದಿ ಸಾಮರ್ಥ್ಯ ಮತ್ತು ಮಾರುಕಟ್ಟೆಯಿದೆ,'' ಎಂದರು.

''ಗ್ರಾಮೀಣ ಯುವಜನರಿಗೆ ಸೂಕ್ತ ತರಬೇತಿ, ಹಾಸ್ಟೆಲ್ ಸೌಲಭ್ಯ ಸಿಗಬೇಕು. ಚಿಕ್ಕಮಗಳೂರು ಕಾಫಿ ಬೆಳೆಗಾರರ ಕಾಫಿ ಬೀಜ ಹಾಗೂ ಬೆಳೆ ಹಾನಿ ಏಲಂ ಆನ್‌ಲೈನ್ ವ್ಯವಸ್ಥೆ ರದ್ದುಪಡಿಸುವ ಬೇಡಿಕೆ ಪರಿಶೀಲನೆಯಲ್ಲಿದೆ,'' ಎಂದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ''ವಿಶ್ವಕರ್ಮ ಯೋಜನೆಯಡಿ ಉಡುಪಿ, ಚಿಕ್ಕಮಗಳೂರಿನಲ್ಲಿ 8 ಸಾವಿರ ಜನರಿಗೆ ತರಬೇತಿ ಸಹಿತ 80 ಕೋಟಿ ರೂ. ಸಾಲ ಒದಗಿಸಲಾಗಿದೆ. ರಾಷ್ಟ್ರೀಕೃತ ಬ್ಯಾಂಕ್‌ಗಳು ಬಡವರ ಮನೆ ಬಾಗಿಲಿಗೆ ತೆರಳಿ ವ್ಯವಹಾರ ಮಾಡಬೇಕು,'' ಎಂದರು.

ಉಡುಪಿ ಶಾಸಕ ಯಶಪಾಲ್ ಸುವರ್ಣ ಮಾತನಾಡಿ, ''ದೇಶದ ಆರ್ಥಿಕತೆಗೆ ರತ್ನ, ಆಭರಣಗಳು ಕೊಡುಗೆ ನೀಡುತ್ತಿದ್ದು, ಇನ್ನಷ್ಟು ಉತ್ತೇಜನ ಸಿಗಲಿ. 2047ರೊಳಗೆ ಭಾರತ ಜಗತ್ತಿನ ನಂ.1 ಆರ್ಥಿಕ ದೇಶವಾಗಲಿ,'' ಎಂದು ಹಾರೈಸಿದರು.

ಕಾಪು ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಜಿಜೆಇಪಿಸಿ ದಕ್ಷಿಣ ಪ್ರಾಂತ್ಯ ಪ್ರಾದೇಶಿಕ ಚೇರ್‌ಮನ್ ಮಹೇಂದರ್ ತಯಾಲ್, ಜಿಜೆಇಪಿಸಿ ಕಾರ್ಯನಿರ್ವಾಹಕ ಸಭ್ಯಸಾಚಿ ರಾಯ್ ಇದ್ದರು.

ಬೆಸ್ಟ್ ಔಟ್ ಗೋಯಿಂಗ್ ಸ್ಟೂಡೆಂಟ್, ಬೆಸ್ಟ್ ಪಿಎಂ ವಿಶ್ವಕರ್ಮ ಸ್ಟೂಡೆಂಟ್, ಬೆಸ್ಟ್ ಔಟ್ ಗೋಯಿಂಗ್ ಪಿಎಂ ವಿಶ್ವಕರ್ಮ ಪ್ರಮಾಣಪತ್ರಗಳನ್ನು ಪ್ರದಾನ ಮಾಡಲಾಯಿತು.

ಪೊಲೀಸರಿಂದ ಹಣ ಬೇಡಿಕೆ ಆರೋಪ: ವಿದ್ಯಾರ್ಥಿ ಆತ್ಮಹತ್ಯೆ

ಧಾರವಾಡ: ನಗರದ ಬಿಎಸ್ಸಿ ವಿದ್ಯಾರ್ಥಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪ್ರಕರಣದಿಂದ ಕೈಬಿಡಲು ಪೊಲೀಸರು ಹಣ ಕೇಳಿರುವುದೇ ವಿದ್ಯಾರ್ಥಿ ಸಾವಿಗೆ ಕಾರಣ ಎಂದು ಪಾಲಕರು ಆರೋಪಿಸಿದ್ದಾರೆ.

ಆದಿತ್ಯ ಮ್ಯಾಗೇರಿ (20) ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿ. ''ಗಾಂಜಾ ಸೇವನೆ ಪ್ರಕರಣ ಸಂಬಂಧ ಪೊಲೀಸರು ಶನಿವಾರ ತಪಾಸಣೆ ನಡೆಸಿದ್ದರು. ನನ್ನ ಮಗ ಗಾಂಜಾ ಸೇವಿಸುತ್ತಿರಲಿಲ್ಲ, ಪರೀಕ್ಷೆಯಲ್ಲಿ ನೆಗಟಿವ್ ಬಂದಿದೆ. ಆದರೂ ಈ ಕೇಸ್‌ನಿಂದ ಮುಕ್ತಿ ಪಡೆಯಬೇಕಾದರೆ 2,000 ರೂ. ತಂದುಕೊಡುವಂತೆ ಪೊಲೀಸರು ಹೇಳಿದ್ದರು. ಹಣ ಹೊಂದಿಸಲಾಗದ್ದರಿಂದ ಮರ್ಯಾದೆಗೆ ಅಂಜಿ ಸೋಮವಾರ ತಡರಾತ್ರಿ ಮನೆಯಲ್ಲಿಯೇ ನೇಣು ಬಿಗಿದುಕೊಂಡಿದ್ದಾನೆ. ಅವನ ಸಾವಿಗೆ ಪೊಲೀಸರೇ ಕಾರಣ,'' ಎಂದು ಮೃತನ ತಾಯಿ ಕವಿತಾ ಮ್ಯಾಗೇರಿ ಆಪಾದಿಸಿದ್ದಾರೆ. ಈ ಕುರಿತಂತೆ ವಿದ್ಯಾಗಿರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> **ಗಾಂಜಾ ಸೇವನೆ ಪ್ರಕರಣದಲ್ಲಿ ಪೊಲೀಸರು ಹಣ ಕೇಳಿದರೆಂದು ಆದಿತ್ಯ ಎಂಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬ ಆರೋಪದ ದೂರು ದಾಖಲಾಗಿದೆ. ಈ ಬಗ್ಗೆ ಡಿಸಿಪಿ ಅವರಿಗೆ ವರದಿ ನೀಡಲು ಸೂಚಿಸಿದ್ದೇನೆ.**
> **- ಎನ್. ಶಶಿಕುಮಾರ** ಹು-ಧಾ ಪೊಲೀಸ್ ಆಯುಕ್ತ

IIISM
INTERNATIONAL INSTITUTE OF INDUSTRIAL SAFETY MANAGEMENT
Since 2008
(Affiliated to VTU)
Bellavi Chelur Main Road, Near MRPL Petrol Pump, TUMKUR

JOB VACANCY

Principal/HOD	M.Sc., or M.Tech with P.hD
Kannada Lecturer	MA in Kannada
English Lecturer	MA in English
Chem / Envi / Mech Lecturer	M.Sc., | M.Tech
Accountant	B.Com or M.Com
Attender	PU Pass or Fail

Send CV to careers.iiism@gmail.com | www.iiism.com
9663611714 | 9880612889

ತಾಯ್ನಾಡಿಗೆ ಮರಳಿ ಬನ್ನಿ ಭಾರತೀಯರಿಗೆ ವೆಂಬು ಕರೆ

ಪ್ರತಿಭೆ ವಿದೇಶಕ್ಕಲ್ಲ, ಭಾರತಕ್ಕೆ ಬಳಕೆಯಾಗಲಿ ಎಂದ ಉದ್ಯಮಿ

ಹೊಸದಿಲ್ಲಿ: ಭಾರತದ ಪ್ರಸಿದ್ಧ ತಂತ್ರಜ್ಞಾನ ಸಂಸ್ಥೆ 'ಜೊಹೊ' ಸಿಇಒ ಶ್ರೀಧರ್ ವೆಂಬು ಅವರು ಅಮೆರಿಕದಲ್ಲಿ ನೆಲೆಸಿರುವ ಭಾರತೀಯ ವೃತ್ತಿಪರರನ್ನು ಉದ್ದೇಶಿಸಿ ಬರೆದ ಮುಕ್ತ ಪತ್ರವೊಂದು ಈಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ಭಾರತದ ಅಭಿವೃದ್ಧಿಗೆ ಕೈಜೋಡಿಸಲು ಮತ್ತು ದೇಶದ ತಾಂತ್ರಿಕ ಸಾಮರ್ಥ್ಯವನ್ನು ಹೆಚ್ಚಿಸಲು ತಾಯ್ನಾಡಿಗೆ ಮರಳಿ ಬರುವಂತೆ ಪತ್ರದ ಮೂಲಕ ಭಾವನಾತ್ಮಕವಾಗಿ ಕರೆ ನೀಡಿದ್ದಾರೆ.

ಸುಮಾರು 37 ವರ್ಷಗಳ ಹಿಂದೆ ತಾವು ಅಲ್ಪ ಹಣ ಮತ್ತು ಉತ್ತಮ ಸಂಸ್ಕೃತಿಯೊಂದಿಗೆ ಅಮೆರಿಕಕ್ಕೆ ಹೋದ ದಿನಗಳನ್ನು ವೆಂಬು ನೆನಪಿಸಿಕೊಂಡಿದ್ದಾರೆ. ಅಮೆರಿಕ ನೀಡಿದ ಯಶಸ್ಸಿಗೆ ಕೃತಜ್ಞತೆ ಸಲ್ಲಿಸುತ್ತಲೇ, ''ಇಂದಿನ ಪರಿಸ್ಥಿತಿ ಬದಲಾಗುತ್ತಿದೆ. ರಾಜಕೀಯ ಸಂಘರ್ಷಗಳ ನಡುವೆ ಭಾರತೀಯರು ಅಸಹಾಯಕರಾಗುತ್ತಿದ್ದಾರೆ,'' ಎಂದು ಅವರು ಎಚ್ಚರಿಸಿದ್ದಾರೆ.

ಜಗತ್ತಿನಲ್ಲಿ ಭಾರತೀಯರಿಗೆ ಸಿಗುವ ನಿಜವಾದ ಗೌರವವು ನಮ್ಮ ದೇಶದ ಆರ್ಥಿಕ ಮತ್ತು ತಾಂತ್ರಿಕ ಪ್ರಗತಿಯ ಮೇಲೆ ಅವಲಂಬಿತವಾಗಿದೆ ಎಂದು ವೆಂಬು ಪ್ರತಿಪಾದಿಸಿದ್ದಾರೆ. ''ಭಾರತ ಬಡ ರಾಷ್ಟ್ರವಾಗಿಯೇ ಉಳಿದರೆ ಜಗತ್ತು ನಮ್ಮನ್ನು ಕರುಣೆ ಅಥವಾ ಕೀಳರಿಮೆಯಿಂದ ನೋಡುತ್ತದೆ. ಗೌರವ ಮತ್ತು ಭದ್ರತೆ ಎಂಬುದು ಕೇವಲ ರಾಷ್ಟ್ರದ ತಾಂತ್ರಿಕ ನೈಪುಣ್ಯತೆಯಿಂದ ಮಾತ್ರ ಬರಲು ಸಾಧ್ಯ'' ಎಂದು ಅವರು ಪತ್ರದಲ್ಲಿ ಒತ್ತಿ ಹೇಳಿದ್ದಾರೆ.

''ಭಾರತದಲ್ಲಿ ಅದ್ಭುತ ಬುದ್ಧಿವಂತಿಕೆಯ ಯುವಶಕ್ತಿಯಿದೆ, ಆದರೆ ದುರದೃಷ್ಟವಶಾತ್ ಈ ಪ್ರತಿಭೆಗಳು ಹೆಚ್ಚಾಗಿ ವಿದೇಶಗಳಿಗೆ ವಲಸೆ ಹೋಗುತ್ತಿವೆ. ಅಮೆರಿಕದಲ್ಲಿ ನೆಲೆಸಿರುವ ಭಾರತೀಯರು ಅಲ್ಲಿ ಗಳಿಸಿರುವ ತಾಂತ್ರಿಕ ನಾಯಕತ್ವ ಮತ್ತು ಅನುಭವವನ್ನು ಭಾರತದ ಯುವಜನತೆಗೆ ಮಾರ್ಗದರ್ಶನ ನೀಡಲು ಬಳಸಬೇಕು,'' ಎಂದು ಅವರು ವಿವರಿಸಿದ್ದಾರೆ. ಪತ್ರದ ಕೊನೆಯಲ್ಲಿ, ''ಭಾರತ ಮಾತೆಗೆ ನಿಮ್ಮ ಪ್ರತಿಭೆಯ ಅಗತ್ಯವಿದೆ'' ಎಂದು ಭಾವನಾತ್ಮಕವಾಗಿ ತಿಳಿಸಿದ್ದಾರೆ.

15ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಎ. ಗಂಗಾಧರಯ್ಯ
(ಮೊದಲನೇ ದರ್ಜೆ ಬಿಬಿಎಂಪಿ ಗುತ್ತಿಗೆದಾರರು)
ನೀವು, ನಮ್ಮನ್ನಗಲಿ ಇಂದಿಗೆ 15 ವರ್ಷವಾಯಿತು (29.04.2011),
ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಅಚ್ಚಳಿಯದೆ ಉಳಿದಿದೆ.
ಇಂತಿ ದುಃಖತಪ್ತರು
ಧರ್ಮಪತ್ನಿ, ಮಕ್ಕಳು, ಅಳಿಯಂದಿರು,
ಸೊಸೆಯಂದಿರು ಹಾಗೂ ಮೊಮ್ಮಕ್ಕಳು

21 ಅಲ್ಲ, ಹೊಸ ಬುಕಿಂಗ್‌ಗೆ ಇನ್ನು 25 ದಿನ ಕಾಯಬೇಕು

ಈಗಿರುವ ತಾತ್ಕಾಲಿಕ ನಿಯಮಗಳು ಮೇ 1ರ ಬಳಿಕ ಕಾಯಂ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಗೃಹ ಬಳಕೆ ಅಡುಗೆ ಅನಿಲ ಸಿಲಿಂಡರ್ ವಿತರಣೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳಲು ಕೆಲವು ನಿಬಂಧನೆಗಳನ್ನು ವಿಧಿಸಿದ್ದ ಕೇಂದ್ರ ಸರಕಾರವು, ಮೇ 1ರಿಂದ ಅವುಗಳನ್ನು ಕಾಯಂಗೊಳಿಸಲಿದೆ. ಪ್ರಮುಖವಾಗಿ, ಸಿಲಿಂಡರ್ ಬುಕಿಂಗ್ ಅಂತರದ ಅವಧಿಯನ್ನು ಸದ್ಯ ಜಾರಿಯಲ್ಲಿರುವ 21 ದಿನಗಳ ಬದಲಾಗಿ 25 ದಿನಗಳಿಗೆ ವಿಸ್ತರಿಸಲಾಗಿದೆ.

ಸಿಲಿಂಡರ್ ಬುಕಿಂಗ್ ಅಂತರವು ಗ್ರಾಮಾಂತರ ಪ್ರದೇಶದಲ್ಲಿ 45 ದಿನ ಇದ್ದು, ಅದು ಹಾಗೆಯೇ ಮುಂದುವರಿಯಲಿದೆ. ಎಲ್‌ಪಿಜಿ ಪೂರೈಕೆ ಕಂಪನಿಗಳಾದ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಇಂಡೇನ್), ಭಾರತ್ ಪೆಟ್ರೋಲಿಯಂ (ಭಾರತ್ ಗ್ಯಾಸ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ (ಎಚ್‌ಪಿ ಗ್ಯಾಸ್) ಈ ನಿಯಮಗಳನ್ನು ಪಾಲಿಸಬೇಕಿದೆ.

ಗ್ರಾಹಕರು ಇನ್ನು ಮುಂದೆ ದಾಖಲೆ ಪುಸ್ತಕ (ಗ್ಯಾಸ್ ಬುಕ್) ಅಥವಾ ರಶೀದಿ ತೋರಿಸಿ ಸಿಲಿಂಡರ್ ಪಡೆಯಲು ಸಾಧ್ಯವಿಲ್ಲ. ಸಿಲಿಂಡರ್ ಬುಕ್ ಮಾಡಿದ ಬಳಿಕ ತಮ್ಮ ನೋಂದಾಯಿತ ಮೊಬೈಲ್‌ಗೆ ಬರುವ ಒಟಿಪಿಯನ್ನು ಸಿಲಿಂಡರ್ ಡೆಲಿವರಿ ವೇಳೆ ನೀಡುವುದು ಕಡ್ಡಾಯವಾಗಿದೆ.

ಆಧಾರ್ ಆಧಾರಿತ ಇ-ಕೆವೈಸಿ: ಪ್ರಧಾನಮಂತ್ರಿ ಉಜ್ವಲ್ ಯೋಜನೆಯಡಿ ಎಲ್‌ಪಿಜಿ ಸಿಲಿಂಡರ್ ಪಡೆಯುವವರು ಕಡ್ಡಾಯವಾಗಿ ಆಧಾರ್ ಆಧಾರಿತ ಬಯೋಮೆಟ್ರಿಕ್ ದೃಢೀಕರಣವನ್ನು ಮಾಡಿರಬೇಕು. ಇನ್ನು, ಇ-ಕೆವೈಸಿ ಎಲ್ಲ ಗ್ರಾಹಕರಿಗೂ ಕಡ್ಡಾಯವಾಗಿರುತ್ತದೆ.

ಹೊಸ ಸಂಪರ್ಕ ಇಲ್ಲ: ಈಗಾಗಲೇ ತಮ್ಮ ಮನೆಯಲ್ಲಿ ಕೊಳವೆ ಮೂಲಕ ಅನಿಲ ಸಂಪರ್ಕ (ಪಿಎನ್‌ಜಿ) ಸಂಪರ್ಕ ಪಡೆದಿರುವವರು ಹೊಸದಾಗಿ ಎಲ್‌ಪಿಜಿ ಸಿಲಿಂಡರ್ ಸಂಪರ್ಕಕ್ಕಾಗಿ ಅರ್ಜಿ ಸಲ್ಲಿಸುವಂತಿಲ್ಲ, ಪಿಎನ್‌ಜಿ ವ್ಯವಸ್ಥೆ ಇದ್ದರೂ ಸಿಲಿಂಡರ್ ಬಳಸುತ್ತಿದ್ದರೆ ಪಿಎನ್‌ಜಿಗೆ ಬದಲಾಗುವುದು ಕಡ್ಡಾಯ. ಅಷ್ಟೇ ಅಲ್ಲ, ಅವರು ತಮ್ಮ ಹಳೆಯ ಎಲ್‌ಪಿಜಿ ಸಂಪರ್ಕವನ್ನು ಬೇರೆಯವರಿಗೆ ವರ್ಗಾಯಿಸುವಂತಿಲ್ಲ ಅಂದರೆ ಸಿಲಿಂಡರ್ ಅನ್ನು ಸಂಬಂಧಿಸಿದ ಏಜೆನ್ಸಿಗೆ ಸರೆಂಡರ್ ಮಾಡಬೇಕು.

ಉದ್ದೇಶವೇನು?

ಕೃತಕ ಅಭಾವ ಸೃಷ್ಟಿಸುವುದು, ಕಾಳಸಂತೆ ಮಾರಾಟ ಹಾಗೂ ಸಬ್ಸಿಡಿ ಗ್ಯಾಸ್ ಸಿಲಿಂಡರ್‌ಗಳ ಕಳ್ಳ ಮಾರಾಟ ತಡೆಯುವ ಮೂಲಕ ಅಡುಗೆ ಅನಿಲ ವಿತರಣೆಯಲ್ಲಿ ವ್ಯತ್ಯಯವಾಗದಂತೆ ನೋಡಿಕೊಳ್ಳುವುದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಗುರಿ.

ಬೆಲೆ ಏರಿಕೆ ಸಂಭವ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ 14.2 ಕೆ.ಜಿ ಸಿಲಿಂಡರ್ ಬೆಲೆ 60 ಹೆಚ್ಚಳವಾಗಿದ್ದು, ವಾಣಿಜ್ಯ ಬಳಕೆಯ 19 ಕೆ.ಜಿ ಸಿಲಿಂಡರ್ ಬೆಲೆಯಲ್ಲೂ ಏರಿಕೆಯಾಗಿತ್ತು. ಮೇ 1ರಿಂದ ಮತ್ತೆ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ.

ಕಚ್ಚಾತೈಲದ ಪೂರೈಕೆ ನಿರೀಕ್ಷಿತ ಪ್ರಮಾಣದಲ್ಲಿ ಇಲ್ಲ. ಹೀಗಾಗಿ ತೈಲ ಕಂಪನಿಗಳು ಹೆಚ್ಚುವರಿ ಎಲ್‌ಪಿಜಿಯನ್ನು ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತಿವೆ. ಜೂನ್ ಮತ್ತು ಜುಲೈ ನಡುವೆ ಅನಿಲ ಸಾಗಣೆಯ ಹಡಗುಗಳು ಭಾರತಕ್ಕೆ ಬರುವ ನಿರೀಕ್ಷೆ ಇದೆ. ಭಾರತಕ್ಕೆ ಪ್ರತಿದಿನ 80 ಸಾವಿರ ಟನ್‌ಗಳಷ್ಟು ಎಲ್‌ಪಿಜಿ ಅಗತ್ಯವಿದೆ. ದೇಶೀಯ ಉತ್ಪಾದನೆ ಪ್ರಮಾಣ ಸುಮಾರು 46,000 ಟನ್‌ಗಳಷ್ಟಿದೆ.

ಎಟಿಎಫ್ ದರ ಇಳಿಸದಿದ್ದರೆ ವಿಮಾನಯಾನವೇ ಸ್ಥಗಿತ

ಏರ್‌ಲೈನ್ಸ್‌ಗಳ ಆತಂಕ ಕೇಂದ್ರ ಸರಕಾರಕ್ಕೆ ಪತ್ರ

ಮುಂಬಯಿ: ವೈಮಾನಿಕ ಇಂಧನ ಬೆಲೆಯಲ್ಲಿನ ಗಣನೀಯ ಹೆಚ್ಚಳ ಸೇರಿದಂತೆ ಹಲವು ಕಾರಣಗಳಿಂದ ದೇಶದ ವಿಮಾನಯಾನ ವಲಯ ತೀವ್ರ ಒತ್ತಡದಲ್ಲಿದ್ದು, ಕಾರ್ಯಾಚರಣೆ ಸ್ಥಗಿತಗೊಳಿಸುವ ಸನ್ನಿವೇಶ ಎದುರಾಗಬಹುದು ಎಂದು ಪ್ರಮುಖ ನಾಗರಿಕ ವಿಮಾನಯಾನ ಕಂಪನಿಗಳು ಕಳವಳ ವ್ಯಕ್ತಪಡಿಸಿವೆ.

ಈ ಕುರಿತು ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಪತ್ರ ಬರೆದಿರುವ ಫೆಡರೇಷನ್ ಆಫ್ ಇಂಡಿಯನ್ ಏರ್‌ಲೈನ್ಸ್ (ಎಫ್‌ಐಎ), ಎಟಿಎಫ್ ದರ ಪರಿಷ್ಕರಿಸಬೇಕು ಮತ್ತು ವಿಮಾನಯಾನ ಸಂಸ್ಥೆಗಳಿಗೆ ಆರ್ಥಿಕ ಬೆಂಬಲ ನೀಡಬೇಕು ಎಂದು ಮನವಿ ಮಾಡಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ತೈಲ ಬೆಲೆಗಳು ಗಗನಕ್ಕೇರಿವೆ. ವೈಮಾನಿಕ ಕ್ಷೇತ್ರದ ಹಲವು ನಿರ್ಬಂಧಗಳು ವಿಮಾನಯಾನ ಸಂಸ್ಥೆಗಳ ಕಾರ್ಯಾಚರಣೆಯ ವೆಚ್ಚವನ್ನು ಹೆಚ್ಚಿಸಿವೆ. ಅದರಲ್ಲೂ ವಿಶೇಷವಾಗಿ ದೂರದ ಪ್ರಯಾಣದ ಮಾರ್ಗಗಳಲ್ಲಿ ಈ ಪರಿಣಾಮ ಹೆಚ್ಚಾಗಿದೆ. ವಿಮಾನಯಾನ ಸಂಸ್ಥೆಯ ಒಟ್ಟು ಕಾರ್ಯಾಚರಣೆಯ ವೆಚ್ಚದಲ್ಲಿ ಏವಿಯೇಷನ್ ಟರ್ಬೈನ್ ಫ್ಯುಯೆಲ್ (ಎಟಿಎಫ್) ಅಂದಾಜು ಶೇ. 40 ರಷ್ಟಿದೆ. ದೇಶೀಯ ಮತ್ತು ಅಂತಾರಾಷ್ಟ್ರೀಯ ಕಾರ್ಯಾಚರಣೆಗಳೆರಡಕ್ಕೂ ಏಕರೂಪದ ಇಂಧನ ಬೆಲೆ ನಿಗದಿಪಡಿಸುವ ಕಾರ್ಯವಿಧಾನ ಅಳವಡಿಸಿಕೊಳ್ಳಬೇಕು ಎಂದು ಕೋರಿದೆ.

''ಮಧ್ಯಪ್ರಾಚ್ಯ ಬಿಕ್ಕಟ್ಟು ಆರಂಭವಾಗುವುದಕ್ಕೆ ಮೊದಲು ಇದ್ದ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಅಜಗಜಾಂತರವಿದೆ. ಎಟಿಎಫ್ ಬೆಲೆ ವಿಪರೀತ ಏರಿದೆ. ಇದರೊಂದಿಗೆ ರೂಪಾಯಿ ಮೌಲ್ಯ ನಿರಂತರವಾಗಿ ಕುಸಿಯುತ್ತಿದೆ. ವಿಮಾನಗಳ ಇಂಧನಕ್ಕೆ ಶೇ. 11ರಷ್ಟು ಅಬಕಾರಿ ಸುಂಕ ಹೇರಲಾಗಿದೆ. ಇದೆಲ್ಲವೂ ವಿಮಾನಯಾನ ಕಂಪನಿಗಳನ್ನು ಸಂಕಷ್ಟಕ್ಕೆ ದೂಡಿವೆ. ಕಳೆದ ತಿಂಗಳು ಕೇಂದ್ರ ಸರಕಾರ ದೇಶೀಯ ಯಾನಕ್ಕಾಗಿ ಎಟಿಎಫ್ ಬೆಲೆ ಏರಿಕೆಯನ್ನು ಪ್ರತಿ ಲೀಟರ್‌ಗೆ 15 ರೂಪಾಯಿಗಳಿಗೆ ಸೀಮಿತಗೊಳಿಸಿತ್ತು. ಆದರೆ ಅಂತಾರಾಷ್ಟ್ರೀಯ ಯಾನ ಮಾಡುವ ವಿಮಾನಗಳಿಗೆ ತುಂಬುವ ಇಂಧನದ ಬೆಲೆ ಪ್ರತಿ ಲೀಟರ್‌ಗೆ 73 ರೂ. ಏರಿಸಲಾಗಿದೆ,'' ಎಂದು ಪತ್ರದಲ್ಲಿ ವಿವರಿಸಲಾಗಿದೆ.

ರಷ್ಯಾದಲ್ಲಿ ಯೂರಿಯಾ ತಯಾರಿಕಾ ಘಟಕ ಸ್ಥಾಪನೆ

ಹೊಸದಿಲ್ಲಿ: ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಭಾರತಕ್ಕೆ ಬೇಕಾದ ಯೂರಿಯಾ ಪೂರೈಕೆಯಲ್ಲಿ ತೀವ್ರ ವ್ಯತ್ಯಯವಾಗಿದೆ. ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಭಾರತವು ರಷ್ಯಾ ಸಹಭಾಗಿತ್ವದಲ್ಲಿ ರಸಗೊಬ್ಬರ ತಯಾರಿಕಾ ಘಟಕವನ್ನು ಸ್ಥಾಪಿಸುವ ಪ್ರಕ್ರಿಯೆಗೆ ವೇಗ ನೀಡಿದೆ. ಘಟಕವು ರಷ್ಯಾದ ಸಮಾರಾದಲ್ಲಿ ಸ್ಥಾಪನೆಗೊಳ್ಳಲಿದೆ. ಮುಂದಿನ ಎರಡು ವರ್ಷಗಳಲ್ಲಿ ಇದು ಕಾರ್ಯಾಚರಣೆಗೆ ಸಿದ್ಧವಾಗಲಿದೆ.

ಎರಡು ವರ್ಷದಲ್ಲಿ ಉತ್ಪಾದನೆಗೆ ಸಿದ್ಧ

ಘಟಕದ ಸ್ಥಾಪನೆಗೆ ಒಟ್ಟು 20 ಸಾವಿರ ಕೋಟಿ ರೂ. ಹೂಡಿಕೆ ಮಾಡಲಾಗುತ್ತದೆ. ಅಲ್ಲಿ 20 ಲಕ್ಷ ಟನ್ ಯೂರಿಯಾ ಉತ್ಪಾದನೆ ಮಾಡಲಾಗುತ್ತದೆ. ಈ ಯೋಜನೆಯಲ್ಲಿ ಭಾರತದ ಇಂಡಿಯನ್ ಪೊಟ್ಯಾಶ್ ಲಿಮಿಟೆಡ್, ಆರ್‌ಸಿಎಫ್ ಮತ್ತು ಎನ್‌ಎಫ್‌ಎಲ್ ಕಂಪನಿಗಳು ಭಾಗಿಯಾಗಿವೆ. ಪ್ರಸ್ತುತ ಭಾರತ ತನಗೆ ಅಗತ್ಯವಿರುವ ಯೂರಿಯಾದ ಶೇ. 71 ರಷ್ಟನ್ನು ಮಧ್ಯಪ್ರಾಚ್ಯ ದೇಶಗಳಿಂದ ಆಮದು ಮಾಡಿಕೊಳ್ಳುತ್ತಿದೆ. ಕಳೆದ ವರ್ಷ ಯೂರಿಯಾ ಆಮದಿಗೆ 20 ಸಾವಿರ ಕೋಟಿ ರೂ. ಖರ್ಚು ಮಾಡಲಾಗಿದೆ.

ರಷ್ಯಾದಲ್ಲಿ ಸ್ಥಾಪನೆ ಏಕೆ?
ಯೂರಿಯಾ ತಯಾರಿಕೆಯಲ್ಲಿ ನೈಸರ್ಗಿಕ ಅನಿಲ ಅತ್ಯಂತ ಪ್ರಮುಖ ಮತ್ತು ದುಬಾರಿ ಕಚ್ಚಾ ವಸ್ತುವಾಗಿದೆ. ವಿಶ್ವದಲ್ಲೇ ಅತಿ ದೊಡ್ಡ ಅನಿಲ ನಿಕ್ಷೇಪಗಳನ್ನು ಹೊಂದಿರುವ ದೇಶಗಳಲ್ಲಿ ರಷ್ಯಾ ಕೂಡ ಒಂದು. ಭಾರತದಲ್ಲಿ ಅನಿಲ ಲಭ್ಯತೆ ಸೀಮಿತ. ಹೀಗಾಗಿ ದುಬಾರಿ ಬೆಲೆಗೆ ಆಮದು ಮಾಡಿಕೊಳ್ಳಬೇಕಾಗುತ್ತದೆ. ಇದೇ ಕಾರಣಕ್ಕೆ ಅಲ್ಲಿ ಯೂರಿಯಾ ತಯಾರಿಸುವುದು ಅಗ್ಗವಾಗುತ್ತದೆ. ಇದಲ್ಲದೆ ರಷ್ಯಾ ಈಗಾಗಲೇ ಯೂರಿಯಾ ತಯಾರಿಕೆಗೆ ಸುಧಾರಿತ ತಂತ್ರಜ್ಞಾನವನ್ನು ಬಳಸುತ್ತದೆ. ಹಾಗೂ ಹೆಚ್ಚಿನ ಮೂಲಸೌಕರ್ಯವನ್ನು ಹೊಂದಿದೆ.

- **₹20,000 ಕೋಟಿ** – ರಷ್ಯಾದಲ್ಲಿನ ರಸಗೊಬ್ಬರ ತಯಾರಿಕೆ ಘಟಕಕ್ಕೆ ಹೂಡಿಕೆಯಾಗಲಿರುವ ಮೊತ್ತ
- **71%** ಇಷ್ಟು ಪ್ರಮಾಣದ ರಸಗೊಬ್ಬರವನ್ನು ಭಾರತ ಸದ್ಯ ಮಧ್ಯಪ್ರಾಚ್ಯದಿಂದ ಆಮದು ಮಾಡಿಕೊಳ್ಳುತ್ತಿದೆ

ಅನಿಲ್ ಅಂಬಾನಿಗೆ ಸೇರಿದ ₹3,034 ಕೋಟಿ ಮೌಲ್ಯದ ಆಸ್ತಿ ಜಪ್ತಿ

₹19,344 ಕೋಟಿ ಜಪ್ತಿ ಮಾಡಲಾದ ಒಟ್ಟು ಆಸ್ತಿಯ ಮೌಲ್ಯ

ಹೊಸದಿಲ್ಲಿ: ರಿಲಯನ್ಸ್ ಅನಿಲ್ ಅಂಬಾನಿ ಗ್ರೂಪ್ ಕಂಪನಿಗಳ ವಿರುದ್ಧ ನಡೆಯುತ್ತಿರುವ ಹಣ ಅಕ್ರಮ ವರ್ಗಾವಣೆ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ (ಇ.ಡಿ) 3,034 ಕೋಟಿ ರೂ.ಮೌಲ್ಯದ ಆಸ್ತಿಗಳನ್ನು ಜಪ್ತಿ ಮಾಡಿದೆ ಎಂದು ಮೂಲಗಳು ತಿಳಿಸಿವೆ. ಜಪ್ತಿ ಮಾಡಲಾದ ಆಸ್ತಿಗಳು ರಿಲಯನ್ಸ್ ಕಮ್ಯುನಿಕೇಷನ್ಸ್ (ಆರ್‌ಕಾಮ್) ಮತ್ತು ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ (ಆರ್-ಇನ್ಫ್ರಾ) ಸೇರಿವೆ ಎಂದು ಮೂಲಗಳು ಹೇಳಿವೆ.

ಜಪ್ತಿಯಾಗಿರುವ ಆಸ್ತಿಯಲ್ಲಿ ಮುಂಬಯಿಯ ಒಂದು ಫ್ಲಾಟ್, ಮಹಾರಾಷ್ಟ್ರದ ಗಿರಿಧಾಮವಾದ ಖಂಡಾಲಾದಲ್ಲಿರುವ ಫಾರ್ಮ್‌ಹೌಸ್, ಅಹಮದಾಬಾದ್‌ನ ಸಾನಂದ್‌ನಲ್ಲಿರುವ ಜಮೀನು ಮತ್ತು ಆರ್-ಇನ್‌ಫ್ರಾದಲ್ಲಿರುವ 7.71 ಕೋಟಿ ರೂ. ಮೌಲ್ಯದ ಷೇರುಗಳು ಸೇರಿವೆ. ರಿಲಯನ್ಸ್ ಅನಿಲ್ ಅಂಬಾನಿ ಗ್ರೂಪ್ ವಿರುದ್ಧದ ಪ್ರಕರಣಗಳಲ್ಲಿ ಜಪ್ತಿ ಮಾಡಲಾದ ಒಟ್ಟು ಆಸ್ತಿಯ ಮೌಲ್ಯ ಈಗ 19,344 ಕೋಟಿ ರೂ.ಗೆ ತಲುಪಿದೆ. ಬ್ಯಾಂಕ್ ವಂಚನೆ ಮತ್ತು ಹಣದ ದುರುಪಯೋಗ ಆರೋಪದ ಮೇಲೆ ಈ ಸಮೂಹದ ವಿರುದ್ಧ ಇ.ಡಿ ತನಿಖೆ ನಡೆಸುತ್ತಿದೆ.

TIMES interact
Connecting People, Connecting Needs.
ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ACADEMIC

GENERAL

ADITYA COLLEGE OF ENGINEERING AND TECHNOLOGY
Kamakshipura, Yelahanka, Bangalore
WANTED
Business Development Executive
- Qualification: MBA
- Male/ Female with 3 years & above experience in educational institution.
Transport Manager
- Qualification: Any Degree
- Must have a valid heavy vehicle driving license and relevant experience
- Age - Below 40 yrs
Female Warden
- Qualification: Any Degree
- Must have relevant experience
Interested candidates may send their resume immediately to
ao@acetedu.net 9886869000

SRI KK EDUCATION CENTRE
(Affiliated to CBSE, Aff. No.830256)
Kadabagere, Bangalore
STAFF REQUIREMENT
1. English Faculty (Secondary School)
2. Librarian
3. Physical Education Instructor(Female)
4. Hindi Faculty
Min 5 + Years Experience
Contact Us - 9886535292
Email – srikkec@gmail.com

ENGLISH Institute Requires Full/ Part time Academic Counselors/ Recieptionists & English Trainers at Vijayanagar, Ph: 9886444708.

TEACHER

KENNETH George English School, Hebbal Req Teachers for English, Computers, Music and Librarian. Ph: 7760226869 Email: kennethgeorgeschool@gmail.com

WANTED Mathematics and PE Teacher for High School. Clerk for PUC. Contact: "DVS INSTITUTION", Magadi main road, sunkadakatte. 9535305299

URGENTLY Required Experienced Pre-Primary coordinator, Primary, Middle & Higher Primary teachers of all subjects , Art & craft , Computer teacher, Dance teacher. Candiates Who are in & around North Bangalore, near Bayatarayanapura, Amruthahalli, & Jakkur. Call : 9448711695 / 9880822028

TIMES TRIBUTE PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

ST. MIRA'S HIGH SCHOOL
We invite applications for the following positions:
Kindergarten Teachers:
Primary (all subjects)
Coordinators
Librarian
Admin
Applicants experienced in similar positions will be given preference
Walkin Monday to Saturday between 9.00 am to 4.00 pm at the below address
CA-6, Dollars Colony
BTM 1st Stage, B'lore-68
Ph:- 08026786817
08026782447
hr@stmiras.org

SUNRISE SCHOOL Requires Experienced Lady Teachers for Nursery, Primary & High School for-all Subjects (P.E Male) Coffee Board Layout, Hebbal, Call: 9008981637 Email id:- svsres21@gmail.com

NUR, Primary: Maths. High School: Eng, Kan, Sci, Maths, PE, dance tchrs, clerk, HM. Intrw: 30th Apr & 4th May at 11:00am MOTHERS TOUCH School,LIC col,3rd blk Jayanagar. 6363877783/ 8217270243

ACCOUNTS

ACCOUNTANT

REQUIRED ACCOUNTANT WITH EXPERIENCE IN TALLY & GST @ Avenue road office. Please Send Resume to anupdeviah@hotmail.com

ADMINISTRATION

EXECUTIVES

30 ವರ್ಷ ಮೇಲ್ಪಟ್ಟವರು 2ನೇ ಆದಾಯ ಬಯಸುವ, ಪಾರ್ಟ್ ಟೈಮ್ನಲ್ಲಿ ಕೆಲಸ ಮಾಡುವ ವ್ಯಕ್ತಿಗಳು ಪ್ರತಿದಿನ 500ಕ್ಕೂ ಹೆಚ್ಚು ಸಂಪಾದನೆ ಮಾಡುವ ಅವಕಾಶವಿದೆ.9743309498

OFFICE ASSISTANTS

LADY experienced comp op cum office asst with min 3 yrs exp good english near Seshadripuram good salary and perks. udayhsheth@gmail.com

RECEPTIONISTS & TEL OPERATORS

HAEID @ Rajajinagar Requires Full /Part Time Experienced Front Office Executive with exposure to Accounts, Computers, Secretarial tasks for Immediate Placement. Handsome Salary. WhatsApp +919880007134.

MANAGERS

ಕೃಷಿ ಜಮೀನಿಗೆ ಮ್ಯಾನೇಜರ್ ಬೇಕು. ನಿವೃತ್ತ ಪೊಲೀಸ್ / ಸೈನ್ಯ ಅಥವಾ ಕೃಷಿ ಪದವೀಧರರು. @ ಹಿರಿಯೂರು ಹತ್ತಿರ, ಚಿತ್ರದುರ್ಗ ಜಿಲ್ಲೆ, ವೇತನ ರೂ. 20,000. ಸಂಪರ್ಕಿಸಿ : 9717728402

MARKETING, ADVERTISING & SALES

SALES

Wanted Sales Managers, Sales Executives, and Telecallers. Opportunity to earn up to 40,000 per month. Ph: 8867627879

OTHER VACANCIES

DRIVERS

ಟಾಟಾ ACE ಗೆ ಅಗತ್ಯವಿರುವ ಚಾಲಕ ಬೇಕಾಗಿದ್ದಾರೆ, ಪೀಣ್ಯ ಬೆಂಗಳೂರು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 9448684912

GENERAL

ನೇರ ಆಯ್ಕೆ ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ 100% ಕೆಲಸ ಯುವಕ ಯುವತಿಯರು ಬೇಕಾಗಿದ್ದಾರೆ. 20,000/25,000, 7ನೇ, 10ನೇ, ಎನಿಡಿಗ್ರಿ ಸಂ: 7090177661.

ಹೆಲ್ಪರ್ ಬೇಕಾಗಿದ್ದಾರೆ
ಬೆಂಗಳೂರಿನ ಹತ್ತಿರ ಹೊಸೂರು ರಸ್ತೆಯಲ್ಲಿರುವ ಆಶ್ರಮಕ್ಕೆ ಪ್ಲಂಬಿಂಗ್ ಮತ್ತು ಎಲೆಕ್ಟ್ರಿಕಲ್ ಕೆಲಸಗಳು ಗೊತ್ತಿರಬೇಕು. ಸೂಕ್ತ ಸಂಬಳ ನೀಡಲಾಗುತ್ತದೆ. +91 98808 55005

ಕೆಲಸ ಖಾಲಿ ಇದೆ: ಕರ್ನಾಟಕದಾದ್ಯಂತ ಎಂಎನ್‌ಸಿ ಕಂಪನಿಗಳಾದ ಟಿವಿಎಸ್, ಬ್ರಿಟಾನಿಯಾ ಡೈರಿಗಳಿಗೆ ಹಾಗೂ ಆಫೀಸ್‌ಗಳಿಗೆ 7ನೇ, 10ನೇ, 12ನೇ ತರಗತಿ, ಐಟಿಐ, ಎನಿ ಡಿಗ್ರಿಯವರೆಗೆ ಬಂದ ದಿನವೇ ನೇರ ಆಯ್ಕೆ (ಮಾರ್ಕೆಟಿಂಗ್ ಅಲ್ಲ). ವಸತಿಯೂಟವಿರುತ್ತದೆ. ಸಂಬಳ: ರೂ. 15,000 - 46,000/- ಸಂಪರ್ಕಿಸಿ: 77603 35029

ಜಾಬ್! ಜಾಬ್!! ಜಾಬ್!!! ಹೌಸ್‌ಕೀಪಿಂಗ್ ಸಿಬ್ಬಂದಿಗಳು ಮತ್ತು ಸೂಪರ್ವೈಸರ್ ಪ್ರಸಿದ್ಧ ಆಸ್ಪತ್ರೆಯಲ್ಲಿ ತುರ್ತಾಗಿ ಅಗತ್ಯವಿದೆ. ಬೆಂಗಳೂರು ಕಲ್ಯಾಣ ನಗರದಲ್ಲಿ, ಸಂಬಳ: ಸಿಬ್ಬಂದಿ ರೂ. 19,300/-, ಸೂಪರ್ವೈಸರ್ ರೂ. 23,000/-, ವಯಸ್ಸು: 18 ರಿಂದ 39 ವರ್ಷಗಳು ಕರೆ ಮಾಡಿ: 9250073007 / 9945779607

ಚಿತ್ರದುರ್ಗ ಜಿಲ್ಲೆ , ಹಿರಿಯೂರು ಸಮೀಪದ ಕೃಷಿ ಭೂಮಿಗೆ ನೋಡಿಕೊಳ್ಳಲು ಕುಟುಂಬ ಬೇಕು. ವಾಸದ ವ್ಯವಸ್ಥೆ ಪೂರೈಸಲಾಗುತ್ತದೆ. ತಿಂಗಳಿಗೆ ರೂ. 20000/- ನೀಡಲಾಗುತ್ತದೆ. ಸಂ : 9717728402

MULTIPLE VACANCIES

WANTED: Manager, Field Officers for Hoskote, Doddaballapur- Bidadi Areas, Security Officer/ Supervisor/ Guards in & around Bangalore for Shashi Detective Services Pvt. Ltd. Rajajinagar, Bangalore-10. Ph: 23133633/ 23134876/ 98804 95755 contact@shashisecurity.com

FROM B'lore South. Wanted Immdtly communication skilled Lady Receptionist, Sales Manager, Marketing Executives, Delivery Boys. Very Good Salary. Pl Call "CITI GROUP": 99000-54468

WANTED: ITI/ Diploma Holders Fitter, Turner, Painter, Plumber, Welders, For S K Resource Solutions, Tumkur Ph: 7795415960, 9611158327, 9880495755 / admin@sksolutions.in

WANTED URGENTLY ALUMINIUM FABRICATOR FITTER & HELPER. Required for BANGALORE. Contact : 93421 29815

RETIRED PERSONS

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

JNANASAROVARA INTERNATIONAL RESIDENTIAL SCHOOL MYSORE
WANTED TEACHERS

Physics, Computer Science, English, Maths, Sanskrit Teachers - Grade VI to XII	PG/B.Ed / M.Ed (To tutor ICSE / ISC / IGCSE)
KG & Primary Teachers	NTT/Montessori Training / D Ed
Librarian	B.Lib / M.Lib (Digital Library exposure preferred)
Physical Education Teachers (Male & Female)	B.P.Ed / M.P.Ed Swimming and teaching theory preferred
Male Warden & System Administrator	With relevant experience & Qualification

Residential school experience preferred, 3-5 years experience & fluent English required, Food & accommodation provided for resident staff
Mail your resume immediately to: career@jirsm.com
Bannur Road, Mysore - 570028
9880863003 / 93432 99998

SECURITY

WANTED
SECURITY GUARD
Location : Bangalore
Salary: 22000 to 25000
Benefits: PF+ESIC
Food / Accommodation / Facility
Qual : 10th PASS / FAIL
DUTY HOURS : 8 Hours & 12 Hours Height: 5.7 Ft & Above Documents: Pan Card E-aadhar Card. Call: 8660754775, 9880876870

ಬೇಕಾಗಿದ್ದಾರೆ: ಸೆಕ್ಯೂರಿಟಿ ಗಾರ್ಡ್ ಸಂಬಳ 11.500, ಸೆಕ್ಯೂರಿಟಿ ಸೂಪರ್‌ವೈಸರ್ ಸಂಬಳ 13000, ಫೀಲ್ಡ್ ಆಫೀಸರ್, ರೂಂ ಊಟ ಉಚಿತ. ವಯಸ್ಸು 25 ರಿಂದ 55. ಬೆತ್ತನಗೆರೆ, ಕೆಂಚನಪುರ, ನೆಲಮಂಗಲ ಕೆಂಗೇರಿ. ಸಂ: 73960 16024/ 73968 86025

WORK FROM HOME

ವರ್ಕ್ ಫ್ರಮ್ ಹೋಮ್ &ಆಫೀಸ್ ವರ್ಕ್ & ಕಂಪನಿ ವರ್ಕ್ (ಫುಲ್ ಟೈಮ್ & ಪಾರ್ಟ್ ಟೈಮ್) ಅಲ್ಲಿ ಉದ್ಯೋಗವಕಾಶ ಕೂಡಲೇ Call 97393 25410, 87469 84802

ಪ್ರವಾಸ TRAVEL

PACKAGE TOURS

5.6.2026 ಜಾರ್ಖಂಡ್ ಕಾಶಿ ಅಯೋಧ್ಯ ಪ್ರಯಾಗ್ 'ರಾಜ್', ನೈಮಿಷಾರಣ್ಯ 7 ದಿನ. 12.6.26 ಚಾರ್ಧಾಮ್ 13 ದಿನ. 2.7.26 ಅಮರನಾಥ 11 ದಿನ. ನಂದಿನಿ ಟೂರಿಸ್ಟ್. 9916574089

TOURS & TRAVELS

13 ದಿನಗಳ ಚಾರ್ ಧಾಮ್ ಪ್ರವಾಸ 26/5/26, 9 ದಿನ ನೇಪಾಳ ಪ್ರವಾಸ 21/5/26, 9 ದಿನಗಳ ಕುಲ್ಲು ಮನಾಲಿ ಪ್ರವಾಸ 14/5/26, 7 ದಿನ ಭೂತನ್ ಪ್ರವಾಸ 08/5/26, 4 ದಿನಗಳ ಕಾಶಿ ಪ್ರವಾಸ 4/6/26, ಸುವರ್ಣ ಯಾತ್ರಾ 94808 43945 / 90083 81022

ನಿಸರ್ಗ ಹಾಲಿಡೇಸ್, ರಾಜಾಜಿನಗರ, ಬೆಂಗಳೂರು, ವಿಮಾನ ಪ್ರವಾಸ ಪ್ಯಾಕೇಜ್ 6 ದಿನಗಳು ಸಿಂಗಾಪುರ, ಮಲೇಷ್ಯಾ 21–5–26, 4 ಸೀಟುಗಳು ಉಳಿದಿವೆ. ಹೆಚ್ಚಿನ ವಿವರಗಳಿಗಾಗಿ ಸಂ: 9110449861, 9880241669

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

27/6/2026 ರಿಂದ ನೇಪಾಳ ಮುಕ್ತಿನಾಥ್ ಕಟ್ಮಾಂಡು ಅಯೋಧ್ಯೆ ಕಾಶಿ ಪ್ರಯಾಗ್ ರಾಜ್ ವಿಮಾನದಲ್ಲಿ ಎಲ್ಲಾ ಸೇರಿ ರೂ 55000/– ಸಂಪರ್ಕಿಸಿ ಶ್ರೀ ರಾಮ್ ಟೂರ್ಸ್ 9606600383

ಸೇವೆಗಳು SERVICES

REPAIRS/ WATERPROOFING

WATER PROOFING
HERE IS THE SOLUTION FOR LEAKAGE ... LEAKAGE ...
OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

personal

CHANGE OF NAME

I, Nariboina Prasanna Kumar, S/o Nariboina Surya Narayana, R/o 2/B, Marri Chettu Veedi, Kamayyapalem Gramam, Jeelugumilli Mandalam, Kamayyapalem PO, West Godavari, AP–534456, have changed my name to Nariboina Prashanth Kumar and shall hereafter be known as Nariboina Prashanth Kumar.

I, LALITHA K S, residing at No.014, Bindu Amulya apartments, muddinapalya main road, anjananagar, Bangalore - 560091, have changed my name to LALITHA SHESHADRI KASHYAP, vide affidavit dated 27-04-2026 sworn before notary H.R Karunakara, Bengaluru. Henceforth I shall be called as LALITHA SHESHADRI KASHYAP only.

I, Gowthami Karthikeyan W/o Karthikeyan Mahamani R/o No C-2902, zenith Residences, 29th Floor, karle Town, center Kempapura Main Road, nagavara, Bengaluru -560045. Have Changed My Name to Gowthami Rajasekaran for All Purposes.

I, KOKILA KARTHIK (KOKILA K) W/o Ram Kumar N, Residing at No 45 Shiva Parvathi Nilaya, Kithaganur Main Road Near Birla Open Minds School, Suraksha Nest Layout, Margondanahalli, K R Puram,Bangalore-560036 have changed my name to KOKILA RAMKUMAR (KOKILA R) vide affidavit dated:27/04/2026 Before Notary K.V.Mani Bangalore.

Chrysalis High GUNJUR 14 YEARS
WE ARE HIRING!
JOIN OUR DYNAMIC TEAM OF EDUCATORS
We are seeking qualified, passionate, and committed teachers for the following positions:
Urgent Requirement: Walk in with updated resume to Chrysalis High, Gunjur.
Pre-Primary Teachers | Primary: English, Kannada, Social Studies, Mathematics, Science | Middle School: Science | Secondary: Mathematics
Senior Secondary: English, Accountancy, Biology | Lab Assistant
APPLY
Graduate/Postgraduate with B.Ed (for Academic post)
Proficiency in English and relevant experience is required.
hr.gunjur@chrysalishigh.com
63669 38121/ 90350 75001

I, Hitherto Known As Pragnya H Dinesh Alias Isla Harur D/o Dinesh Kumar Harur Sampath Residing at No 567 Chowdeshwari Temple Street Varthur, Bangalore South Karnataka- 560087, have changed my name and shall Hereafter be Known as Isla Harur.

I, Mr. Rajpara Dhruv Manishkumar S/o Rajpara Manishkumar, residing at No.705, Renaissance Temple Bells, Opp. Iskon Temple, WOC Road, Yeshwanthpura, Bengluru - 560022, do hereby solemnly declare that Dhruv Rajpara & Rajpara Dhruv Manishkumar both the names are one and the same. I further declare that I have changed my name from Dhruv Rajpara to Rajpara Dhruv Manishkumar vide Affidavit dated 21.04.2026, sworn before Notary B S Geetha, Bengaluru.

I, Avani Jhanwar, D/o Adesh Jhanwar, R/o B708, 7th Floor, Ambience Diva, Sarjapur Road, Bellandur, Bengaluru - 560103, Karnataka do hereby declare that I have changed my name from Avani Adesh Jhanwar to Avani Jhanwar and henceforth I shall be known as Avani Jhanwar in all purpose, vide affidavit no. IN-KA39698930506375Y sworn before the Notary Public at Bengaluru on 22 April 2026, Avani Jhanwar and Avani Adesh Jhanwar both are same and one identical person.

I, Venkatesh patil residing at H. No. 1421, HAL 3rd stage, Kodihalli Bangalore-560008. Have changed my name from Venkatesh to Venkatesh Patil vide affidavit Sworn before Notary Srinivas Reddy dated on 27-04-2026

I, Maneesh Vaswani R/o 463, 9th main, HAL 3rd stage, new thippasandra, Bengaluru 560075 have changed my name to Maneesh Suresh Vaswani. I shall be called by this name for all purposes

I, Tamilselvi Doraisamy R/o No.1/311, Near Indian Bank, Konanur, Pochampalli Tq, Krishnagiri 635206 have changed my name to Tamilselvi Ganesan. I shall be called by this name for all purposes

I, Amyata A Raikar, W/o Vishwanath D Vernekar, R/at No. 31/208, 2nd Main, 2nd Cross, 14th Block, Nagarbhavi 2nd Stage, Bangalore- 560072, have changed my name to Amyata Vishwanath Vernekar, vide affidavit dt: 25.04.2026 Notary Devaraja E, Bangalore.

I, R Archana Shet, D/o R Ramesh Shet, residing at No. 744, 10th Cross, 16th Main Road, Srinivasa Nagar 2nd Phase, Banashankari, B'lore South, Bengaluru - 560050, I further declare that I have changed my son name from B N Samarth to Sudarshan Archana Shet vide Affidavit dated 23.04.2026, sworn before Notary S.N. Madhu, Bengaluru.

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

14851184K HAV Sandip Kumar ASC centre south my mother name service records Bimla Dave to Bimla Devi, Dt: 28.04.2026, for all purpose.

I,PARAMESHWARI Bhat D/o Manjunath Bhat R/o #110, Ground floor, Havyaka Nagar,2nd Stage, Chikkabettahalli, Vidyaranyapura, B'lore - 560 097 declare my father names 1)Manjanatha in SSLC(2)Manjunath Bhat in Aadhar and all records are one and the same for all purposes declared before Notary.

I, Rizwan Khan Saleem S/o Kannadasan R/o No 13/1, 3rd Floor, 8th Cross, Near Ayyappa Temple, Sudhamanagar, Bengaluru-560027.Have Changed my name to Arun Kumar Kannadasan for All Purposes.

I Maru Shailaja W/O, Yalla Bheem Reddy R/o # 82,5th Cross,14th Main Road,aicoboo Nagar, Btm Layout 1st Stage,bangalore-560068 have changed my name to Yalla Shailaja.

I, C Bangaru Srinivasan R/o Flat # 119, Metropolis Gurukrupa Apt, John Avenue Pvt Rd, Singasandra, Bangalore- 560068. have changed my minor son name from Pranav B to B.Pranav

LOST & FOUND

LOST Marksheet I, Arnica Saikia, have lost my 10th Semester Mark Sheet for Master of Science, Year 2008, issued by Assam University, Silchar. Registration Number: 24400141. If found, please contact me at 9538745045.

OBITUARY

IN MEMORIAM

18th Year Remembrance

Smt. R. PILLAGURAMMA
(W/o. Late Sri A. S. Yellappa Reddy)
Born : 01-04-1942
Expired: 29.04.2008
You will always live in our hearts and Memories, Guiding and inspiring us at all times.
FAMILY MEMBERS

110 ವರ್ಷಗಳಲ್ಲಿ ಮಹಾ ದಾಖಲೆ | 507 ಕೋಟಿ ರೂ. ಲಾಭ ಕಂಡ ಸರಕಾರಿ ಉದ್ಯಮ

ಕೆಎಸ್‌ಡಿಎಲ್: ₹2,016 ಕೋಟಿ ವಹಿವಾಟು

■ **ವಿಕ ಸುದ್ದಿಲೋಕ** ಬೆಂಗಳೂರು

ಸರಕಾರಿ ಸ್ವಾಮ್ಯದ ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳ ನಿಯಮಿತವು (ಕೆಎಸ್‌ಡಿಎಲ್) 2025-26ನೇ ಹಣಕಾಸು ವರ್ಷದಲ್ಲಿ ಇದೇ ಮೊದಲ ಬಾರಿಗೆ 2,016 ಕೋಟಿ ರೂ. ವಹಿವಾಟು ನಡೆಸಿದ್ದು, 507 ಕೋಟಿ ರೂ. ಲಾಭ ಗಳಿಸಿದೆ. ಇದು ಸಾರ್ವಜನಿಕ ಉದ್ದಿಮೆಗಳ ಸಾಧನೆಯಲ್ಲಿ ಕಿರೀಟಪ್ರಾಯವಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ನಗರದಲ್ಲಿ ಮಂಗಳವಾರ ಏರ್ಪಡಿಸಿದ್ದ ಮೈಸೂರು ಸ್ಯಾಂಡಲ್‌ನ ಸಾಧನೆಯ ಶಿಖರ ಕಾರ್ಯಕ್ರಮದಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಸನ್ಮಾನಿಸಿ ಮಾತನಾಡಿದರು. ''ಸಂಸ್ಥೆಯು ಮೊದಲ ಬಾರಿಗೆ ಒಂದು ಸಾವಿರ ಕೋಟಿ ರೂ. ವಹಿವಾಟು ತಲುಪಲು 105 ವರ್ಷ ತೆಗೆದುಕೊಂಡಿತ್ತು. ಆದರೆ, ಅಲ್ಲಿಂದ 2 ಸಾವಿರ ಕೋಟಿ ರೂ. ಮಟ್ಟವನ್ನು ಕೇವಲ 4 ವರ್ಷಗಳಲ್ಲಿ ತಲುಪಿದೆ. 2022-23ರಲ್ಲಿ 1,375 ಕೋಟಿ ರೂ. ವಹಿವಾಟು ನಡೆಸಿದ್ದ ಸಂಸ್ಥೆಯು, ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಕಳೆದ ಮೂರು ವರ್ಷಗಳಲ್ಲಿ 2,016 ಕೋಟಿ ರೂ. ತಲುಪಿದೆ. ಅಲ್ಪಾವಧಿಯಲ್ಲಿ ವಹಿವಾಟು 641 ಕೋಟಿ ರೂ. ಹೆಚ್ಚಳ ಕಂಡಿದೆ,'' ಎಂದರು.

''ಮೊದಲು ಸಂಸ್ಥೆಯು 34 ಉತ್ಪನ್ನಗಳನ್ನು ತಯಾರಿಸುತ್ತಿತ್ತು. 3 ವರ್ಷಗಳಲ್ಲಿ ನಾವು 57 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದ್ದೇವೆ. ಈಗ ಒಟ್ಟು 94 ಉತ್ಪನ್ನಗಳಿವೆ. ಹೊಸ ನೇಮಕಾತಿ, ಯಂತ್ರೋಪಕರಣಗಳ ಖರೀದಿ ಇಲ್ಲದೆ ಇದನ್ನೆಲ್ಲ ಸಾಧಿಸಲಾಗಿದೆ. ಸಂಸ್ಥೆಯ ಉತ್ಪಾದನಾ ಸಾಮರ್ಥ್ಯ 26 ಸಾವಿರ ಮೆಟ್ರಿಕ್ ಟನ್ ಇದ್ದದ್ದು ಪರಿಣಾಮಕಾರಿ ಕಾರ್ಯತಂತ್ರದ ಮೂಲಕ 2025-26ರಲ್ಲಿ 47 ಸಾವಿರ ಮೆಟ್ರಿಕ್ ಟನ್ ಉತ್ಪಾದನೆ ಆಗಿದೆ. 507 ಕೋಟಿ ರೂ. ಲಾಭದಲ್ಲಿ ಸರಕಾರಕ್ಕೆ 157 ಕೋಟಿ ರೂ. ಲಾಭಾಂಶ (ಡಿವಿಡೆಂಡ್) ಮತ್ತು ಮುಖ್ಯಮಂತ್ರಿ ಪರಿಹಾರ ನಿಧಿಗೆ 5 ಕೋಟಿ ರೂ. ಹಸ್ತಾಂತರಿಸಲಾಗುವುದು,'' ಎಂದರು.

''ನಮ್ಮ ಸರಕಾರ ಅಧಿಕಾರಕ್ಕೆ ಬರುವುದಕ್ಕೂ ಮುನ್ನ ಆಧುನಿಕ ವ್ಯಾಪಾರ ಮತ್ತು ಇ-ಕಾಮರ್ಸ್ ವಹಿವಾಟು ಇರಲಿಲ್ಲ, ನಂತರ ಈ ನಿಟ್ಟಿನಲ್ಲಿ ಪ್ರಯತ್ನ ಮಾಡಿದ್ದಕ್ಕೆ 2025-26ನೇ ಸಾಲಿನಲ್ಲಿ ಆಧುನಿಕ ವ್ಯಾಪಾರ ವಹಿವಾಟಿನಲ್ಲಿ 420 ಕೋಟಿ ರೂ. ಮತ್ತು ಇ-ಕಾಮರ್ಸ್ ವಹಿವಾಟಿನಲ್ಲಿ 120 ಕೋಟಿ ರೂ. ದಾಖಲಿಸಿದೆ. ಒಟ್ಟಾರೆ ಸಂಸ್ಥೆಯ ವಹಿವಾಟನ್ನು 2028ರ ಹೊತ್ತಿಗೆ 3 ಸಾವಿರ ಕೋಟಿ ರೂ. ಮತ್ತು 2030ರ ಹೊತ್ತಿಗೆ 5 ಸಾವಿರ ಕೋಟಿ ರೂ.ಗಳಿಗೆ ಕೊಂಡೊಯ್ಯುವ ಗುರಿ ಇದೆ. ಇದಕ್ಕೆ ಪೂರಕವಾಗಿ ವಿಜಯಪುರದಲ್ಲಿ 50 ಎಕರೆಯಲ್ಲಿ ನೂತನ ಉತ್ಪಾದನಾ ಘಟಕ ಆರಂಭವಾಗಲಿದ್ದು, ಇದಕ್ಕೆ 229 ಕೋಟಿ ರೂ. ಮಂಜೂರು ಮಾಡಲಾಗಿದೆ,'' ಎಂದು ತಿಳಿಸಿದರು.

ರೈತರಿಗೆ ಉತ್ತೇಜನ: ''ಮೈಸೂರು ಸ್ಯಾಂಡಲ್ ಸೋಪ್ ತಯಾರಿಕೆಗೆ ಗಂಧದ ಎಣ್ಣೆಯೇ ಮೂಲವಸ್ತುವಾಗಿದೆ. ಇದರ ಸುಗಮ ಪೂರೈಕೆಗೆ ಸಂಸ್ಥೆಯು ರೈತರೊಂದಿಗೆ ಕೈಜೋಡಿಸಿ 'ಗ್ರೋ ಮೋರ್ ಸ್ಯಾಂಡಲ್' ಕಾರ್ಯಕ್ರಮ ರೂಪಿಸಿದೆ. ಇದರಡಿ 10 ವರ್ಷಗಳಲ್ಲಿ 10 ಸಾವಿರ ಎಕರೆ ಗಂಧದ ನೆಡುತೋಪು ಬೆಳೆಸಲಾಗುವುದು. ಇದಕ್ಕಾಗಿ ರೈತರಿಗೆ ಪ್ರತಿ ಗಂಧದ ಗಿಡಕ್ಕೆ 3 ವರ್ಷಗಳಿಗೆ 500 ರೂ. ಪ್ರೋತ್ಸಾಹಧನ ನೀಡಲಾಗುವುದು. ಜತೆಗೆ ಬೆಂಗಳೂರಿನ ಜಿಕೆವಿಕೆ ಮತ್ತು ವಿಜಯಪುರದ ಕೃಷಿ ವಿದ್ಯಾಲಯಗಳ ಸಹಯೋಗದಲ್ಲಿ ಶ್ರೀಗಂಧದ ಅಧ್ಯಯನ ಪೀಠ ತೆರೆಯಲಾಗುವುದು,'' ಎಂದು ಸಚಿವ ಪಾಟೀಲ್ ಮಾಹಿತಿ ನೀಡಿದರು.

''ಆಸ್ಟ್ರೇಲಿಯ ಸೇರಿದಂತೆ ದೇಶ ವಿದೇಶಕ್ಕೆ ಹೋಗಿ ಸಾಬೂನು ಮಾರಾಟ ವಿಸ್ತರಣೆಗೆ ಪ್ರಯತ್ನ ಮಾಡಿದ್ದೇವೆ. ಆಧುನಿಕ ಮಾರಾಟ ವ್ಯವಸ್ಥೆ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಿದ್ದು ಇವತ್ತಿನ ಸಾಧನೆಗೆ ಕಾರಣವಾಯಿತು. ಮುಂದಿನ ದಿನಗಳಲ್ಲಿ ಯುನೈಟೆಡ್ ಅರಬ್ ಎಮಿರೇಟ್ಸ್ ದೇಶಗಳಲ್ಲಿಯೂ ಮಾರುಕಟ್ಟೆ ವಿಸ್ತರಿಸುವ ಯೋಜನೆ ರೂಪಿಸುತ್ತಿದ್ದೇವೆ. ಸೋಪು ಮತ್ತವುಗಳ, ಕಾಸ್ಮೆಟಿಕ್, ಸುಗಂಧ ದ್ರವ್ಯ ವಿಭಾಗದಲ್ಲೂ ಉತ್ಪನ್ನಗಳನ್ನು ಮಾರುಕಟ್ಟೆ ವಿಸ್ತರಿಸುತ್ತೇವೆ,'' ಎಂದು ಸಂಸ್ಥೆ ಅಧ್ಯಕ್ಷ ಸಿ.ಎಸ್.ಅಪ್ಪಾಜಿ ನಾಡಗೌಡ ಹೇಳಿದರು.

ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಕೆ.ಎಂ ಪ್ರಶಾಂತ್ ಮಾತನಾಡಿ, ''ಸಂಸ್ಥೆಯ ನೌಕರರಿಗೆ 4.83 ಕೋಟಿ ರೂ. ಗಳನ್ನು ವೇತನ ಒಪ್ಪಂದದ ಮೂಲಕ ನೀಡಲಾಗಿದೆ. 20 ಕೋಟಿ ರೂ. ಕ್ಯಾಂಪಸ್ ಸಂರಕ್ಷಣೆಗೆ ವಿನಿಯೋಗಿಸಲಾಗಿದೆ,'' ಎಂದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಸಂಸ್ಥೆಯ ಸಿಬ್ಬಂದಿ ಪಾಲ್ಗೊಂಡರು.



ಮೈಸೂರು ಸ್ಯಾಂಡಲ್‌ನ ಸಾಧನೆಯ ಶಿಖರ ಕಾರ್ಯಕ್ರಮದಲ್ಲಿ ಸಿಬ್ಬಂದಿ ಮತ್ತು ಅಧಿಕಾರಿಗಳನ್ನು ಸನ್ಮಾನಿಸಲಾಯಿತು. ಸಚಿವ ಎಂ.ಬಿ.ಪಾಟೀಲ, ಸಂಸ್ಥೆ ಅಧ್ಯಕ್ಷ ಸಿ.ಎಸ್.ಅಪ್ಪಾಜಿ ನಾಡಗೌಡ ಹಾಗೂ ವ್ಯವಸ್ಥಾಪಕ ನಿರ್ದೇಶಕ ಡಾ.ಪಿ.ಕೆ.ಎಂ ಪ್ರಶಾಂತ್ ಇದ್ದರು.

ಬೆಂಗಳೂರು ದಕ್ಷಿಣ ಜಿಲ್ಲೆ ವಿಕ ಸೂಪರ್ ಸ್ಟಾರ್ ರೈತರು

ಬೆಂಗಳೂರು ದಕ್ಷಿಣ ಜಿಲ್ಲೆ ರಾಮನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಕೃಷಿ ಸಾಧಕರಾದ ರಂಜನಿ ಎಸ್.ಎಂ. (ಕನಕಪುರ), ಶಿವಲಿಂಗಯ್ಯ (ರಾಮನಗರ), ಶ್ರೀನಿವಾಸ್ ಎಸ್.ಟಿ. (ಮಾಗಡಿ), ಬಿ.ಕೆ.ಎಚ್. ಅಂಜನಮೂರ್ತಿ (ಚನ್ನಪಟ್ಟಣ), ರಮೇಶ್ (ಹಾರೋಹಳ್ಳಿ) ಹಾಗೂ ಎಂ.ಎನ್.ಸುರೇಶ್ (ಚನ್ನಪಟ್ಟಣ) ಅವರಿಗೆ ವಿಕ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಪ್ರದಾನ ಮಾಡಲಾಯಿತು. ರಾಮನಗರ ನಗರಸಭೆಯ ಅಧ್ಯಕ್ಷ ಕೆ.ಶೇಷಾದ್ರಿ (ಶಶಿ), ಬೆಂಗಳೂರು ದಕ್ಷಿಣ ಜಿಲ್ಲೆಯ ಕೃಷಿ ಇಲಾಖೆಯ ಜಂಟಿ ನಿರ್ದೇಶಕಿ ಅಂಬಿಕಾ ಎಸ್., ತೋಟಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಡಾ.ಮಂಜುನಾಥ್, ರೇಷ್ಮೆ ಇಲಾಖೆಯ ಉಪನಿರ್ದೇಶಕ ಚಂದ್ರಯ್ಯ ಹಾಗೂ ಮಾಗಡಿಯ ಕೃಷಿ ವಿಜ್ಞಾನ ಕೇಂದ್ರದ ಗೃಹ ವಿಜ್ಞಾನಿ ಡಾ.ಅನಿತಾ ಅವರು ಉಪಸ್ಥಿತರಿದ್ದರು.

ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ವಿನಯ್ ಕುಲಕರ್ಣಿಗಿಲ್ಲ ತಾತ್ಕಾಲಿಕ ರಿಲೀಫ್

ಸಿಬಿಐಗೆ ಆಕ್ಷೇಪಣೆ ಸಲ್ಲಿಸಲು ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶ್‌ಗೌಡ ಗೌಡರ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಹೈಕೋರ್ಟ್‌ನಲ್ಲಿ ಸದ್ಯಕ್ಕೆ ತಾತ್ಕಾಲಿಕ ರಿಲೀಫ್ ಸಿಕ್ಕಿಲ್ಲ.

ಅಪರಾಧಿಗಳಾದ ವಿನಯ್ ಕುಲಕರ್ಣಿ ಮತ್ತು ಚಂದ್ರಶೇಖರ್ ಇಂಡಿ ಅಲಿಯಾಸ್ ಚಂದು ಮಾಮ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಗಳ ಕುರಿತು ನ್ಯಾಯಮೂರ್ತಿಗಳಾದ ಮೊಹಮ್ಮದ್ ನವಾಜ್ ಮತ್ತು ಟಿ. ವೆಂಕಟೇಶ್ ನಾಯಕ್ ಅವರಿದ್ದ ವಿಭಾಗೀಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ಕೆಲಕಾಲ ವಾದ ಆಲಿಸಿದ ಬಳಿಕ ನ್ಯಾಯಾಲಯ, ಕ್ರಿಮಿನಲ್ ಮೇಲ್ಮನವಿಗಳ ಸಂಬಂಧ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ)ನೋಟಿಸ್ ಜಾರಿಗೊಳಿಸಿ ಆಕ್ಷೇಪಣೆಗಳನ್ನು ಸಲ್ಲಿಸಲು ಸೂಚನೆ ನೀಡಿ ವಿಚಾರಣೆ ಮುಂದೂಡಿತು. ಜತೆಗೆ, ಮೇಲ್ಮನವಿಯನ್ನು ರಜಾ ಕಾಲದ ನ್ಯಾಯಪೀಠದ ಮುಂದೆ ಮಂಡಿಸಲು ಅವಕಾಶ ನೀಡಿತು.

ವಿನಯ್ ಕುಲಕರ್ಣಿ ಪರ ವಾದಿಸಿದ ಹಿರಿಯ ವಕೀಲ ಸಿ.ವಿ. ನಾಗೇಶ್, ''ಯಾವುದೇ ಸಾಕ್ಷಿ ಇಲ್ಲದಿದ್ದರೂ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಏಳು ಪ್ರತ್ಯಕ್ಷದರ್ಶಿಗಳು, ಇತರೆಲ್ಲಾ ಪ್ರಾಸಿಕ್ಯೂಷನ್ ಸಾಕ್ಷಿಗಳು ಪ್ರತಿಕೂಲವಾಗಿವೆ. ಹೀಗಾಗಿ, ಮೇಲ್ಮನವಿ ವಿಚಾರಣೆಗೆ ಪರಿಗಣಿಸಿ ದಾಖಲೆ ಸಲ್ಲಿಸಲು ನಿರ್ದೇಶಿಸಬೇಕು,'' ಎಂದು ಕೋರಿದರು.

ಮತ್ತೊಬ್ಬ ಅಪರಾಧಿ ಚಂದ್ರಶೇಖರ್ ಇಂಡಿ ಪರ ಹಾಜರಾದ ಹಿರಿಯ ನ್ಯಾಯವಾದಿ ಎಂ.ನಾಗಮುತ್ತು, ''ಪಿತೂರಿ ಆರೋಪಕ್ಕೆ ಜೀವಾವಧಿ ಶಿಕ್ಷೆ ವಿಧಿಸಲಾಗಿದೆ. ಶಿಕ್ಷೆ ಅಮಾನತು ಮಾಡಬೇಕು. 16ನೇ ಆರೋಪಿ ವಿರುದ್ಧ ಯಾವುದೇ ಸಾಕ್ಷಿಗಳಿಲ್ಲ, ಅಪ್ರೂವರ್ ಆಗಿದ್ದ ವ್ಯಕ್ತಿ ಪ್ರತಿಕೂಲ ಸಾಕ್ಷಿಯಾಗಿ ಬದಲಾಗಿದ್ದಾರೆ,'' ಎಂದರು.

ಆಗ ನ್ಯಾಯಪೀಠ, ''ಇದೇ ಮೊದಲ ಬಾರಿ ಅರ್ಜಿ ವಿಚಾರಣೆಗೆ ಬರುತ್ತಿದೆ ಅಲ್ಲವೇ? ಸದ್ಯ ಮೆರಿಟ್ ಮೇಲೆ ಈಗ ವಿಚಾರಣೆ ನಡೆಸುವುದಿಲ್ಲ,'' ಎಂದು ಹೇಳಿ ಸಿಬಿಐಗೆ ನೋಟಿಸ್ ಜಾರಿಗೊಳಿಸಿತು. ಆಗ ಸಿ.ವಿ.ನಾಗೇಶ್, ರಜಾ ಕಾಲದ ಪೀಠದ ಮುಂದೆ ಅರ್ಜಿ ವಿಚಾರಣೆ ಕೋರುವ ಸ್ವಾತಂತ್ರ್ಯ ನೀಡಬೇಕೆಂದು ಮನವಿ ಮಾಡಿದರು. ಆ ಮನವಿಯನ್ನೂ ನ್ಯಾಯಾಲಯ ಪುರಸ್ಕರಿಸಿತು.

ಅದಕ್ಕೆ ಆಕ್ಷೇಪಿಸಿದ ಸಿಬಿಐ ಪರ ವಕೀಲ ರಾಹುಲ್ ಕೃಷ್ಣಾರೆಡ್ಡಿ, ''ವಿಚಾರಣಾಧೀನ ನ್ಯಾಯಾಲಯದ ತೀರ್ಪು 680 ಪುಟಗಳಿವೆ. ಆಕ್ಷೇಪಣೆ ಸಲ್ಲಿಸಲು ಸಮಯ ಬೇಕಾಗುತ್ತದೆ. ಹೀಗಾಗಿ, ನಮ್ಮ ಆಕ್ಷೇಪಣೆಯನ್ನು ದಾಖಲಿಸಬೇಕು,'' ಎಂದು ಕೋರಿದರು. 2016ರ ಜೂನ್‌ನಲ್ಲಿ ನಡೆದಿದ್ದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಏ.17ರಂದು ವಿನಯ್ ಕುಲಕರ್ಣಿ ಸೇರಿ 16 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿ ಮಹತ್ವದ ತೀರ್ಪು ನೀಡಿತ್ತು.

ವೈದ್ಯ ಕಾಲೇಜುಗಳಲ್ಲೂ ಸಿಇಟಿ ಮಂಥನ

■ **ವಿಕ ಸುದ್ದಿಲೋಕ** ಬೆಂಗಳೂರು

ಸಿಇಟಿ ಆಯ್ಕೆ ದಾಖಲು ಮತ್ತು ಕೌನ್ಸೆಲಿಂಗ್ ಬಗ್ಗೆ ಜಾಗೃತಿ ಮೂಡಿಸುವ 'ಸಿಇಟಿ ಸೀಟು ಹಂಚಿಕೆ ಮಂಥನ' ಕಾರ್ಯಕ್ರಮವನ್ನು ಎಂಜಿನಿಯರಿಂಗ್ ಕಾಲೇಜುಗಳ ಜತೆಗೆ, ವೈದ್ಯಕೀಯ ಕಾಲೇಜುಗಳಲ್ಲಿಯೂ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸಿದ್ಧತೆ ನಡೆಸಿದೆ.

ಈ ಸಂಬಂಧ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕರಿಗೆ ಪತ್ರ ಬರೆದಿರುವ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ, ''ಮೇ ತಿಂಗಳ ಎರಡನೇ ವಾರದಲ್ಲಿ ಎರಡು ದಿನ ಮಂಥನ ಕಾರ್ಯಕ್ರಮ ಆಯೋಜಿಸಲಾಗುವುದು,'' ಎಂದು ತಿಳಿಸಿದ್ದಾರೆ.

''ಆಪ್ಷನ್ ಎಂಟ್ರಿಯಲ್ಲಿ ವಿದ್ಯಾರ್ಥಿಗಳು ಸಾಕಷ್ಟು ತಪ್ಪು ಮಾಡುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ವಿದ್ಯಾರ್ಥಿಗಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸಲು ಮಂಥನ ಕಾರ್ಯಕ್ರಮ ಆಯೋಜಿಸುವಂತೆ ಸಲಹೆ ನೀಡಿದ್ದರು. ಆದರಂತೆ ಸರಕಾರಿ ಮತ್ತು ಅನುದಾನಿತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಕೌನ್ಸೆಲಿಂಗ್ ಕುರಿತು ಒಂದು ದಿನದ ಮಂಥನ ನಡೆಯಿತು. ಇದಕ್ಕೆ ಉತ್ತಮ ಪ್ರತಿಕ್ರಿಯೆ ದೊರಕಿದೆ,'' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಬಾರಿ ಸರಕಾರಿ ಮತ್ತು ಅನುದಾನಿತ ವೈದ್ಯಕೀಯ ಕಾಲೇಜುಗಳಲ್ಲಿ ಎರಡು ದಿನ ವ್ಯವಸ್ಥಿತವಾಗಿ ಮಂಥನ ಕಾರ್ಯಕ್ರಮ ಆಯೋಜಿಸಲು ತಯಾರಿ ನಡೆಸಲಾಗುತ್ತಿದೆ. ಮೇ 9ರಂದು ಬೆಂಗಳೂರಿನಲ್ಲಿ ಕೌನ್ಸೆಲಿಂಗ್ ಕುರಿತ ಪೂರ್ವಭಾವಿ ಕಾರ್ಯಾಗಾರ ಆಯೋಜಿಸಲಾಗಿದೆ. ಪ್ರತಿ ಕಾಲೇಜಿನಿಂದ ಕ್ರಿಯಾಶೀಲ ಮೂವರು ಉಪನ್ಯಾಸಕರನ್ನು ನಿಯೋಜಿಸುವಂತೆ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರು ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ನಿರ್ದೇಶಕರಲ್ಲಿ ಮನವಿ ಮಾಡಲಾಗಿದೆ. ಸರಕಾರಿ ಅಥವಾ ಅತಿಥಿ ಉಪನ್ಯಾಸಕರು ಕಾರ್ಯಾಗಾರದಲ್ಲಿ ಭಾಗವಹಿಸಲು ಅವಕಾಶ ಇರಲಿದ್ದು, ಭಾಗವಹಿಸುವವರಿಗೆ ಪ್ರಾಧಿಕಾರದಿಂದ ಪ್ರಯಾಣ ಭತ್ಯೆ ಭರಿಸಲಾಗುತ್ತದೆ.

ಮಂಗಳೂರು ಸಂಚಾರಿ ಪೀಠಕ್ಕೆ ಶಿವಮೊಗ್ಗ ಸೇರ್ಪಡೆಗೆ ವಿರೋಧ

ಬೆಂಗಳೂರು: ಉದ್ದೇಶಿತ ಮಂಗಳೂರು ಹೈಕೋರ್ಟ್ ಸಂಚಾರಿ ಪೀಠ ವ್ಯಾಪ್ತಿಗೆ ಶಿವಮೊಗ್ಗ ಜಿಲ್ಲೆ ಸೇರ್ಪಡೆ ಮಾಡಲಾಗುವುದೆಂಬ ಪ್ರಸ್ತಾವಕ್ಕೆ ತಮ್ಮ ವಿರೋಧವಿದೆ ಎಂದು ಶಿವಮೊಗ್ಗ ಜಿಲ್ಲೆಯ ಬೆಂಗಳೂರು ನಿವಾಸಿ ವಕೀಲರ ವೇದಿಕೆ ಸ್ಪಷ್ಟಪಡಿಸಿದೆ.

ಉದ್ದೇಶಿತ ಮಂಗಳೂರು ಸಂಚಾರಿ ಹೈಕೋರ್ಟ್ ಪೀಠಕ್ಕೆ ಶಿವಮೊಗ್ಗ ಜಿಲ್ಲೆಯನ್ನು ಸೇರ್ಪಡೆ ಮಾಡಲಾಗುವುದೆಂಬ ವರದಿಗಳ ಹಿನ್ನೆಲೆಯಲ್ಲಿ ವೇದಿಕೆಯ ವಕೀಲರು ಮಂಗಳವಾರ ತುರ್ತು ಸಭೆ ನಡೆಸಿದರು. ಸಂಚಾರಿ ಪೀಠ ರಚನೆ ಮಾಡುವ ಮುನ್ನ ಏನೆಲ್ಲಾ ಮಾನದಂಡಗಳನ್ನು ಅನುಸರಿಸಬೇಕು ಎಂಬುದಕ್ಕೆ ಜಸ್ವಂತ್ ಸಿಂಗ್ ವರದಿಯಲ್ಲಿ ಉತ್ತರವಿದೆ. ಆದರ ಅನುಸಾರ ವರದಿಯಲ್ಲಿನ 21 ಮಾನದಂಡ ಅಧ್ಯಯನ ಮಾಡಿದ ನಂತರವೇ ಸೂಕ್ತ ತೀರ್ಮಾನ ಕೈಗೊಳ್ಳಬೇಕು, ಆ ದಿಸೆಯಲ್ಲಿ ಸೂಕ್ತ ಅಧ್ಯಯನ ನಡೆಸಬೇಕು ಎಂದು ಸಮಿತಿ ಹೇಳಿದೆ.

ಅಲ್ಲದೆ, ಅಧ್ಯಯನ ನಡೆಸಿ ವರದಿ ಸಲ್ಲಿಸಲು ಹೈಕೋರ್ಟ್‌ನ ಹಿರಿಯ ವಕೀಲ ಶ್ರೀರಂಗ ಸುಬ್ಬಣ್ಣ ನೇತೃತ್ವದಲ್ಲಿ ಉಪಸಮಿತಿ ರಚನೆ ಮಾಡಲಾಯಿತು. ಜತೆಗೆ, ಶಿವಮೊಗ್ಗ ಜಿಲ್ಲೆಯನ್ನು ಯಾವುದೇ ಕಾರಣಕ್ಕೂ ಮಂಗಳೂರಿಗೆ ಸೇರ್ಪಡೆ ಬೇಡವೇ ಬೇಡವೆಂದು ಸಭೆ ನಿರ್ಣಯ ಕೈಗೊಂಡಿತು.

ಆರು ಸಾಧಕರಿಗೆ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ


ಬಾಬು ಜತ್ತಕರ್

ಎಂ.ಜಿ. ದೊಡ್ಡಮನಿ

ಕೆ.ಸಿ.ಎಸ್. ಪ್ರಸನ್ನ


ಬಿ.ಎಸ್. ದೇಸಾಯಿ

ಶಶಿಕಲಾ ಹೂಗಾರ್

ಸಿ.ಚಿಕ್ಕಣ್ಣ

■ **ವಿಕ ಸುದ್ದಿಲೋಕ** ಬೆಂಗಳೂರು

ಬಾಗಲಕೋಟೆಯ ಬಾಬು ಜತ್ತಕರ್, ವಿಜಯಪುರದ ಶಶಿಕಲಾ ಹೂಗಾರ್ ಸೇರಿದಂತೆ ಆರು ಮಂದಿ ಕಲಾ ಸಾಧಕರು ಕರ್ನಾಟಕ ಲಲಿತಕಲಾ ಅಕಾಡೆಮಿಯ 'ಗೌರವ ಪ್ರಶಸ್ತಿ'ಗೆ ಆಯ್ಕೆಯಾಗಿದ್ದಾರೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಪ್ರಶಸ್ತಿ ಪಟ್ಟಿಯನ್ನು ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಹಾಗೂ ರಿಜಿಸ್ಟ್ರಾರ್ ಎನ್. ನಮ್ರತಾ ಅವರು ಪ್ರಕಟಿಸಿದರು. 2024-2025 ಮತ್ತು 2025-26ನೇ ಸಾಲಿಗೆ ತಲಾ ಮೂವರಂತೆ ಆರು ಕಲಾ ಸಾಧಕರನ್ನು 'ಗೌರವ ಪ್ರಶಸ್ತಿ'ಗೆ ಆಯ್ಕೆ ಮಾಡಲಾಗಿದೆ.

2024-2025ನೇ ಸಾಲಿನ ಗೌರವ ಪ್ರಶಸ್ತಿಗೆ ಬಾಗಲಕೋಟೆಯ ಬಾಬು ಜತ್ತಕರ್, ಕಲಬುರಗಿಯ ಎಂ.ಜಿ. ದೊಡ್ಡಮನಿ, ತುಮಕೂರಿನ ಕೆ.ಸಿ.ಎಸ್. ಪ್ರಸನ್ನ, 2025-26ನೇ ಸಾಲಿಗೆ ಹಾಸನದ ಬಿ.ಎಸ್. ದೇಸಾಯಿ, ವಿಜಯಪುರದ ಶಶಿಕಲಾ ಹೂಗಾರ್ ಹಾಗೂ ಮೈಸೂರಿನ ಸಿ.ಚಿಕ್ಕಣ್ಣ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ತಲಾ 50 ಸಾವಿರ ರೂ. ನಗದು ಒಳಗೊಂಡಿದೆ.

ವರ್ಣಶ್ರೀ ಪ್ರಶಸ್ತಿ: 2023-24 ಹಾಗೂ 2024-25ನೇ ಸಾಲಿನ 'ವರ್ಣಶ್ರೀ ಪ್ರಶಸ್ತಿ'ಗೆ ತಲಾ 10 ಕಲಾವಿದರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ 25 ಸಾವಿರ ರೂ.ನಗದು ಒಳಗೊಂಡಿದೆ.

2023-24ನೇ ಸಾಲಿನ 'ವರ್ಣಶ್ರೀ ಪ್ರಶಸ್ತಿ'ಗೆ ಗದಗದ ವಿಜಯ ಕಿರಸೂರ, ಶಿರಸಿಯ ರವಿ ಗುನಗ, ಹಾವೇರಿಯ ಕುಮಾರ ಕಾಟೇನಹಳ್ಳಿ, ಧಾರವಾಡದ ದಯಾನಂದ ಕೆ. ಕಾಮಕರ್, ವಿಜಯಪುರದ ಸರೋಜ ಮುಂಡೇವಾಡಿ, ಕೊಡಗಿನ ಜಿ.ಎಸ್. ಭವಾನಿ, ಉಡುಪಿಯ ರಾಘವೇಂದ್ರ ನಾಯ್ಕ, ಮಂಡ್ಯದ ಶಿವಕುಮಾರ್ ಎಚ್., ಮಂಗಳೂರಿನ ಮೋಹನ್‌ಕುಮಾರ್ ಬಿ.ಪಿ. ಹಾಗೂ ಚಾಮರಾಜನಗರದ ಮಹದೇವ ಎಚ್. ಭಾಜನರಾಗಿದ್ದಾರೆ.

2024-25ನೇ ಸಾಲಿಗೆ ಯಾದಗಿರಿಯ ಮೇಘನಾಥ ಅಬ್ರಹಂಬೆಳ್ಳಿ, ರಾಯಚೂರಿನ ಹೇಮರೆಡ್ಡಿ ಎನ್., ಬೀದರ್‌ನ ವೈಶಾಲಿ ಬಾಯಿ ಕಾಂಬಳೆ, ಕೊಪ್ಪಳದ ತಿರುಪತಿ ಶಿವನಗುತ್ತಿ, ಬಳ್ಳಾರಿಯ ಎ. ಮಹಮದ್ ರಫಿ, ದಾವಣಗೆರೆಯ ಉದಯ್‌ಕುಮಾರ್ ಡಿ. ಜೈನ್, ಚಿತ್ರದುರ್ಗದ ದಿನೇಶ್ ಬಿ., ಬೆಂಗಳೂರಿನ ಎಸ್.ಎಫ್. ಹುಸೇನಿ, ರಾಮನಗರದ ಗಂಗಾಧರಮೂರ್ತಿ ಹಾಗೂ ಬೆಂಗಳೂರಿನ ಪೂರ್ಣಿಮಾ ಯಲ್ಲಾಪುರಕರ್ ಆಯ್ಕೆಯಾಗಿದ್ದಾರೆ.

ಕಲಾ ಬಹುಮಾನ

2024-25ನೇ ಸಾಲಿನ 53ನೇ ವಾರ್ಷಿಕ ಕಲಾ ಬಹುಮಾನಕ್ಕೆ ಹತ್ತು ಕಲಾವಿದರ ಕಲಾಕೃತಿಗಳು ಆಯ್ಕೆಯಾಗಿವೆ. ಈ ಬಹುಮಾನ ತಲಾ 25 ಸಾವಿರ ರೂ. ನಗದು ಹೊಂದಿದೆ. ಅವರ ಕಲಾಕೃತಿಗಳು, ಮಾಧ್ಯಮದ ವಿವರ ಹೀಗಿದೆ.

- **ಅಶೋಕ ಬಿ. ಮನಸೂರ (ಧಾರವಾಡ):** 'ಕ್ಯಾಮರಾ ಇಲ್ಲದೆ ಜನರು ಹೇಗೆ ನೋಡಬೇಕೆಂದು ಕಲಿಸುವ ಸಾಧನ ಕ್ಯಾಮೆರಾ'-ಛಾಯಾಚಿತ್ರ
- **ಸಂದೀಪ ಸಜ್ಜನ ಶೆಟ್ಟಿ (ಬೀದರ್);** 'ಭಾವಚಿತ್ರ-2'-ಜಲವರ್ಣ
- **ಹರೀಶ್ ನಾಯ್ಕ (ಉಡುಪಿ);** 'ಶೀರ್ಷಿಕೆ ಇಲ್ಲದ'-ಅಕ್ರಿಲಿಕ್
- **ಅಕ್ಷಯ ಭಟ್ (ಬೆಂಗಳೂರು);** 'ಕ್ಷೇತ್ರ'-ಎಚ್ಚಿಂಗ್
- **ಲೋಹಿತ್ ಪತ್ತಾರ (ಬೆಂಗಳೂರು);** 'ಲೆಟ್ ದಿ ನೇಚರ್ ಬ್ರೆತ್'-ಎಚ್ಚಿಂಗ್
- **ನೂರ್ಜಾನ ಎಂ. ದಫೇದಾರ (ಬಾಗಲಕೋಟೆ);** 'ಮುಖವಾಡ ಭಾವನೆಗಳನ್ನು ಮರೆಮಾಚುವುದು'-ಅಕ್ರಿಲಿಕ್
- **ಜೀವನ್ ಸಾಲಿಯಾನ್ (ದಕ್ಷಿಣ ಕನ್ನಡ);** 'ಪರಾಗ ಸ್ಪರ್ಶ- 24 ಸೆಲ್ಸಿಯಸ್'-ಅಕ್ರಿಲಿಕ್
- **ಜಲಜಾಕ್ಷಿ ಕುಲಕರ್ಣಿ (ಕಲಬುರಗಿ);** 'ನನ್ನ ಸುತ್ತಮುತ್ತಲಿನ ವಾತಾವರಣ'-ಅಕ್ರಿಲಿಕ್
- **ಮೀನಾಕ್ಷಿ (ಕಲಬುರಗಿ);** 'ವೇಗ'-ಮಿಶ್ರ ಮಾಧ್ಯಮ
- **ದುಂಡಪ್ಪಾ ಎಸ್. ಲೋಲಸೂರಿ (ಬೆಳಗಾವಿ):** 'ಶಿಲ್ಪಕಲೆಯ ಸೌಂದರ್ಯವನ್ನು ನೋಡುವುದು'-ಅಕ್ರಿಲಿಕ್

ಮಗುವಿನ ಶಿಕ್ಷಣ ವೆಚ್ಚ ತಂದೆಯ ಜವಾಬ್ದಾರಿ

■ **ವಿಕ ಸುದ್ದಿಲೋಕ** ಬೆಂಗಳೂರು

ಕೌಟುಂಬಿಕ ವ್ಯಾಜ್ಯ ಪ್ರಕರಣಗಳಲ್ಲಿ ಮಗುವಿನ ಶಿಕ್ಷಣ ವೆಚ್ಚ ಭರಿಸುವುದು ತಂದೆಯ ಜವಾಬ್ದಾರಿ. ಆದಕ್ಕೆ ಯಾವುದೇ ಮಿತಿ ಇರುವುದಿಲ್ಲ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಅಲ್ಲದೆ, ''ತಾಯಿ ಜತೆಗಿರುವ ಇಬ್ಬರು ಮಕ್ಕಳ ಸಂಪೂರ್ಣ ಶೈಕ್ಷಣಿಕ ವೆಚ್ಚ ಭರಿಸಲು ತಂದೆ ಬದ್ಧನಾಗಿರಬೇಕು ಮತ್ತು ಇಂತಹ ಸಂಗತಿಗಳಲ್ಲಿ ನಿರ್ದಿಷ್ಟ ಮಿತಿಯ ಹೇರಿಕೆ ಮಾಡಲಾಗದು,'' ಎಂದಿದೆ.

ತನ್ನ ಇಬ್ಬರು ಅಪ್ರಾಪ್ತ ವಯಸ್ಸಿನ ಮಕ್ಕಳ ಪಾಲನೆ, ನಿರ್ವಹಣಾ ವೆಚ್ಚ ಹಾಗೂ ಜೀವನಾಂಶಕ್ಕೆ ಸಂಬಂಧಿಸಿದಂತೆ ಪತ್ನಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಮನ್ಮಥರಾವ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ಮಾಡಿದೆ.

ಬೆಂಗಳೂರಿನ 1ನೇ ಹೆಚ್ಚುವರಿ ಪ್ರಧಾನ ಕೌಟುಂಬಿಕ ನ್ಯಾಯಾಲಯದ ಮಧ್ಯಂತರ ಅರ್ಜಿ ಸಂಬಂಧ 2024ರ ಜುಲೈ 2ರಂದು ನೀಡಿದ್ದ ಆದೇಶವನ್ನು ಮಾರ್ಪಾಡು ಮಾಡಿದ ನ್ಯಾಯಪೀಠ, ''ಪತಿಯು ತನ್ನ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಪ್ರತಿ ತಿಂಗಳೂ 15 ಸಾವಿರ ಮತ್ತು ಹೆಂಡತಿಗೆ 40 ಸಾವಿರ ರೂ. ಜೀವನಾಂಶ ಪಾವತಿಸಬೇಕು. ಅರ್ಜಿ ಸಲ್ಲಿಸಿದ ದಿನಾಂಕದಿಂದ ತಿಂಗಳಿಗೆ 70 ಸಾವಿರದವರೆಗೆ ಪಾವತಿ ಮಾಡಬೇಕು. ಹೆಚ್ಚುವರಿಯಾಗಿ, ಪತಿಯು ಮಕ್ಕಳ ಸಂಪೂರ್ಣ ಶೈಕ್ಷಣಿಕ ವೆಚ್ಚವನ್ನು ಆಯಾ ಶಾಲೆ ಅಥವಾ ಶಿಕ್ಷಣ ಸಂಸ್ಥೆಗಳು ಕೇಳಿದ ಸಮಯದಲ್ಲಿ ಯಾವುದೇ ಹಣಕಾಸಿನ ಮಿತಿಯಿಲ್ಲದೆ ನೇರವಾಗಿ ಪಾವತಿ ಮಾಡಬೇಕು,'' ಎಂದು ನಿರ್ದೇಶನ ನೀಡಿದೆ.

''ಒಂದು ವೇಳೆ ಪತ್ನಿ ಈಗಾಗಲೇ ಮಕ್ಕಳ ಶೈಕ್ಷಣಿಕ ವೆಚ್ಚವನ್ನು ಸಂಬಂಧಪಟ್ಟ ಶಾಲೆ ಅಥವಾ ಶಿಕ್ಷಣ ಸಂಸ್ಥೆಗಳಿಗೆ ಪಾವತಿಸಿದ್ದರೆ ಅಂತಹ ಪಾವತಿಯ ಪುರಾವೆಯನ್ನು ಹಾಜರುಪಡಿಸಿದ ನಂತರ ಪತಿಯು ಅದನ್ನು ಹೆಂಡತಿಗೆ ಮರು ಪಾವತಿಸಬೇಕು,'' ಎಂದೂ ಸೂಚಿಸಿದೆ.

''ಮಕ್ಕಳ ಪಠ್ಯೇತರ ಚಟುವಟಿಕೆಗಳು, ಪುಸ್ತಕಗಳು, ಸಮವಸ್ತ್ರ, ವೈದ್ಯಕೀಯ ಅಗತ್ಯಗಳಿಗೆ ಸಂಬಂಧಿಸಿದ ವೆಚ್ಚಗಳನ್ನೂ ಪತಿಯೇ ಭರಿಸಬೇಕು. ಅಂತೆಯೇ, ಮೊಕದ್ದಮೆ ವೆಚ್ಚಗಳಿಗಾಗಿ 25 ಸಾವಿರ ರೂ. ಪಾವತಿಸುವ ನಿರ್ದೇಶನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ,'' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

400 ಗೆಸ್ಟ್ ಟೀಚರ್ಸ್ ಔಟ್

» ಮೊದಲ ಪುಟದಿಂದ

ಅಡ್ಡಕತ್ತರಿಯಲ್ಲಿ ಉಪನ್ಯಾಸಕರು: ಕೆಲಸ ಉಳಿಸಿಕೊಳ್ಳುವ ಅನಿವಾರ್ಯತೆಗಾಗಿ ಹೆಚ್ಚಿನ ಸಂಖ್ಯೆಯ ಉಪನ್ಯಾಸಕರು ಸಾಲಸೋಲ ಮಾಡಿ ಲಕ್ಷಾಂತರ ರೂ. ತೆತ್ತು ನಕಲಿ ಪಿಎಚ್‌ಡಿ ಪದವಿ ಖರೀದಿಸಿದ್ದಾರೆ. ಎಸ್‌ಒಪಿ ಜಾರಿಗೊಳಿಸಿದ ಬೆನ್ನಲ್ಲೇ ಕಾನೂನಿನ ಅಸ್ತ್ರದಿಂದ ತಪ್ಪಿಸಿಕೊಳ್ಳಲು ಸ್ವಯಂ ಪ್ರೇರಿತವಾಗಿ ರಾಜೀನಾಮೆ ನೀಡುತ್ತಿದ್ದಾರೆ. ಲಕ್ಷಾಂತರ ಹಣ ಕೊಟ್ಟವರ ಸ್ಥಿತಿ ಇತ್ತ ಹಣವೂ ಹೋಯಿತು, ಅತ್ತ ಉದ್ಯೋಗವೂ ಇಲ್ಲದಂತಾಗಿದೆ. ವಿಷಯ ಆಚೆಗೆ ಬಂದರೆ ಭವಿಷ್ಯದಲ್ಲಿ ಎಲ್ಲಿಯೂ ಕೆಲಸ ಸಿಗುವುದಿಲ್ಲವೆಂಬ ಭಯಕ್ಕೆ ದೂರು ನೀಡಲಾಗದೆ ಅಡ್ಡಕತ್ತರಿಯಲ್ಲಿ ಸಿಲುಕಿದ್ದಾರೆ.

ಏನಿದು ಎಸ್‌ಒಪಿ?

ಯುಜಿಸಿ ನಿಯಮದ ಪ್ರಕಾರ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಬೋಧಕರಾಗಿ ಕೆಲಸ ಮಾಡುವವರು ಸ್ನಾತಕೋತ್ತರ ಪದವಿಯ ಜತೆಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆ (ಎನ್ಇಟಿ) ಅಥವಾ ಕರ್ನಾಟಕ ರಾಜ್ಯ ಅರ್ಹತಾ ಪರೀಕ್ಷೆ (ಕೆ-ಸೆಟ್) ತೇರ್ಗಡೆಯಾಗಿರಬೇಕು, ಪಿಎಚ್‌ಡಿ ಪಡೆದಿರಬೇಕು. ಆದರೆ, ನೇಮಕಗೊಂಡ ಹಲವು ಅಭ್ಯರ್ಥಿಗಳು ನಕಲಿ ಪಿಎಚ್‌ಡಿ ಪ್ರಮಾಣಪತ್ರ ಸಲ್ಲಿಸಿದ್ದಾರೆ ಎಂಬ ದೂರುಗಳು ಸಲ್ಲಿಕೆಯಾಗಿದ್ದವು. ಹಾಗಾಗಿ ಸರಕಾರ ಇವುಗಳ ಪರಿಶೀಲನೆಗೆ ಎಸ್‌ಒಪಿ ಅಳವಡಿಸಿಕೊಂಡಿತ್ತು.

ಏ.30 ಎಸ್ಸೆಸ್ಸೆಲ್ಸಿ ಪರೀಕ್ಷೆ-2 ನೋಂದಣಿಗೆ ಕೊನೆ ದಿನ

ಬೆಂಗಳೂರು: 2026ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆ-2 ನೋಂದಣಿಗೆ ಏ.30 ಕೊನೆ ದಿನವಾಗಿದ್ದು, ಪರೀಕ್ಷೆ-1ರಲ್ಲಿ ಅನುತ್ತೀರ್ಣರಾಗಿರುವ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆ-2ಕ್ಕೆ ನೋಂದಣಿಯಾಗಿ ಪರೀಕ್ಷೆ ಬರೆಯುವಂತೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದ್ದಾರೆ.

''ಪ್ರತಿಯೊಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಭವಿಷ್ಯ ಉಜ್ವಲಗೊಳಿಸುವುದು ಸರಕಾರ ಹಾಗೂ ಶಿಕ್ಷಣ ಇಲಾಖೆಯ ಹೊಣೆ. ಪರೀಕ್ಷೆ ಫಲಿತಾಂಶದಿಂದ ಯಾವುದೇ ವಿದ್ಯಾರ್ಥಿ ನಿರಾಸೆಗೊಂಡು ಶಿಕ್ಷಣವನ್ನು ಮೊಟಕುಗೊಳಿಸಬಾರದು,'' ಎಂದು ಮನವಿ ಮಾಡಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–08/214/2026–27 ದಿನಾಂಕ: 27.04.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ವಿದ್ಯುನ್ಮಾನ ಪೋರ್ಟಲ್ ಮೂಲಕ ಐಟಂ ದರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : (1) ಹಾಸನ ಜಿಲ್ಲೆ, ಹಾಸನ ಬೆಳವಣಿಗೆ ಕೇಂದ್ರ ಕೈಗಾರಿಕಾ ಪ್ರದೇಶದ ಉಪಬಡಾವಣೆ–4ರಲ್ಲಿ ಇರುವ ಮೆ: ಹೆಮೂಲ್ ಆವರಣದಲ್ಲಿ ತಡೆಗೋಡೆ, ಕಲ್ವರ್ಟ್ಸ್, ಚರಂಡಿ ನಿರ್ಮಾಣ, ಉದ್ಯಾನ ಪ್ರದೇಶದ ಸಮತಟ್ಟುಗೊಳಿಸುವಿಕೆ ಹಾಗೂ ರಸ್ತೆ ರಚನೆ ಮಾಡುವ ಕಾಮಗಾರಿ. (2) ಬೆಂಗಳೂರು ದಕ್ಷಿಣ ಜಿಲ್ಲೆ, ರಾಮನಗರ ತಾಲ್ಲೂಕು ಹಾರೋಹಳ್ಳಿ 5ನೇ ಹಂತ ಕೈಗಾರಿಕಾ ಪ್ರದೇಶದ ಇವಿ ಬ್ಲಾಕ್‌ನ ಪ್ಲಾಟ್ ನಂ.1 ಬಿ ನಲ್ಲಿ ವಿದ್ಯುತ್ ವಾಹನ ಘಟಕಗಳ ಉತ್ಪಾದನೆ / ಜೋಡಣೆ, ಬ್ಯಾಟರಿ ಪ್ಯಾಕ್ ಜೋಡಣೆ, ಚಾರ್ಜಿಂಗ್ ಮೂಲಭೂತ ಸೌಕರ್ಯ ಮತ್ತು ಪರೀಕ್ಷಾ ಕೇಂದ್ರಕ್ಕಾಗಿ ಪ್ಲಗ್ ಮತ್ತು ಪ್ಲೇ ಮಾದರಿಯ ಮೂಲಭೂತ ಸೌಕರ್ಯ ಸ್ಥಾಪನೆ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14.05.2026 ಸಂಜೆ 4.00 ಗಂಟೆಯವರೆಗೆ

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/387/NR/2026-27

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–3 ರವರ ಕಛೇರಿ, 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು–560052.

ಸಂಖ್ಯೆ: ಡಿಜಿಎಂ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/01/2026–27 ದಿನಾಂಕ: 28.04.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ಜಿಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

1. ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಉಪ ಪ್ರಧಾನ ವ್ಯವಸ್ಥಾಪಕರು–3 ಅವರು ಕೆಳಗಿನ ಕೋಷ್ಟಕದಲ್ಲಿ ವಿವರಿಸಿದ ಕಾಮಗಾರಿಗಳಿಗೆ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಖರೀದಿ ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ನಿಂದ ಪ್ರತಿ ಕಾರ್ಯದ ವಿರುದ್ಧ ಉಲ್ಲೇಖಿತ ಶುಲ್ಕವನ್ನು (ಮರುಪಾವತಿಸಲಾಗದ) ಪಾವತಿಸುವ ಮೂಲಕ ಇ-ಪೇಮೆಂಟ್ ರೂಪದಲ್ಲಿ ಡೌನ್‌ಲೋಡ್ ಮಾಡಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ, ಜಿಎಸ್‌ಟಿ ಹೊರತುಪಡಿಸಿ)	ಇಎಂಡಿ (ರೂ.ಗಳಲ್ಲಿ)	ಒಪ್ಪಂದ ಅವಧಿ
1	Mitigation of Fly infestation, protection of public health and development of basic Infrastructure in nearby villages around 5 processing plants in Yeshwanthapura Assembly Constituency.	5604.00	5610000/–	11 ತಿಂಗಳು

ಟೆಂಡರ್‌ನ ಕಾರ್ಯಸೂಚಿ: 1. ಬಿಡ್ ಪೂರ್ವ ಪ್ರಶ್ನೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: 07.05.2026 ರಿಂದ ಮಧ್ಯಾಹ್ನ 3.00 ರವರೆಗೆ (ಕೆಪಿಪಿ ಪೋರ್ಟಲ್‌ನಲ್ಲಿ). 2. ಬಿಡ್ ಪೂರ್ವ ಸಭೆ: 08.05.2026 ರಂದು ಮಧ್ಯಾಹ್ನ 3.00 ಗಂಟೆಗೆ, ಸಿಇ ಮತ್ತು ಸಿಜಿಎಂ–2 (ಟೆಕ್) ಕಛೇರಿ, ಬಿಎಸ್‌ಡಬ್ಲ್ಯೂಎಂಎಲ್, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು. 3. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 19.05.2026 ರಿಂದ ಸಂಜೆ 4.00 ರವರೆಗೆ. 4. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.05.2026 ರಂದು ಬೆಳಿಗ್ಗೆ 10.30 ಗಂಟೆಗೆ. 5. ಹಣಕಾಸು ಬಿಡ್ ತೆರೆಯುವ ದಿನಾಂಕವನ್ನು ತಾಂತ್ರಿಕವಾಗಿ ಅರ್ಹತೆ ಪಡೆದ ಟೆಂಡರ್‌ದಾರರಿಗೆ ತಿಳಿಸಲಾಗುವುದು.

ಸಹಿ/– ಉಪ ಪ್ರಧಾನ ವ್ಯವಸ್ಥಾಪಕರು–3
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/ಎಎಎ/402/2026–27

PUBLIC NOTICE

NOTICE IS HEREBY GIVEN that our Client/s intend to purchase the below mentioned Schedule Properties from its respective owners of the survey numbers all situated at Kalkunte Agrahara village, Anugondanahalli Hobli, Hoskote Taluk, Bangalore Rural District.

The Owners, namely **Ramachandrappa. A. N and Krishna Murthy. A. N** have represented that they are the absolute owners of their respective survey numbers mentioned under the Schedule Properties and are in lawful possession of the same. Further they represent, jointly and severally, that the Schedule Properties are free from any kind of encumbrance, suits, litigation proceedings under any statute. Any person or persons asserting any right, title, interest, claim or demand whatsoever in the Schedule Properties or any part thereof, by way of sale, exchange, mortgage, charge, lien, gift, inheritance, bequest, possession, pending litigation, maintenance, easement, memorandum of understanding, agreement, power of attorney, option, right of first refusal, pre-emption or otherwise whatsoever is hereby required to notify the same in writing to the undersigned within a period of 15 (Fifteen) days from the date of issuance of this notice with all documentary proof thereof failing which our Client/s will treat the title of the Schedule Properties as clear and marketable and will proceed to enter into the sale transaction.

SCHEDULE PROPERTIES

All those pieces and parcel of agricultural lands bearing (i) Survey No. 92/1 measuring 1 acre 5 guntas, with no kharab, (ii) Survey No. 84/2 measuring 2 acres, with no kharab, (iii) Survey No. 84/1 measuring 29 guntas, with no kharab, (iv) Survey No. 81/4 measuring 19 guntas, with no kharab, and (v) Survey No. 82/2 measuring 1 acre 1 gunta, excluding ½ gunta 'B' kharab, together measuring 5 acres 14 guntas, excluding ½ gunta 'B' kharab, all are situated at Kalkunte Agrahara village, Anugondanahalli Hobli, Hoskote Taluk, Bangalore Rural District and more particularly detailed as below:

Sl. No.	Sy No.	Acres	Guntas	Kharab	Owner/s	East by	West by	North by	South by
1.	92/1	1	5	0	Ramachandrappa & Krishnamurthy both s/o Late Narayanappa (Jointly)	Sy No. 92/2	Sy No. 91/2	Sy Nos. 84/2 & 84/6	Sy No. 95
2.	84/2	2	0	0	Ramachandrappa & Krishnamurthy both s/o Late Narayanappa (Jointly)	Sy Nos. 84/1,	Sy Nos. 84/6, 84/5, 81/2,	Sy Nos. 81/4 & 84/5	Sy Nos. 92/1 & 92/2
3.	84/1	0	29	0	Ramachandrappa & Krishnamurthy both s/o late Narayanappa (Jointly)	Sy Nos. 82/2, 82/3, 82/4 & 83/2	Sy No. 84/2	Sy No. 81/5	Sy Nos. 92/2, 92/5 & 92/7
4.	81/4	0	19	0	Krishnamurthy s/o Narayanappa	Sy Nos. 81/9, 81/6, & 81/5	Sy Nos. 81/3 & 81/2	Sy No. 81/9	Sy No. 84/2
5.	82/2	1	1	½ gunta B Kharab	Ramachandrappa & Krishnamurthy both s/o late Narayanappa (Jointly)	Sy No.82/1 cart track & Yittagodi Village Boundary	Sy Nos. 81/8 & 84/1	Sy Nos. 82/1 & 81/8	Sy No. 82/3

Chandra Chooda RN
Lexiadvocates
Chandra@Lexiadvocates.com
No.12, Anu Arcade, 3rd Floor, CMH Road, Indira Nagar, Bengaluru-560008. Mobile: **9742258221**, Date: 28-04-2026

ಕಾರ್ಕಳ ಪುರಸಭೆ
ಕಾರ್ಕಳ - 574104, ಉಡುಪಿ ಜಿಲ್ಲೆ
Website: www.karkalatown.mrc.gov.in
Email: itstaff_ulb_karkala@yahoo.co.in, tmckarkala@yahoo.co.in
ದೂರವಾಣಿ: 08258-230292, 08258-231023, ಫ್ಯಾಕ್ಸ್: 08258-235664
ಕಾಪುಸ:ಸಿಆರ್:ತಾ.ವಿ:76: ಅಮೃತ್-2.0:ಜ.ಪು.ಜಾ.ಉ.ಅ/2024-25
ದಿನಾಂಕ: 24-04-2026

ಮರು ಇ-ಟೆಂಡರ್ ಪ್ರಕಟಣೆ

ಕಾರ್ಕಳ ಪುರಸಭೆಯ ಅಮೃತ್ 2.0 ಯೋಜನೆಯಡಿ ಈ ಕೆಳಗಿನ ಕಾಮಗಾರಿಯನ್ನು ನಿರ್ವಹಿಸಲು ಅರ್ಹ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಗುತ್ತಿಗೆದಾರರಿಂದ ನಿರ್ದಿಷ್ಟ ಟೆಂಡರ್ ದಸ್ತಾವೇಜಿನಲ್ಲಿ (Standard tender document) ಟೆಂಡರನ್ನು KPPP ಪೋರ್ಟಲ್ (Website: kppp.karnataka.gov.in/) ಮುಖಾಂತರ ಆಹ್ವಾನಿಸಲಾಗಿದೆ.

1. DMA/2025-26/OW/WORK_INDENT56654/CALL-2 –ರೂ.63.12 ಲಕ್ಷ
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 05-05-2026 ಅಪರಾಹ್ನ 4:30 ಗಂಟೆ
ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 07-05-2026 ಪೂರ್ವಾಹ್ನ 10:30 ಗಂಟೆ
ಹಣಕಾಸಿನ ಬಿಡ್ಡನ್ನು ತೆರೆಯುವ ದಿನಾಂಕ: 11-05-2026 ಪೂರ್ವಾಹ್ನ 11:00 ಗಂಟೆ

ಸಹಿ/-ಮುಖ್ಯಾಧಿಕಾರಿ
ಪುರಸಭೆ, ಕಾರ್ಕಳ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ, ಕೃಭಾಜನಿನಿ, ಅಣೆಕಟ್ಟು ಸುರಕ್ಷತಾ ಘಟಕ–3, ನಾರಾಯಣಪೂರ – 585219 ತಾ:ಹುಣಸಗಿ
Office of the Executive Engineer, KBJNL, Dam Safety Unit-3, Narayanpur-585219, Email: kbjnl_eedam@yahoo.in

ಸಂ. ಕೃಭಾಜನಿನಿ/ಕಾನಿಅ/ಆಸುಘ–3/ಪಿಬಿ–1/ಕೊಟೇಷನ್/2026–27/89 ದಿನಾಂಕ: 23.04.2026

ಕೊಟೇಷನ್ ಅಧಿಸೂಚನೆ

ಉಲ್ಲೇಖ:: ಕರ್ನಾಟಕ ಸರ್ಕಾರದ ತಿದ್ದುಪಡಿ ಆದೇಶ ಸಂ:ಕಸಂಪಾ:04:ವಾಪ್ರಜಾ:2017 ದಿ:19–01–2017

ವ್ಯವಸ್ಥಾಪಕ ನಿರ್ದೇಶಕರು, ಕೃ.ಭಾ.ಜ.ನಿ.ನಿ ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ವಾರ್ಷಿಕ ನಿರ್ವಹಣೆ ಕಾಮಗಾರಿಯ ಅಂದಾಜು ಪತ್ರಿಕೆಯನ್ನು ತಯಾರಿಸುವ ಸಲುವಾಗಿ ನಮೂದಿತ ಸ್ಪೆಸಿಫಿಕೇಷನ್‌ಗಳಿಗಾಗಿ ದರಗಳನ್ನು ಪಡೆಯಲು ಪರಿಣಿತ ಏಜನ್ಸಿದಾರರಿಂದ ಕೊಟೇಶನ್‌ಗಳನ್ನು ಆಹ್ವಾನಿಸಲಾಗಿದ್ದು, ಐಟಂಗಳ ವಿವರವಾದ ತಾಂತ್ರಿಕ ಸ್ಪೆಸಿಫಿಕೇಷನ್‌ಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತಿಯ ಅಧಿಕೃತ ವೆಬ್ ಸೈಟ್: www.kbjnl.karnataka.gov.in ನಲ್ಲಿ ಪ್ರಕಟಿಸಲಾಗಿರುತ್ತದೆ.

ಇಚ್ಛೆಯುಳ್ಳ ಪರಿಣಿತ ಏಜನ್ಸಿದಾರರು ಜಿ.ಎಸ್.ಟಿ ಹಾಗೂ ಇತರೆ ತೆರಿಗೆ ಹೊರತು ಪಡಿಸಿ ಮೊಹರು ಮಾಡಿದ ದರ ಪಟ್ಟಿಗಳನ್ನು ಈ ಕಛೇರಿಗೆ ದಿನಾಂಕ: 12/05/2026 ರಂದು ಸಂಜೆ 5.30 ಗಂಟೆಯೊಳಗೆ ತಲುಪುವ ಹಾಗೆ ಸಲ್ಲಿಸತಕ್ಕದ್ದು. ಮೊಹರು ಮಾಡಿದ ಲಕೋಟೆಗಳನ್ನು ದಿನಾಂಕ:13/05/2026 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು.

ಸಹಿ/–
ಕಾರ್ಯನಿರ್ವಾಹಕ ಇಂಜೀನಿಯರರು
ಕೃ.ಭಾ.ಜ.ನಿ.ನಿ., ಆಣೆಕಟ್ಟು ಸುರಕ್ಷತಾ ಘಟಕ–3
ನಾರಾಯಣಪೂರ

ಬಿಟಿಪಿಎಸ್: ಉತ್ಪಾದನೆಗೆ ಹೆಚ್ಚಿದ ಒತ್ತಡ

■ ವಿಕ ಸುದ್ದಿಲೋಕ ಬಳ್ಳಾರಿ

ರಾಜ್ಯದಲ್ಲಿ ಬಿರುಬಿಸಿಲಿನ ಹಿನ್ನೆಲೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿದೆ. ಇದನ್ನು ಸರಿದೂಗಿಸಲು ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ವಿದ್ಯುತ್ ಕೇಂದ್ರ (ಬಿಟಿಪಿಎಸ್) ಸೇರಿ ಇತರ ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳ ಮೇಲೆ ವಿದ್ಯುತ್ ಉತ್ಪಾದನೆಯ ಒತ್ತಡ ಹೆಚ್ಚಿದೆ.

ರಾಜ್ಯದಲ್ಲಿ ದೈನಂದಿನ 356.539 ದಶಲಕ್ಷ ಯೂನಿಟ್ ವಿದ್ಯುತ್ ಬೇಡಿಕೆಯಿದೆ. ಶಾಖೋತ್ಪನ್ನ ಕೇಂದ್ರಗಳಿಂದ ನಿತ್ಯ 106.96 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ಯಾಗುತ್ತಿದೆ. ಈ ಪೈಕಿ ಬಿಟಿಪಿಎಸ್‌ನಿಂದ 36.05 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆಯಾಗುತ್ತಿದೆ.

ಬಿಟಿಪಿಎಸ್‌ನಲ್ಲಿ ತಲಾ 500 ಮೆಗಾವ್ಯಾಟ್ ಸಾಮರ್ಥ್ಯದ ಎರಡು ಹಾಗೂ 700 ಮೆಗಾ ವ್ಯಾಟ್ ಸಾಮರ್ಥ್ಯದ ಒಂದು ಘಟಕಗಳಿಂದ 1,700 ಮೆಗಾ ವ್ಯಾಟ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ರಾಯಚೂರು ಜಿಲ್ಲೆಯ ಆರ್‌ಟಿಪಿಎಸ್‌ನಲ್ಲಿ ತಲಾ 210 ಮೆಗಾ ವ್ಯಾಟ್ ಸಾಮರ್ಥ್ಯದ 7 ಘಟಕಗಳು ಹಾಗೂ 250 ಮೆಗಾವ್ಯಾಟ್ ಸಾಮರ್ಥ್ಯದ ಒಂದು ಘಟಕ ಸೇರಿ ಒಟ್ಟು 1,720 ಮೆಗಾವ್ಯಾಟ್ ಉತ್ಪಾದನಾ ಸಾಮರ್ಥ್ಯ ಹೊಂದಿದೆ. ವೈಟಿಪಿಎಸ್‌ನಲ್ಲಿ ತಲಾ 800 ಮೆಗಾ ವ್ಯಾಟ್ ಸಾಮರ್ಥ್ಯದ 2 ಘಟಕಗಳಿವೆ.



■ ನಿತ್ಯ 28.80 ದಶಲಕ್ಷ ಯೂನಿಟ್ ಉತ್ಪಾದನೆ

■ 2.50 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ದಾಸ್ತಾನು

ತಿಂಗಳವಾರು ಉತ್ಪಾದನೆ: ಬಿಟಿಪಿಎಸ್‌ನ ಮೂರು ಘಟಕಗಳ ಪೈಕಿ 500 ಮೆಗಾವ್ಯಾಟ್ ಸಾಮರ್ಥ್ಯದ ಎರಡು ಘಟಕಗಳಿಂದ ನಿತ್ಯ 12 ದಶಲಕ್ಷ ಯೂನಿಟ್ ಹಾಗೂ 700 ಮೆಗಾವ್ಯಾಟ್ ಸಾಮರ್ಥ್ಯದ ಘಟಕದಿಂದ 16.80 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಕಳೆದ ಫೆಬ್ರವರಿಯಲ್ಲಿ 805 ದಶಲಕ್ಷ ಯೂನಿಟ್ ಬೇಡಿಕೆ ಪೈಕಿ 855 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದಿಸಲಾಗಿದ್ದರೆ, ಮಾರ್ಚ್‌ನಲ್ಲಿ 805 ದಶಲಕ್ಷ ಯೂನಿಟ್ ಬೇಡಿಕೆಯಲ್ಲಿ 887.016 ದಶಲಕ್ಷ ಯೂನಿಟ್ ಉತ್ಪಾದನೆ, ಏಪ್ರಿಲ್‌ನಲ್ಲಿ 863 ದಶಲಕ್ಷ ಯೂನಿಟ್ ಗುರಿಯಲ್ಲಿ ಈವರೆಗೆ 840.558 ದಶಲಕ್ಷ ಯೂನಿಟ್ ವಿದ್ಯುತ್ ಉತ್ಪಾದನೆ ದಾಖಲಾಗಿದೆ.

2.50 ಲಕ್ಷ ಟನ್ ಕಲ್ಲಿದ್ದಲು ದಾಸ್ತಾನು: ಬಿಟಿಪಿಎಸ್‌ನ ಮೂರು ಘಟಕಗಳಲ್ಲಿ ನಿತ್ಯ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಗೆ 25 ಸಾವಿರ ಮೆಟ್ರಿಕ್ ಟನ್ ಕಲ್ಲಿದ್ದಲು ಅವಶ್ಯವಿದೆ. ಒಡಿಶಾ, ಮಹಾರಾಷ್ಟ್ರ, ತೆಲಂಗಾಣದಿಂದ ಅಗತ್ಯದಷ್ಟು ಕಲ್ಲಿದ್ದಲನ್ನು ತರಿಸಿಕೊಳ್ಳಲಾಗುತ್ತಿದೆ. ಸದ್ಯ 2.50 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ದಾಸ್ತಾನಿದ್ದು, ಮುಂದಿನ 10 ದಿನ ನಿರಾಂತಕವಾಗಿ ಬಳಸಬಹುದು.

> ಬಿಟಿಪಿಎಸ್‌ನ ಮೂರು ಘಟಕಗಳು ನಿರಂತರ ಕಾರ್ಯನಿರ್ವಹಿಸುತ್ತಿವೆ. ಮೇ, ಜೂನ್‌ವರೆಗೆ ಬೇಡಿಕೆ ಏರುಮುಖವಾಗಲಿದೆ. ಬೇಡಿಕೆ ಸರಿದೂಗಿಸಲು ಅಗತ್ಯ ಕ್ರಮಕೈಗೊಳ್ಳಲಾಗಿದೆ.
> **- ಗಂಗಾಧರಯ್ಯ** ಕಾರ್ಯನಿರ್ವಾಹಕ ನಿರ್ದೇಶಕ, ಬಿಟಿಪಿಎಸ್

ಇಂದು ನವೀಕೃತ ಶೋರೂಂ ಉದ್ಘಾಟನೆ

■ ವಿಕ ಸುದ್ದಿಲೋಕ ಉಡುಪಿ

ಪ್ರತಿಷ್ಠಿತ ಚಿನ್ನಾಭರಣ ಮಳಿಗೆ ವಿಶ್ವಾಸ, ಕುಶಲತೆ ಮತ್ತು ಚಿರ ಸೌಂದರ್ಯಕ್ಕೆ ಹೆಸರುವಾಸಿಯಾಗಿರುವ ದ ಒರಿಜಿನಲ್ ಆಭರಣ ಜುವೆಲರ್ಸ್ ಉಡುಪಿ ಸಂಸ್ಥೆಯ ಶಿವಮೊಗ್ಗದ ಶೋರೂಂ ಬಿ.ಹೆಚ್. ರಸ್ತೆಯ ಕೃತಿ ಕಾಂಪ್ಲೆಕ್ಸ್‌ನಿಂದ ಕುವೆಂಪು ರಸ್ತೆಯ ಹೈಲ್ ಸರ್ಕಲ್ ಸಮೀಪದಲ್ಲಿರುವ ವಿಶಾಲವಾದ ನವೀಕೃತ ಶೋರೂಂಗೆ ಸ್ಥಳಾಂತರಗೊಳ್ಳಲಿದೆ. ಈ ಮಳಿಗೆ ಏ.29ರಂದು ಬೆಳಗ್ಗೆ 11 ಗಂಟೆಗೆ ಉದ್ಘಾಟನೆಗೊಳ್ಳಲಿದೆ.

ಸಂಪ್ರದಾಯದ ಸೊಗಡಿನೊಂದಿಗೆ ಆಧುನಿಕತೆಯ ಮೆರುಗು ಹೊತ್ತ ವಿನ್ಯಾಸಗಳು ಗ್ರಾಹಕರಿಗೆ ಆಭರಣ ಖರೀದಿಯ ಉತ್ತಮ ಅನುಭವವನ್ನು ಮಳಿಗೆ ನೀಡಲಿದೆ. ಈ ಸ್ಮರಣೀಯ ಸಂದರ್ಭದಲ್ಲಿ ದ ಒರಿಜಿನಲ್ ಆಭರಣ ಜುವೆಲರ್ಸ್ ಉಡುಪಿ ಕುಟುಂಬದ ಪ್ರಮುಖ ಸದಸ್ಯರಾದ ಮಧುಕರ್ ಎಸ್.ಕಾಮತ್, ಸುಭಾಸ್ ಎಂ.ಕಾಮತ್, ಮಹೇಶ್ ಎಂ.ಕಾಮತ್, ಸಂಧ್ಯಾ ಎಸ್.ಕಾಮತ್, ವೀಣಾ ಎಂ.ಕಾಮತ್, ಸಾತ್ವಿಕ್ ಕಾಮತ್, ಆರ್ಷ್ಯ ಕಾಮತ್, ಶ್ಲೋಕಾ ಕಾಮತ್, ಆದಿತ್ರಿ ಕಾಮತ್ ಭಾಗವಹಿಸಲಿದ್ದಾರೆ.

''ಈ ಸ್ಥಳಾಂತರವು ಹೊಸ ವಿಳಾಸಕ್ಕೆ ಸೀಮಿತವಾಗಿಲ್ಲ, ಇದು ಶಿವಮೊಗ್ಗದ ಗ್ರಾಹಕರ ಮೇಲಿರುವ ನಮ್ಮ ನಿರಂತರ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ. ನಾವು ಇಲ್ಲಿ ನಮ್ಮ ಪರಂಪರೆಯನ್ನು ಸಂಭ್ರಮಿಸುವ, ಹೆಚ್ಚಿನ ಸೌಲಭ್ಯವನ್ನು ನೀಡುವ ಮತ್ತು ನಮ್ಮ ಆತ್ಮೀಯ ಕಲಾಕೌಶಲವನ್ನು ಒಂದೇ ಸೂರಿನಡಿ ಪ್ರದರ್ಶಿಸುವ ವಂತಹ ಶೋರೂಂನ್ನು ನಿರ್ಮಿಸುತ್ತಿದ್ದೇವೆ,'' ಎಂದು ದ ಒರಿಜಿನಲ್ ಆಭರಣ ಜುವೆಲರ್ಸ್ ಉಡುಪಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸುಭಾಸ್ ಎಂ. ಕಾಮತ್ ತಿಳಿಸಿದ್ದಾರೆ.

''ಸಕಲ ಐಶಾರಾಮಿ ಅನುಭವವನ್ನು ನೀಡಲು ಈ ಹೊಸ ಶೋರೂಂನ್ನು ವಿನ್ಯಾಸಗೊಳಿಸಲಾಗಿದೆ. ಇದು ಬಂಗಾರ, ವಜ್ರ, ಬೆಳ್ಳಿ ಮತ್ತು ಮದುವೆಯ ಆಭರಣಗಳ ಆಯ್ದ ಸಂಗ್ರಹಗಳನ್ನು ಒಳಗೊಂಡಿದ್ದು, ಉತ್ತಮ ಗ್ರಾಹಕ ಸೇವೆ ಮತ್ತು ಆಧುನಿಕ ಶೈಲಿಯನ್ನು ಹೊಂದಿದೆ,'' ಎಂದಿದ್ದಾರೆ.



ದ ಒರಿಜಿನಲ್ ಆಭರಣ ಜುವೆಲರ್ಸ್ ಉಡುಪಿ ಸಂಸ್ಥೆ ಶಿವಮೊಗ್ಗ ಮಳಿಗೆ

ಮನರೇಗಾ ಕೂಲಿ ಕಾರ್ಮಿಕ ಸಾವು: ಬಿಸಿಲಾಘಾತದ ಶಂಕೆ

ರಾಯಚೂರು: ತಾಲೂಕಿನ ಯಾಪಲದಿನ್ನಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನರೇಗಾ ಕೆಲಸ ಮಾಡುತ್ತಿದ್ದ ಕೂಲಿ ಕಾರ್ಮಿಕ ಹುಸೇನಪ್ಪ ಮಡಿವಾಳ (50) ಅವರು ಬಿರುಬಿಸಿಲಿನ ತಾಪದಿಂದ ಮೃತಪಟ್ಟರು ಎಂದು ಶಂಕಿಸಲಾಗಿದೆ.

ನಾಲ್ಕು ದಿನಗಳಿಂದ ರಾಳ್ಕುಂಟಾ ಕೆರೆ ಅಭಿವೃದ್ಧಿ ಕಾಮಗಾರಿ ಯಲ್ಲಿ ದುಡಿಯುತ್ತಿದ್ದ ಹುಸೇನಪ್ಪ ಅವರು ಹಾಜರಾತಿಯ ಫೋಟೊ ತೆಗೆಯುವ ಸಮಯದಲ್ಲಿ ನಿತ್ರಾಣಗೊಂಡು ಕುಸಿದು ಬಿದ್ದರು. ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುವಾಗ ಅವರು ಕೊನೆಯುಸಿರೆಳೆದರು.

ಕೆಲಸದ ಸ್ಥಳದಲ್ಲಿ ಅವ್ಯವಸ್ಥೆ: ''ಮನರೇಗಾ ನಿಯಮಗಳ ಪ್ರಕಾರ ಕೆಲಸದ ಸ್ಥಳದಲ್ಲಿ ಕುಡಿಯುವ ನೀರು ಹಾಗೂ ನೆರಳಿನ ವ್ಯವಸ್ಥೆ ಮಾಡಿರಲಿಲ್ಲ. 44 ಡಿಗ್ರಿ ಉಷ್ಣಾಂಶದಲ್ಲಿ ಕೆಲಸ ಮಾಡುತ್ತಿದ್ದ ಹುಸೇನಪ್ಪ ಅವರು ರಕ್ತದೊತ್ತಡ ಕಡಿಮೆಯಾಗಿ ಮೃತಪಟ್ಟಿದ್ದಾರೆ. ಒಂದೆಡೆ ಮಧ್ಯಾಹ್ನದ ವೇಳೆ ಸಾರ್ವಜನಿಕರು ಮನೆಯಿಂದ ಹೊರಗೆ ಬರಬಾರದು ಎಂದು ಜಿಲ್ಲಾಡಳಿತ ಪ್ರಕಟಣೆ ಹೊರಡಿಸಿದೆ. ಇನ್ನೊಂದೆಡೆ ಮನರೇಗಾ ಕಾಮಗಾರಿ ನಡೆಯುವ ಸ್ಥಳದಲ್ಲಿ ನೆರಳು, ನೀರಿನ ವ್ಯವಸ್ಥೆ ಇರುವ ಬಗ್ಗೆ ಜಿಲ್ಲಾ ಪಂಚಾಯಿತಿ ಅಧಿಕಾರಿಗಳು ಮೇಲ್ವಿಚಾರಣೆ ನಡೆಸುತ್ತಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯ ಕೂಲಿಕಾರ್ಮಿಕರನ್ನು ಮರಣಕ್ಕೆ ತಳ್ಳುತ್ತಿದೆ,'' ಎಂದು ಮನರೇಗಾ ಕಾರ್ಮಿಕರು ಆರೋಪಿಸಿದರು.

''ಬಿಸಿಲಿನಿಂದಲೇ ಹುಸೇನಪ್ಪ ಮೃತಪಟ್ಟಿದ್ದು, ಸರಕಾರ ಪರಿಹಾರ ಕೊಡಬೇಕು,'' ಎಂದು ಒತ್ತಾಯಿಸಿ ಕುಟುಂಬಸ್ಥರು, ಮರಣೋತ್ತರ ಪರೀಕ್ಷೆ ಅವಕಾಶ ನೀಡಲಿಲ್ಲ, ಮಂಗಳವಾರ ಸ್ವಗ್ರಾಮ ದಲ್ಲಿ ಅಂತ್ಯಸಂಸ್ಕಾರ ನಡೆಯಿತು.

ಅಧಿಕಾರಿಗಳ ಹೇಳಿಕೆ: ''ಹುಸೇನಪ್ಪ ಕಡಿಮೆ ರಕ್ತದೊತ್ತಡದಿಂದ ಮೃತಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಶವ ಪರೀಕ್ಷೆ ನಡೆಸಿದರೆ ನಿಖರ ಕಾರಣ ಗೊತ್ತಾಗಲಿದೆ,'' ಎಂದು ರಿಮ್ಸ್ ಮೆಡಿಸನ್ ವಿಭಾಗದ ಡಾ.ಬಸವರಾಜ ಹಾಗೂ ತಾ.ಪಂ. ಇಒ ಚಂದ್ರಶೇಖರ ಪವಾರ್ ತಿಳಿಸಿದ್ದಾರೆ.

ಬೆಂಗಳೂರು ದಕ್ಷಿಣ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್‌ಎಸ್‌ಆರ್ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು-560102.

ಟೆಂಡರ್ ನೋಟಿಫಿಕೇಶನ್ ನಂ. ಬಿಬಿಎಂಪಿ/ಕಾಇ/ಹೆಚ್‌ಎಸ್‌ಆರ್ ಡಿ/ಟೆಂಡರ್-02/2026-27 ದಿನಾಂಕ : 28.04.2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
ದ್ವಿ ಲಕೋಟೆ ಟೆಂಡರ್

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಹೆಚ್‌ಎಸ್‌ಆರ್ ವಿಭಾಗ, ಜಿಬಿಎ, ಹೆಚ್‌ಎಸ್‌ಆರ್ ವಿಭಾಗ, ಹೆಚ್‌ಎಸ್‌ಆರ್ ಲೇಔಟ್, ಬಿಡಿಎ ಕಾಂಪ್ಲೆಕ್ಸ್, ಬೆಂಗಳೂರು-560102, ಬೆಂಗಳೂರು ದಕ್ಷಿಣ ನಗರ ಪಾಲಿಕೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಅಥವಾ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಎಸ್ಎಸ್‌ಬಿ / ರೈಲ್ವೆಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವವರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು
1.	2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 31 ರಲ್ಲಿ ಫೂಟ್‌ಪಾತ್‌ಗಳ ವಾರ್ಷಿಕ ನಿರ್ವಹಣೆ, ಚರಂಡಿಗಳ ಹೂಳು ತೆಗೆಯುವುದು, shoulder ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ ಮತ್ತು ಇತರ ಕಾಮಗಾರಿಗಳು. **ಅಂದಾಜು ಮೊತ್ತ : ರೂ. 35.00 ಲಕ್ಷಗಳು ಇಎಂಡಿ ಮೊತ್ತ : ರೂ. 70,000/- ವರ್ಗ : ಸಾಮಾನ್ಯ**
2.	2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 32 ರಲ್ಲಿ ಫೂಟ್‌ಪಾತ್‌ಗಳ ವಾರ್ಷಿಕ ನಿರ್ವಹಣೆ, ಚರಂಡಿಗಳ ಹೂಳು ತೆಗೆಯುವುದು, shoulder ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ ಮತ್ತು ಇತರ ಕಾಮಗಾರಿಗಳು. **ಅಂದಾಜು ಮೊತ್ತ : ರೂ. 35.00 ಲಕ್ಷಗಳು ಇಎಂಡಿ ಮೊತ್ತ : ರೂ. 35,000/- ವರ್ಗ : ಎಸ್‌ಸಿ**
3.	2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 69 ರಲ್ಲಿ ಫೂಟ್‌ಪಾತ್‌ಗಳ ವಾರ್ಷಿಕ ನಿರ್ವಹಣೆ, ಚರಂಡಿಗಳ ಹೂಳು ತೆಗೆಯುವುದು, shoulder ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ ಮತ್ತು ಇತರ ಕಾಮಗಾರಿಗಳು. **ಅಂದಾಜು ಮೊತ್ತ : ರೂ. 35.00 ಲಕ್ಷಗಳು ಇಎಂಡಿ ಮೊತ್ತ : ರೂ. 35,000/- ವರ್ಗ : ಎಸ್‌ಸಿ**
4.	2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 70 ರಲ್ಲಿ ಫೂಟ್‌ಪಾತ್‌ಗಳ ವಾರ್ಷಿಕ ನಿರ್ವಹಣೆ, ಚರಂಡಿಗಳ ಹೂಳು ತೆಗೆಯುವುದು, shoulder ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ ಮತ್ತು ಇತರ ಕಾಮಗಾರಿಗಳು. **ಅಂದಾಜು ಮೊತ್ತ : ರೂ. 35.00 ಲಕ್ಷಗಳು ಇಎಂಡಿ ಮೊತ್ತ : ರೂ. 70,000/- ವರ್ಗ : ಸಾಮಾನ್ಯ**
5.	2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 71 ರಲ್ಲಿ ಫೂಟ್‌ಪಾತ್‌ಗಳ ವಾರ್ಷಿಕ ನಿರ್ವಹಣೆ, ಚರಂಡಿಗಳ ಹೂಳು ತೆಗೆಯುವುದು, shoulder ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ ಮತ್ತು ಇತರ ಕಾಮಗಾರಿಗಳು. **ಅಂದಾಜು ಮೊತ್ತ : ರೂ. 35.00 ಲಕ್ಷಗಳು ಇಎಂಡಿ ಮೊತ್ತ : ರೂ. 70,000/- ವರ್ಗ : ಸಾಮಾನ್ಯ**
6.	2026-27ನೇ ಸಾಲಿಗೆ ವಾರ್ಡ್ ಸಂಖ್ಯೆ 72 ರಲ್ಲಿ ಫೂಟ್‌ಪಾತ್‌ಗಳ ವಾರ್ಷಿಕ ನಿರ್ವಹಣೆ, ಚರಂಡಿಗಳ ಹೂಳು ತೆಗೆಯುವುದು, shoulder ಮತ್ತು ಗ್ರ್ಯಾಟಿಂಗ್ ಶುಚಿಗೊಳಿಸುವಿಕೆ, ಮುರಿದ ಸ್ಲ್ಯಾಬ್‌ಗಳು ಮತ್ತು ಪೇವರ್ ಬ್ಲಾಕ್‌ಗಳ ಮರುಹೊಂದಿಸುವಿಕೆ ಮತ್ತು ಇತರ ಕಾಮಗಾರಿಗಳು. **ಅಂದಾಜು ಮೊತ್ತ : ರೂ. 35.00 ಲಕ್ಷಗಳು ಇಎಂಡಿ ಮೊತ್ತ : ರೂ. 35,000/- ವರ್ಗ : ಎಸ್‌ಟಿ**
7.	ಕೂಡ್ಲು ಉಪವಿಭಾಗದಲ್ಲಿ ಗುಂಡಿಗಳನ್ನು ಮುಚ್ಚುವುದು, ಇತರ ಸುಧಾರಣೆಗಳು ಮತ್ತು ನಿರ್ವಹಣಾ ಕಾರ್ಯಗಳು (ವಾರ್ಡ್ ಸಂಖ್ಯೆ 31 ಮತ್ತು 32 ಪ್ರತಿ ವಾರ್ಡ್‌ಗೆ 20 ಲಕ್ಷ). **ಅಂದಾಜು ಮೊತ್ತ : ರೂ. 40.00 ಲಕ್ಷಗಳು ಇಎಂಡಿ ಮೊತ್ತ : ರೂ. 80,000/- ವರ್ಗ : ಸಾಮಾನ್ಯ**
8.	ಇಬ್ಬಲೂರು ಉಪವಿಭಾಗದಲ್ಲಿ ಗುಂಡಿಗಳನ್ನು ಮುಚ್ಚುವುದು, ಇತರ ಸುಧಾರಣೆಗಳು ಮತ್ತು ನಿರ್ವಹಣಾ ಕಾರ್ಯಗಳು (ವಾರ್ಡ್ ಸಂಖ್ಯೆ 69 ಮತ್ತು 70 ಪ್ರತಿ ವಾರ್ಡ್‌ಗೆ 20 ಲಕ್ಷ). **ಅಂದಾಜು ಮೊತ್ತ : ರೂ. 40.00 ಲಕ್ಷಗಳು ಇಎಂಡಿ ಮೊತ್ತ : ರೂ. 40,000/- ವರ್ಗ : ಎಸ್‌ಸಿ**
9.	ಇಬ್ಬಲೂರು ಉಪವಿಭಾಗದಲ್ಲಿ ಗುಂಡಿಗಳನ್ನು ಮುಚ್ಚುವುದು, ಇತರ ಸುಧಾರಣೆಗಳು ಮತ್ತು ನಿರ್ವಹಣಾ ಕಾರ್ಯಗಳು (ವಾರ್ಡ್ ಸಂಖ್ಯೆ 71 ಮತ್ತು 72 ಪ್ರತಿ ವಾರ್ಡ್‌ಗೆ 20 ಲಕ್ಷ). **ಅಂದಾಜು ಮೊತ್ತ : ರೂ. 40.00 ಲಕ್ಷಗಳು ಇಎಂಡಿ ಮೊತ್ತ : ರೂ. 80,000/- ವರ್ಗ : ಸಾಮಾನ್ಯ**
10.	2026-27ನೇ ಸಾಲಿಗೆ ಕೂಡ್ಲು ಉಪವಿಭಾಗದ ವಾರ್ಡ್ ಸಂಖ್ಯೆ 31 ಮತ್ತು 32 ರಲ್ಲಿನ arterial and sub arterial ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು, ಪಾದಚಾರಿ ಮಾರ್ಗಗಳ ನಿರ್ವಹಣೆ ಮತ್ತು ಚರಂಡಿಗಳು ಮತ್ತು shoulders ಹೂಳು ತೆಗೆಯುವ ವಾರ್ಷಿಕ ನಿರ್ವಹಣೆ. **ಅಂದಾಜು ಮೊತ್ತ : ರೂ. 30.00 ಲಕ್ಷಗಳು ಇಎಂಡಿ ಮೊತ್ತ : ರೂ. 60,000/- ವರ್ಗ : ಸಾಮಾನ್ಯ**
11.	2026-27ನೇ ಸಾಲಿಗೆ ಇಬ್ಬಲೂರು ಉಪವಿಭಾಗದ ವಾರ್ಡ್ ಸಂಖ್ಯೆ 69 ಮತ್ತು 70 ರಲ್ಲಿನ arterial and sub arterial ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು, ಪಾದಚಾರಿ ಮಾರ್ಗಗಳ ನಿರ್ವಹಣೆ ಮತ್ತು ಚರಂಡಿಗಳು ಮತ್ತು shoulders ಹೂಳು ತೆಗೆಯುವ ವಾರ್ಷಿಕ ನಿರ್ವಹಣೆ. **ಅಂದಾಜು ಮೊತ್ತ : ರೂ. 30.00 ಲಕ್ಷಗಳು ಇಎಂಡಿ ಮೊತ್ತ : ರೂ. 60,000/- ವರ್ಗ : ಸಾಮಾನ್ಯ**
12.	2026-27ನೇ ಸಾಲಿಗೆ ಇಬ್ಬಲೂರು ಉಪವಿಭಾಗದ ವಾರ್ಡ್ ಸಂಖ್ಯೆ 71 ಮತ್ತು 72 ರಲ್ಲಿನ arterial and sub arterial ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚುವುದು, ಪಾದಚಾರಿ ಮಾರ್ಗಗಳ ನಿರ್ವಹಣೆ ಮತ್ತು ಚರಂಡಿಗಳು ಮತ್ತು shoulders ಹೂಳು ತೆಗೆಯುವ ವಾರ್ಷಿಕ ನಿರ್ವಹಣೆ. **ಅಂದಾಜು ಮೊತ್ತ : ರೂ. 30.00 ಲಕ್ಷಗಳು ಇಎಂಡಿ ಮೊತ್ತ : ರೂ. 30,000/- ವರ್ಗ : CAT-I**
13.	ಹೆಚ್‌ಎಸ್‌ಆರ್ ಲೇಔಟ್ ವಿಭಾಗಕ್ಕೆ ಕೋಲ್ಡ್ ಮಿಕ್ಸ್ ಟಾರ್ ಬ್ಯಾಗ್‌ಗಳ ಖರೀದಿಗೆ ವಾರ್ಷಿಕ ನಿರ್ವಹಣೆ. **ಅಂದಾಜು ಮೊತ್ತ : ರೂ. 12.00 ಲಕ್ಷಗಳು ಇಎಂಡಿ ಮೊತ್ತ : ರೂ. 30,000/- ವರ್ಗ : ಸಾಮಾನ್ಯ**
14.	ಹೆಚ್‌ಎಸ್‌ಆರ್ ಲೇಔಟ್ ವಿಭಾಗಕ್ಕೆ revolving fund ಅಡಿಯಲ್ಲಿ ತುರ್ತು ದುರಸ್ತಿ ಮತ್ತು ನಿರ್ವಹಣಾ ಕಾರ್ಯಗಳು. **ಅಂದಾಜು ಮೊತ್ತ : ರೂ. 18.00 ಲಕ್ಷಗಳು ಇಎಂಡಿ ಮೊತ್ತ : ರೂ. 27,000/- ವರ್ಗ : CAT-II (A)**
15.	2026-27ನೇ ಸಾಲಿಗೆ ಕೂಡ್ಲು ಉಪ ವಿಭಾಗದ ವಾರ್ಡ್ ಸಂಖ್ಯೆ 31 ಮತ್ತು 32 ರಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆಗೆ ಟಿಪ್ಪರ್ ಮತ್ತು ಕಾರ್ಮಿಕರನ್ನು ಒದಗಿಸುವುದು ಮತ್ತು ಸರಬರಾಜು ಮಾಡುವುದು. **ಅಂದಾಜು ಮೊತ್ತ : ರೂ. 5.00 ಲಕ್ಷಗಳು ಇಎಂಡಿ ಮೊತ್ತ : ರೂ. 12,500/- ವರ್ಗ : ಸಾಮಾನ್ಯ**
16.	2026-27ನೇ ಸಾಲಿಗೆ ಇಬ್ಬಲೂರು ಉಪ ವಿಭಾಗದ ವಾರ್ಡ್ ಸಂಖ್ಯೆ 69 ಮತ್ತು 70 ರಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆಗೆ ಟಿಪ್ಪರ್ ಮತ್ತು ಕಾರ್ಮಿಕರನ್ನು ಒದಗಿಸುವುದು ಮತ್ತು ಸರಬರಾಜು ಮಾಡುವುದು. **ಅಂದಾಜು ಮೊತ್ತ : ರೂ. 5.00 ಲಕ್ಷಗಳು ಇಎಂಡಿ ಮೊತ್ತ : ರೂ. 12,500/- ವರ್ಗ : ಸಾಮಾನ್ಯ**
17.	2026-27ನೇ ಸಾಲಿಗೆ ಕೂಡ್ಲು ಉಪ ವಿಭಾಗದ ವಾರ್ಡ್ ಸಂಖ್ಯೆ 71 ಮತ್ತು 72 ರಲ್ಲಿ ಗಣೇಶ ಮೂರ್ತಿಗಳ ವಿಸರ್ಜನೆಗೆ ಟಿಪ್ಪರ್ ಮತ್ತು ಕಾರ್ಮಿಕರನ್ನು ಒದಗಿಸುವುದು ಮತ್ತು ಸರಬರಾಜು ಮಾಡುವುದು. **ಅಂದಾಜು ಮೊತ್ತ : ರೂ. 10.00 ಲಕ್ಷಗಳು ಇಎಂಡಿ ಮೊತ್ತ : ರೂ. 25,000/- ವರ್ಗ : ಸಾಮಾನ್ಯ**

ಟೆಂಡರ್‌ನ ಕಾರ್ಯಸೂಚಿ: (1) ಟೆಂಡರ್ ದಾಖಲೆಗಳನ್ನು http://KPPP.karnataka.gov.in ವೆಬ್‌ಸೈಟ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: 02.05.2026 (2) ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **12.05.2026 ರಂದು ಅಥವಾ ಅದಕ್ಕೂ ಮೊದಲು 16.00 ಗಂಟೆಗೆ** (3) ಟೆಂಡರ್ ತೆರೆಯುವ ದಿನಾಂಕ, ಸಮಯ ಮತ್ತು ಸ್ಥಳ: 13.05.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಹೆಚ್‌ಎಸ್‌ಆರ್ ವಿಭಾಗ ಕಚೇರಿಯಲ್ಲಿ ವೆಬ್‌ಸೈಟ್ http://KPPP.karnataka.gov.in ಮೂಲಕ ತೆರೆಯಲಾಗುತ್ತದೆ.

ಸಹಿ/- ಕಾರ್ಯಪಾಲಕ ಅಭಿಯಂತರರು, ಹೆಚ್‌ಎಸ್‌ಆರ್ ವಿಭಾಗ, ಬೆಂದನಪಾ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು-560010. ಟೆಲಿಫೋನ್: 080-22024000
ಇ-ಮೇಲ್: mdkrdcl@gmail.com, ವೆಬ್‌ಸೈಟ್: http://www.krdcl.in

ಸಂ:ಕರಅನಿನಿ/ಎಂಡಿ/ಎಪಿಎ/2026-27/285 ದಿನಾಂಕ: 28-04-2026

ವಕೀಲರ ನೋಂದಣಿಗಾಗಿ ಅರ್ಜಿಗಳ ಆಹ್ವಾನ ಪ್ರಕಟಣೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಕರ್ನಾಟಕದಾದ್ಯಂತವಿರುವ ಸುಪ್ರೀಂಕೋರ್ಟ್, ಹೈಕೋರ್ಟ್ (ಎಲ್ಲಾ ಬೆಂಚ್‌ಗಳು), ಸಿಎಟಿ/ಕೆಎಸ್‌ಎಟಿ/ಆರ್ಬಿಟ್ರೇಷನ್ ಟ್ರಿಬ್ಯೂನಲ್‌ಗಳು, ಸಿವಿಲ್ & ವಾಣಿಜ್ಯ ಕೋರ್ಟ್‌ಗಳು, ಜಿಲ್ಲಾ ಕೋರ್ಟ್‌ಗಳು, ಗ್ರಾಹಕರ ಫೋರಂಗಳು ಮತ್ತು ಇತರೆ ಕೋರ್ಟ್/ಟ್ರಿಬ್ಯೂನಲ್‌ಗಳಲ್ಲಿ ನಿಗಮದ ಪರವಾಗಿ ಪ್ರತಿನಿಧಿಸಲು ಅರ್ಹ ವಕೀಲರ ನೋಂದಣಿಗಾಗಿ ಅರ್ಜಿಗಳನ್ನು ಆಹ್ವಾನಿಸಿದೆ. ಅನುಭವಿ ಮತ್ತು ಸ್ಥಳೀಯ ವಕೀಲರಿಗೆ ಆದ್ಯತೆ ನೀಡಲಾಗುವುದು.

1. ವಿದ್ಯಾರ್ಹತೆ: •ಯುಜಿಸಿ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಾನೂನು ಪದವಿ (ಎಲ್‌ಎಲ್‌ಎಂ ಆದ್ಯತೆ). •ಬಾರ್ ಕೌನ್ಸಿಲ್‌ನಲ್ಲಿ ನೋಂದಣಿಯಾಗಿರಬೇಕು.

2. ಅನುಭವ: •ಸುಪ್ರೀಂ ಕೋರ್ಟ್/ಹೈಕೋರ್ಟ್: ಸುಪ್ರೀಂ ಕೋರ್ಟ್/ಹೈಕೋರ್ಟ್ ಮುಂದೆ ಸಂಬಂಧಿತ ಕ್ಷೇತ್ರದಲ್ಲಿ (ಭೂಸ್ವಾಧೀನ, ಟೆಂಡರ್, ಸಿವಿಲ್ ಮತ್ತು ವಾಣಿಜ್ಯ, ಕಾರ್ಮಿಕ, ಸೇವೆ, ಸ್ಥಳೀಯ ಸಂಸ್ಥೆ, ತೆರಿಗೆ, ಇತ್ಯಾದಿ) ಕನಿಷ್ಠ 20 ವರ್ಷಗಳ ಅನುಭವ. •ಸಿಎಟಿ/ಕೆಎಸ್‌ಎಟಿ (ಸೇವಾ ವಿಷಯಗಳು): ಕನಿಷ್ಠ 15 ವರ್ಷಗಳು ವಕೀಲರಾಗಿ ಸೇವೆ ಸಲ್ಲಿಸಿರಬೇಕು. •ಮಧ್ಯಸ್ಥಿಕೆ ವಿಷಯಗಳು: ಕನಿಷ್ಠ 20 ವರ್ಷಗಳು (ವಾಣಿಜ್ಯ ಮತ್ತು ನಿರ್ಮಾಣ ವಿವಾದಗಳು ಆದ್ಯತೆ). •ಜಿಲ್ಲಾ/ಸಿವಿಲ್ ನ್ಯಾಯಾಲಯಗಳು: ಕನಿಷ್ಠ 15 ವರ್ಷಗಳು (ಸಿವಿಲ್, ಭೂಮಿ, ವಾಣಿಜ್ಯ ವಿಷಯಗಳು). •ಇತರ ನ್ಯಾಯಾಲಯಗಳು/ನ್ಯಾಯಮಂಡಳಿಗಳು: ಕನಿಷ್ಠ 5 ವರ್ಷಗಳು.

ಅರ್ಜಿ ಸಲ್ಲಿಸುವ ಪ್ರಕ್ರಿಯೆ:

ಆಸಕ್ತಿ ಹೊಂದಿರುವ ವಕೀಲರು ಸ್ವಯಂ ದೃಢೀಕರಿಸಿದ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬೇಕು:

• ಶೈಕ್ಷಣಿಕ ಅರ್ಹತೆ ಮತ್ತು ದಾಖಲಾತಿ ಪ್ರಮಾಣಪತ್ರ •ಅನುಭವದ ಪುರಾವೆ •ಸಂಬಂಧಿತ ಕ್ಷೇತ್ರಗಳಲ್ಲಿ ಕನಿಷ್ಠ 10 ತೀರ್ಪುಗಳು/ಆದೇಶಗಳ ಪ್ರತಿಗಳು •ಯಾವುದೇ ಪೂರಕ ದಾಖಲೆಗಳು.

ಅರ್ಜಿಗಳನ್ನು ಅಂಚೆ/ಸ್ಪೀಡ್ ಪೋಸ್ಟ್ ಮೂಲಕ **ದಿನಾಂಕ: 18.05.2026 ರಂದು ಅಥವಾ ಮೊದಲು** ಕೆಳಸಹಿದಾರರಿಗೆ ಸಲ್ಲಿಸಬೇಕು.

ಸಾಮಾನ್ಯ ಷರತ್ತುಗಳು: • ನೋಂದಣಿಯು 2 ವರ್ಷಗಳವರೆಗೆ ಇರುತ್ತದೆ (ಕಾರ್ಯಕ್ಷಮತೆಯ ಆಧಾರದ ಮೇಲೆ 1 ವರ್ಷ ವಿಸ್ತರಿಸಬಹುದು). •ಅರ್ಜಿ ಸಲ್ಲಿಕೆಯು ಪಟ್ಟಿಯಲ್ಲಿ ಸ್ಥಾನ ಪಡೆಯುವುದನ್ನು ಖಾತರಿಪಡಿಸುವುದಿಲ್ಲ. • ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅರ್ಜಿಯನ್ನು ಸ್ವೀಕರಿಸುವ/ತಿರಸ್ಕರಿಸುವ ಹಕ್ಕನ್ನು ಕರಅನಿನಿ ಕಾಯ್ದಿರಿಸಿದೆ. • ಶುಲ್ಕವನ್ನು ಅನುಮೋದಿತ ವೇಳಾಪಟ್ಟಿಯ ಪ್ರಕಾರ ವಿಧಿಸಲಾಗುತ್ತದೆ; ಯಾವುದೇ ಶುಲ್ಕವನ್ನು ಪಾವತಿಸಲಾಗುವುದಿಲ್ಲ.

ಗಮನಿಸಿ: • ಅರ್ಜಿ ನಮೂನೆ ಮತ್ತು ವಿವರವಾದ ಮಾರ್ಗಸೂಚಿಗಳು https://krdcl.co.in ನಲ್ಲಿ ಲಭ್ಯವಿದೆ. • ಅರ್ಜಿದಾರರು ಅರ್ಜಿ ಸಲ್ಲಿಸುವ ಮೊದಲು ಎಲ್ಲಾ ನಿಯಮಗಳು ಮತ್ತು ಷರತ್ತುಗಳನ್ನು ಓದಿಕೊಳ್ಳತಕ್ಕದ್ದು.

ಸಹಿ/- ವ್ಯವಸ್ಥಾಪಕ ನಿರ್ದೇಶಕರು, ಕರಅನಿನಿ, ಬೆಂಗಳೂರು.

DIPR/CP/YC/397/2026-27

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು

ಸಂಖ್ಯೆ:ಸಅಸಂ-ಸಾಅವಿರಾ- KPPP.ಪೋ.ಟೆಂಡರ- ಸಿಆರ್- /2026-27 ದಿನಾಂಕ:27-04-2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ ಪ್ರಕಟಣೆ

(KPPP ಎರಡನೇ ಆವೃತ್ತಿಯಲ್ಲಿನ ಪೋರ್ಟಲ್ ಮೂಲಕ) (ಮೊದಲನೇಯ ಬಾರಿಗೆ)

2026-27 ನೇ ಸಾಲಿನಲ್ಲಿ ರಾಯಚೂರು ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಎಲ್ಲಾ ವಲಯಗಳಲ್ಲಿ 2026-27 ನೇ ಸಾಲಿನಲ್ಲಿ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಸಾಮಾಜಿಕ ಅರಣ್ಯ ಯೋಜನೆ ಹಾಗೂ ಆರ್.ಕೆ.ವಿ.ವೈ ಯೋಜನೆಯಡಿಯಲ್ಲಿ ಯೋಜನೆಯಡಿಯ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ನೆಡುತೋಪು ಪೋಷಣೆ, ನೆಡುತೋಪು ನಿರ್ಮಾಣ, ಸಸಿಗಳ ಪೋಷಣೆ ಹಾಗೂ ಸಸಿಗಳನ್ನು ಬೆಳೆಸಲು ಅರಣ್ಯೀಕರಣ ಕಾಮಗಾರಿಗಳಿಗಾಗಿ :http://kppp.karnataka.gov.in) ಪೋರ್ಟಲ್ ನಲ್ಲಿ ದಿನಾಂಕ: 27-04-2026 ರಿಂದ ದಿನಾಂಕ:06-05-2026 ರವರೆಗೆ ದ್ವಿಲಕೋಟೆ ಪದ್ದತಿಯಲ್ಲಿ ಟೆಂಡರ ಕರೆಯಲಾಗಿದೆ. ದಿನಾಂಕ:07-05-2026 ರಂದು ತಾಂತ್ರಿಕ ಬಿಡ್. ಆರ್ಥಿಕ ಬಿಡ್ ದಿನಾಂಕ:08-05-2026 ರಂದು ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕಛೇರಿಯ ನಾಮಫಲಕಕ್ಕೆ ಲಗತ್ತಿಸಿರುವ ಟೆಂಡರ ಪ್ರಕಟಣೆಯನ್ನು ಕಛೇರಿ ಸಮಯದಲ್ಲಿ ನೋಡಬಹುದು.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು

DIP/RCR/42/KSMC&A/44/2026-27



ಬಿ-ರೈಡ್
ಬೆಂಗಳೂರು ಸಂಯೋಜಿತ ರೈಲು ಮೂಲಸೌಲಭ್ಯ ಅಭಿವೃದ್ಧಿ ಉದ್ಯಮ ನಿಯಮಿತ

ಬೆಂಗಳೂರು ಉಪನಗರ ಸಾರಿಗೆ ಯೋಜನೆ (ಬಿಎಸ್‌ಆರ್‌ಪಿ)

Website: www.kride.in Email ID: gmprocurement@kride.in

ಇ-ಟೆಂಡರ್ ಪ್ರಕಟಣೆ

Tender Notice No.: Bi-RIDE/MANPOWER/2026, Date: 28.04.2026.
Tender ID: 2026_KRIDE_275910_1.

"ಬಿ-ರೈಡ್ ಕಚೇರಿಗಳು / ಫೀಲ್ಡ್ ಕಾಮಗಾರಿಗಳಿಗಾಗಿ ಹೊರಗುತ್ತಿಗೆ ಆಧಾರದ ಮೇಲೆ ನುರಿತ ಮಾನವ ಸಂಪನ್ಮೂಲ, ಹೌಸ್‌ಕೀಪಿಂಗ್ ಮತ್ತು ಭದ್ರತಾ ಸೇವೆಗಳನ್ನು ಒದಗಿಸುವುದಕ್ಕಾಗಿ" ಟೆಂಡರ್ ಆಹ್ವಾನಿಸಲಾಗಿದೆ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **29.05.2026 ಮಧ್ಯಾಹ್ನ 03.00 ಗಂಟೆ.** ವಿವರಗಳಿಗೆ https://etenders.gov.in/eprocure/app ಗೆ ಭೇಟಿ ಕೊಡಿ.

ಸಹಿ/- ಪ್ರಧಾನ ವ್ಯವಸ್ಥಾಪಕರು/ಪ್ರೊಕ್ಯೂರ್‌ಮೆಂಟ್/ಬಿ-ರೈಡ್

DIPR/CP/YC/398/2026-27

KridePrm | Kride Bsrp | kride_bsrp | KRIDE,BSRP

ಭಾರತೀಯ ವಿಜ್ಞಾನ ಸಂಸ್ಥೆ

ಬೆಂಗಳೂರು-560012

ಐಐಎಸ್‌ಸಿ/ಸಿಸಿಎಂಡಿ/ಟೆಂಡರ್ಸ್/2026-27 ದಿನಾಂಕ: 22.04.2026

ಟೆಂಡರ್ ಪ್ರಕಟಣೆ-ಐಐಎಸ್‌ಸಿ/ಟೆಂಡರ್-ಇಎಲ್‌ಇ-01/2026-27

ಭಾರತೀಯ ವಿಜ್ಞಾನ ಸಂಸ್ಥೆಯು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ https://eprocure.gov.in/ ಮೂಲಕ ದ್ವಿ ಲಕೋಟೆ ವ್ಯವಸ್ಥೆಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. "ಭಾರತೀಯ ವಿಜ್ಞಾನ ಸಂಸ್ಥೆಯ ಮುಖ್ಯ ಕಟ್ಟಡಕ್ಕೆ ಮಿಂಚಿನ (Lightning) ರಕ್ಷಣಾ ವ್ಯವಸ್ಥೆ" ಕಲ್ಪಿಸಲು ಕೆಪಿಡಬ್ಲ್ಯುಡಿ/ ಸಿಪಿಡಬ್ಲ್ಯುಡಿ/ ರೈಲ್ವೇಸ್/ ಎಂಇಎಸ್/ ಕೇಂದ್ರ ಸಾರ್ವಜನಿಕ ವಲಯ ಘಟಕಗಳು/ ಅಥವಾ ಯಾವುದೇ ಸರ್ಕಾರಿ ಇಲಾಖೆಗಳ **ದರ್ಜೆ-1/ ದರ್ಜೆ ಎ ಎಲೆಕ್ಟ್ರಿಕಲ್ ಗುತ್ತಿಗೆದಾರರು** ಅಡಿಯಲ್ಲಿ ನೋಂದಾಯಿತ ಯಾವುದೇ ಪರಿಣಿತ ಸಂಸ್ಥೆಗಳು (ಅಥವಾ) ಬಿಡ್‌ದಾರರು **ಮೂಲ ಸಲಕರಣೆ ತಯಾರಕರು (OEM) ಅಥವಾ ಅದರ ಅಧಿಕೃತ ಏಜೆನ್ಸಿಯಾಗಿರಬೇಕು.** OEM ನಿಂದ OEM ದೃಢೀಕರಣ ಪತ್ರದ ದಾಖಲೆ ಪುರಾವೆಯನ್ನು ಅರ್ಜಿಯೊಂದಿಗೆ ಸಲ್ಲಿಸಿದವರು ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ಅರ್ಹರಾಗಿರುತ್ತಾರೆ. ಕಾಮಗಾರಿಯ ಅಂದಾಜು ವೆಚ್ಚ **ರೂ. 18,84,954/-.** ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ **12ನೇ ಮೇ 2026, 15:30 ಗಂಟೆಗೆ.** ಇತರೆ ಯಾವುದೇ ವಿವರಗಳಿಗಾಗಿ ಸೆಂಟರ್ ಫಾರ್ ಕ್ಯಾಂಪಸ್ ಮ್ಯಾನೇಜ್‌ಮೆಂಟ್ & ಡೆವೆಲೊಪ್‌ಮೆಂಟ್, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರುರವರ ಕಛೇರಿಯಿಂದ ಯಾವುದೇ ಕೆಲಸದ ದಿನಗಳಲ್ಲಿ ಅಥವಾ ಇ-ಮೇಲ್ **office.ccmd@iisc.ac.in** ಮೂಲಕ ಸಂಪರ್ಕಿಸಬಹುದು.

ಸಹಿ/-, ರಿಜಿಸ್ಟ್ರಾರ್

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್

ಯೋಜನಾ ಅಭಿಯಂತರರವರ ಕಛೇರಿ-01, ನಂ.30/1, 3ನೇ ಮಹಡಿ, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬಂಡ್ ಪ್ರದೇಶ, ವಸಂತನಗರ, ಬೆಂಗಳೂರು-560 052,

B-Smile

ಸಂಖ್ಯೆ: B-SMILE/ಯೋಅ-01/ಟೆಂಡರ್/03/2026-27 ದಿನಾಂಕ: 27-04-2026

ಪ್ರಸ್ತಾವನೆಗಾಗಿ ವಿನಂತಿ (ದ್ವಿ ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್: https://kppp.karnataka.gov.in

ಬೆಂಗಳೂರು ನಗರದಲ್ಲಿ ನಿರ್ದಿಷ್ಟ ಮೂಲಸೌಕರ್ಯ ಕಾಮಗಾರಿಗಳ ಅನುಷ್ಠಾನಕ್ಕಾಗಿ ಕರ್ನಾಟಕ ಸರ್ಕಾರವು ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (B-SMILE) ಪರವಾಗಿ, ಯೋಜನಾ ಅಭಿಯಂತರರು-01 ರವರು ನೋಂದಾಯಿತ ಸಂಸ್ಥೆಗಳು/ಏಜೆನ್ಸಿಗಳು/ವ್ಯಕ್ತಿಗಳಿಂದ ಯೋಜನಾ ನಿರ್ವಹಣಾ ಕಾಮಗಾರಿಗಳಿಗೆ ಇದೇ ರೀತಿಯ ಕೆಲಸಗಳನ್ನು ಮಾಡಿರುವ ಅನುಭವ ಹೊಂದಿರುವ ಯೋಜನಾ ನಿರ್ವಹಣಾ ಸಲಹೆಗಾರರಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1)	**IOC ಯಲ್ಲಿ ಎಲಿವೇಟೆಡ್ ರೋಟರಿ ಫ್ಲೈಓವರ್ ಹಾಗೂ ಬೈಯಪ್ಪನಹಳ್ಳಿ ರೈಲ್ವೆ ಲೆವೆಲ್ ಕ್ರಾಸಿಂಗ್‌ನಲ್ಲಿ 2 ಲೇನ್ ROB ನಿರ್ಮಾಣಾ ಕಾಮಗಾರಿಗಳಿಗಾಗಿ ಲಂಪ್ಸಮ್, ಟರ್ನ್‌ಕೀ, ಅನುಮತಿಸಬಹುದಾದ ಬೆಲೆ ಏರಿಕೆ ಆಧಾರದೊಂದಿಗೆ ಯೋಜನಾ ನಿರ್ವಹಣಾ ಸಮಾಲೋಚನೆ (PMC) ಮತ್ತು ಪುರಾವೆ ಪರಿಶೀಲನಾ ಸೇವೆಗಳನ್ನು ಒದಗಿಸುವುದು.** ಯೋಜನಾ ವೆಚ್ಚ ಲಕ್ಷ ರೂ.ಗಳಲ್ಲಿ: **29400.00** ಅಂದಾಜು ವೆಚ್ಚ (ಜಿಎಸ್‌ಟಿ ಶುಲ್ಕಗಳು ಸೇರಿದಂತೆ) (ಲಕ್ಷ ರೂ.ಗಳಲ್ಲಿ): **294.00.** ಇಎಂಡಿ ಮೊತ್ತ **(Deposit @ 1% of APT)** (ರೂ.ಗಳಲ್ಲಿ): **2,94,000/-.**

ಟೆಂಡರ್‌ನ ಕಾರ್ಯಸೂಚಿ: 1) ಟೆಂಡರ್ ದಾಖಲೆಗಳ ಲಭ್ಯತೆ ದಿನಾಂಕ: **29.04.2026ರ ಸಂಜೆ 4.30 ಗಂಟೆಯಿಂದ** 2) ಬಿಡ್ ಪೂರ್ವ ಸಭೆಯ ದಿನಾಂಕ: **06.05.2026ರ ಸಂಜೆ 4.00 ಗಂಟೆಗೆ.** 3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **12.05.2026 ರ ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **13.05.2026ರ ಬೆಳಗ್ಗೆ 11.30 ಗಂಟೆಗೆ.** 5) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: **ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ಪಡೆದ ನಂತರ ತಿಳಿಸಲಾಗುವುದು.**

ಸಹಿ/-, ಯೋಜನಾ ಅಭಿಯಂತರರು-01,
ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್

ಕೇಂದ್ರ ರೇಷ್ಮೆ ತಂತ್ರಜ್ಞಾನ ಸಂಶೋಧನಾ ಸಂಸ್ಥೆ

ಕೇಂದ್ರ ರೇಷ್ಮೆ ಮಂಡಳಿ
(ವಸ್ತ್ರ ಸಚಿವಾಲಯ - ಭಾರತ ಸರ್ಕಾರ)
ಬಿ.ಟಿ.ಎಂ. ಲೇಔಟ್, ಮಡಿವಾಳ, ಬೆಂಗಳೂರು - 560 068
ದೂರವಾಣಿ: +91-80-2628 2699 ಇಮೇಲ್: cstriban.csb@nic.in ಜಾಲತಾಣ: cstri.res.in

ಪತ್ರ ಸಂಖ್ಯೆ: CSB/CSTRI/JRF-PA/3(287)/2025-26-ES **ನೇರ ಸಂದರ್ಶನ** ದಿನಾಂಕ: 29.04.2026

ಯೋಜನೆ "Salt and alkali free reactive dyeing on silk - A sustainable approach" ಗಾಗಿ ಒಂದು **(01) ಯೋಜನಾ ಸಹಾಯಕ (PA)** ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ನೇಮಕಾತಿ ತಾತ್ಕಾಲಿಕ ಆಧಾರದ ಮೇಲೆ ಇರುತ್ತದೆ ಮತ್ತು ಡಿಸೆಂಬರ್ 2027 ರವರೆಗೆ ಅಥವಾ ಯೋಜನೆ ಪೂರ್ಣಗೊಳ್ಳುವವರೆಗೆ, ಯಾವುದು ಮೊದಲೋ ಅಲ್ಲಿಯವರೆಗೆ ಮುಂದುವರಿಯುತ್ತದೆ. ಈ ಹುದ್ದೆಯು ಯೋಜನೆಯೊಂದಿಗೆ ಅಂತ್ಯಗೊಳ್ಳುವುದು. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು **20.05.2026** ರಂದು ಬೆಳಿಗ್ಗೆ **10.00** ಗಂಟೆಗೆ ಮೇಲಿನ ವಿಳಾಸದಲ್ಲಿ ನೇರ-ಸಂದರ್ಶನಕ್ಕೆ ಹಾಜರಾಗಬಹುದು. ವಿವರಗಳಿಗಾಗಿ, ವೆಬ್‌ಸೈಟ್‌ಗಳನ್ನು ನೋಡಿ: **cstri.res.in & csb.gov.in.**

ಸಹಿ/-
ನಿರ್ದೇಶಕರು

ಸಿಬಿಸಿ: 41109/11/0001/2627

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

Ph. Fax No. 08267-295207 E-mail:eeubpdvn1@gmail.com

ಸಂಖ್ಯೆ:ಕಾಇಂ/ವಿಜನಿನಿ/ಭಮೇಯೋ/ವಿ-1/ಕ/ಟಿ-01/4701/2026-27 ದಿನಾಂಕ:28.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ : ಕೆ.ಪಿ.ಪಿ.ಪಿ ಮುಖಾಂತರ

ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ. ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ 4710 ಶೀರ್ಷಿಕೆಯಡಿಯಲ್ಲಿ ಅನುಮೋದನೆಯಾಗಿರುವ ಇಂಡೆಂಟ್ ನಂ. **VJNL/2025-26/OW/WORK_INDENT467/CALL-2** ಮತ್ತು **VJNL/2025-26/OW/WORK_INDENT472/CALL-2** ಕಾಮಗಾರಿಗೆ ದ್ವಿ-ಲಕೋಟೆ ಪದ್ಧತಿ ಮೂಲಕ ಅರ್ಹ ಗುತ್ತಿಗೆದಾರರಿಂದ ಶೇಕಡವಾರು ಟೆಂಡರ್ ಆಹ್ವಾನಿಸಲಾಗಿದೆ. ಕೆ.ಪಿ.ಪಿ.ಪಿ ಅಂತರ್ಜಾಲ ತಾಣದಿಂದ ("https://kppp.karnataka.gov.in") ಟೆಂಡರ್ ದಾಖಲೆಗಳನ್ನು ದಿನಾಂಕ: 29.04.2026ರಿಂದ ಡೌನ್ ಲೋಡ್ ಮಾಡಿಕೊಳ್ಳಬಹುದು. ದಿನಾಂಕ:08.05.2026ರ 17.30ಗಂಟೆಯವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದು. ಕಾಮಗಾರಿಗಳ ಟೆಂಡರ್‌ಗಿಟ್ಟ ಮೊತ್ತ/ಇ.ಎಂ.ಡಿ ಮೊತ್ತ/ಗುತ್ತಿಗೆದಾರರ ಅರ್ಹತೆ/ಟೆಂಡರ್ ನಿಯಮ/ಟೆಂಡರ್ ಪ್ರೊಸೆಸಿಂಗ್ ಶುಲ್ಕ ಇತ್ಯಾದಿ ವಿವರಗಳನ್ನು ಕೆ.ಪಿ.ಪಿ.ಪಿ ಅಂತರ್ಜಾಲ ತಾಣದಿಂದ ಮೂಲಕ ಮಾಹಿತಿ ಪಡೆಯಬಹುದು ಅಥವಾ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ದಿನಾಂಕ: 05.05.2026 ರ 17.30 ಗಂಟೆಯವರೆಗೆ ಸಂಪರ್ಕಿಸಬಹುದು. ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ. ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.01 ಕಡೂರು ಕಛೇರಿಯಲ್ಲಿ ಸ್ವೀಕೃತ ಟೆಂಡರ್‌ಗಳನ್ನು ದಿನಾಂಕ: 11.05.2026 ರಂದು 11.00 ಗಂಟೆಯ ನಂತರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತೆರೆಯಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ವಿ.ಜ.ನಿ.ನಿ ಭಮೇಯೋ ವಿಭಾಗ ನಂ1 ಕಡೂರು.

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114
ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೂರವಾಣಿ/ಫ್ಯಾಕ್ಸ್: 080-27934470 / 27935412
Email: hosakote.pa@gmail.com URL: www.hoskote.tpa.gov.in

ಸಂಖ್ಯೆ: ಹೊಯೋಪ್ರಾ/ಭೂಉಬ/03/2026-27 ದಿನಾಂಕ: 28.04.2026

ಸಾರ್ವಜನಿಕ ಪ್ರಕಟಣೆ

ವಿಷಯ: ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 14(ಎ) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಕಾಯ್ದಿರಿಸಲಾಗಿರುವ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಶ್ರೀ ಚಿನ್ನಸ್ವಾಮಿ ಬಿನ್ ಸಿಂಪಣ್ಣ ಇವರು ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ದೇವನಗೊಂದಿ ಗ್ರಾಮದ ಸ.ನಂ. 135/6 ರಲ್ಲಿನ 13 ಎಕರೆ ವಿಸ್ತೀರ್ಣದ ಜಮೀನನ್ನು **"ಕೃಷಿ ವಲಯದಿಂದ ವಾಣಿಜ್ಯ ಉದ್ದೇಶಕ್ಕೆ"** ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 14 (ಎ) ರಡಿಯಲ್ಲಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಅರ್ಜಿದಾರರ ಮನವಿಯನ್ನು ಪರಿಶೀಲಿಸಲಾಗಿ, ಪ್ರಶ್ನಿತ ಜಮೀನುಗಳ ಸುತ್ತಮುತ್ತಲಿನ ಸದರಿ ಜಮೀನುಗಳ ಸುತ್ತಮುತ್ತಲಿನ ಪರಿಸರದಲ್ಲಿ ಕೈಗಾರಿಕಾ/ವಾಣಿಜ್ಯ ಬೆಳವಣಿಗೆಗಳು ಬಂದಿದ್ದು/ಬರುತ್ತಲಿದ್ದು, "ಉದ್ದೇಶಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒಳಗೊಂಡ ಯೋಜನಾಬದ್ಧವಾದ ವಾಣಿಜ್ಯ ಚಟುವಟಿಕೆಯನ್ನು ಪ್ರಾರಂಭಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಸಾರ್ವಜನಿಕರಿಗೆ ಅನೇಕ ಉದ್ಯೋಗಾವಕಾಶಗಳು ದೊರಕುವುದರ ಜೊತೆಗೆ ಸುತ್ತಲಿನ ಪರಿಸರದ ಪ್ರದೇಶವು ಸಹ ಯೋಜನಾಬದ್ಧವಾಗಿ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ" ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತೇವೆ ಎಂದು ಅರ್ಜಿದಾರರು ತಮ್ಮ ಪ್ರಮಾಣ ಪತ್ರದ ಮುಖಾಂತರ ತಿಳಿಸಿರುತ್ತಾರೆ.

ಹಾಗಾಗಿ, ಸದರಿ ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯನ್ನು ಪರಿಗಣಿಸುವ ಬಗ್ಗೆ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ/ಇತರರಿಗೆ/ಪರಿಸರಕ್ಕೆ ಉಂಟಾಗಬಹುದಾದಂತಹ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-,
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ

ವಾಸಾಸಂಇ/ವಾಪ್ರ/ಎಲ್‌ಸಿ/400/2026-27

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಬಿ35/ಅಅ(ಯೋಮೇ)/22415/2021-22/448 ದಿನಾಂಕ: 28.04.2026

ನೇರ ಸಂದರ್ಶನ

ಕವಿಪ್ರನಿನಿ ವತಿಯಿಂದ, ಹೊಸ ಉಪಕೇಂದ್ರಗಳ ಭೂಸ್ವಾಧೀನ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ತ್ವರಿತಗೊಳಿಸುವ ಸಲುವಾಗಿ, ಸರ್ಕಾರದ ವಿವಿಧ ಇಲಾಖೆಯಿಂದ ನಿವೃತ್ತರಾದ ತಹಶೀಲ್ದಾರರು ಹಾಗೂ ನಿವೃತ್ತ ರಾಜಸ್ವ ನಿರೀಕ್ಷಕರನ್ನು ಒಪ್ಪಂದದ ಆಧಾರದ ಮೇಲೆ ನಿಯೋಜಿಸಲು ಉದ್ದೇಶಿಸಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳು ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸುವುದರೊಂದಿಗೆ, ಹೊಸ ಉಪಕೇಂದ್ರಗಳ ಸ್ಥಾಪನೆಗಾಗಿ ಭೂಸ್ವಾಧೀನ ಪ್ರಕರಣಗಳನ್ನು ಅನುಸರಿಸಿ ತ್ವರಿತಗೊಳಿಸುವುದು, ಭೂ ಪರಿಹಾರ, ಮಾರ್ಗ (Corridor) ಪರಿಹಾರ ಹಾಗೂ ಮರಗಳ ಪರಿಹಾರದ ನಿಗದಿ ಮತ್ತು ವಿತರಣಾ ಪ್ರಕ್ರಿಯೆಯನ್ನು ಸುಗಮಗೊಳಿಸುವುದು ಹಾಗೂ ಸಂಬಂಧಿತ ಪ್ರಾಜೆಕ್ಟ್ ವಲಯಗಳಿಗೆ ಸಂಬಂಧಿಸಿದ ರಾಜಸ್ವ ಅನುಮೋದನೆಗಳನ್ನು ಶೀಘ್ರಗೊಳಿಸುವ ಕರ್ತವ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

ಅರ್ಹತೆ ಹಾಗೂ ಅಗತ್ಯ ದಾಖಲೆಗಳು

ಆಸಕ್ತ ಅಭ್ಯರ್ಥಿಗಳು ಕೆಳಕಂಡ ದಾಖಲೆಗಳ ಪ್ರತಿಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗಬೇಕು: 1) ಆಧಾರ್ ಕಾರ್ಡ್ (ವಯಸ್ಸಿನ ಪುರಾವೆಗಾಗಿ), 2) ನಿವೃತ್ತಿ ಪ್ರಮಾಣಪತ್ರ, **ವಯೋಮಿತಿ:** ಸಂದರ್ಶನದ ದಿನಾಂಕಕ್ಕೆ 65 ವರ್ಷ ಮೀರಿರಬಾರದು.

ನೇರ ಸಂದರ್ಶನ ವೇಳಾಪಟ್ಟಿ

ದಿನಾಂಕ	ಸ್ಥಳ	ಸಮಯ
11.05.2026	11ನೇ ಮಹಡಿ ಮಂಡಳಿ ಸಭಾಂಗಣ, ನಿಗಮ ಕಚೇರಿ, ಇಂಧನ ಭವನ, ಬೆಂಗಳೂರು	ಬೆಳಿಗ್ಗೆ 10:00 ರಿಂದ ಮಧ್ಯಾಹ್ನ 3:00ರವರೆಗೆ

ಸಹಿ/- ಅಧೀಕ್ಷಕ ಅಭಿಯಂತರರು (ವಿದ್ಯುತ್)
ಪ್ರಾಜೆಕ್ಟ್ ಮಾನಿಟರಿಂಗ್ ಮತ್ತು ಎಂ.ಐ.ಎಸ್, ಕ.ವಿ.ಪ್ರ.ನಿ.ನಿ, ನಿಗಮ ಕಚೇರಿ,
ಇಂಧನ ಭವನ, ಆನಂದ್‌ರಾವ್ ವೃತ್ತ, ಬೆಂಗಳೂರು

ಕಾರ್ಯಪಾಲಕ ಅಭಿಯಂತರರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ಸಂ: ಕಾಪಾಅ/ಗ್ರಾ.ಕು.ನೀ.& ನೈ.ವಿ/ಚಿ.ಪುರ/ಡಿ.ಪಿ.ಆರ್/ಟೆಂಡರ್/2026-27/
ದಿನಾಂಕ:27.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2026-27
ದಿ: 27.04.2026 (KPPP PORTAL ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ವ್ಯಾಪ್ತಿಯಡಿ ಎತ್ತಿನಹೊಳೆ ಮೂಲದಿಂದ ಚಿಕ್ಕಬಳ್ಳಾಪುರ ಜಿಲ್ಲೆಯ ಗ್ರಾಮೀಣ ಭಾಗಗಳಿಗೆ DBOT ಮಾದರಿಯಡಿಯಲ್ಲಿ ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿಗೆ ಪ್ರಾಥಮಿಕ ಯೋಜನಾ ವರದಿ (PSR), ತಾಂತ್ರಿಕ ವಿಶೇಷಣಗಳೊಂದಿಗೆ ಪರಿಕಲ್ಪನಾ ಟಿಪ್ಪಣಿ ಮತ್ತು ವೆಚ್ಚದ ಅಂದಾಜುಗಳನ್ನು ತಯಾರಿಸಲು ಸೂಕ್ತ ಏಜನ್ಸಿಗಳಿಂದ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಕರಾರು ನಿಯಮಗಳು ಹಾಗೂ ಇನ್ನಿತರ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ **(https://kppp.karnataka.gov.in/)** ನಲ್ಲಿ ಪಡೆಯಬಹುದಾಗಿರುತ್ತದೆ. ನಿಗದಿಪಡಿಸಿರುವ ಕರಾರು ನಿಯಮಗಳಂತೆ ಸಂಬಂಧಪಟ್ಟ ದಾಖಲಾತಿಗಳನ್ನು ದರಗಳೊಂದಿಗೆ ಸಲ್ಲಿಸಲು ಕೋರಿದೆ. ಹೆಚ್ಚಿನ ಮಾಹಿತಿಗಳು ಬೇಕಾಗಿದ್ದಲ್ಲಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ, ಕಛೇರಿಯ ವೇಳೆಯಲ್ಲಿ (ರಜೆ ದಿನಗಳನ್ನು ಹೊರತು ಪಡಿಸಿ) ಪಡೆದುಕೊಳ್ಳಬಹುದಾಗಿದೆ. ಟೆಂಡರ್ ಮಾಹಿತಿ ಈ ಕೆಳಗಿನಂತಿವೆ: (1) ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ **ದಿನಾಂಕ: 08.05.2026 ರ ಸಂಜೆ 4.00 ಗಂಟೆಯವರೆಗೆ** (2) ಕರ್ನಾಟಕ ಸಾರ್ವಜನಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ದರಗಳನ್ನು ನಮೂದಿಸಿ ಸಲ್ಲಿಸುವ ಕೊನೆಯ **ದಿನಾಂಕ: 12.05.2026 ಸಂಜೆ 4.30 ಗಂಟೆಯವರೆಗೆ** (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 14.05.2026 ಬೆಳಿಗ್ಗೆ 11.00 ಗಂಟೆಗೆ** (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 16.05.2026 ಬೆಳಿಗ್ಗೆ 11.00 ಗಂಟೆಗೆ.**

ಸಹಿ/- ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:42/ಕೆಎಸ್‌ಎಂಸಿಎ/2026-27

ಈಜಿಪುರ ಮೇಲ್ಸೇತುವೆ: ₹8.80 ಕೋಟಿಗೆ ಆಕ್ಷೇಪಣೆ »10

ಜನಗಣತಿ ರಾಷ್ಟ್ರೀಯ ಕರ್ತವ್ಯ, ನಿರ್ಲಕ್ಷಿಸುವಂತಿಲ್ಲ: ಹೈಕೋರ್ಟ್ »10

ಮೇ ಬಿಸಿಲಿಗೆ ನೀರು ರಿಸರ್ವ್

ಕುಡಿಯುವ ನೀರಿಗೆ ಹೆಚ್ಚಿದ ಬೇಡಿಕೆ | ಕ್ಷೀಣಿಸಿದ ಅಂತರ್ಜಲ ಮಟ್ಟ | ಮಾರ್ಚ್‌ನಿಂದಲೇ ಬೇಡಿಕೆ ಶೇ.15-20ರಷ್ಟು ಹೆಚ್ಚಳ

■ **ಬಿ.ಎನ್.ಧನಂಜಯ** ಬೆಂಗಳೂರು
dhananjaya.gowda@timesofindia.com

ಹೆಚ್ಚುತ್ತಿರುವ ಬಿರುಬಿಸಿಲು, ಬಾರದ ಮಳೆಯಿಂದ, ನಗರದಲ್ಲಿ ದಿನದಿಂದ ದಿನಕ್ಕೆ ಅಂತರ್ಜಲ ಮಟ್ಟ ಕ್ಷೀಣಿಸುತ್ತಿದೆ. ಪರಿಣಾಮ, ಮಾರ್ಚ್‌ನಿಂದಲೇ ನೀರಿನ ಬೇಡಿಕೆ ಹೆಚ್ಚಾಗಿದೆ. ಮೇ ತಿಂಗಳಲ್ಲಿ ಇದು ಶೇ.25ರಷ್ಟು ಹೆಚ್ಚುವ ಸಾಧ್ಯತೆಯಿದ್ದು, ಬೆಂಗಳೂರು ಜಲಮಂಡಳಿ ಇದಕ್ಕಾಗಿ ಪ್ರತಿದಿನ ಹೆಚ್ಚುವರಿ 300 ದಶಲಕ್ಷ ಲೀಟರ್ ನೀರು ಮೀಸಲಿರಿಸಿದೆ.

ಭಾರತೀಯ ವಿಜ್ಞಾನ ಸಂಸ್ಥೆಯು ಹೊರವಲಯದ ಪ್ರದೇಶಗಳೂ ಸೇರಿದಂತೆ ನಗರದ 65 ವಾರ್ಡ್‌ಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದೆ ಎಂದು ಫೆಬ್ರವರಿಯಲ್ಲಿ ಜಲಮಂಡಳಿಗೆ ವರದಿ ನೀಡಿತ್ತು. ಇದರನ್ವಯ ಮಂಡಳಿಯು ನೀರಿನ ಸಮಸ್ಯೆ ಬಾಧಿಸುವ ಪ್ರದೇಶಗಳಿಗೆ ನೀರಿನ ಪೂರೈಕೆ ಮಾಡಲು ವ್ಯವಸ್ಥೆ ಮಾಡಿಕೊಂಡಿತ್ತು. ಆದರೀಗ, ದಿನದಿಂದ ದಿನಕ್ಕೆ ತಾಪಮಾನ ಏರಿಕೆಯಾಗುತ್ತಿದ್ದು, ಇನ್ನೂ ಮಳೆ ಬಾರದ ಪರಿಣಾಮ ನಗರದಲ್ಲಿನ ಕೇಂದ್ರ ಭಾಗದಲ್ಲಿ ಕೊಳವೆಬಾವಿಗಳೂ ಬತ್ತಲು ಆರಂಭಿಸಿವೆ. ಮಾರ್ಚ್‌ನಿಂದಲೇ ನೀರಿಗೆ ಶೇ.15ರಿಂದ 20ರಷ್ಟು ಬೇಡಿಕೆ ಹೆಚ್ಚಿದ್ದು, ಪರಿಸ್ಥಿತಿ ಹೀಗೇ ಮುಂದುವರಿದರೆ ಈ ಪ್ರಮಾಣ ಮೇ ತಿಂಗಳಲ್ಲಿ ಮತ್ತಷ್ಟು ಹೆಚ್ಚುವ ಸಾಧ್ಯತೆಯಿದೆ. ಜಲಮಂಡಳಿಯು ಮೇ ತಿಂಗಳಲ್ಲಿ ನೀರಿನ ಕೊರತೆ ಉಂಟಾಗದಂತೆ 300 ಎಂಎಲ್‌ಡಿ ನೀರು ಮೀಸಲಿಟ್ಟಿದೆ.

ಬೆಂಗಳೂರು ನಗರ ಅಂತರ್ಜಲ ಅವಲಂಬಿತ ನಗರವಾಗಿದ್ದು, ಸಾಕಷ್ಟು ಕೊಳವೆಬಾವಿಗಳು ಕೇವಲ ಕಬ್ಬಿಣ ಕೊಳವೆಗಳಾಗಿ ಉಳಿದಿವೆ. ನಗರದಲ್ಲಿ ಸುಮಾರು 3.5ರಿಂದ 4 ಲಕ್ಷಕ್ಕೂ ಅಧಿಕ ವೈಯಕ್ತಿಕ ಕೊಳವೆಬಾವಿಗಳಿದ್ದು, ಅತಿಯಾದ ಬಳಕೆ, ಮಳೆ ನೀರಿನ ಸಂರಕ್ಷಣೆಗೆ ಆದ್ಯತೆ ನೀಡದಿರುವುದು, ತೀವ್ರ ಬೇಸಿಗೆ ಹಾಗೂ ಮಳೆಯಿಲ್ಲದ ಕಾರಣ, ಶೇ.40ರಷ್ಟು ಕೊಳವೆಬಾವಿಗಳಲ್ಲಿ ಅಂತರ್ಜಲ ಕ್ಷೀಣಿಸುತ್ತಿದೆ. ಅಂತರ್ಜಲ ಮೌಲ್ಯಮಾಪನ ವರದಿ-2025ರ ಪ್ರಕಾರ, ಶೇ.100ರಷ್ಟು (ವಾರ್ಷಿಕ 308.39 ಎಂಸಿಎಂನಷ್ಟು) ಅಂತರ್ಜಲ ಹೊರ ತೆಗೆಯಲಾಗುತ್ತಿದೆ ಎನ್ನಲಾಗಿದ್ದು, ಬೆಂಗಳೂರು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಯಲಹಂಕ, ಆನೇಕಲ್ ತಾಲೂಕುಗಳಲ್ಲಿ ಅಂತರ್ಜಲ ಶೋಷಣೆಗೆ ಒಳಗಾಗಿದೆ.

ಆನ್‌ಲೈನ್ ಆರ್ಡರ್‌ನಲ್ಲಿಯೇ ಏರಿಕೆ: ಆನ್‌ಲೈನ್ ಮೂಲಕ ಕಾವೇರಿ ನೀರು ಆರ್ಡರ್ ಮಾಡುವವರ ಸಂಖ್ಯೆ ಹೆಚ್ಚಿದೆ. ಜನವರಿಯಿಂದ ಏಪ್ರಿಲ್ 27ರವರೆಗೆ 12,568 ಆನ್‌ಲೈನ್ ಆರ್ಡರ್‌ಗಳು ಬಂದಿದ್ದು, ಮಾರ್ಚ್ ಮತ್ತು ಏಪ್ರಿಲ್‌ನಲ್ಲಿಯೇ 7,326 ಆರ್ಡರ್‌ಗಳು ಬಂದಿವೆ. ಆದರೆ, ಬಲ್ಕ್ ಆರ್ಡರ್ ಸಂಖ್ಯೆ ಮಾತ್ರ ಕಡಿಮೆ ಆಗಿದೆ. ಈ ನಾಲ್ಕು ತಿಂಗಳಲ್ಲಿ 18,482 ಬಲ್ಕ್ ಆರ್ಡರ್‌ಗಳು ಬಂದಿದ್ದು, ಮಾರ್ಚ್- ಏಪ್ರಿಲ್‌ನಲ್ಲಿ 8,258 ಆರ್ಡರ್‌ಗಳು ಬಂದಿವೆ. 4 ತಿಂಗಳಲ್ಲಿ (ಏಪ್ರಿಲ್ 27ರವರೆಗೆ) 148 ಎಂಎಲ್‌ಡಿ ನೀರು ಸಂಚಾರಿ ಕಾವೇರಿ ಉಪಕ್ರಮದಡಿ ಸರಬರಾಜು ಮಾಡಲಾಗಿದೆ. ಈ ಮೂಲಕ 1.93 ಕೋಟಿ ರೂ. ಆದಾಯ ಸಂಗ್ರಹವಾಗಿದೆ.



ಸಂಚಾರಿ ಕಾವೇರಿ ನೋಂದಣಿಯಲ್ಲೂ ಹೆಚ್ಚಳ

ಖಾಸಗಿ ಟ್ಯಾಂಕರ್ ಹಾವಳಿ ನಿಯಂತ್ರಣಕ್ಕೆ ತರಲು ಜಾರಿಗೊಳಿಸಿದ ಜಲಮಂಡಳಿಯ ಸಂಚಾರಿ ಕಾವೇರಿ ಉಪಕ್ರಮವೂ ಬೇಸಿಗೆಯಂತಹ ಸಮಯದಲ್ಲಿ ಸಾಕಷ್ಟು ಜನರಿಗೆ ಅನುಕೂಲವಾಗಿದೆ. ನೋಂದಣಿ ಮಾಡಿಕೊಳ್ಳುವವರ ಸಂಖ್ಯೆಯೂ ಹೆಚ್ಚುತ್ತಿದೆ. ಜನವರಿಯಲ್ಲಿ 663, ಫೆಬ್ರವರಿಯಲ್ಲಿ 1019, ಮಾರ್ಚ್‌ನಲ್ಲಿ ಈ ಸಂಖ್ಯೆ 1607 ಹಾಗೂ ಏಪ್ರಿಲ್ 27ರವರೆಗೆ 1725 ಮಂದಿ ನೋಂದಾಯಿಸಿಕೊಂಡಿದ್ದಾರೆ. ''ಅಂತರ್ಜಲ ಮಟ್ಟ ಕುಸಿದಿದೆ. ಪರಿಣಾಮವಾಗಿ ಮನೆಗಳಲ್ಲಿನ ಕೊಳವೆಬಾವಿಗಳಲ್ಲಿ ನೀರು ಕ್ಷೀಣವಾಗಿದೆ. ಕೊಳವೆಬಾವಿ ಇದೆ ಎಂಬ ಕಾರಣಕ್ಕೆ ಕಾವೇರಿ ಸಂಪರ್ಕ ಪಡೆಯದವರು, ಸಂಚಾರಿ ಕಾವೇರಿ ಅಡಿಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಬೇಸಿಗೆ ಆರಂಭವಾದಾಗಿನಿಂದ ಈ ಸಂಖ್ಯೆ ಹೆಚ್ಚುತ್ತಿದೆ. ಮಾರ್ಚ್‌ನಿಂದಲೇ ಶೇ.15ರಷ್ಟು ಬೇಡಿಕೆ ಹೆಚ್ಚಿದೆ. ಈ ಪ್ರಮಾಣ ಮೇ ತಿಂಗಳಲ್ಲಿ ಶೇ.20-25ರಷ್ಟಾಗಬಹುದಾಗಿದ್ದು, ಜಲಮಂಡಳಿ ಅಗತ್ಯ ನೀರು ಪೂರೈಕೆ ಮಾಡಲು ಸನ್ನದ್ಧವಾಗಿದೆ,'' ಎನ್ನುತ್ತಾರೆ ಮಂಡಳಿಯ ಅಧಿಕಾರಿಯೊಬ್ಬರು.

ಖಾಸಗಿ ಟ್ಯಾಂಕರ್ ದುಬಾರಿ

ಸಂಚಾರಿ ಕಾವೇರಿ ಉಪಕ್ರಮದಡಿ ಬೆಂಗಳೂರು ಜಲಮಂಡಳಿ 6000 ಲೀಟರ್ ನೀರನ್ನು 740 ರೂ.ಗೆ ನೀಡುತ್ತಿದೆ. ಆದರೆ, ಖಾಸಗಿ ಟ್ಯಾಂಕರ್‌ಗಳು ಇದೇ ಪ್ರಮಾಣದ ನೀರಿಗೆ 800ರಿಂದ 1300ರೂ. ವರೆಗೂ ವಸೂಲು ಮಾಡುತ್ತಿವೆ. ಸಂಚಾರಿ ಕಾವೇರಿ ನೀರು ಬುಕ್ಕಿಂಗ್ ಮಾಡಿದ 18ರಿಂದ 24 ಗಂಟೆಗಳಲ್ಲಿ ಪೂರೈಕೆಯಾಗುತ್ತದೆ. ಹಾಗಾಗಿ, ತುರ್ತು ಇರುವವರು ಖಾಸಗಿ ಟ್ಯಾಂಕರ್‌ಗಳ ಮೊರೆ ಹೋಗುತ್ತಿದ್ದಾರೆ. 5 ಸಾವಿರ ಲೀಟರ್ ನೀರಿಗೆ 500ರಿಂದ 700 ರೂ. ಪಡೆಯಲಾಗುತ್ತಿದೆ. ಪೀಣ್ಯ, ದಾಸರಹಳ್ಳಿ, ಬಾಗಲಗುಂಟೆ, ಜಾಲಹಳ್ಳಿ, ಲಗ್ಗೆರೆ ಭಾಗದಲ್ಲಿ 6000 ಲೀಟರ್‌ಗೆ ಖಾಸಗಿ ಟ್ಯಾಂಕರ್ ಮಾಲೀಕರು 800ರಿಂದ 900 ರೂ. ದರ ಪಡೆದರೆ, ಆರ್‌ಆರ್‌ನಗರ, ಕೆಂಗೇರಿ, ಮಾರತ್ತಹಳ್ಳಿ ಸೇರಿದಂತೆ ನಗರದ ಹೊರವಲಯದ ಬಡಾವಣೆಗಳಲ್ಲಿ 1300 ರೂ.ವರೆಗೂ ಪಡೆಯಲಾಗುತ್ತಿದೆ.

ಸದ್ಯ ಮಂಡಳಿಯಲ್ಲಿ ನೀರಿಗೆ ಕೊರತೆ ಇಲ್ಲ, ಮೇ ತಿಂಗಳಲ್ಲಿ ಈ ಬೇಡಿಕೆ ಹೆಚ್ಚಾಗುವ ಸಾಧ್ಯತೆಯಿದೆ. ಹೆಚ್ಚುವರಿ 300 ಎಂಎಲ್‌ಡಿ ಬಳಕೆ ಮಾಡಲು ತೀರ್ಮಾನಿಸಿದ್ದೇವೆ. ಕಡಿಮೆ ಆದಾಯವಿರುವ ಸಮುದಾಯಗಳು, ಕಂದಾಯ ಬಡಾವಣೆಗಳಿಗೆ ನೀರು ಪೂರೈಕೆ ಮಾಡಲು 1109 ಹೆಚ್ಚುವರಿ ಮಿನಿ ಟ್ಯಾಂಕ್ ಅಳವಡಿಸಲಾಗಿದೆ. ಇವುಗಳಿಗೆ ನೀರು ತುಂಬಿಸಲು 182 ಮಿನಿ ಟ್ಯಾಂಕರ್‌ಗಳು, ಸಂಚಾರಿ ಕಾವೇರಿಯಡಿ 151 ಟ್ಯಾಂಕರ್ ವ್ಯವಸ್ಥೆ ಮಾಡಲಾಗಿದೆ.
-ಡಾ.ರಾಮ್ ಪ್ರಸಾತ್ ಮನೋಹರ್
ಅಧ್ಯಕ್ಷರು, ಜಲಮಂಡಳಿ

300ಎಂಎಲ್‌ಡಿ ನೀರು ಮೀಸಲು

ಸದ್ಯ ನಗರದ 1.50 ಕೋಟಿ ಜನಸಂಖ್ಯೆಗೆ ಜಲಮಂಡಳಿ 1 ರಿಂದ 5 ಹಂತದ ಯೋಜನೆಗಳಡಿ ನಿತ್ಯ 2,225 ಎಂಎಲ್‌ಡಿ ನೀರು ಪೂರೈಕೆ ಮಾಡಬಹುದಾಗಿದ್ದು, ಸುಮಾರು 354 ಎಂಎಲ್‌ಡಿ ಉಳಿತಾಯ ಮಾಡುವ ಮೂಲಕ, 1,871ಎಂಎಲ್‌ಡಿ ಮಾತ್ರ ಸರಬರಾಜು ಮಾಡುತ್ತಿದೆ. ಕಾವೇರಿ 1 ಮತ್ತು 2ನೇ ಹಂತಕ್ಕೆ ನಿತ್ಯ ತಲಾ 140 ಎಂಎಲ್‌ಡಿ ನೀರು ಸರಬರಾಜು ಮೀಸಲಿಟ್ಟಿದ್ದು, ಇಲ್ಲಿ ತಲಾ 135 ಎಂಎಲ್‌ಡಿ ಸರಬರಾಜು ಮಾಡಲಾಗುತ್ತಿದೆ. ಐದನೇ ಹಂತಕ್ಕೆ 775 ಎಂಎಲ್‌ಡಿ ಮೀಸಲಿಡಲಾಗಿದೆ. ಇನ್ನೂ ಅನೇಕರು ಸಂಪರ್ಕ ಪಡೆದಿರದ ಕಾರಣ ಹಾಗೂ ಕೆಲವೆಡೆ ನೀರು ಸರಬರಾಜು ಕಾಮಗಾರಿ ಬಾಕಿ ಇರುವ ಹಿನ್ನೆಲೆಯಲ್ಲಿ 421 ಎಂಎಲ್‌ಡಿ ಮಾತ್ರ ಬಳಕೆಯಾಗುತ್ತಿದೆ. ಈ ಉಳಿಕೆ ನೀರಿನಲ್ಲಿ ಮೇ ತಿಂಗಳಿಗೆ ಹೆಚ್ಚುವರಿ 300ಎಂಎಲ್‌ಡಿಯನ್ನು ಮೀಸಲಿಟ್ಟಿದೆ.

ಮಕ್ಕಳ ಮೇಲೆ ಹಲ್ಲೆ: ಕಾಂಗ್ರೆಸ್ ಮುಖಂಡನ ಬಂಧನ

ಬೆಂಗಳೂರು: ಮಕ್ಕಳ ಮೇಲೆ ಹಲ್ಲೆನಡೆಸಿದ ಆರೋಪದಡಿ ಮಹಾಲಕ್ಷ್ಮಿ ಲೇಔಟ್ ಕಾಂಗ್ರೆಸ್ ಮುಖಂಡ ಆನಂದ್ ನಾಯ್ಡು ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ಪ್ರಕರಣದ ಮತ್ತೊಬ್ಬ ಆರೋಪಿಯಾದ ಆನಂದ್ ನಾಯ್ಡು ಸಹಚರ ಪರಾರಿಯಾಗಿದ್ದು, ಪತ್ತೆ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆನಂದ್ ನಾಯ್ಡು ಅನೈತಿಕ ಸಂಬಂಧ ಇಟ್ಟುಕೊಂಡಿದ್ದ ಮಹಿಳೆಯ ಮಕ್ಕಳ ಮೇಲೆ ಹಲ್ಲೆನಡೆಸಿದ್ದಾರೆ. ಅವರು ಮಕ್ಕಳ ಕೈ ಮತ್ತು ಕಾಲುಗಳಿಗೆ ಕಬ್ಬಿಣದ ಸಲಾಕೆಯಿಂದ ಹೊಡೆದಿದ್ದಾರೆ. ಈ ಸಂಬಂಧ ಮಹಿಳೆಯ ಪತಿ ದೂರು ಕೊಟ್ಟಿದ್ದು, ಆನಂದ್ ನಾಯ್ಡು ವಿರುದ್ಧ ಪೋಕ್ಸೊ ಕಾಯಿದೆಯಡಿ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ವಿವಾಹಿತ ಮಹಿಳೆಯ ಜತೆ ಆನಂದ್ ನಾಯ್ಡು ಅನೈತಿಕ ಸಂಬಂಧ ಇಟ್ಟುಕೊಂಡಿದ್ದರು. ಈ ವಿಚಾರ ತಿಳಿದ ಮಹಿಳೆಯ ಪತಿ ಆಕ್ಷೇಪ ವ್ಯಕ್ತಪಡಿಸಿದ್ದರು. ಇದರಿಂದ ಕೋಪಗೊಂಡಿದ್ದ ಆನಂದ್ ನಾಯ್ಡು, ಮಹಿಳೆಯ ಪತಿ ಮನೆಯಲ್ಲಿ ಇಲ್ಲದ ವೇಳೆ ಮನೆಗೆ ನುಗ್ಗಿ ಮಕ್ಕಳ ಮೇಲೆ ಹಲ್ಲೆನಡೆಸಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಜಾರ್ಖಂಡ್ ಯುವತಿಯ ಸಾವಿನ ಕಾರಣ ನಿಗೂಢ, ತನಿಖೆ ಚುರುಕು

ಬೆಂಗಳೂರು: ಆಡುಗೋಡಿಯ ಮನೆಯಲ್ಲಿ ಜಾರ್ಖಂಡ್ ಮೂಲದ ಯುವತಿ ಪೂಜಾ ದತ್ತ (34) ಅನುಮಾನಾಸ್ಪದ ಸಾವಿನ ಕಾರಣ ನಿಗೂಢವಾಗಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ.

ಆತ್ಮಹತ್ಯೆ, ಕೊಲೆ, ಹಸಿವಿನಿಂದ ಸಾವು ಸೇರಿದಂತೆ ಹಲವು ಆಯಾಮಗಳಲ್ಲಿ ತನಿಖೆ ನಡೆಸುತ್ತಿದ್ದು, ಪೊಲೀಸರಿಗೆ ಈವರೆಗೂ ಯಾವುದೇ ನಿರ್ಧಾರಕ್ಕೆ ಬರಲು ಸಾಧ್ಯವಾಗಿಲ್ಲ. ಜಾರ್ಖಂಡ್‌ನಲ್ಲಿರುವ ಪೂಜಾ ಪೋಷಕರಿಗೆ ಪೊಲೀಸರು ಮಾಹಿತಿ ಕೊಟ್ಟಿದ್ದು, ಅವರು ಬುಧವಾರ (ಏ.29) ಬೆಂಗಳೂರಿಗೆ ಬರಲಿದ್ದಾರೆ.

ಪೂಜಾರ ಮೃತದೇಹವನ್ನು ಸೇಂಟ್ ಜಾನ್ಸ್ ಆಸ್ಪತ್ರೆಯಲ್ಲಿ ಇರಿಸಲಾಗಿದ್ದು, ಪೋಷಕರು ಬೆಂಗಳೂರಿಗೆ ಬಂದ ನಂತರ ಮರಣೋತ್ತರ ಪರೀಕ್ಷೆ ನಡೆಸಲು ನಿರ್ಧರಿಸಲಾಗಿದೆ. ಮರಣೋತ್ತರ ಪರೀಕ್ಷೆ ಹಾಗೂ ಕುಟುಂಬ ಸದಸ್ಯರ ವಿಚಾರಣೆ ಬಳಿಕ ಪೂಜಾ ಸಾವಿನ ಕಾರಣದ ಬಗ್ಗೆ ಸ್ಪಷ್ಟತೆ ಸಿಗಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೊಸೂರು ರಸ್ತೆಯ ಪ್ರತಿಷ್ಠಿತ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಪೂಜಾ, ಆಡುಗೋಡಿ ಬಳಿಯ ಮುನಿಕೃಷ್ಣಪ್ಪ ಲೇಔಟ್‌ನ ಬಾಡಿಗೆ ಮನೆಯಲ್ಲಿ ಒಬ್ಬರೇ ವಾಸವಾಗಿದ್ದರು. ಕಳೆದೊಂದು ವಾರದಿಂದ ಕೆಲಸಕ್ಕೆ ಹೋಗದ ಅವರು ಮನೆಯಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ. ಪೂಜಾ, ಯುವಕನೊಬ್ಬನನ್ನು ಪ್ರೀತಿಸುತ್ತಿದ್ದರು. ಆ ಯುವಕ ಆಗಾಗ್ಗೆ ಪೂಜಾರ ಮನೆಗೆ ಬಂದು ಹೋಗುತ್ತಿದ್ದ ಎಂದು ನೆರೆಹೊರೆಯವರ ವಿಚಾರಣೆಯಿಂದ ಗೊತ್ತಾಗಿದೆ ಎಂದು ಪೊಲೀಸರು ಹೇಳಿದ್ದಾರೆ. »10

ಇದು ರಸ್ತೆ ಕಾಮಗಾರಿಯೋ ಅಥವಾ ಚಿನ್ನದ ಲೇಪನವೋ: ಬಿಜೆಪಿ ಕಿಡಿ

ಪ್ರತಿ ರಸ್ತೆ ಗುಂಡಿ ಮುಚ್ಚಲು 1 ಲಕ್ಷ ರೂ. ವೆಚ್ಚ!

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚಲು ಪ್ರತಿ ಗುಂಡಿಗೆ 1 ಲಕ್ಷ ರೂ. ವೆಚ್ಚ ಮಾಡಲಾಗಿದೆ. ಇದು ರಸ್ತೆ ಕಾಮಗಾರಿಯೋ ಅಥವಾ ಚಿನ್ನದ ಲೇಪನವೋ? ಎಂದು ವಿಧಾನ ಪರಿಷತ್‌ನ ಪ್ರತಿಪಕ್ಷನಾಯಕ ಛಲವಾದಿ ನಾರಾಯಣಸ್ವಾಮಿ ಕಿಡಿಕಾರಿದ್ದಾರೆ.

ರಾಜ್ಯ ಸರಕಾರವು ವಿಧಾನ ಮಂಡಲದ ಅಧಿವೇಶನದಲ್ಲಿ ಚುಕ್ಕೆ ಗುರುತಿಲ್ಲದ ಪ್ರಶ್ನೆಗೆ ನೀಡಿರುವ ಉತ್ತರದ ಅಂಕಿ-ಅಂಶಗಳ ಪಟ್ಟಿಯಲ್ಲಿ 'ಎಕ್ಸ್'ದಲ್ಲಿ ಪೋಸ್ಟ್ ಮಾಡಿರುವ ಅವರು, ''ಬೆಂಗಳೂರಿನ ರಸ್ತೆ ಗುಂಡಿಗಳಲ್ಲಿ 'ಕೈ' ಚಳಕ; ಇದು ರಸ್ತೆ ರಿಪೇರಿಯೋ ಅಥವಾ ಸರಕಾರದ ಖಜಾನೆ ಲೂಟಿಯೋ,'' ಎಂದು ಪ್ರಶ್ನಿಸಿದ್ದಾರೆ.

''ಸರಕಾರವೇ ಸದನಕ್ಕೆ ನೀಡಿರುವ ಮಾಹಿತಿಯಂತೆ ಕಳೆದ 6 ತಿಂಗಳಲ್ಲಿ 41,150 ಗುಂಡಿಗಳನ್ನು ಗುರುತಿಸಿ, ಈ ಪೈಕಿ 39,887 ಗುಂಡಿಗಳನ್ನು ಮುಚ್ಚಲಾಗಿದ್ದು, ಇದಕ್ಕೆ 33.85 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇನ್ನೂ 1,263 ಗುಂಡಿಗಳು ಮುಚ್ಚಲು ಬಾಕಿ ಇವೆ ಎಂದು ತಿಳಿಸಲಾಗಿದೆ. ರಸ್ತೆ ಗುಂಡಿಗಳನ್ನು ಮುಚ್ಚಲು ವಿಧಾನಸಭಾ ಕ್ಷೇತ್ರವಾರು ಮಾಡಿರುವ ವೆಚ್ಚಗಳನ್ನು ಗಮನಿಸಿದರೆ, ಭ್ರಷ್ಟಾಚಾರದ ಚಿತ್ರ ಸ್ಪಷ್ಟವಾಗಿ ಮೂಡುತ್ತದೆ,'' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

''ಚಾಮರಾಜಪೇಟೆ ಕ್ಷೇತ್ರದಲ್ಲಿ 140 ಗುಂಡಿಗಳನ್ನು ಮುಚ್ಚಲು ತಲಾ 1 ಲಕ್ಷದಂತೆ 1.40 ಕೋಟಿ ರೂ., ಶಿವಾಜಿನಗರದಲ್ಲಿ ಪ್ರತಿ ಗುಂಡಿಗೆ ಸರಾಸರಿ 60 ಸಾವಿರ ರೂ. ಹಾಗೂ ಗೋವಿಂದರಾಜನಗರ ಕ್ಷೇತ್ರದಲ್ಲಿ ಸರಾಸರಿ 49 ಸಾವಿರ ರೂ. ವ್ಯಯಿಸಲಾಗಿದೆ. ಒಂದೇ ನಗರದಲ್ಲಿ ಒಂದೇ ರೀತಿಯ ರಸ್ತೆಗಳಲ್ಲಿ ಗುಂಡಿ ಮುಚ್ಚಲು ಮಾಡಿರುವ ವೆಚ್ಚದಲ್ಲಿ ಇಷ್ಟೊಂದು ವ್ಯತ್ಯಾಸ ಏಕೆ? ಒಂದು ಕಡೆ ಪ್ರತಿ ಗುಂಡಿ ಮುಚ್ಚಲು 1200 ರೂ. ವೆಚ್ಚ ಮಾಡಿದ್ದರೆ, ಮತ್ತೊಂದು ಕಡೆ 1 ಲಕ್ಷ ಹೇಗೆ? ಈ ಅಂಕಿ-ಅಂಶಗಳೇ ಹೇಳುತ್ತಿವೆ. ಇದು ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಶೇ.100ರಷ್ಟು ಕಮಿಷನ್ ಲೂಟಿ,'' ಎಂದು ಆರೋಪಿಸಿದ್ದಾರೆ.

ನಗರದಲ್ಲಿ ಗುರುತಿಸಿದ ಗುಂಡಿಗಳ ಸಂಖ್ಯೆ	ಗುಂಡಿಗಳನ್ನು ಮುಚ್ಚಲು ಮಾಡಿರುವ ವೆಚ್ಚ
41,150	₹33.85 ಕೋಟಿ
ಮುಚ್ಚಲ್ಪಟ್ಟ ಗುಂಡಿಗಳು 39,887	

- ಚಾಮರಾಜಪೇಟೆ ಕ್ಷೇತ್ರದಲ್ಲಿ 140 ಗುಂಡಿ ಮುಚ್ಚಲು 1.40 ಕೋಟಿ ರೂ. ವೆಚ್ಚ
- ಶಿವಾಜಿನಗರದಲ್ಲಿ ಪ್ರತಿ ಗುಂಡಿ ಮುಚ್ಚಲು 60 ಸಾವಿರ ರೂ. ವೆಚ್ಚ
- ಗೋವಿಂದರಾಜನಗರ ಕ್ಷೇತ್ರದಲ್ಲಿ 49 ಸಾವಿರ ರೂ. ಖರ್ಚು

''ಒಂದು ಗುಂಡಿ ಮುಚ್ಚಲು ಇಷ್ಟೊಂದು ಹಣ ಖರ್ಚಾಗುತ್ತಿದ್ದರೆ, ಅಲ್ಲಿ ಬಳಸಿರುವ ವಸ್ತುಗಳು ಯಾವ ಮಟ್ಟದವು? ಡಾಂಬರು ಹಾಕಿದ್ದೀರಾ ಅಥವಾ ಬಂಗಾರವೋ? ಸಾರ್ವಜನಿಕರ ಬೆವರಿನ ಹಣವನ್ನು ಹೀಗೆ ದುರುಪಯೋಗ ಮಾಡುವುದು ಅಕ್ಷಮ್ಯ ಅಪರಾಧ. ಲಕ್ಷಾಂತರ ರೂ. ಖರ್ಚಾದ ಸ್ಥಳಗಳಲ್ಲಿ ಇಂದಿಗೂ ಗುಂಡಿಗಳು ಕಾಣಿಸಿಕೊಳ್ಳುತ್ತಿದ್ದರೆ, ಆ ಹಣದ ಗತಿ ಏನು ಎಂಬುದಕ್ಕೆ ಸರಕಾರವೇ ಉತ್ತರಿಸಬೇಕು,'' ಎಂದು ಆಗ್ರಹಿಸಿದ್ದಾರೆ.

''ಬೆಂಗಳೂರಿನ ರಸ್ತೆಗಳನ್ನು ಸುಧಾರಿಸುವ ಬದಲು ಸರಕಾರಿ ಖಜಾನೆಯನ್ನು ಖಾಲಿ ಮಾಡುವ ಕೆಲಸ ನಡೆಯುತ್ತಿರುವುದು ವಿಷಾದನೀಯ. ಈ ಹಗರಣದ ಬಗ್ಗೆ ತಕ್ಷಣವೇ ಉನ್ನತ ಮಟ್ಟದ, ನಿಷ್ಪಕ್ಷಪಾತ ತನಿಖೆ ನಡೆಯಬೇಕು. ತಪ್ಪಿತಸ್ಥ ಅಧಿಕಾರಿಗಳು ಹಾಗೂ ಸಂಬಂಧಪಟ್ಟವರ ಮೇಲೆ ಕಠಿಣ ಕ್ರಮ ಕೈಗೊಳ್ಳಬೇಕು. ,'' ಎಂದು ಅವರು ಒತ್ತಾಯಿಸಿದರು.

ಈಜಿಪುರ ಮೇಲ್ಸೇತುವೆಯ ಪರಿಷ್ಕೃತ ಅಂದಾಜಿನಲ್ಲಿ ನ್ಯೂನತೆ | 2023-24ರ ಆಡಿಟ್ ವರದಿಯಲ್ಲಿ ಬಹಿರಂಗ

ಈಜಿಪುರ ಮೇಲ್ಸೇತುವೆ: ₹8.80 ಕೋಟಿಗೆ ಆಕ್ಷೇಪಣೆ

■ **ನಾಗಪ್ಪ ನಾಗನಾಯಕನಹಳ್ಳಿ** ಬೆಂಗಳೂರು
nagappa.narayanappa@timesofindia.com

ಕಳೆದ 9 ವರ್ಷಗಳಿಂದ ತೆವಳುತ್ತಿರುವ 2.5 ಕಿ.ಮೀ. ಉದ್ದದ ಈಜಿಪುರ ಮೇಲ್ಸೇತುವೆ ನಿರ್ಮಾಣದ ಬಾಕಿ ಕಾಮಗಾರಿ ಪೂರ್ಣಗೊಳಿಸಲು ಸಿದ್ಧಪಡಿಸಲಾಗಿದ್ದ ಪರಿಷ್ಕೃತ ಅಂದಾಜಿನಲ್ಲೇ ಹಲವು ಲೋಪಗಳು ಪತ್ತೆಯಾಗಿದ್ದು, ಲೆಕ್ಕ ಪರಿಶೋಧಕರು 8.80 ಕೋಟಿ ರೂ. ಮೊತ್ತಕ್ಕೆ ಆಕ್ಷೇಪಣೆ ಸಲ್ಲಿಸಿದ್ದಾರೆ.

ಬಿಬಿಎಂಪಿಯ 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಯಲ್ಲಿ ಈಜಿಪುರ ಮೇಲ್ಸೇತುವೆಯ ಬಾಕಿ ಕಾಮಗಾರಿ ಪೂರ್ಣಕ್ಕೆ ತಯಾರಿಸಿದ್ದ ಪರಿಷ್ಕೃತ ಅಂದಾಜಿನಲ್ಲಿ ಹಲವು ನ್ಯೂನತೆಗಳನ್ನು ಗುರುತಿಸಲಾಗಿದೆ. ಭಾಗಶಃ ಕಾಮಗಾರಿ ಪೂರ್ಣಗೊಳಿಸುವ ಗುತ್ತಿಗೆ ಪಡೆದಿರುವ ಬಿಎಸ್‌ಸಿಪಿಎಲ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ಮೊಬಿಲೈಜೇಷನ್ ಅಡ್ವಾನ್ಸ್ ರೂಪದಲ್ಲಿ ಪಾವತಿಸಿರುವ 8.80 ಕೋಟಿ ರೂ.ಗಳಿಗೆ ಆಕ್ಷೇಪಣೆ ವ್ಯಕ್ತಪಡಿಸಲಾಗಿದೆ.

ನಗರದ ಕೋರಮಂಗಲ 100 ಅಡಿ ರಸ್ತೆಯಲ್ಲಿ ಉಂಟಾಗುತ್ತಿದ್ದ ಸಂಚಾರ ದಟ್ಟಣೆ ನಿವಾರಿಸಲು ಈಜಿಪುರ ಮುಖ್ಯರಸ್ತೆಯ ಒಳವರ್ತುಲ ರಸ್ತೆ ಜಂಕ್ಷನ್‌ನಿಂದ ಕೇಂದ್ರೀಯ ಸದನ ಜಂಕ್ಷನ್‌ವರೆಗಿನ 2.5 ಕಿ.ಮೀ. ಉದ್ದದ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯ 203.20 ಕೋಟಿ ರೂ. ವೆಚ್ಚದ ಗುತ್ತಿಗೆಯನ್ನು ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ನೀಡಲಾಗಿತ್ತು. 2017ರ ಮೇ 4ರಂದು ಕಾಮಗಾರಿ ಶುರುವಾಯಿತು. ಆದರೆ, ಹಲವು ಬಾರಿ ಗಡುವು ನೀಡಿದರೂ ಕಾಮಗಾರಿ ಪೂರ್ಣಗೊಳಿಸಲಿಲ್ಲ. ಈ ಹಿನ್ನೆಲೆಯಲ್ಲಿ ಗುತ್ತಿಗೆ ರದ್ದುಗೊಳಿಸಲಾಯಿತು.

ಪರಿಷ್ಕೃತ ಅಂದಾಜಿನಲ್ಲಿ ಹಲವು ಲೋಪ: ಬಿಬಿಎಂಪಿಯ ಯೋಜನಾ ವಿಭಾಗವು ಭಾಗಶಃ ಕಾಮಗಾರಿ ಪೂರ್ಣಗೊಳಿಸಲು 2021-22ನೇ ಸಾಲಿನ ಶೆಡ್ಯೂಲ್ ದರ ಪಟ್ಟಿ ಹಾಗೂ 2022ರ ಜು.7ರಂದು ಹೊರಡಿಸಲಾದ ವಿತರಣಾ ದರಗಳನ್ನು ಪರಿಗಣಿಸಿ 143.80 ಕೋಟಿ ರೂ.ಗಳಿಗೆ ಅಂದಾಜು ತಯಾರಿಸಿತ್ತು. ಆದರೆ, ಅಂತಿಮವಾಗಿ ಬಿಎಸ್‌ಸಿಪಿಎಲ್‌ಗೆ 176.11 ಕೋಟಿ ರೂ.ಗೆ ಗುತ್ತಿಗೆ ನೀಡಲಾಯಿತು.

2023ರ ಸೆ.12ರ ಪ್ರಸ್ತಾವನೆಯಂತೆ ಹೆಚ್ಚುವರಿ ಸೆಗ್ಮೆಂಟ್‌ಗಳ ತಯಾರಿಕೆಗೆ ಶೇ.38ರಷ್ಟು ವೆಚ್ಚ ಪರಿಗಣಿಸಬೇಕಿತ್ತು. ದರ ಪಟ್ಟಿಯ ಅನುಸಾರ ಮೇಲ್ಸೇತುವೆಗೆ ಅಗತ್ಯವಿರುವ ಕಾಂಕ್ರೀಟ್ ಬಳಕೆಯಲ್ಲೇ ಶೇ. 17ರಷ್ಟು ವ್ಯತ್ಯಾಸವಿತ್ತು. ಅಂದಾಜಿನಂತೆ ಟಿಎಂಟಿ ಸ್ಟೀಲ್‌ಗೆ 2021-22ನೇ ಸಾಲಿನ ಶೆಡ್ಯೂಲ್ ದರ ಹಾಗೂ 2021-22ನೇ ಸಾಲಿನ ತ್ರೈಮಾಸಿಕ ದರಗಳನ್ನು ಆಧರಿಸಿ ಅಂದಾಜು ತಯಾರಿಸಲಾಗಿದೆ.

ಜಿಎಸ್‌ಟಿ ಶೇ. 12, ಓವರ್‌ಹೆಡ್ ಚಾರ್ಜಸ್ ಶೇ. 30, ಗುತ್ತಿಗೆದಾರರ ಲಾಭಾಂಶ ಶೇ. 10, ಕಾರ್ಮಿಕರ ಸೆಸ್ ಶೇ. 1 ಅನ್ನು ಶೆಡ್ಯೂಲ್ ದರದಲ್ಲಿ ಸೇರ್ಪಡೆ ಮಾಡಿರುವುದಾಗಿ ತಿಳಿಸಿ ಮತ್ತೆ ಪ್ರತ್ಯೇಕವಾಗಿ ಓವರ್‌ಹೆಡ್ ಚಾರ್ಜಸ್ ನೀಡಲಾಗಿದೆ. ಇದೇ ರೀತಿ ಅಂದಾಜಿನ ಎಲ್ಲ ಸಾಮಗ್ರಿಗಳಿಗೆ ದರ ಅಳವಡಿಸಿರುವುದರಿಂದ ಪಾಲಿಕೆಗೆ ಹೆಚ್ಚಿನ ಹೊರೆಯಾಗಿದೆ ಎಂದು ಆಡಿಟ್ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಬಳಕೆಗೆ ಯೋಗ್ಯವಾಗಿದ್ದ ಸೆಗ್ಮೆಂಟ್‌ಗಳನ್ನು ಅಂದಾಜಿನಲ್ಲಿ ಪರಿಗಣಿಸಿಲ್ಲ. ಕಾಮಗಾರಿ ಸ್ಥಳ ಮತ್ತು ಕಾಸ್ಟಿಂಗ್ ಯಾರ್ಡ್‌ನಲ್ಲಿ ಲಭ್ಯವಿದ್ದ ಯಂತ್ರೋಪಕರಣಗಳು, ಬಳಕೆಗೆ ಸಿದ್ಧವಾಗಿದ್ದ ಸೆಗ್ಮೆಂಟ್‌ಗಳು ಹಾಗೂ ಇತ್ಯಾದಿಗಳನ್ನು ನೋಂದಾಯಿತ ಮೌಲ್ಯ ನಿರ್ಧಾರಕರಿಂದ ಈ ಎಲ್ಲ ಸಾಮಗ್ರಿಗಳ ದರ ನಿರ್ಧರಿಸಿ ಬಿಎಸ್‌ಸಿಪಿಎಲ್‌ಗೆ ಹಸ್ತಾಂತರಿಸಬೇಕು. 1.44 ಕೋಟಿ ರೂ. ಮೌಲ್ಯದ ಸಾಮಗ್ರಿಗಳ ದರವನ್ನು ಮೂರು ಸಮಾನ ಕಂತುಗಳಲ್ಲಿ ಬಿಎಸ್‌ಸಿಪಿಎಲ್ ಕಂಪನಿಯ ಬಿಲ್‌ನಿಂದ ಕಡಿತ ಮಾಡಬೇಕಿತ್ತು. ಅದರಂತೆ ಮೊದಲ ಕಂತಿನಲ್ಲಿ 1.44 ಕೋಟಿ ರೂ.ಗಳನ್ನಷ್ಟೇ ಕಡಿತ ಮಾಡಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಕಾಮಗಾರಿಯ ಬಿಲ್‌ನಲ್ಲಿ ಒಟ್ಟು 1.70 ಕೋಟಿ ಆದಾಯ ತೆರಿಗೆ ಕಡಿತ ಮಾಡಿ, ಸಕ್ಷಮ ಪ್ರಾಧಿಕಾರಕ್ಕೆ ಪಾವತಿಸಬೇಕಿತ್ತು. ಆದರೆ, 90.64 ಲಕ್ಷ ರೂ. ಮಾತ್ರ ಕಡಿತ ಮಾಡಿದ್ದು, ಉಳಿದ 79.84 ಲಕ್ಷ ರೂ.ಗಳನ್ನು ವಸೂಲು ಮಾಡಬೇಕು ಎಂದು ಲೆಕ್ಕ ಪರಿಶೋಧಕರು ಶಿಫಾರಸು ಮಾಡಿದ್ದಾರೆ.

ಸಿಂಪ್ಲೆಕ್ಸ್ ಕಂಪನಿಯಿಂದ ವಸೂಲಾಗದ 102.91 ಕೋಟಿ ರೂ.

ಸಿಂಪ್ಲೆಕ್ಸ್ ಕಂಪನಿಯ ಗುತ್ತಿಗೆ ರದ್ದುಪಡಿಸಿದ ಬಳಿಕ ನಿಯಮದಂತೆ ಬಾಕಿ ಕಾಮಗಾರಿಯ ಮೊತ್ತ, ಬಡ್ಡಿ, ದಂಡ ಇತ್ಯಾದಿ ಸೇರಿಸಿ 123.31 ಕೋಟಿ ರೂ. ನಷ್ಟ ಅಂದಾಜಿಸಲಾಗಿತ್ತು. ಅದರಲ್ಲಿ ಮುಟ್ಟುಗೋಲು ಹಾಕಿಕೊಂಡಿದ್ದ 10.16 ಕೋಟಿ ರೂ. ಠೇವಣಿ, ಪಾವತಿಸಲು ಬಾಕಿ ಇದ್ದ 4.01 ಕೋಟಿ ಬಿಲ್ ಮೊತ್ತ, ಕಾಮಗಾರಿ ಸ್ಥಳ ಮತ್ತು ಕಾಸ್ಟಿಂಗ್ ಯಾರ್ಡ್‌ನಲ್ಲಿ ಲಭ್ಯವಿದ್ದ ಯಂತ್ರೋಪಕರಣಗಳ ಬೆಲೆಯನ್ನು 6.23 ಕೋಟಿ ರೂ. ಎಂದು ನಿರ್ಧರಿಸಲಾಯಿತು. ಈ ಎಲ್ಲ ಮೊತ್ತ ಸೇರಿ ಒಟ್ಟು 20.40 ಕೋಟಿ ರೂ.ಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಉಳಿದ 102.91 ಕೋಟಿ ರೂ. ನಷ್ಟ ಪಾವತಿಸಬೇಕು. ಇಲ್ಲವಾದಲ್ಲಿ ಕಾನೂನಾತ್ಮಕ ಕ್ರಮ ಕೈಗೊಳ್ಳುವುದಾಗಿ ಮುಖ್ಯ ಎಂಜಿನಿಯರ್ 2024ರ ಡಿ.13ರಂದು ಸಿಂಪ್ಲೆಕ್ಸ್ ಕಂಪನಿಗೆ ಪತ್ರ ಬರೆದು ಸೂಚಿಸಿದ್ದರು. ಇದಕ್ಕೆ ಸಂಸ್ಥೆಯು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಆದ್ದರಿಂದ ಆ ಬಗ್ಗೆ ಸೂಕ್ತ ಕ್ರಮ ಕೈಗೊಂಡು ವಿವರಗಳನ್ನು ಲೆಕ್ಕ ಪರಿಶೋಧನೆಗೆ ಒಳಪಡಿಸಲು ಸೂಚಿಸಲಾಗಿದೆ.

ಕಳಪೆ ಕಾಮಗಾರಿ: ಕ್ರಮಕ್ಕೆ ಸೂಚನೆ

ಐಐಎಸ್ಸಿ ತಜ್ಞರು ನೀಡಿದ್ದ ವರದಿಯಂತೆ ಬಳಕೆಯಾಗದೆ ಉಳಿದಿದ್ದ 69 ಸೆಗ್ಮೆಂಟ್‌ಗಳಲ್ಲಿ ಕಂಡುಬಂದ ತಾಂತ್ರಿಕ ದೋಷಕ್ಕೆ ಸಂಬಂಧಿಸಿದಂತೆ ಲಭ್ಯವಿರುವ ಸೆಗ್ಮೆಂಟ್‌ಗಳ ಗುಣಮಟ್ಟ ಖಾತ್ರಿಪಡಿಸಿಕೊಂಡು ಕಾಮಗಾರಿ ಸ್ಥಳಕ್ಕೆ ಸಾಗಿಸುವ ಸಂದರ್ಭದಲ್ಲಿ ಒಂದು ಸೆಗ್ಮೆಂಟ್‌ನಲ್ಲಿ ಬಿರುಕು ಕಂಡುಬಂದಿದೆ. ಇದರಿಂದಾಗಿ ಕಳಪೆ ಕಾಮಗಾರಿ ಕೈಗೊಂಡಿರುವುದು ಕಂಡುಬಂದಿದೆ. ಇದಕ್ಕೆ ಕಾರಣರಾದ ಸಿಂಪ್ಲೆಕ್ಸ್ ಕಂಪನಿ ಮತ್ತು ಪಿಎಂಸಿಯನ್ನು ಕಪ್ಪುಪಟ್ಟಿಗೆ ಸೇರಿಸಬೇಕು. ಹಾಗೆಯೇ, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಲೆಕ್ಕ ಪರಿಶೋಧಕರು ಸೂಚಿಸಿದ್ದಾರೆ.

ಪರಿಷ್ಕೃತ ವೆಚ್ಚ 307.96 ಕೋಟಿ ರೂ.

ಸಿಂಪ್ಲೆಕ್ಸ್ ಕಂಪನಿಗೆ ನೀಡಿದ್ದ ಗುತ್ತಿಗೆ ರದ್ದುಪಡಿಸಿದ ಬಳಿಕ ಈಜಿಪುರ ಮೇಲ್ಸೇತುವೆಯ ಬಾಕಿ ಕಾಮಗಾರಿ ಪೂರ್ಣಕ್ಕೆ ಪರಿಷ್ಕೃತ ಅಂದಾಜು ವೆಚ್ಚ ಸಿದ್ಧಪಡಿಸಲಾಯಿತು. ಅದರಂತೆ ಪರಿಷ್ಕೃತ ಅಂದಾಜಿನ 307.96 ಕೋಟಿ ರೂ.ಗಳಿಗೆ ಸರಕಾರ ಅನುಮೋದನೆ ನೀಡಿತು. ಬಾಕಿ ಕಾಮಗಾರಿ ಪೂರ್ಣಕ್ಕೆ ಮೂರು ಸಲ ಟೆಂಡರ್ ಆಹ್ವಾನಿಸಿದರೂ, ಯಾವುದೇ ಗುತ್ತಿಗೆದಾರರು ಬಿಡ್ ಸಲ್ಲಿಸಿರಲಿಲ್ಲ. ಹೀಗಾಗಿ, 4ನೇ ಟೆಂಡರ್‌ನಲ್ಲಿ ಅರ್ಹತೆ ಪಡೆದ ಬಿಎಸ್‌ಸಿಪಿಎಲ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿಯ ಏಕ ವ್ಯಕ್ತಿ ಟೆಂಡರ್ ಅಂಗೀಕರಿಸಿ ಸರಕಾರದ ಅನುಮೋದನೆ ಪಡೆದುಕೊಳ್ಳಲಾಯಿತು. ಬಿಎಸ್‌ಸಿಪಿಎಲ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ ಕಂಪನಿಯು 176.11 ಕೋಟಿ ರೂ.ಗಳಿಗೆ ಗುತ್ತಿಗೆ ಪಡೆದುಕೊಂಡಿತು. ಈ ಕಂಪನಿಗೆ 2023ರ ನ.15ರಂದು ಕಾರ್ಯಾದೇಶ ನೀಡಿ, 15 ತಿಂಗಳಲ್ಲಿ ಪೂರ್ಣಗೊಳಿಸಬೇಕೆಂಬ ಷರತ್ತು ವಿಧಿಸಲಾಗಿದೆ. ಆದರೆ, ಕಾಮಗಾರಿ ಇನ್ನೂ ಕುಂಟುತ್ತಲೇ ಸಾಗಿದೆ.

ಎಸ್‌ಸಿ, ಎಸ್‌ಟಿ ಕಾನೂನು ಪಾರದರ್ಶಕ ಮೌಲ್ಯಮಾಪನಕ್ಕೆ ಒತ್ತಾಯ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯಗಳ ಕಲ್ಯಾಣಕ್ಕೆ ಸಂಬಂಧಿಸಿದ ಕಾನೂನುಗಳ ಅನುಷ್ಠಾನದ ಬಗ್ಗೆ ಪಾರದರ್ಶಕ ಮೌಲ್ಯಮಾಪನ ನಡೆಸಿ, ಶ್ವೇತಪತ್ರ ಹೊರಡಿಸುವುದೂ ಸೇರಿದಂತೆ ವಿವಿಧ ಕಾಯಿದೆಗಳ ಸಮರ್ಪಕ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವಂತೆ ಪರ್ಯಾಯ ಕಾನೂನು ವೇದಿಕೆ, ಸ್ಲಂ ಜನಾಂದೋಲನ ಕರ್ನಾಟಕ ಮತ್ತು ಸಂವಿಧಾನ ಸಂರಕ್ಷಣಾ ವೇದಿಕೆಗಳು ಆಗ್ರಹಿಸಿವೆ. ಮಂಗಳವಾರ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಎಸ್‌ಸಿ, ಎಸ್‌ಟಿ ಸಮುದಾಯಗಳ ಕಲ್ಯಾಣಕ್ಕೆ ಸಂಬಂಧಿಸಿದ ಕಾನೂನುಗಳ ಉತ್ತಮ ಅನುಷ್ಠಾನ ಕುರಿತ ಸಮಾಲೋಚನಾ ಸಭೆಯು ಭೂರಹಿತರಿಗೆ ಭೂ ಹಂಚಿಕೆ ಹಾಗೂ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಕುರಿತ ಪ್ರಾಮಾಣಿಕ ಮರು ಸಮೀಕ್ಷೆ ನಡೆಸಬೇಕು. ಅಟ್ರಾಸಿಟಿ ಕಾಯಿದೆಯಡಿ ಶಿಕ್ಷೆ ಪ್ರಮಾಣ ಹೆಚ್ಚಿಸಬೇಕು. ಅಧಿಕಾರಿಗಳು ದುರ್ಬಲಗೊಳಿಸಿರುವ ಪಿಟಿಸಿಎಲ್ ಕಾಯಿದೆ ಬಲಪಡಿಸುವುದೂ ಸೇರಿದಂತೆ ಇತರೆ ಎಸ್‌ಸಿ-ಎಸ್‌ಟಿ ಕಾಯಿದೆಗಳ ಸಮರ್ಪಕ ಅನುಷ್ಠಾನದೊಂದಿಗೆ ಸಮುದಾಯಗಳ ಹಿತ ಕಾಯುವಂತೆ ಸರಕಾರವನ್ನು ಒತ್ತಾಯಿಸಿತು. ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ, ''ಎಸ್‌ಸಿ, ಎಸ್‌ಟಿಯವರಿಗೆ ಕಾನೂನು ನೆರವಿದೆ. ಅರ್ಜಿ ಕೊಟ್ಟರೆ ಸಾಕು ವಕೀಲರನ್ನು ನೇಮಿಸಲಾಗುತ್ತದೆ. ಆ್ಯಸಿಡ್ ಸಂತ್ರಸ್ತರಿಗೆ ಪರಿಹಾರ ಹೆಚ್ಚಳ ಮಾಡಲಾಗಿದೆ. ಎಚ್‌ಐವಿ ಪೀಡಿತರಿಗೆ ಹಲವು ಯೋಜನೆಗಳಿದ್ದು, ಪ್ರಯೋಜನ ಪಡೆದುಕೊಳ್ಳಬಹುದು. ದೌರ್ಜನ್ಯಕ್ಕೆ ಒಳಗಾದರೆ, ಅಸ್ಪೃಶ್ಯತೆ ಆಚರಿಸಿದರೆ ಪ್ರಾಧಿಕಾರ ಅಥವಾ ಸಂಬಂಧಪಟ್ಟವರ ಗಮನಕ್ಕೆ ತರಬೇಕು,'' ಎಂದು ಕಿವಿಮಾತು ಹೇಳಿದರು.

ಉಮರ್ ಪರ ಕಾರ್ಯಕ್ರಮಕ್ಕೆ ಕಪ್ಪು ಬಾವುಟ

ಬಿಜೆಪಿ ವಿರೋಧದ ನಡುವೆಯೂ ಯಶಸ್ವಿ ವಿಚಾರ ಸಂಕಿರಣ

■ **ವಿಕ ಸುದ್ದಿಲೋಕ** ಬೆಂಗಳೂರು

ದಿಲ್ಲಿ ಗಲಭೆ ಸೇರಿದಂತೆ ನಾನಾ ಪ್ರಕರಣಗಳಲ್ಲಿ ಬಂಧಿತನಾಗಿರುವ ಉಮರ್ ಖಾಲಿದ್ ಕುರಿತು ದೊಮ್ಮಲೂರಿನ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಮಂಗಳವಾರ ಆಯೋಜಿಸಿದ್ದ ವಿಚಾರ ಸಂಕಿರಣ ವಿರೋಧಿಸಿ ಬಿಜೆಪಿ ರಾಜ್ಯ ಯುವಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಕಪ್ಪುಪಟ್ಟಿ ಧರಿಸಿ, ಕಾರ್ಯಕ್ರಮ ವಿರೋಧಿಸುವ ಬ್ಯಾನರ್ ಹಿಡಿದು ಬಂದ ಕಾರ್ಯಕರ್ತರು ಕಾರ್ಯಕ್ರಮದ ಆಯೋಜಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು.

ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ ಹಿನ್ನೆಲೆಯಲ್ಲಿ ಬೆಂಗಳೂರು ಪೂರ್ವ ವಿಭಾಗದ ಡಿಸಿಪಿ ವಿಕ್ರಂ ಆಮಟೆ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳದ ಸುತ್ತ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಈ ವೇಳೆ ಬ್ಯಾನರ್, ನಾಮಫಲಕಗಳನ್ನು ಹಿಡಿದು ಪ್ರತಿಭಟನೆಗೆ ಮುಂದಾದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ದಿಲ್ಲಿಯಲ್ಲಿ 2020ರಲ್ಲಿ ನಡೆದ ಗಲಭೆ ಪ್ರಕರಣದಲ್ಲಿ ತಿಹಾರ್ ಜೈಲಿನಲ್ಲಿರುವ ಉಮರ್ ಖಾಲಿದ್ ಕುರಿತಾದ 'ಉಮರ್ ಖಾಲಿದ್ ಪ್ರಪಂಚ' ಎಂಬ ಪುಸ್ತಕದ ಕುರಿತು ನ್ಯಾಯಕ್ಕಾಗಿ ಅಖಿಲ ಭಾರತ ವಕೀಲರ ಸಂಘ ಹಾಗೂ ನಾಗರಿಕ ಸ್ವಾತಂತ್ರ್ಯಕ್ಕಾಗಿ ಪೀಪಲ್ಸ್ ಯೂನಿಯನ್ (ಪಿಯುಸಿಎಲ್) ಹಾಗೂ ಬಹುತ್ವ ಕರ್ನಾಟಕ ಸಂಘಟನೆಗಳು ಕಾರ್ಯಕ್ರಮ ಆಯೋಜಿಸಿದ್ದವು. ಈ ಕಾರ್ಯಕ್ರಮ ನಡೆಸುವ ಮೂಲಕ ಉಮರ್ ಖಾಲಿದ್ ಎಂಬ ಆರೋಪಿಯನ್ನು ವೈಭವೀಕರಿಸಲು ಅವಕಾಶ ನೀಡಬಾರದು ಎಂದು ಸಂಸದ ಪಿ.ಸಿ.ಮೋಹನ್ ನೇತೃತ್ವದ ಬಿಜೆಪಿ ನಿಯೋಗ ಸೋಮವಾರ ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿತ್ತು.

ಪ್ರತಿಭಟನೆಗೆ ಮುಂದಾದ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ವಿರೋಧದ ನಡುವೆಯೂ ಕಾರ್ಯಕ್ರಮ: ಬಿಜೆಪಿ ವಿರೋಧ, ಪ್ರತಿಭಟನೆ ನಡುವೆಯೂ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ಉಮರ್ ಖಾಲಿದ್ ಕುರಿತ ವಿಚಾರಸಂಕಿರಣ ನಡೆಯಿತು. ಹಿರಿಯ ಇತಿಹಾಸ ತಜ್ಞ ಡಾ.ರಾಮಚಂದ್ರ ಗುಹಾ, ಜಾನಕಿ ನಾಯರ್, ನಟ ಪ್ರಕಾಶ್ ರಾಜ್ ಹಾಗೂ ನಾಗರಿಕ ಸ್ವಾತಂತ್ರ್ಯಕ್ಕಾಗಿ ಪೀಪಲ್ಸ್ ಯೂನಿಯನ್ (ಪಿಯುಸಿಎಲ್) ಸಂಘಟನೆಯ ರಾಷ್ಟ್ರೀಯ ಕಾರ್ಯದರ್ಶಿ ಅರವಿಂದ್ ನಾರಿಯನ್ ಕಾರ್ಯಕ್ರಮದಲ್ಲಿ ಭಾಗಿಯಾದರು.

ವಾಣಿಜ್ಯ ಸಂಕೀರ್ಣದಲ್ಲಿ ಒತ್ತುವರಿ ತೆರವು

ಬೆಂಗಳೂರು: ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿನ ಅನಧಿಕೃತ ಮಳಿಗೆಗಳನ್ನು ಮಂಗಳವಾರ ತೆರವುಗೊಳಿಸಿ, ಒತ್ತುವರಿದಾರರಿಗೆ 88,200 ರೂ. ದಂಡ ವಿಧಿಸಲಾಯಿತು.

ಜಯನಗರ ವಾಣಿಜ್ಯ ಸಂಕೀರ್ಣವು 15 ಸಾವಿರ ಚ.ಅಡಿ ವಿಸ್ತೀರ್ಣ ಹೊಂದಿದ್ದು, 270ಕ್ಕೂ ಅಧಿಕ ಮಳಿಗೆಗಳಿವೆ. ಆದರೆ, ಸಂಕೀರ್ಣದ ಒಳಭಾಗದ ಕಾರಿಡಾರ್‌ಗಳು, ಸಂಕೀರ್ಣದ ಸುತ್ತಮುತ್ತಲಿನ ಪಾದಚಾರಿ ಮಾರ್ಗಗಳನ್ನು ಮಳಿಗೆಗಳ ಮಾಲೀಕರು ಹಾಗೂ ವ್ಯಾಪಾರಿಗಳು ಅತಿಕ್ರಮಿಸಿಕೊಂಡಿದ್ದರು. ಇದರಿಂದ ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿತ್ತು. .

ವಾಣಿಜ್ಯ ಸಂಕೀರ್ಣದಲ್ಲಿನ ಅಂಗಡಿಗಳ ಮಾಲೀಕರಿಗೆ ಅನಧಿಕೃತ ಒತ್ತುವರಿಯನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸುವಂತೆ ಕಳೆದ ಮೂರು ದಿನಗಳ ಕಾಲ ಜಾಗೃತಿ ಮೂಡಿಸಲಾಯಿತು. ಆದಾಗ್ಯೂ, ಒತ್ತುವರಿ ತೆರವು ಮಾಡಿರಲಿಲ್ಲ. ಹೀಗಾಗಿ, ತೆರವು ಕಾರ್ಯ ಕೈಗೊಂಡು, ಕಾರಿಡಾರ್‌ಗಳು ಹಾಗೂ ಪಾದಚಾರಿ ಮಾರ್ಗಗಳ ಅತಿಕ್ರಮಣ ಸಂಬಂಧ 39 ಪ್ರಕರಣ ದಾಖಲಿಸಿ, 88,200 ರೂ. ದಂಡ ವಿಧಿಸಲಾಯಿತು ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ವಿದ್ಯಾರ್ಥಿವೇತನ ವಿತರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬಡತನ ನಿರ್ಮೂಲನೆಗಿರುವ ಪರಿಣಾಮಕಾರಿ ಆಯುಧ ಶಿಕ್ಷಣ. ದೇಶದ ಪ್ರತಿಯೊಬ್ಬ ಮಗುವೂ ಸುಶಿಕ್ಷಿತವಾಗಬೇಕೆಂಬುದು ನನ್ನ ಜೀವನದ ಪ್ರಮುಖ ಉದ್ದೇಶ ಎಂದು ಬಿಜೆಪಿ ಮುಖಂಡ, ಉದ್ಯಮಿ ಅನಿಲ್ ಶೆಟ್ಟಿ ತಿಳಿಸಿದರು.

ನವ ಬೆಂಗಳೂರು ಫೌಂಡೇಶನ್ ಮತ್ತು ಆಸ್ಟ್ರೋಟಾಕ್ ಫೌಂಡೇಶನ್ ಜಂಟಿಯಾಗಿ ಕೋರಮಂಗಲದ ಸತ್ಯ ಸಾಯಿ ಸಂಸ್ಕೃತಿ ಸದನದಲ್ಲಿ ಆಯೋಜಿಸಿದ್ದ ಸರ್ ಎಂ. ವಿಶ್ವೇಶ್ವರಯ್ಯ ವಿದ್ಯಾರ್ಥಿ ವೇತನ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

''ನಾನು ಸರಕಾರಿ ಶಾಲೆಯಲ್ಲಿ ಓದಿದ್ದು, ವಾರ್ಷಿಕ ಶಾಲಾ ಶುಲ್ಕ 50 ರೂ. ಪಾವತಿಸಲೂ ನನ್ನ ತಂದೆ 2 ತಿಂಗಳು ಕಷ್ಟಪಡಬೇಕಿತ್ತು. ನಂತರ ಸರಕಾರಿ ಕೋಟಾದಲ್ಲಿ ಎಂಜಿನಿಯರಿಂಗ್ ಸೀಟು ಉಚಿತವಾಗಿ ದೊರೆಯಿತು. ಆದಕ್ಕೆ 15,500 ರೂ. ಶುಲ್ಕ ಪಾವತಿಸಲು ತೊಂದರೆ ಇತ್ತು. ಅಂತಹ ಸಂದರ್ಭದಲ್ಲಿ ವಿದ್ಯಾರ್ಥಿ ವೇತನ ಪಡೆದು ವ್ಯಾಸಂಗ ಮುಂದುವರಿಸಿದ್ದೇನೆ. ವಿದ್ಯೆಗಾಗಿ ನಾನು ಪಟ್ಟ ಕಷ್ಟವನ್ನು ಬೇರೆ ಮಕ್ಕಳು ಪಡಬಾರದೆಂದು ವಿದ್ಯಾರ್ಥಿ ವೇತನ ನೀಡಲು ಪ್ರಾರಂಭಿಸಿದೆ. 10 ವರ್ಷಗಳಲ್ಲಿ ಸಾವಿರಾರು ಮಕ್ಕಳ ವಿದ್ಯಾಭ್ಯಾಸಕ್ಕೆ ನೆರವಾಗಿದ್ದೇನೆ,'' ಎಂದು ತಿಳಿಸಿದರು.

ನಟಿ ಮಾನುಷಿ ಚಿಲ್ಲರ್, ಶಾಸಕ ಸಿ.ಕೆ. ರಾಮಮೂರ್ತಿ, ವಿಧಾನ ಪರಿಷತ್ ಸದಸ್ಯ ಗೋಪಿನಾಥ್‌ರೆಡ್ಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತಲಾ 5000ದಂತೆ 10 ಲಕ್ಷ ರೂ. ವಿದ್ಯಾರ್ಥಿ ವೇತನ ವಿತರಿಸಲಾಯಿತು. ಈ ವೇಳೆ ಚಲನಚಿತ್ರ ನಿರ್ದೇಶಕ ಸಿಂಪಲ್ ಸುನಿ, ಬಿಜೆಪಿ ದಕ್ಷಿಣದ ಖಜಾಂಚಿ ಶ್ರೀಧರ ರೆಡ್ಡಿ, ಬಿಟಿಎಂ ಲೇಔಟ್ ಬಿಜೆಪಿ ಅಧ್ಯಕ್ಷ ಬಿ.ಸುರೇಶ್ ಉಪಸ್ಥಿತರಿದ್ದರು.

ನಾಗರಬಾವಿಯಲ್ಲಿ ವೇ ಟು ವರ್ಲ್ಡ್ ನೂತನ ಕಚೇರಿ ಆರಂಭ

ಬೆಂಗಳೂರು: ವಿದೇಶ ಪ್ರವಾಸ ಕೈಗೊಳ್ಳುವಾಗ ಸಮಸ್ಯೆಗಳು ಎದುರಾಗುವುದು ಸಹಜ. ಆದರೆ, ರಾಕೇಶ್ ನೇತೃತ್ವದ 'ವೇ ಟು ವರ್ಲ್ಡ್' ಸಂಸ್ಥೆ ಉತ್ತಮ ಸೇವೆ ಒದಗಿಸುವ ಮೂಲಕ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡುತ್ತಿದೆ ಎಂದು ಹಿರಿಯ ನಟ ಶ್ರೀನಾಥ್ ತಿಳಿಸಿದರು. ನಾಗರಬಾವಿಯಲ್ಲಿ 'ವೇ ಟು ವರ್ಲ್ಡ್' ಸಂಸ್ಥೆಯ ನೂತನ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ''ವೇ ಟು ಭಾರತ್' ಎಂಬ ಪರಿಕಲ್ಪನೆಯ ಮೂಲಕ ನಮ್ಮ ದೇಶವನ್ನು ಪ್ರಪಂಚಕ್ಕೆ ತೋರುವ ಕಾರ್ಯಕ್ಕೆ ಸಂಸ್ಥೆ ಮುಂದಾಗಿದ್ದು, ನಮ್ಮ ಪ್ರವಾಸದ ಕನಸು ಈ ಸಂಸ್ಥೆ ಮೂಲಕ ನನಸಾಗಲಿದೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು. ನಟಿ ಆದಿತಿ ಪ್ರಭುದೇವ ಮಾತನಾಡಿ, ''ದೇಶ ಸುತ್ತಿ ನೋಡು, ಕೋಶ ಓದಿ ನೋಡು ಎನ್ನುವಂತೆ, ನಮ್ಮ ಬದುಕಿನಲ್ಲಿ ನಾವು ಎಷ್ಟು ಪ್ರಪಂಚವನ್ನು ಸುತ್ತಾಡುತ್ತೇವೋ ಅಷ್ಟು ಜ್ಞಾನ ವೃದ್ಧಿಯಾಗುತ್ತದೆ,'' ಎಂದು ತಿಳಿಸಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿ. ರಾಕೇಶ್ ಮಾತನಾಡಿ, '''ವೇ ಟು ವರ್ಲ್ಡ್'ನ ನಾನಾ ಯೋಜನೆಗಳ ಮೂಲಕ ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸುವ ಉದ್ದೇಶವಿದೆ. ಈ ತಿಂಗಳು ಪೂರ್ತಿ ಪ್ರತೀ ಪ್ಯಾಕೇಜ್‌ನಲ್ಲೂ ಶೇ. 5ರಿಂದ 10ರಷ್ಟು ರಿಯಾಯಿತಿ ಇರಲಿದೆ,'' ಎಂದು ಮಾಹಿತಿ ನೀಡಿದರು. ಎಂಎಲ್‌ಸಿ ಡಾ. ಟಿ.ಎ.ಶರವಣ, ಕಲಾವಿದ ಗೋಪಿ ಉಪಸ್ಥಿತರಿದ್ದರು.

ನಾಳೆ ಕಾಜಾಣ ನಾಟಕೋತ್ಸವ

ಬೆಂಗಳೂರು: ಕಾಜಾಣ ಸಂಸ್ಥೆಯು ಏ.30ರಂದು ಕಲಾಗ್ರಾಮ ಸಾಂಸ್ಕೃತಿಕ ಸಮುಚ್ಚಯ ಸಭಾಂಗಣದಲ್ಲಿ 'ಕಾಜಾಣ ನಾಟಕೋತ್ಸವ'ವನ್ನು ಆಯೋಜಿಸಿದೆ.

ನಾಟಕೋತ್ಸವದ ಅಂಗವಾಗಿ 'ನಾಗಸಂಪಿಗೆ' ನಾಟಕದ ಧ್ವನಿಮುದ್ರಿತ ರಂಗಗೀತೆಗಳ ಲೋಕಾರ್ಪಣೆ, ರಂಗಸಾಧಕರಿಗೆ ಗೌರವ ಸಮರ್ಪಣೆ ನಡೆಯಲಿದೆ. ಕಾರ್ಯಕ್ರಮಕ್ಕೆ ಹಿರಿಯ ರಂಗಕಲಾವಿದ ಜೆ.ಕೆ. ಶ್ರೀನಿವಾಸಮೂರ್ತಿ ಚಾಲನೆ ನೀಡಲಿದ್ದಾರೆ. ಹಿರಿಯ ಕಲಾವಿದರಾದ ರಾಜಗುರು ಹೊಸಕೋಟೆ, ನಯನ ಸೂಡ, ಹನು ರಾಮಸಂಜೀವ ಹಾಗೂ ಚಾಂದಿನಿ ಅವರಿಗೆ 'ಕಾಜಾಣ ರಂಗಗೌರವ' ನೀಡಿ ಗೌರವಿಸಲಾಗುತ್ತದೆ. ಸಂಜೆ 4 ಗಂಟೆಗೆ ಲಿಂಗೇಗೌಡ ಅವರ ಜೀವನಾಧಾರಿತ ಎನ್. ಲಿಂಗಯ್ಯ ಅವರ 'ನಾಗಸಂಪಿಗೆ' ಕೃತಿ ಆಧರಿಸಿದ ಏಕವ್ಯಕ್ತಿ ನಾಟಕ ಪ್ರದರ್ಶನಗೊಳ್ಳಲಿದೆ. ಸಂಜೆ 7.30ಕ್ಕೆ ಡಾ. ಎಸ್.ಎಲ್.ಎನ್. ಸ್ವಾಮಿ ರಚಿಸಿ, ನಿರ್ದೇಶಿಸಿರುವ 'ಪಂಚಗವ್ಯ' ನಾಟಕ ಪ್ರದರ್ಶನ ನಡೆಯಲಿದೆ.

ಜನಗಣತಿ ರಾಷ್ಟ್ರೀಯ ಕರ್ತವ್ಯ, ನಿರ್ಲಕ್ಷಿಸುವಂತಿಲ್ಲ

ರಜೆಯಲ್ಲಿರುವ ಶಿಕ್ಷಕರು ತಕ್ಷಣ ವಾಪಸ್ಸಾಗಿ ಗಣತಿಯಲ್ಲಿ ಭಾಗಿಯಾಗಲು ಆದೇಶ

■ **ವಿಕ ಸುದ್ದಿಲೋಕ** ಬೆಂಗಳೂರು

'ಜನಗಣತಿ ಎಂಬುದು ರಾಷ್ಟ್ರೀಯ ಕರ್ತವ್ಯವಾಗಿದ್ದು, ಅದಕ್ಕಾಗಿ ಬದ್ಧರಾಗಿರಬೇಕು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಅಲ್ಲದೆ, ರಜೆಯಲ್ಲಿರುವ ಶಿಕ್ಷಕರನ್ನು ತಕ್ಷಣ ಕರ್ತವ್ಯಕ್ಕೆ ಹಿಂದಿರುಗಿಸಿ ಗಣತಿ ಕಾರ್ಯದಲ್ಲಿ ಭಾಗಿಯಾಗುವಂತೆ ಸೂಚನೆ ನೀಡಬೇಕೆಂದು ಕೋರಿ ಬೆಂಗಳೂರು ನಗರದ ಖಾಸಗಿ ಶಾಲೆಯ ಪ್ರಾಂಶುಪಾಲರೊಬ್ಬರಿಗೆ ನ್ಯಾಯಾಲಯ ನಿರ್ದೇಶನ ನೀಡಿದೆ.

ಶಿಕ್ಷಕರನ್ನು ಜನಗಣತಿಗೆ ನಿಯೋಜನೆ ಮಾಡದ ಶಾಲೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಾಗಿ ಬೆಂಗಳೂರು ದಕ್ಷಿಣ ನಗರ ಪಾಲಿಕೆ ಪ್ರಧಾನ ಜನಗಣತಿ ಅಧಿಕಾರಿ ಹೊರಡಿಸಿದ್ದ ಆದೇಶ ಪ್ರಶ್ನಿಸಿ ಜೆ.ಪಿ.ನಗರದ 7ನೇ ಹಂತದಲ್ಲಿರುವ ದಿ ಬ್ರಿಗೇಡ್ ಶಾಲೆ ಪ್ರಾಂಶುಪಾಲರಾದ ಶುಭಾ ಜೈನ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚ್ಚಿನ್ ಶಂಕರ್ ಮಗದಂ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

''ಮುಂದಿನ ಒಂದು ವಾರದಲ್ಲಿ ಎಲ್ಲ ಶಿಕ್ಷಕರನ್ನು ಹಿಂದಿರುಗುವಂತೆ ಸೂಚನೆ ನೀಡಿ, ಜನಗಣತಿ ಆಯುಕ್ತರ ಮುಂದೆ ವರದಿ ಮಾಡಿಕೊಳ್ಳುವುದನ್ನು ಖಾತರಿಪಡಿಸಬೇಕೆಂಬ ಷರತ್ತಿನೊಂದಿಗೆ ಶಾಲೆಯ ಪ್ರಾಂಶುಪಾಲರ ವಿರುದ್ಧ ಜನಗಣತಿ ಕಾಯಿದೆಯ ಸೆಕ್ಷನ್ 11ರಡಿ ಎಫ್‌ಐಆರ್ ದಾಖಲಿಸುವಂತಹ ಕ್ರಮಕ್ಕೆ ಮುಂದಾಗಬಾರದು,'' ಎಂದು ನ್ಯಾಯಾಲಯ ತಿಳಿಸಿದೆ.

ಅಲ್ಲದೆ, ''ಸುಮಾರು 10 ರಿಂದ 11 ವರ್ಷಗಳಿಗೊಮ್ಮೆ ಜನಗಣತಿ ನಡೆಯಲಿದೆ. ಪ್ರತಿ ಮನೆ ಮನೆಗೂ ಭೇಟಿ ನೀಡಿ ಮಾಹಿತಿ ಪಡೆದುಕೊಂಡು ಲಿಖಿತವಾಗಿ ದಾಖಲಿಸಿಕೊಳ್ಳಬೇಕಾಗುತ್ತದೆ. ಹೀಗಿರುವಾಗ ಶಾಲೆಯ ಮುಖ್ಯಸ್ಥರು ಈ ರೀತಿ ವರ್ತಿಸಲು ಆರಂಭಿಸಿದರೆ, ಸರಕಾರ ಗಣತಿ ಕಾರ್ಯ ಪೂರ್ಣಗೊಳಿಸುವುದಾದರೂ ಹೇಗೆ?'' ಎಂದು ಪ್ರಶ್ನಿಸಿತು. ಅಲ್ಲದೆ, ಮುಂದಿನ ವಿಚಾರಣೆ ವೇಳೆ ಅರ್ಜಿದಾರರ ಶಾಲೆಯಲ್ಲಿ ಲಭ್ಯವಿರುವ ಶಿಕ್ಷಕರ ಪಟ್ಟಿಯನ್ನು ಒದಗಿಸುವಂತೆ ಸೂಚನೆ ನೀಡಿ ವಿಚಾರಣೆ ಮುಂದೂಡಿದೆ.

ಅರ್ಜಿದಾರರ ಪರ ವಕೀಲರು, ''ಶಾಲೆಯಲ್ಲಿರುವ 84 ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ನಿಯೋಜಿಸಬಹುದಾಗಿದೆ. ಇನ್ನುಳಿದ ಶಿಕ್ಷಕರು ಬೇಸಿಗೆ ರಜೆ ಹಿನ್ನೆಲೆಯಲ್ಲಿ ವಿದೇಶಗಳಲ್ಲಿ ಪ್ರವಾಸದಲ್ಲಿದ್ದಾರೆ. ಶಿಕ್ಷಕರು ರಜೆ ಪಡೆಯುವುದಕ್ಕೆ ಅವಕಾಶವಿರುವುದರಿಂದ ತಕ್ಷಣ ಹಿಂದಿರುಗುವಂತೆ ಸೂಚನೆ ನೀಡುವುದಕ್ಕೆ ಸಾಧ್ಯವಿಲ್ಲ,'' ಎಂದು ಪೀಠಕ್ಕೆ ವಿವರಿಸಿದರು.

''ಅಲ್ಲದೆ, ಈಗಾಗಲೇ 12 ಮಂದಿ ಶಿಕ್ಷಕರನ್ನು ಜನಗಣತಿಗೆ ನಿಯೋಜಿಸಲಾಗಿದ್ದು, ಕೆಲಸಕ್ಕೆ ವರದಿ ಮಾಡಿಕೊಂಡಿದ್ದಾರೆ. ಹೆಚ್ಚಿನ ಸಿಬ್ಬಂದಿ ನಿಯೋಜಿಸುವುದಕ್ಕೆ ಪ್ರಯತ್ನ ಮಾಡಲಾಗುತ್ತಿದೆ. ಆದ್ದರಿಂದ ಗಣತಿ ಅಧಿಕಾರಿ ಹೊರಡಿಸಿರುವ ಆದೇಶ ರದ್ದು ಮಾಡಬೇಕು,'' ಎಂದು ಕೋರಿದರು.

ಹೋಟೆಲ್‌ನಲ್ಲಿ ಯುವತಿ ಜತೆ ಅಸಭ್ಯ ವರ್ತನೆ

ಬೆಂಗಳೂರು: ನಗರದ ಎಂ.ಜಿ.ರಸ್ತೆಯ ತಂದೂರ್ ಹೋಟೆಲ್‌ಗೆ ಹೋಗಿದ್ದ ಯುವತಿಯ ಜತೆ ಅಸಭ್ಯವಾಗಿ ವರ್ತಿಸಿದ್ದ ಹೋಟೆಲ್‌ನ ವ್ಯವಸ್ಥಾಪಕನ ವಿರುದ್ಧ ಹಲಸೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಂತ್ರಸ್ತ ಯುವತಿಯು ಸೋಮವಾರ ಮಧ್ಯಾಹ್ನ ಸ್ನೇಹಿತನ ಜತೆ ಊಟ ಮಾಡಲು ತಂದೂರ್ ಹೋಟೆಲ್‌ಗೆ ಹೋಗಿದ್ದರು. ಆಗ ಹೋಟೆಲ್ ವ್ಯವಸ್ಥಾಪಕ ರವಿ, ಯುವತಿ ಜತೆ ಅನುಚಿತವಾಗಿ ವರ್ತಿಸಿದ್ದರು. ಇದರಿಂದ ಅಸಮಾಧಾನಗೊಂಡ ಯುವತಿ, ಸಭ್ಯತೆಯಿಂದ ನಡೆದುಕೊಳ್ಳುವಂತೆ ರವಿಗೆ ಹೇಳಿದ್ದರು. ಅದಕ್ಕೆ ಆತ ಯುವತಿಗೆ ಅವಾಚ್ಯವಾಗಿ ನಿಂದಿಸಿ, ಅವರ ಬಟ್ಟೆ ಹರಿದು ಹಲ್ಲೆ ನಡೆಸಲು ಯತ್ನಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಘಟನೆ ಬೆನ್ನಲ್ಲೇ ಸಂತ್ರಸ್ತ ಯುವತಿಯು ಠಾಣೆಗೆ ದೂರು ಕೊಟ್ಟಿದ್ದರು. ಈ ದೂರು ಆಧರಿಸಿ ರವಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಹೋಟೆಲ್‌ನ ಸಿ.ಸಿ ಕ್ಯಾಮೆರಾಗಳ ದೃಶ್ಯಾವಳಿಯನ್ನು ವಶಕ್ಕೆ ಪಡೆದು ತನಿಖೆ ಮಾಡಲಾಗುತ್ತಿದೆ ಎಂದು ಪೊಲೀಸರು ಹೇಳಿದ್ದಾರೆ.

12 ಶೆಡ್‌ಗಳು ಬೆಂಕಿಗಾಹುತಿ

■ **ವಿಕ ಸುದ್ದಿಲೋಕ** ಬೆಂಗಳೂರು

ಎಚ್‌ಎಸ್‌ಆರ್ ಲೇಔಟ್‌ನ ಸೋಮಸಂದ್ರ ಪಾಳ್ಯದಲ್ಲಿ ಅಗ್ನಿ ಅವಘಡ ಸಂಭವಿಸಿದ್ದು, ಪಶ್ಚಿಮ ಬಂಗಾಳದ ಜನರು ವಾಸವಿದ್ದ 12 ಶೆಡ್‌ಗಳು ಬೆಂಕಿಗೆ ಆಹುತಿಯಾಗಿವೆ.

ಎಚ್‌ಎಸ್‌ಆರ್ ಲೇಔಟ್ 2ನೇ ಸೆಕ್ಟರ್‌ನ ಸೋಮಸಂದ್ರಪಾಳ್ಯದಲ್ಲಿ ಪ್ರಕಾಶ್ ಎಂಬುವವರಿಗೆ ಸೇರಿದ ಜಾಗವಿದ್ದು, ಅಲ್ಲಿ ಪಶ್ಚಿಮ ಬಂಗಾಳ ಮೂಲದ ಜನರು ತಾತ್ಕಾಲಿಕ ಶೆಡ್ ಹಾಕಿಕೊಂಡು ವಾಸವಾಗಿದ್ದರು. ಅವರೆಲ್ಲರೂ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಮತದಾನಕ್ಕಾಗಿ ಪಶ್ಚಿಮ ಬಂಗಾಳಕ್ಕೆ ಹೋಗಿದ್ದಾಗ ಭಾನುವಾರ ಬೆಳಗಿನ ಜಾವ ಈ ದುರ್ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶೆಡ್‌ಗಳಿಗೆ ಬೆಂಕಿ ಹೇಗೆ ಹೊತ್ತಿಕೊಂಡಿತು ಎಂಬ ಬಗ್ಗೆ ಸ್ಪಷ್ಟತೆಯಿಲ್ಲ. ಮಾದಕ ವ್ಯಸನಿಗಳು ಗಾಂಜಾ ಸೇವಿಸಿ, ಶೆಡ್‌ಗಳಿಗೆ ಬೆಂಕಿ ಹಚ್ಚಿರುವ ಶಂಕೆಯಿದೆ. ಘಟನೆಯಲ್ಲಿ ಫ್ರಿಜ್, ಹಳೆಯ ಎರಡು ಬೈಕ್, ಎರಡು ಸೈಕಲ್ ಹಾಗೂ ಗೃಹೋಪಯೋಗಿ ವಸ್ತುಗಳು ಸುಟ್ಟು ಭಸ್ಮವಾಗಿವೆ. ಘಟನಾ ಸ್ಥಳದಲ್ಲಿ ಅಡುಗೆ ಅನಿಲದ ಐದಾರು ಸಿಲಿಂಡರ್‌ಗಳು ಪತ್ತೆಯಾಗಿದ್ದು, ಅವು ಸ್ಫೋಟಗೊಂಡಿರುವ ಶಂಕೆಯಿದೆ ಎಂದು ಪೊಲೀಸರು ಹೇಳಿದ್ದಾರೆ. ಬಂಡೆಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲಾರಿ ದರೋಡೆ ಪ್ರಕರಣ: ಸೆರೆ

ನೆಲ್ಯಾಡಿ (ದ.ಕ.): ಮಂಗಳೂರು-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ 75ರ ಧರ್ಮಸ್ಥಳ ಪೊಲೀಸ್ ಠಾಣೆ ವ್ಯಾಪ್ತಿಯ ರೆಖ್ಯಾ ಗ್ರಾಮದಲ್ಲಿ 2017ರಲ್ಲಿ ಲಾರಿ ಅಡ್ಡಗಟ್ಟಿ ದರೋಡೆ ನಡೆಸಿದ ಪ್ರಕರಣದಲ್ಲಿ ಹಲವು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಧರ್ಮಸ್ಥಳ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ದರೋಡೆ ಪ್ರಕರಣದ ಎರಡನೇ ಆರೋಪಿಯಾಗಿರುವ ಮಣಿ ಯಾನೆ ಮಣಿಕಂಠ (32) ಬೆಂಗಳೂರು ಬನಶಂಕರಿ ನಿವಾಸಿಯಾಗಿದ್ದು, ತಪ್ಪಿಸಿಕೊಂಡಿದ್ದ. ಈತನ ವಿರುದ್ಧ ವಾರಂಟ್ ಹೊರಡಿಸಲಾಗಿತ್ತು.

ಆರೋಪಿಯ ಚಲನವಲನಗಳ ಬಗ್ಗೆ ಖಚಿತ ಮಾಹಿತಿ ಸಂಗ್ರಹಿಸಿದ ಧರ್ಮಸ್ಥಳ ಪೊಲೀಸರ ತಂಡ, ಬೆಂಗಳೂರಿನ ಬನಶಂಕರಿ ಮಾರ್ಕೆಟ್ ಬಳಿ ಏ.26ರಂದು ಆರೋಪಿಯನ್ನು ಬಂಧಿಸಿದೆ.

ಬಂಧಿತನನ್ನು ಪುತ್ತೂರು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ನ್ಯಾಯಾಲಯವು ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಎಲ್ಲಿ-ಏನು?
ಬುಧವಾರ

ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆ: ಭಾರತರತ್ನ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಆಚರಣಾ ಸಮಾರಂಭ. ಅತಿಥಿ: ಶಿಕ್ಷಣ ತಜ್ಞ ಡಾ. ಜಿ.ಬಿ.ಹರೀಶ, ಅಧ್ಯಕ್ಷತೆ: ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆಯ ಮಹಾನಿರ್ದೇಶಕಿ ಡಾ. ಜೆ.ಶ್ರೀದೇವಿ.
ಸ್ಥಳ: ರಜತ ಮಹೋತ್ಸವ ಸಭಾಂಗಣ, ಸಿಪಿಆರ್‌ಐ. ಮಧ್ಯಾಹ್ನ 2

ಶೇಷಾದ್ರಿಪುರಂ ಸಂಜೆ ಕಾಲೇಜು: 'ಸಂಧ್ಯಾ ಕಲರವ' ಕಾಲೇಜು ವಾರ್ಷಿಕೋತ್ಸವ 2025-26. ಅತಿಥಿ: ಇತಿಹಾಸಕಾರ ಅರೇನಹಳ್ಳಿ ಧರ್ಮೇಂದ್ರ ಕುಮಾರ್, ನಟಿ ಶ್ವೇತಾ ಶ್ರೀವಾತ್ಸವ್, ಅಧ್ಯಕ್ಷತೆ: ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ.
ಸ್ಥಳ: ಕಾಲೇಜು ಆವರಣ, ಶೇಷಾದ್ರಿಪುರಂ. ಸಂಜೆ 5

ಶಾಂತಲಾ ಆರ್ಟ್ಸ್ ಟ್ರಸ್ಟ್: ವಿಶ್ವ ನೃತ್ಯ ದಿನಾಚರಣೆ-2026. ಭರತನಾಟ್ಯ: ಶಾಂತಲಾ ನೃತ್ಯ ತಂಡದ ಕಲಾವಿದರಿಂದ, ಒಡಿಸ್ಸಿ ನೃತ್ಯ ಪ್ರದರ್ಶನ: ಯಶೋಮತಿ ಮಿಶ್ರಾ ಮತ್ತು ಸಾನ್ವಿ ಠಾಕೂರ್ ಅವರಿಂದ.
ಸ್ಥಳ: ಸೇವಾ ಸದನ, 14ನೇ ಅಡ್ಡರಸ್ತೆ, ಮಲ್ಲೇಶ್ವರ. ಸಂಜೆ 5.30

ಸುವರ್ಣ ಕನ್ನಡ ಸಾಮ್ರಾಜ್ಯ: 'ಮಿಸ್ಟರ್ ರಾಜ್‌ಕುಮಾರ್ ನಾಡಿನ ಭಾಗ್ಯ' ಅಣ್ಣಾವ್ರ ಚಲನಚಿತ್ರಗಳ ಶೀರ್ಷಿಕೆಗಳ ಒಳಗೊಂಡ ಕಿರು ನಾಟಕ 'ತಿಲಕಾರ್ಷ್ಣ ರಾಜ ಶಾಸನ' ಪ್ರದರ್ಶನ.
ಸ್ಥಳ: ಡಾ. ಸಿ.ಅಶ್ವತ್ಥ್ ಕಲಾ ಭವನ ಸಭಾಂಗಣ, ಎನ್.ಆರ್.ಕಾಲೊನಿ, ಬಸವನಗುಡಿ. ಸಂಜೆ 5.30

ಕಾರ್ಯಕ್ರಮ ಆಹ್ವಾನ ಪತ್ರಿಕೆ ವಾಟ್ಸ್‌ಆ್ಯಪ್ ಮಾಡಿ
76766 68588

ಯುವತಿಯ ಸಾವಿನ ಕಾರಣ ನಿಗೂಢ

» ನಮ್ಮ ಮೊದಲ ಪುಟದಿಂದ

ಡೈರಿಗಳು ಪತ್ತೆ: ದಿನಚರಿ ಬರೆಯುವ ಹವ್ಯಾಸ ಹೊಂದಿದ್ದ ಪೂಜಾ, ಪ್ರತಿನಿತ್ಯದ ಆಗುಹೋಗುಗಳನ್ನು ಡೈರಿಯಲ್ಲಿ ಬರೆದಿಟ್ಟಿದ್ದಾರೆ. ದೈನಂದಿನ ಖರ್ಚು ವೆಚ್ಚ, ವ್ಯಕ್ತಿಗಳ ಭೇಟಿ, ಕಚೇರಿಯ ಕಾರ್ಯ ಚಟುವಟಿಕೆಗಳು ಸೇರಿದಂತೆ ಎಲ್ಲಾ ಸಂಗತಿಗಳನ್ನು ಡೈರಿಯಲ್ಲಿ ಬರೆದಿದ್ದಾರೆ. ಅವರ ಏಳೆಂಟು ಡೈರಿಗಳು ಮನೆಯಲ್ಲಿ ಸಿಕ್ಕಿದ್ದು, ಅವುಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸಿಡಿಆರ್ ಪರಿಶೀಲನೆ: ಪೂಜಾ ಬಳಸುತ್ತಿದ್ದ ಮೊಬೈಲ್ ಅವರ ಮನೆಯಲ್ಲೇ ಪತ್ತೆಯಾಗಿದೆ. ಸ್ವಿಚ್ ಆಫ್ ಆಗಿದ್ದ ಆ ಮೊಬೈಲ್ ವಶಪಡಿಸಿಕೊಂಡು ಹೆಚ್ಚಿನ ಪರಿಶೀಲನೆ ನಡೆಸಲಾಗುತ್ತಿದೆ. ಪೂಜಾ, ವ್ಯಕ್ತಿಯೊಬ್ಬರ ಜತೆ ಸದಾ ಮೊಬೈಲ್ ಸಂಭಾಷಣೆಯಲ್ಲಿ ನಿರತರಾಗಿರುತ್ತಿದ್ದರು ಎಂದು ಅವರ ಮನೆ ಮಾಲೀಕರು ಹೇಳಿದ್ದಾರೆ. ಪೂಜಾ ಅವರ ಮೊಬೈಲ್ ಕರೆಗಳು, ವಾಟ್ಸ್ಯಾಪ್ ಸಂದೇಶಗಳ ಬಗ್ಗೆ ಹೆಚ್ಚಿನ ಮಾಹಿತಿ ಕಲೆಹಾಕಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಾನಸಿಕ ಖಿನ್ನತೆಯಿಂದ ಬಳಲುತ್ತಿದ್ದ ಪೂಜಾ, ತಡರಾತ್ರಿಯಲ್ಲಿ ಮನೆಯೊಳಗೆ ಹಾಡು ಹೇಳುತ್ತಾ ಕಿರುಚಾಡುತ್ತಿದ್ದರು. ಇದರಿಂದ ನೆರೆಹೊರೆಯವರಿಗೆ ಸಮಸ್ಯೆಯಾಗುತ್ತಿತ್ತು. ಈ ಕಾರಣಕ್ಕೆ ಅವರಿಗೆ ಎಚ್ಚರಿಕೆ ಕೊಟ್ಟು, ಬುದ್ಧಿ ಹೇಳಿದ್ದೆವು. ಕೆಲವೊಮ್ಮೆ ಅವರು ರಸ್ತೆಯಲ್ಲಿ ಸಾರ್ವಜನಿಕವಾಗಿ ಚೀರಾಡುತ್ತಿದ್ದರು. ನೆರೆಹೊರೆಯವರ ಜತೆ ಹೆಚ್ಚಾಗಿ ಮಾತನಾಡದ ಅವರು ಒಂಟಿಯಾಗಿರುತ್ತಿದ್ದರು ಎಂದು ಮನೆ ಮಾಲೀಕರು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮನೆ ತುಂಬಾ ಕಸದ ರಾಶಿ: ಪೂಜಾ ವಾಸವಿದ್ದ ಮನೆಯ ದೃಶ್ಯಗಳು ನಿಜಕ್ಕೂ ಬೆಚ್ಚಿಬೀಳಿಸುವಂತಿವೆ. ಪೂಜಾ, ಮನೆಯ ಗೋಡೆಗಳ ತುಂಬೆಲ್ಲಾ ಇಂಗ್ಲಿಷ್ ಮತ್ತು ಹಿಂದಿ ಭಾಷೆಯಲ್ಲಿ ಬರೆದ ಚೀಟಿಗಳನ್ನು ಅಂಟಿಸಿದ್ದರು. ಅಲ್ಲದೇ, ಚಿತ್ರಗಳನ್ನು ಬಿಡಿಸಿ ಗೋಡೆಗೆ ಹಾಕಿದ್ದಾರೆ. ಮನೆಯ ಒಂದು ಕೊಠಡಿಯ ತುಂಬಾ ಕಸ ಮತ್ತು ಹರಿದ ಕಾಗದಗಳನ್ನು ತುಂಬಿಸಿಟ್ಟಿದ್ದಾರೆ. ಐದಾರು ಮೂಟೆಯಷ್ಟು ಹಳೆಯ ಕಾಗದಗಳು ಮನೆಯಲ್ಲಿ ಪತ್ತೆಯಾಗಿದ್ದು, ವಿಚಿತ್ರ ವರ್ತನೆ ಹೊಂದಿದ್ದರು ಎಂದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ ಶಾಕ್: ಗೃಹಿಣಿ ಸಾವು

ಪೀಣ್ಯದಾಸರಹಳ್ಳಿ: ವಾಷಿಂಗ್ ಮೆಷಿನ್ ಆನ್ ಮಾಡುವ ವೇಳೆ ವಿದ್ಯುತ್ ಶಾಕ್ ಹೊಡೆದು ಗೃಹಿಣಿ ಮೃತಪಟ್ಟ ಘಟನೆ ಮಾದನಾಯಕನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಗೌಡಹಳ್ಳಿಯಲ್ಲಿ ಮಂಗಳವಾರ ನಡೆದಿದೆ.

■ ವಾಷಿಂಗ್ ಮೆಷಿನ್ ಆನ್ ಮಾಡುವ ವೇಳೆ ಪ್ರವಹಿಸಿದ ವಿದ್ಯುತ್

ಸುಜಾತ (31) ಮೃತಪಟ್ಟ ಗೃಹಿಣಿ. ಬೆಳಗ್ಗೆ 8ಗಂಟೆ ಸುಮಾರಿಗೆ ವಾಷಿಂಗ್ ಮೆಷಿನ್ ಸ್ವಿಚ್‌ಆನ್ ಮಾಡುತ್ತಿದ್ದಂತೆ ವಿದ್ಯುತ್ ಶಾಕ್ ಹೊಡೆದಿದೆ. ಬಳಿಕ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಪ್ರಾಣ ಹಾರಿಹೋಗಿದೆ ಎಂದು ಪತಿ ಮನೆಯವರು ತಿಳಿಸಿದ್ದಾರೆ. ಆದರೆ, ಮಗಳ ಸಾವಿನಲ್ಲಿ ಅನುಮಾನವಿದೆ ಎಂದು ಸುಜಾತಾ ಪೋಷಕರು ಆರೋಪಿಸಿದ್ದಾರೆ.

11 ವರ್ಷಗಳ ಹಿಂದೆ ಗೌಡಹಳ್ಳಿ ಚೇತನ್ ಜತೆ ಸುಜಾತ ವಿವಾಹವಾಗಿದ್ದು, ದಂಪತಿಗೆ 9 ವರ್ಷದ ಗಂಡು ಮಗು ಇದೆ. ಕೆಲ ದಿನಗಳ ಹಿಂದೆ ಪತಿಯೊಂದಿಗೆ ಜಗಳವಾಗಿ ಸುಜಾತ ತವರುಮನೆ ಸೇರಿದ್ದರು. ರಾಜಿಪಂಚಾಯಿತಿ ಬಳಿಕ ಪತಿ ಮನೆಗೆ ಬಂದಿದ್ದರು.

ಆ್ಯನಿವರ್ಸರಿ ಬೆನ್ನಲ್ಲೇ ದುರಂತ: ದಂಪತಿ ಸೋಮವಾರವಷ್ಟೇ ವಿವಾಹ ವಾರ್ಷಿಕೋತ್ಸವ ಆಚರಿಸಿಕೊಂಡಿದ್ದರು. ಸಂಬಂಧ ಗಟ್ಟಿಗೊಳಿಸುವಂತೆ ಮನೆ ದೇವರಿಗೆ ಪೂಜೆ ಕೂಡ ಮಾಡಿಸಿದ್ದರು. ಮರುದಿನವೇ ದುರ್ಘಟನೆ ಸಂಭವಿಸಿದೆ.

ವೇಶ್ಯಾವಾಟಿಕೆ: ವಿದೇಶಿ ಮಹಿಳೆಯರ ಬಂಧನ

ಬೆಂಗಳೂರು: ಮಡಿವಾಳ ಚೆಕ್‌ಪೋಸ್ಟ್ ಬಳಿ ವೇಶ್ಯಾವಾಟಿಕೆಗೆ ಪ್ರಚೋದನೆ ನೀಡುತ್ತಿದ್ದ 6 ಮಂದಿ ವಿದೇಶಿ ಮಹಿಳೆಯರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ವಿದೇಶಿ ಮಹಿಳೆಯರು ಮಡಿವಾಳ ಚೆಕ್‌ಪೋಸ್ಟ್ ಬಳಿಯ ಪಾದಚಾರಿ ಮಾರ್ಗದಲ್ಲಿ ನಿಂತುಕೊಂಡು ಪುರುಷರನ್ನು ವೇಶ್ಯಾವಾಟಿಕೆಗೆ ಪ್ರಚೋದಿಸುತ್ತಿದ್ದಾರೆ ಎಂಬ ಮಾಹಿತಿ ಬಂದಿತ್ತು. ಈ ಮಾಹಿತಿ ಆಧರಿಸಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದಾಗ ವಿದೇಶಿ ಮಹಿಳೆಯರು ಪುರುಷರನ್ನು ವೇಶ್ಯಾವಾಟಿಕೆಗೆ ಪ್ರಚೋದಿಸುತ್ತಾ ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿರುವುದು ಗೊತ್ತಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಥಳದಲ್ಲೇ ಆ ಮಹಿಳೆಯರನ್ನು ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದಾಗ ಪಾಸ್‌ಪೋರ್ಟ್ ಹಾಗೂ ವೀಸಾ ಕುರಿತು ಸರಿಯಾದ ಮಾಹಿತಿ ನೀಡಲಿಲ್ಲ. ಅವರು ಹಣ ಸಂಪಾದನೆಗಾಗಿ ವೇಶ್ಯಾವಾಟಿಕೆ ನಡೆಸುತ್ತಿರುವುದು ತನಿಖೆಯಿಂದ ಗೊತ್ತಾಗಿದೆ. ಹೀಗಾಗಿ, ಅವರ ವಿರುದ್ಧ ಕೋರಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ. ಅವರ ಬಂಧನದ ಸಂಬಂಧ ವಿದೇಶಿಯರ ಪ್ರಾದೇಶಿಕ ನೋಂದಣಿ ಪ್ರಾಧಿಕಾರಕ್ಕೆ (ಎಫ್‌ಆರ್‌ಆರ್‌ಒ) ಮಾಹಿತಿ ನೀಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ನಾನಾ ಇಲಾಖೆಗಳ ಸಹಯೋಗದಲ್ಲಿ ಎಂಪ್ರಿ ನೇತೃತ್ವದಲ್ಲಿ ಅನುಷ್ಠಾನ | ಎಲ್ಲ ಜಿಲ್ಲೆಗಳಲ್ಲೂ ಕಾರ್ಯಕ್ರಮ ಜಾರಿ : ಸಚಿವ ಈಶ್ವರ ಖಂಡ್ರೆ

ಹವಾಮಾನ ಬದಲು ಪರಿಣಾಮ ತಗ್ಗಿಸಲು ಕ್ರಿಯಾ ಯೋಜನೆ

ವಿಕ ಸುದ್ದಿಲೋಕ ಬೆಂಗಳೂರು

ಜಾಗತಿಕ ತಾಪಮಾನ ಏರಿಕೆ ಮತ್ತು ಹವಾಮಾನ ಬದಲಾವಣೆಯ ಪರಿಣಾಮ ತಗ್ಗಿಸಲು ಕರ್ನಾಟಕ ರಾಜ್ಯ ಕ್ರಿಯಾ ಯೋಜನೆ (ಕೆಎಸ್‌ಎಪಿಸಿಸಿ) ರೂಪಿಸಲಾಗಿದ್ದು, ಇದರ ಸಮರ್ಪಕ ಅನುಷ್ಠಾನಕ್ಕೆ ಕ್ರಮ ವಹಿಸಲು ಸೂಚಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಕರ್ನಾಟಕ ಮಾಧ್ಯಮ ಅಕಾಡೆಮಿ ಮಂಗಳವಾರ ಆಯೋಜಿಸಿದ್ದ 'ಬೆಂಗಳೂರಿನಲ್ಲಿ ತಾಪಮಾನ ವೈಪರೀತ್ಯ ಹಾಗೂ ಅದರ ಪರಿಣಾಮಗಳು' ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

''ಕ್ರಿಯಾ ಯೋಜನೆಯನ್ನು ರಾಜ್ಯ ಸರಕಾರದ ನಾನಾ ಇಲಾಖೆಗಳ ಸಹಯೋಗದೊಂದಿಗೆ ಜಾರಿಗೆ ತರಲು ಪರಿಸರ ಇಲಾಖೆ ವ್ಯಾಪ್ತಿಗೆ ಒಳಪಡುವ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ-ಎಂಪ್ರಿ ಕ್ರಮ ಕೈಗೊಂಡಿದೆ. ಜತೆಗೆ, ಜಿ.ಪಂ. ಕಚೇರಿಗಳ ಸಹಯೋಗದೊಂದಿಗೆ ಕೆಎಸ್‌ಎಪಿಸಿಸಿ ಅನುಷ್ಠಾನ ಮತ್ತು ಅದರ ಪ್ರಗತಿಯ ಕುರಿತು ಜಿಲ್ಲಾ ಅಧಿಕಾರಿಗಳು ಮತ್ತು ಇತರ ಸಂಬಂಧಿತ ಸಂಸ್ಥೆಗಳಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ರಾಜ್ಯದ 31 ಜಿಲ್ಲೆಗಳಲ್ಲೂ ಕಾರ್ಯಕ್ರಮ ರೂಪಿಸಲಾಗುವುದು,'' ಎಂದು ತಿಳಿಸಿದರು.

''ಹವಾಮಾನ-ಚೇತರಿಕೆ ಕುರಿತು ಸಲಹೆ ನೀಡಲು 2025ರ ಏಪ್ರಿಲ್‌ನಲ್ಲಿ ಸಮರ್ಪಿತ ರೇಡಿಯೊ ಕಾರ್ಯಕ್ರಮ 'ಹವಾಮಾನ ಮಿತ್ರ' ಪ್ರಾರಂಭಿಸಲಾಗಿದ್ದು, ಈವರೆಗೆ 24 ಕಾರ್ಯಕ್ರಮಗಳನ್ನು ಆಕಾಶವಾಣಿಯಲ್ಲಿ ಪ್ರಸಾರ ಮಾಡಲಾಗಿದೆ. ಈ ಮೂಲಕ ಜನಜಾಗೃತಿ ಮೂಡಿಸಲಾಗುತ್ತಿದೆ,'' ಎಂದು ತಿಳಿಸಿದರು.

ಸಚಿವ ಈಶ್ವರ ಖಂಡ್ರೆ ಅವರು ಗಿಡಕ್ಕೆ ನೀರೆರೆಯುವ ಮೂಲಕ ವಿಚಾರ ಸಂಕಿರಣವನ್ನು ಉದ್ಘಾಟಿಸಿದರು.

ಏರ್ ಶೋ ನಡೆಯುವ ಭೂಮಿಯೂ ಅರಣ್ಯ

''ಬೆಂಗಳೂರಿನಲ್ಲಿ ಪ್ರತಿ 2 ವರ್ಷಗಳಿಗೊಮ್ಮೆ ಅಂತಾರಾಷ್ಟ್ರೀಯ ವೈಮಾನಿಕ ಪ್ರದರ್ಶನ ಏರ್ ಶೋ ನಡೆಯುವ ಗಂಟಿಗಾನಹಳ್ಳಿಯಲ್ಲಿರುವ ಯಲಹಂಕ ವಾಯುನೆಲೆ ಕೂಡ ಅರಣ್ಯ ಭೂಮಿಯಾಗಿದೆ. ಗಂಟಿಗಾನಹಳ್ಳಿ ಗ್ರಾಮದ 159 ಎಕರೆ ಪ್ರದೇಶ ಸರಕಾರಿ ಕಾಯ್ದಿಟ್ಟ ಅರಣ್ಯ ಪ್ರದೇಶವಾಗಿದ್ದು, ವಾಯುಪಡೆ ಪರ್ಯಾಯ ಭೂಮಿ ನೀಡದಿದ್ದರೆ, ಅದನ್ನು ಅರಣ್ಯ ಇಲಾಖೆಗೆ ಹಿಂಪಡೆಯಲು ಕ್ರಮ ವಹಿಸಲಾಗುವುದು,'' ಎಂದು ಸಚಿವರು ಹೇಳಿದರು.

ಮೇ ನಲ್ಲಿ ವಿಶ್ವಗುರು ಬಸವಣ್ಣ ಜೈವಿಕ ಉದ್ಯಾನಕ್ಕೆ ಶಂಕುಸ್ಥಾಪನೆ

''ಬೆಂಗಳೂರು ಉತ್ತರ ತಾಲೂಕಿನ ಮಾದಪ್ಪನಹಳ್ಳಿಯಲ್ಲಿ 153 ಎಕರೆ ಪ್ರದೇಶದಲ್ಲಿ ವಿಶ್ವಗುರು ಬೃಹತ್ ಜೈವಿಕ ಉದ್ಯಾನ ನಿರ್ಮಾಣ ಮಾಡಲು ಸರಕಾರ ಸಂಕಲ್ಪ ಮಾಡಿದ್ದು, ಸಚಿವ ಸಂಪುಟದ ಅನುಮೋದನೆಯೂ ದೊರೆತಿದೆ. ಮುಂದಿನ ತಿಂಗಳು ಮುಖ್ಯಮಂತ್ರಿಗಳಿಂದ ಇದಕ್ಕೆ ಶಂಕುಸ್ಥಾಪನೆ ಮಾಡಿಸಲಾಗುವುದು,'' ಎಂದು ಸಚಿವರು ಹೇಳಿದರು. ಕರ್ನಾಟಕ ರಾಜ್ಯ ನೈಸರ್ಗಿಕ ವಿಪತ್ತು ನಿರ್ವಹಣಾ ಕೇಂದ್ರದ ನಿರ್ದೇಶಕ ಎಂ.ಎಸ್.ದಿವಾಕರ್ ಮಾತನಾಡಿ, '' ರಾಜ್ಯದಲ್ಲಿ ಗ್ರಾಮ ಪಂಚಾಯಿತಿವಾರು ಮಳೆ ಮಾಪನ ಇದ್ದು, ಸದ್ಯದಲ್ಲೇ ಹೋಬಳಿ ಮಟ್ಟದಲ್ಲಿ ವೆದರ್ ಸ್ಟೇಷನ್ (ಹವಾಮಾನ ಕೇಂದ್ರ) ಸ್ಥಾಪಿಸಲಾಗುತ್ತದೆ. ಇದರಿಂದ ಪ್ರತಿ 20 ನಿಮಿಷಕ್ಕೊಮ್ಮೆ ಕನಿಷ್ಠ ಮತ್ತು ಗರಿಷ್ಠ ತಾಪಮಾನ ಮಾಹಿತಿ ಪಡೆಯಬಹುದಾಗಿದೆ,'' ಎಂದು ಮಾಹಿತಿ ನೀಡಿದರು.

ಬೆಂಗಳೂರಿನ ಶ್ವಾಸತಾಣಗಳ ರಕ್ಷಣೆಗೆ ಕ್ರಮ: ''ಕಳೆದ 3 ವರ್ಷಗಳ ಅವಧಿಯಲ್ಲಿ ರಾಜ್ಯದಲ್ಲಿ ಸುಮಾರು 11 ಕೋಟಿ ಸಸಿಗಳನ್ನು ನೆಡಲಾಗಿದೆ. ಈ ಸಸಿಗಳ ಪೈಕಿ ಎಷ್ಟು ಬದುಕುಳಿದಿವೆ ಎಂಬ ಮಾಹಿತಿಯನ್ನು ಅರಣ್ಯ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ಮಾಹಿತಿ ಒದಗಿಸಲಾಗಿದೆ. ಬೆಂಗಳೂರು ನಗರದ ಕೊತ್ತನೂರು, ಕಾಡುಗೋಡಿ, ಬಿ.ಎಂ.ಕಾವಲ್, ತುರಹಳ್ಳಿ ಸೇರಿದಂತೆ ಹಲವು ಕಡೆಗಳಲ್ಲಿನ ಸುಮಾರು 10 ಸಾವಿರ ಕೋಟಿ ರೂ. ಬೆಲೆ ಬಾಳುವ 250 ಎಕರೆ ಅರಣ್ಯ ಭೂಮಿಯ ಒತ್ತುವರಿ ತೆರವುಗೊಳಿಸಲಾಗಿದೆ. ಆ ಜಾಗದಲ್ಲಿ ಕಾಂಪೌಂಡ್ ನಿರ್ಮಿಸಿ ಸಾವಿರಾರು ಗಿಡಗಳನ್ನು ನೆಟ್ಟು ನೆಡುತೋಪು ನಿರ್ಮಿಸಲಾಗಿದೆ. ಈ ಮೂಲಕ ನಗರಕ್ಕೆ ಅಗತ್ಯವಾದ ಶ್ವಾಸತಾಣ ಉಳಿಸಲಾಗಿದೆ,'' ಎಂದರು.

''ಈ ಹಿಂದೆ ಕೈಗಾರಿಕೆ ಉದ್ದೇಶಕ್ಕಾಗಿ ಕೇಂದ್ರ ಸರಕಾರಿ ಸ್ವಾಮ್ಯದ ಎಚ್‌ಎಂಟಿಗೆ ಪೀಣ್ಯ ಪ್ಲಾಂಟೇಷನ್‌ನಲ್ಲಿ ಸುಮಾರು 400 ಎಕರೆಗೂ ಹೆಚ್ಚು ಅರಣ್ಯ ಭೂಮಿ ನೀಡಲಾಗಿತ್ತು. ಎಚ್‌ಎಂಟಿ ಇಲ್ಲಿ 160 ಎಕರೆ ಅರಣ್ಯ ಭೂಮಿಯನ್ನು ಮಾರಾಟ ಮಾಡಿದೆ. ಇನ್ನೂ ಅಲ್ಲಿ 280 ಎಕರೆ ಅರಣ್ಯ ಉಳಿದಿದ್ದು, ಇದನ್ನು ಮರಳಿ ಇಲಾಖೆಗೆ ಪಡೆದು ಬೆಂಗಳೂರು ನಗರಕ್ಕೆ ಅತ್ಯಗತ್ಯವಾದ ಶ್ವಾಸತಾಣವನ್ನು ಉಳಿಸಲು ತೀರ್ಮಾನಿಸಲಾಗಿದೆ. ಇದಕ್ಕಾಗಿ, ಕಾನೂನು ಹೋರಾಟ ನಡೆಯುತ್ತಿದೆ. ಪ್ರಸ್ತುತ ಪ್ರಕರಣ ಸುಪ್ರೀಂಕೋರ್ಟ್‌ನಲ್ಲಿದೆ,'' ಎಂದು ಮಾಹಿತಿ ನೀಡಿದರು.

ಈ ವೇಳೆ ಕರ್ನಾಟಕ ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ, ಅಸರ್ ಸೋಷಿಯಲ್ ಇಂಪ್ಯಾಕ್ಟ್ ಅಡ್ವೈಸರ್ಸ್ ಸಂವಹನ ಮುಖ್ಯಸ್ಥ ಬ್ರಿಕೇಶ್ ಸಿಂಗ್ ಉಪಸ್ಥಿತರಿದ್ದರು.

ಬಿಗ್‌ಬಾಸ್ ಮಾಜಿ ಸ್ಪರ್ಧಿಯ ಪೆಟ್ರೋಲ್ ಬಾಂಬ್ ರೀಲ್ಸ್

ವಿಕ ಸುದ್ದಿಲೋಕ ಬೆಂಗಳೂರು



ಮತ್ತೆ ವಿವಾದಕ್ಕೆ ಸಿಲುಕಿದ ರಜತ್

ಸಾರ್ವಜನಿಕ ರಸ್ತೆಯಲ್ಲಿ ಅಪಾಯಕಾರಿ ಪ್ರದರ್ಶನ

ಕನ್ನಡದ ರಿಯಾಲಿಟಿ ಶೋ 'ಬಿಗ್‌ಬಾಸ್'ನ ಮಾಜಿ ಸ್ಪರ್ಧಿ ರಜತ್ ಕಿಶನ್ ಅಲಿಯಾಸ್ ಬುಜ್ಜಿ ಸಾರ್ವಜನಿಕ ರಸ್ತೆಯಲ್ಲಿ ಪೆಟ್ರೋಲ್ ಬಾಂಬ್ ಮಾದರಿಯ ಸ್ಫೋಟಕ ಬಳಸಿ ರೀಲ್ಸ್ ಮಾಡಿ ಮತ್ತೆ ವಿವಾದಕ್ಕೆ ಸಿಲುಕಿದ್ದಾರೆ.

ಸಾರ್ವಜನಿಕ ಸ್ಥಳದಲ್ಲಿ ಈ ಅಪಾಯಕಾರಿ ಕೃತ್ಯ ಎಸಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ತೀವ್ರ ಟೀಕೆ ವ್ಯಕ್ತವಾಗಿದೆ. ಈ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದು, ಸಾರ್ವಜನಿಕರು ರಜತ್ ಕೃತ್ಯವನ್ನು ಖಂಡಿಸಿದ್ದಾರೆ. ಈ ವಿಡಿಯೊವನ್ನು ಯಾವ ಸ್ಥಳದಲ್ಲಿ ಮತ್ತು ಯಾವಾಗ ಚಿತ್ರೀಕರಿಸಲಾಗಿದೆ ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಸಿಕ್ಕಿಲ್ಲ.

ವೈರಲ್ ಆಗಿರುವ ವಿಡಿಯೊದಲ್ಲಿ ಕಂಡುಬಂದಂತೆ ರಜತ್, ಕವರ್ ಒಳಗೆ ಪೆಟ್ರೋಲ್ ಬಾಂಬ್ ಹಾಕಿ, ಅದರ ಮೇಲೆ ಕಲ್ಲಿಟ್ಟು ಅದನ್ನು ಸ್ಫೋಟಗೊಳಿಸುವ ರೀತಿಯಲ್ಲಿ ಚಿತ್ರೀಕರಿಸಿದ್ದಾರೆ.

ಸಾಮಾಜಿಕ ಜಾಲತಾಣದ ಬಳಕೆದಾರರು ರಜತ್ ನಡೆಗೆ ಆಕ್ರೋಶ ವ್ಯಕ್ತಪಡಿಸಿದ್ದು, ಇಂತಹ ಅಪಾಯಕಾರಿ ಕಸರತ್ತುಗಳನ್ನು ಮಾಡುವುದರಿಂದ ಜನರ ಗಮನ ಸೆಳೆಯಲು ಅಥವಾ ಫಾಲೋವರ್ಸ್ ಹೆಚ್ಚಿಸಿಕೊಳ್ಳಲು ಆಗುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳದೆ ಸಾರ್ವಜನಿಕ ಸ್ಥಳದಲ್ಲಿ ಸ್ಫೋಟಕದಂತೆ ಕಾಣುವ ವಸ್ತುವನ್ನು ಬಳಸಿರುವುದು ಕಾನೂನುಬಾಹಿರ. ರಜತ್‌ರ ನಡೆ ಇತರರಿಗೆ ಕೆಟ್ಟ ಸಂದೇಶ ರವಾನಿಸುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

ಅಪಾಯಕಾರಿ ಘಟನೆ ವೇಳೆ ಏನಾದರೂ ಅನಾಹುತ ಸಂಭವಿಸಿದ್ದರೆ, ಅದರ ಹೊಣೆ ಯಾರು ಹೊರುತ್ತಿದ್ದರು? ಸಾರ್ವಜನಿಕರ ಜೀವಕ್ಕೆ ಅಪಾಯ ಉಂಟು ಮಾಡುವ ಇಂತಹ ಕೃತ್ಯಗಳ ವಿರುದ್ಧ ಕಟ್ಟುನಿಟ್ಟಿನ ಕಾನೂನು ಕ್ರಮ ಅಗತ್ಯ ಎಂದು ಸಾಮಾಜಿಕ ಜಾಲತಾಣದ ಬಳಕೆದಾರರು ಒತ್ತಾಯಿಸಿದ್ದಾರೆ.

ಕ್ಷಮೆ ಕೇಳಿದ ರಜತ್: ರೀಲ್ಸ್ ಸಂಬಂಧ ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ವಿಡಿಯೊ ಮೂಲಕ ಕ್ಷಮೆ ಕೇಳಿರುವ ರಜತ್, ''ಪ್ರಮೋಷನಲ್ ವಿಡಿಯೊ ಮಾಡಿದ್ದೆವು. ಅದು ಸುದ್ದಿಯಾಗಿದೆ. ಯಾರಿಗೂ ತೊಂದರೆ ಮಾಡುವ ಉದ್ದೇಶವಿಲ್ಲ, ಕಲಾವಿದನಾಗಿ ಈ ರೀಲ್ಸ್‌ನಲ್ಲಿ ಕಾಣಿಸಿಕೊಂಡಿದ್ದೆ. ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹಾಕಿರುವುದು ಗೊತ್ತಾದ ತಕ್ಷಣವೇ ತಂಡದ ಸದಸ್ಯರಿಗೆ ತಿಳಿಸಿ ಡಿಲೀಟ್ ಮಾಡಿಸಿದ್ದೇನೆ,'' ಎಂದು ಸ್ಪಷ್ಟನೆ ಕೊಟ್ಟಿದ್ದಾರೆ. ''ರೀಲ್ಸ್ ಮಾಡುವಾಗ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಳ್ಳಲಾಗಿತ್ತು. ಯಾರಿಗೂ ಸಮಸ್ಯೆ ಆಗದಂತೆ ಎಚ್ಚರ ವಹಿಸಲಾಗಿತ್ತು. ಕನಕಪುರ ರಸ್ತೆಯ ಬಳಿ ವಿಡಿಯೊ ಚಿತ್ರೀಕರಿಸಿದ್ದೆವು. ರೀಲ್ಸ್ ಚಿತ್ರೀಕರಣಕ್ಕೆ ಆ ಊರಿನ ಮುಖಂಡರ ಅನುಮತಿ ಪಡೆದಿದ್ದೆವು,'' ಎಂದು ಹೇಳಿದ್ದಾರೆ.

ಹಿಂದೆಯೂ ವಿವಾದ: ರಜತ್, ಬಿಗ್‌ಬಾಸ್ ಶೋನ ಮತ್ತೊಬ್ಬ ಮಾಜಿ ಸ್ಪರ್ಧಿ ವಿನಯ್‌ಗೌಡ ಜತೆ ಸಾರ್ವಜನಿಕ ಸ್ಥಳದಲ್ಲಿ ಮಚ್ಚು ಹಿಡಿದು ರೀಲ್ಸ್ ಮಾಡಿ ವಿವಾದ ಸೃಷ್ಟಿಸಿದ್ದರು. ಬಳಿಕ ಇಬ್ಬರನ್ನೂ ಬಸವೇಶ್ವರನಗರ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದರು.

ಬಿಗ್‌ಬಾಸ್ ಶೋ ಸ್ಪರ್ಧಿ ಡಾಗ್ ಸತೀಶ್‌ರ ಸ್ನೇಹಿತನಿಗೆ ಕರೆ ಮಾಡಿ ಬೆದರಿಕೆ ಹಾಕಿದ ಮತ್ತು ನಿಂದಿಸಿದ ಆರೋಪದ ಮೇಲೆ ರಜತ್ ವಿರುದ್ಧ ಕೆ.ಆರ್.ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ರಜತ್, ಮೈಸೂರಿನ ಹಳೆ ಜಿಲ್ಲಾಧಿಕಾರಿ ಕಚೇರಿ ಕಟ್ಟಡದ ಬಳಿ ಫೋಟೊ ಶೂಟ್ ಮಾಡಿಸಿ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದ್ದರು.

ರೋಡ್ ರೇಜ್: ಬಾನೆಟ್ ಮೇಲೆ ಏರಿದ್ದವನನ್ನು ಲೆಕ್ಕಿಸದೇ ವಾಹನ ಚಲಾಯಿಸಿದ್ದ ಆರೋಪಿ

ಕೊಲೆ ಯತ್ನ ಪ್ರಕರಣಕ್ಕೆ ಮಧ್ಯಂತರ ತಡೆ

ವಿಕ ಸುದ್ದಿಲೋಕ ಬೆಂಗಳೂರು

ರೋಡ್ ರೇಜ್ ಗದ್ದಲದ ನಂತರ ಬಾನೆಟ್ ಮೇಲೆ ಏರಿದ್ದ ದೂರುದಾರನನ್ನು ಲೆಕ್ಕಿಸದೇ ವಾಹನ ಚಲಾಯಿಸಿದ ಸಂಬಂಧ ವ್ಯಕ್ತಿಯೊಬ್ಬರ ವಿರುದ್ಧ ದಾಖಲಾಗಿದ್ದ ಕೊಲೆ ಯತ್ನ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಬೆಂಗಳೂರಿನ ಆರ್.ಸುರೇಶ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯಪೀಠ, ''ತನಿಖೆಯ ನೆಪದಲ್ಲಿ ಪೊಲೀಸರು ಅರ್ಜಿದಾರರ ವಿರುದ್ಧ ಬಲವಂತದ ಕ್ರಮ ಕೈಗೊಂಡು ಕಿರುಕುಳ ನೀಡಬಾರದು,'' ಎಂದು ನಿರ್ಬಂಧಿಸಿದೆ. ಜತೆಗೆ, ಅರ್ಜಿದಾರರು ಪೊಲೀಸರು ನಡೆಸುವ ತನಿಖೆಗೆ ಸಹಕರಿಸಬೇಕೆಂದು ಆದೇಶಿಸಿ ವಿಚಾರಣೆಯನ್ನು ಜೂನ್ 5ಕ್ಕೆ ಮುಂದೂಡಿತು.

ಅರ್ಜಿದಾರರ ಪರ ವಕೀಲರು, ''ಯಾವುದೋ ಒಬ್ಬ ವ್ಯಕ್ತಿ ಘಟನೆಯನ್ನು ರೆಕಾರ್ಡ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದು, ಅದನ್ನು ಆಧರಿಸಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ,'' ಎಂದರು.

ಆಗ ನ್ಯಾಯಪೀಠ, ''ಸಾಮಾಜಿಕ ಮಾಧ್ಯಮ ಏನು ಮಾಡಿದೆಯೋ ಅದು ಬಿಡಿ. ಆತ ಬಾನೆಟ್ ಮೇಲೆ ಏರಿದಾಗ ನೀವೇಕೆ ವಾಹನ ನಿಲ್ಲಿಸಲಿಲ್ಲ? ಏಕೆ ಕಾರನ್ನು ಮುಂದಕ್ಕೆ ಚಲಾಯಿಸಿದ್ದೀರಿ? ನೀವು ಕಾರು ನಿಲ್ಲಿಸಬೇಕಿತ್ತಲ್ಲವೇ,'' ಎಂದು ಪ್ರಶ್ನಿಸಿತು.

ಆಗ ವಕೀಲರು, ''ಅರ್ಜಿದಾರರು ಭಯದಿಂದ ಹಾಗೆ ಮಾಡಿದ್ದಾರೆ. ದೂರುದಾರ ಹೇಗೆ ಬಾನೆಟ್ ಮೇಲೆ ಬಂದ ಎಂಬುದು ಸ್ಪಷ್ಟವಾದರೆ ಅರ್ಜಿದಾರ ಏಕೆ ಕಾರು ಚಲಾಯಿಸಿದ ಎಂಬುದು ತಿಳಿಯಲಿದೆ. ರೋಡ್ ರೇಜ್ ಘಟನೆ ನಂತರ ವಿಡಿಯೊ ತಿರುಚಲಾಗಿದೆ,'' ಎಂದು ಉತ್ತರಿಸಿದರು. ಆದಕ್ಕೆ ನ್ಯಾಯಾಲಯ, 'ಇದು ಸಾಮಾಜಿಕ ಮಾಧ್ಯಮ ಸೃಷ್ಟಿಸಿದ ಸಮಸ್ಯೆಯೇ?,'' ಎಂದು ಕೇಳಿತು.

ವಾದ ಮುಂದುವರಿಸಿದ ವಕೀಲರು, ''ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ನೋಡುತ್ತಿದ್ದಂತೆ ಪೊಲೀಸರು ತಕ್ಷಣ ಸುರೇಶ್ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಜನರಿಗೆ ಎಷ್ಟು ಬೇಗ ಕ್ರಮ ಕೈಗೊಂಡಿದ್ದೇವೆಂಬುದನ್ನು ತೋರಿಸಲು ಪೊಲೀಸರು ಹೀಗೆ ಮಾಡಿದ್ದಾರೆ. ದೂರುದಾರ ನಂಜುಂಡ ಪ್ರಕರಣ ದಾಖಲಿಸಿರಲಿಲ್ಲ, ಆದರೆ, ಪೊಲೀಸರು ಪ್ರಕರಣ ದಾಖಲಿಸುವಂತೆ ಆತನಿಗೆ ಬೆದರಿಸಿದ್ದಾರೆ,'' ಎಂದರು.

ಆದಕ್ಕೆ ಆಕ್ಷೇಪಿಸಿದ ಎಸ್‌ಪಿಪಿ ಬಿ.ಎನ್.ಜಗದೀಶ್, ''ಯಾರನ್ನೂ ಬಲವಂತ ಮಾಡಬೇಕಿಲ್ಲ, ಪೊಲೀಸರು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಬಹುದು. ವೈರಲ್ ಆಗಿರುವ ವಿಡಿಯೊ ಎಲ್ಲವನ್ನೂ ಹೇಳುತ್ತದೆ. ಬೆಂಗಳೂರು ನಗರದಲ್ಲಿ ಇಂತಹ ಘಟನೆ ನಡೆಯಲು ಬಿಡಬಹುದೇ, ಇದು ನಿಜಕ್ಕೂ ದುರದೃಷ್ಟಕರ,'' ಎಂದರು.

ಪ್ರಕರಣದ ಹಿನ್ನೆಲೆ

ಫೆ.11ರಂದು ಎಸ್‌ಯುವಿ ವಾಹನದ ಚಾಲಕ ಆರ್.ಸುರೇಶ್ ಮತ್ತು ದೂರುದಾರ ನಂಜುಂಡ ನಡುವೆ ರಸ್ತೆಯಲ್ಲಿ ವಾಗ್ವಾದ ನಡೆದಿತ್ತು. ಸಂಬಂಧಿಯೊಬ್ಬರೊಂದಿಗೆ ಹೂವು ಕೊಂಡೊಯ್ಯುತ್ತಿದ್ದ ನಂಜುಂಡನ ವಾಹನದ ಹಿಂದೆ ಇದ್ದ ಸುರೇಶ್ ಪದೇ ಪದೆ ಹಾರ್ನ್ ಮಾಡಿದ್ದರಿಂದ ಇಬ್ಬರ ನಡುವೆ ವಾಗ್ವಾದ ನಡೆದಿತ್ತು. ಈ ಸಂದರ್ಭದಲ್ಲಿ ಸುರೇಶ್ ಅಲ್ಲಿಂದ ತೆರಳಲು ಮುಂದಾದಾಗ ನಂಜುಂಡ ಕಾರಿನ ಬಾನೆಟ್ ಮೇಲೆ ಏರಿ ಕುಳಿತಿದ್ದರು. ಅದನ್ನು ಲೆಕ್ಕಿಸದೇ ಸುರೇಶ್ ಮುನ್ನಡೆದಿದ್ದು, ಸಾರ್ವಜನಿಕರ ಮಧ್ಯಪ್ರವೇಶದಿಂದ ಕಾರನ್ನು ನಿಲ್ಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಸುರೇಶ್ ವಿರುದ್ಧ ಕೊಲೆ ಯತ್ನ ಮತ್ತು ಶಾಂತಿಗೆ ಭಂಗ ಆರೋಪದಡಿ ಪ್ರಕರಣ ದಾಖಲು ಮಾಡಲಾಗಿತ್ತು. ಆ ಹಿನ್ನೆಲೆಯಲ್ಲಿ ಸುರೇಶ್ ಹೈಕೋರ್ಟ್ ಮೊರೆ ಹೋಗಿದ್ದರು.

ಸಂಭಾವ್ಯ ಯುದ್ಧ ಅಥವಾ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಸುರಕ್ಷತಾ ಕ್ರಮಗಳ ಕುರಿತು ಜಾಗೃತಿ ಮೂಡಿಸುವ ವಿಶೇಷ ಅಣಕು ಕಾರ್ಯಾಚರಣೆ ಮಂಗಳವಾರ ನಗರದ ಗೃಹರಕ್ಷಕ ಮತ್ತು ಪೌರರಕ್ಷಣಾ ಕೇಂದ್ರ ಕಚೇರಿ ಆವರಣದಲ್ಲಿ ನಡೆಯಿತು.

ಐಪಿಎಲ್ ಟಿಕೆಟ್: ತಿಂಗಳಲ್ಲಿ 24 ಮಂದಿ ಬಂಧನ

ವಿಕ ಸುದ್ದಿಲೋಕ ಬೆಂಗಳೂರು

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಪಂದ್ಯಾವಳಿಯ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುವ ದಂಧೆಕೋರರ ವಿರುದ್ಧ ಸಮರ ಸಾರಿರುವ ನಗರ ಪೊಲೀಸರು, ಕಳೆದೊಂದು ತಿಂಗಳಲ್ಲಿ 24 ಮಂದಿಯನ್ನು ಬಂಧಿಸಿದ್ದಾರೆ.

ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುವ ಐಪಿಎಲ್ ಕ್ರಿಕೆಟ್ ಪಂದ್ಯಗಳ ಟಿಕೆಟ್‌ಗೆ ಭಾರಿ ಬೇಡಿಕೆ ಸೃಷ್ಟಿಯಾಗಿದ್ದು, ಇದನ್ನೇ ಬಂಡವಾಳ ಮಾಡಿಕೊಂಡಿರುವ ದಂಧೆಕೋರರು ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಟಿಕೆಟ್ ಮಾರಾಟ ಮಾಡಿ ಜೇಬು ತುಂಬಿಸಿಕೊಳ್ಳುತ್ತಿದ್ದಾರೆ. ಈ ಅಕ್ರಮಕ್ಕೆ ಕಡಿವಾಣ ಹಾಕಲು ಪೊಲೀಸರು ಪ್ರತಿ ಪಂದ್ಯದ ದಿನ ಕ್ರೀಡಾಂಗಣದ ಸುತ್ತಮುತ್ತ ಮಫ್ತಿಯಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಕಳೆದ 30 ದಿನಗಳಲ್ಲಿ 24 ಮಂದಿ ಐಪಿಎಲ್ ಟಿಕೆಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡುವ ಯತ್ನದಲ್ಲಿ ಪೊಲೀಸರ ಬಲೆಗೆ ಬಿದ್ದಿದ್ದಾರೆ. ಆರೋಪಿಗಳನ್ನು ಬಂಧಿಸಿರುವ ಪೊಲೀಸರು 37 ಐಪಿಎಲ್ ಟಿಕೆಟ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಬಂಧಿತರ ವಿರುದ್ಧ ಕಬ್ಬನ್‌ಪಾರ್ಕ್ ಠಾಣೆಯಲ್ಲಿ 16 ಹಾಗೂ ಹಲಸೂರು ಗೇಟ್ ಠಾಣೆಯಲ್ಲಿ ಒಂದು ಪ್ರಕರಣ ದಾಖಲಿಸಿ ತನಿಖೆ ಮುಂದುವರಿಸಿದ್ದಾರೆ.

ಐಪಿಎಲ್ ಪಂದ್ಯಗಳ ಟಿಕೆಟ್‌ಗಳನ್ನು ಅಕ್ರಮವಾಗಿ ಮಾರಾಟ ಮಾಡುವವರ ವಿರುದ್ಧ ಸಿಸಿಬಿ, ಕಬ್ಬನ್‌ಪಾರ್ಕ್ ಹಾಗೂ ಹಲಸೂರು ಗೇಟ್ ಠಾಣೆ ಪೊಲೀಸರ ನೇತೃತ್ವದಲ್ಲಿ ಜಂಟಿ ಕಾರ್ಯಾಚರಣೆ ನಡೆಸಲಾಗಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ಮತ್ತು ಗುಜರಾತ್ ಟೈಟನ್ಸ್ (ಜಿಟಿ), ಆರ್‌ಸಿಬಿ ಹಾಗೂ ಡೆಲ್ಲಿ ಕ್ಯಾಪಿಟಲ್ಸ್, ಆರ್‌ಸಿಬಿ ಮತ್ತು ಎಲ್‌ಎಸ್‌ಜಿ ತಂಡಗಳ ನಡುವಿನ ಐಪಿಎಲ್ ಪಂದ್ಯದ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡಲಾಗಿತ್ತು. ಕ್ರೀಡಾಂಗಣದ ಸುತ್ತಮುತ್ತ ಸೇರಿದಂತೆ ಬೇರೆ ಸ್ಥಳಗಳಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಮಚೀಂದ್ರ ತಿಳಿಸಿದ್ದಾರೆ.

ಆರ್‌ಸಿಬಿ ಮತ್ತು ಎಲ್‌ಎಸ್‌ಜಿ ತಂಡದ ಪಂದ್ಯದ ವೇಳೆ ಟಿಕೆಟ್ ಮಾರುತ್ತಿದ್ದ ಆರೋಪದಡಿ ಚಿನ್ನಸ್ವಾಮಿ ಕ್ರೀಡಾಂಗಣದ ಲಕ್ಷ್ಮಿ ಕ್ಯಾಂಟೀನ್ ನೌಕರ ಪಿ.ಚಂದ್ರಶೇಖರ್ ಎಂಬಾತನನ್ನು ಬಂಧಿಸಲಾಗಿದೆ. ಕೆಎಸ್‌ಸಿಎ ಸದಸ್ಯನೆಂದು ಹೇಳಿಕೊಂಡು ಚಂದ್ರಶೇಖರ್‌ಗೆ ಟಿಕೆಟ್ ಕೊಟ್ಟಿದ್ದ ವ್ಯಕ್ತಿಯ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ಹೇಳಿದ್ದಾರೆ.

ಕಾಳಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟ

ಮಕ್ಕಳ ನೃತ್ಯಕ್ಕೆ ಸಂಸ್ಕಾರದ ಕಾವಲು

ಶಾಲಾ ವೇದಿಕೆಗಳಲ್ಲಿ ಅಶ್ಲೀಲತೆಗೆ ಜಾಗವಿಲ್ಲ | ಶಿಕ್ಷಣ ಇಲಾಖೆ ಆದೇಶ

ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದ ಸರಕಾರಿ, ಅನುದಾನಿತ ಹಾಗೂ ಅನುದಾನರಹಿತ ಶಾಲೆಗಳಲ್ಲಿ ಅಶ್ಲೀಲ ಹಾಡುಗಳಿಗೆ ಮಕ್ಕಳಿಂದ ನೃತ್ಯ ಮಾಡಿಸುವುದನ್ನು ನಿಷೇಧಿಸಿ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಸಾಂಸ್ಕೃತಿಕ, ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ನಿಯಮ ಉಲ್ಲಂಘಿಸದಂತೆ ಪ್ರಾಥಮಿಕ ಶಿಕ್ಷಣ ಇಲಾಖೆ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದಾರೆ.

ಶಾಲೆಗಳಲ್ಲಿ ಅಶ್ಲೀಲ ಹಾಡು, ಅಶ್ಲೀಲ ನೃತ್ಯ ಪ್ರದರ್ಶನದಿಂದ ಮಕ್ಕಳ ಮಾನಸಿಕ ಆರೋಗ್ಯ ಮತ್ತು ನೈತಿಕ ಮೌಲ್ಯಗಳ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಶಿಕ್ಷಣದ ಪಾವಿತ್ರ್ಯತೆಗೆ ಇದು ಧಕ್ಕೆ ಉಂಟು ಮಾಡುವುದರಿಂದ ಇಂತಹ ನೃತ್ಯಗಳನ್ನು ಮಾಡಿಸದಂತೆ ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ.

ಮಕ್ಕಳಿಗೆ ಸ್ಫೂರ್ತಿದಾಯಕ, ಸಕಾರಾತ್ಮಕ ಮನೋಭಾವ ಮೂಡಿಸುವ ಹಾಗೂ ರಾಷ್ಟ್ರಾಭಿಮಾನ ಮೂಡಿಸುವ ಹಾಡು, ನೃತ್ಯಗಳನ್ನು ಕಾರ್ಯಕ್ರಮಗಳಿಗೆ ಆಯ್ಕೆ ಮಾಡಿಕೊಳ್ಳುವಂತೆ ಸಲಹೆ ನೀಡಲಾಗಿದೆ. ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಹಾಡುಗಳು ಹಾಗೂ ನೃತ್ಯಗಳ ಆಯ್ಕೆಯಲ್ಲಿ ಶಾಲೆಯ ಮುಖ್ಯ ಶಿಕ್ಷಕರು ಹಾಗೂ ಆಡಳಿತ ಮಂಡಳಿ ಜವಾಬ್ದಾರಿ ನಿರ್ವಹಿಸಬೇಕು. ವಿದ್ಯಾರ್ಥಿಗಳು ಸಭ್ಯ ಉಡುಪುಗಳನ್ನು ಧರಿಸುವಂತೆ ಕ್ರಮ ವಹಿಸಬೇಕು ಎಂದು ಸೂಚನೆ ನೀಡಲಾಗಿದೆ.

> ರಿಯಾಲಿಟಿ ಶೋಗಳು, ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗುವ ಮನರಂಜನೆ ಕಾರ್ಯಕ್ರಮಗಳಲ್ಲಿ ಮಕ್ಕಳು ಅಶ್ಲೀಲ ಸಂಭಾಷಣೆ ಬಳಸುವುದು ಹಾಗೂ ಅಶ್ಲೀಲ ನೃತ್ಯ ಮಾಡುವುದಕ್ಕೂ ಕಡಿವಾಣ ಹಾಕಬೇಕಿದೆ.
>
> – **ಡಾ.ಕೆ.ಟಿ. ತಿಪ್ಪೇಸ್ವಾಮಿ** ಮಾಜಿ ಸದಸ್ಯ ,ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

ಕಾಮಧೇನು ಲೋಕ ಗೋಶಾಲೆ ಉದ್ಘಾಟನೆ

ಬೆಂಗಳೂರು: ಲೋಕಭವನದಲ್ಲಿ ನೂತನವಾಗಿ ನಿರ್ಮಿಸಿರುವ ನವೀಕೃತ ಸ್ವಾಗತ ಕೇಂದ್ರ ಮತ್ತು ಕಾಮಧೇನು ಲೋಕ ಗೋಶಾಲೆಯನ್ನು ರಾಜ್ಯಪಾಲರಾದ ಥಾವರ್‌ಚಂದ್ ಗೆಹ್ಲೋಟ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಗಳವಾರ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಶಾಸಕರೂ ಹಾಗೂ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾದ ಪೊನ್ನಣ್ಣ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ ಸತ್ಯನಾರಾಯಣ್ ಸೇರಿ ಹಲವರು ಉಪಸ್ಥಿತರಿದ್ದರು.

ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ
ವಿಶೇಷ ವಿಭಾಗ ರಾಮನಗರ, ಬೆಂಗಳೂರು ದಕ್ಷಿಣ ಜಿಲ್ಲೆ.

ಸಂಖ್ಯೆ: ಕಾಇ/ಲೋಇ/ರಾ.ವಿ.ವಿ/ಟೆಂ–02/2026–27 **ದಿನಾಂಕ: 27.04.2026**

ಟೆಂಡರ್ ಪ್ರಕಟಣೆ

ರಾಮನಗರ ವಿಶೇಷ ವಿಭಾಗ ವ್ಯಾಪ್ತಿಯಲ್ಲಿ 2026–27ನೇ ಸಾಲಿನಲ್ಲಿ ಅರ್ಹ ಗುತ್ತಿಗೆದಾರರಿಂದ 02 ಸಂಖ್ಯೆಯ ಅಂದಾಜು ಮೊತ್ತ **ರೂ.70.00 ಲಕ್ಷದಿಂದ ರೂ.182.30 ಲಕ್ಷಗಳ** ವರೆಗಿನ ಕಾಮಗಾರಿಗಳಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಪ್ರತ್ಯೇಕ ಕೆಲಸಗಳ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಇಎಂಡಿ ಮುಂತಾದ ಇತರೆ ಮಾಹಿತಿಗಳನ್ನು **http://kppp.karnataka.gov.in.** ವೆಬ್‌ಸೈಟ್ ಮೂಲಕ ಅಥವಾ ಸದರಿ ಕಛೇರಿಯಿಂದ ಪಡೆಯಬಹುದಾಗಿರುತ್ತದೆ. ಕಾಮಗಾರಿಗಳ ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ.

1) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಿಂದ ಟೆಂಡರ್ ಡಾಕ್ಯುಮೆಂಟ್‌ನ್ನು ದಿನಾಂಕ: **30.04.2026 ರಿಂದ 15.05.2026 ರವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. 2) ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಆನ್‌ಲೈನ್ ಮುಖಾಂತರ ಟೆಂಡರ್‌ಗಳನ್ನು **ದಿನಾಂಕ: 15.05.2026 ವೇಳೆ 16.00 ಗಂಟೆಯೊಳಗೆ** ಸಲ್ಲಿಸುವುದು. 3) ಪ್ರೀ ಬಿಡ್ ಸಭೆಯ ದಿನಾಂಕ: **08.05.2026ರ ಬೆಳಿಗ್ಗೆ 11.30 ಗಂಟೆಗೆ** 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **16.05.2026 ವೇಳೆ 04.30 ಗಂಟೆ. (ಸಾಧ್ಯವಾದಲ್ಲಿ).** ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ
ರಾಮನಗರ

DIPR/BSD/38/SA/2026-27

ಕರ್ನಾಟಕ ಸರಕಾರ
(ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿ ಇಲಾಖೆ)
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ. 574238

ಇ–ಮೈಲ್: eokukkesubrahmanya@gmail.com ವೆಬ್‌ಸೈಟ್: https://temples.karnataka.gov.in
Phone: STD: 08257 - 236200, 281224, 281423, 295400, 281700, 281265, 295300
ಕೆ.ಎಸ್.ಎಸ್.ಟಿ: ಕಂ.ವಿ.:01/ಕಿಯೋಸ್ಕ್/2026–27 ದಿನಾಂಕ: 15–04–2026

ಅಲ್ಪಾವಧಿ ಟೆಂಡರು ಪ್ರಕಟಣೆ

ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಸುಬ್ರಹ್ಮಣ್ಯ – ಇಲ್ಲಿಗೆ ದಾನಿಗಳಿಂದ ಕೊಡುಗೆಯಾಗಿ ನೀಡಲ್ಪಟ್ಟಿರುವ **Touch Screen Kiosk (02 Nos)** ಯಂತ್ರಗಳಿಗೆ ಶ್ರೀ ದೇವಳದ ತಿಳಿಸುವ ಪ್ರಮುಖ ಸೇವೆಗಳನ್ನು ಭಕ್ತಾದಿಗಳೇ ನೇರವಾಗಿ ಸ್ವತಃ ಸೇವಾ ಮೊಬಲಗು ಸ್ಕ್ಯಾನ್ ಮಾಡಿ ಪಾವತಿಸಿ ರಶೀದಿ ಪಡೆದಕೊಳ್ಳುವ ವ್ಯವಸ್ಥೆ ಕಲ್ಪಿಸಿ ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡುವರೇ ಕಿಯೋಸ್ಕ್ ಯಂತ್ರಕ್ಕೆ ದೇವಳದಿಂದ ತಿಳಿಸುವ ಬ್ಯಾಂಕ್‌ನ ಸಹಯೋಗದೊಂದಿಗೆ ತಂತ್ರಾಂಶಗಳನ್ನು ಅಳವಡಿಸಿ ಕೊಡುವ ಬಗ್ಗೆ ಆಸಕ್ತ ತಂತ್ರಾಂಶ **(Softwear)** ಗಳನ್ನು ಸಿದ್ಧಪಡಿಸುವ ಅಧಿಕೃತ ಸಂಸ್ಥೆಯವರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. "ಕಿಯೋಸ್ಕ್ ಯಂತ್ರಕ್ಕೆ ತಂತ್ರಾಂಶ ಅಳವಡಿಸಿಕೊಡುವ ಬಗ್ಗೆ ಟೆಂಡರ್" ಎಂದು ಬರೆದ ಬಂದ್ ಮಾಡಿದ ಟೆಂಡರ್ ದಿನಾಂಕ: 08–05–2026 ರ ಅಪರಾಹ್ನ ಗಂಟೆ 1.00 ರ ಒಳಗಾಗಿ ದೇವಳದ ಕಛೇರಿಗೆ ತಲುಪಬೇಕು. ಅದೇ ದಿನ ಅಪರಾಹ್ನ ಗಂಟೆ 4.00 ಕ್ಕೆ ಟೆಂಡರ್‌ಗಳನ್ನು ತೆರೆಯಲಾಗುವುದು.

ಕಿಯೋಸ್ಕ್ ಯಂತ್ರದ ವಿವರಗಳು:
Make: Elpro Technologies, Bangalore
Configuration: Horizontal Touch Screen Kiosk with attached thermal printer
System Details: Windows 10 Pro, Intel i5 Processor, 8GB RAM, Touch - enable display

ಷರತ್ತುಗಳು: (1) ಟೆಂಡರ್ ಸಲ್ಲಿಸಲು ಅಪೇಕ್ಷಿಸುವ ಟೆಂಡರುದಾರ ಸಂಸ್ಥೆಯವರು ಶ್ರೀ ದೇವಳದಲ್ಲಿ ಲಭ್ಯವಿರುವ 2 (ಎರಡು) ಕಿಯೋಸ್ಕ್ ಯಂತ್ರವನ್ನು ಪರಿಶೀಲಿಸಿ, ಸದರಿ 02 ಯಂತ್ರಗಳಿಗೆ ಅನುಕೂಲವಾಗುವಂತೆ ತಂತ್ರಾಂಶವನ್ನು ಸಿದ್ಧಪಡಿಸಬೇಕು. (2) ಟೆಂಡರು ಸಲ್ಲಿಸಲು ಇಚ್ಛಿಸುವ ಟೆಂಡರುದಾರರು ತಮ್ಮ ಟೆಂಡರ್ ಜೊತೆ ರೂ. 25,000.00 ನ್ನು ಭದ್ರತಾ ಠೇವಣಿಯಾಗಿ ನಗದು ಮೂಲಕ ಜಮಾ ರಶೀದಿ ಯಾ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಡಿ.ಡಿ. ಮೂಲಕ ದೇವಳಕ್ಕೆ ಪಾವತಿಸಿದ ರಶೀದಿಯನ್ನು ಟೆಂಡರ್ ಜೊತೆ ಲಗತ್ತಿಸಿರಬೇಕು. (3) ಈ ಕುರಿತಾದ ಹೆಚ್ಚಿನ ಮಾಹಿತಿ ಹಾಗೂ ಟೆಂಡರ್ ಷರತ್ತುಗಳನ್ನು ಶ್ರೀ ದೇವಳದ ಕಛೇರಿಯಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಹಣಾಧಿಕಾರಿ
ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ, ಹಿಂದೂ ಧಾರ್ಮಿಕ ದತ್ತಿ ಇಲಾಖೆ,
ಸುಬ್ರಹ್ಮಣ್ಯ, ಕಡಬ ತಾಲೂಕು, ದ.ಕ.

DIPR/DK/KSMCA/132/26-27 dt. 28.04.2026

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರ ರವರ ಕಛೇರಿ
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಮೈಸೂರು–570023
ಸಂ./ಕಾಅ/ಪಂ.ರಾ.ಇಂ.ವಿ/ಮೈ/ಇ–ಪ್ರಕ್ಯೂರ್‌ಮೆಂಟ್/ಸ.ಇಂ/ಕಿ.ಇಂ.
ಪ್ರಕಟಣೆ ಸಂಖ್ಯೆ.: 01/2026–27 **ದಿನಾಂಕ: 16.04.2026**

ಅಲ್ಪಾವಧಿ ಇ–ಪ್ರಕ್ಯೂರ್‌ಮೆಂಟ್–ಟೆಂಡರ್‌ಪ್ರಕಟಣೆ

ಈ ಕಛೇರಿಯಿಂದ ಉಲ್ಲೇಖ ರೀತ್ಯಾ ಅಧಿಸೂಚನೆಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆಯಲ್ಲಿ ತಿ.ನರಸೀಪುರ ತಾಲ್ಲೂಕಿನ 2025–26ನೇ ಸಾಲಿನ ಲೆಕ್ಕಶೀರ್ಷಿಕೆ:– ಮುಖ್ಯ ಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯ ಲೆಕ್ಕಶೀರ್ಷಿಕೆಯಡಿ ಹಾಗೂ 2024–25ನೇ ಸಾಲಿನ ಮಳೆ ಪರಿಹಾರ ಕಾರ್ಯಕ್ರಮದ ಲೆಕ್ಕಶೀರ್ಷಿಕೆ: 5054 ಯೋಜನೆ ಅಡಿಯಲ್ಲಿ ಅನುಮೋದನೆಯಾದ ಕಾಮಗಾರಿಗಳಿಗೆ KW-4 ರೀತ್ಯಾ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಟೆಂಡರ್ ಪ್ರಕಟಣೆಯಲ್ಲಿರುವ ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು ಮತ್ತು ಭರ್ತಿ ಮಾಡಿದ ಫಾರಂಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ದಿ: 27.04.2026 ರಿಂದ ದಿ: 19.05.2026 ರವರೆಗೆ ಸಂಜೆ 16.30 ಘಂಟೆಯವರೆಗೆ ಹಾಗೂ ಟೆಂಡರ್ ಬಗ್ಗೆ ಸ್ಪಷ್ಟೀಕರಣ/ ವಿಚಾರಿಸಿ ಮಾಹಿತಿ ಪಡೆಯಲು ಅಂತಿಮ ದಿ: 18.05.2026 ರ ಸಂಜೆ 16.00 ಘಂಟೆಯಾಗಿದ್ದು, ಟೆಂಡರ್ ತೆರೆಯುವ ದಿ: 20.05.2026ರ ಸಂಜೆ 17.00 ಘಂಟೆಯ ನಂತರ ಟೆಂಡರ್ ಫಾರಂ ಬೆಲೆ ಇ–ಪ್ರಕ್ಯೂರ್‌ಮೆಂಟ್‌ನಂತೆ ಸಲ್ಲಿಸಬೇಕು. ಸದರಿ ಕಾಮಗಾರಿಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸಂ. 01. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ತಿ.ನರಸೀಪುರ ತಾಲ್ಲೂಕು ಅಂಕನಹಳ್ಳಿ, ಕೋಣಗಹಳ್ಳಿ, ಕಳ್ಳೀಪುರ, ಕೇತುಪುರ, ಗಾಣಿಗನಕೊಪ್ಪಲು, ಗುಡ್ಡದಕೊಪ್ಪಲು, ಕರಿಹುರಳಿಕೊಪ್ಪಲು, ಮೇಣಸಿಕ್ಯಾತನಹಳ್ಳಿ, ದೊಡ್ಡಮುಲಗೂಡು, ಕಾಡುಕೊತ್ತನಹಳ್ಳಿ ಮತ್ತು ಹನುಮನಾಳು ಗ್ರಾಮಗಳ ಸಾಮಾನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25492) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 205.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 170.90 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,56,500.00 **ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಮತ್ತು ಮೇಲ್ಪಟ್ಟು.

ಕ್ರ.ಸಂ.02. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ತಿ.ನರಸೀಪುರ ತಾಲ್ಲೂಕು ಚಿಕ್ಕಬೂಹಳ್ಳಿ, ಎಂ.ಕೆಬ್ಬೆಹುಂಡಿ, ಮುಸುವಿನಕೊಪ್ಪಲು, ಕೈಯಂಬಳ್ಳಿ, ಬೊಮ್ಮನಹಳ್ಳಿ, ಸೋಸಲೆ, ದೊಡ್ಡಬಾಗಿಲು, ಹೊರಳಹಳ್ಳಿ, ಎಸ್.ದೊಡ್ಡಪುರ, ಕೆಂಪನಪುರ, ಎಸ್.ಕೆಬ್ಬೆಹುಂಡಿ, ಕೊಳತ್ತೂರು ಮತ್ತು ಚಿದರಹಳ್ಳಿ ಗ್ರಾಮಗಳ ಸಾಮನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25489) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 230.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 193.28 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 2,90,000.00 **ಗುತ್ತಿಗೆದಾರರ ಅರ್ಹತೆ:** 3ನೇ ದರ್ಜೆ ಮತ್ತು ಮೇಲ್ಪಟ್ಟು.

ಕ್ರ.ಸಂ.03. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ತಿ.ನರಸೀಪುರ ತಾಲ್ಲೂಕು ಕರೋಹಟ್ಟಿ, ವಾಟಾಳು, ವಾಟಾಳುಪುರ, ಸುಜ್ಜಲೂರು, ಆದಿಬೆಟ್ಟಹಳ್ಳಿ, ಮೂಗೂರು, ಮಾಡ್ರಹಳ್ಳಿ, ಮಾವಿನಹಳ್ಳಿ, ಮಾದಾಪುರ, ಜಾಲಹಳ್ಳಿ, ಹೆಮ್ಮಿಗೆ, ಟಿ.ಮೇಗಡಹಳ್ಳಿ, ಹೊಸಹಳ್ಳಿ ಮತ್ತು ಚೌಹಳ್ಳಿ ಗ್ರಾಮಗಳ ಸಾಮಾನ್ಯ ಬೀದಿಗಳಲ್ಲಿ ಸಿ.ಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ. (Indent No.RDPR/2025-26/RD/WORK_INDENT25490) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 250.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 210.38 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 3,16,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು.

ಕ್ರ.ಸಂ.04. ಕಾಮಗಾರಿ ಹೆಸರು/ಪ್ಯಾಕೇಜ್ ಸಂಖ್ಯೆ: ತಿ.ನರಸೀಪುರ ತಾಲ್ಲೂಕು ಮಾದೇಗೌಡನಹುಂಡಿ ಗ್ರಾಮದಿಂದ ಗರ್ಗೇಶ್ವರಿ ಗ್ರಾಮದವರೆಗೆ ಮಾರ್ಗ ಮಧ್ಯೆ ಬರುವ ಮಾದೇಗೌಡನಹುಂಡಿ, ಪಟ್ಟೆಹುಂಡಿ, ರಂಗಸಮುದ್ರ, ಕುಪ್ಯ, ತುಂಬಲ, ನಿಂಗೇಗೌಡನಹುಂಡಿ, ಹಳೆಕೆಂಪಯ್ಯನಹೊಂಡಿ, ಗರ್ಗೇಶ್ವರಿ ಗ್ರಾಮ ಪರಿಮಿತಿಯಲ್ಲಿ ಮತ್ತು ಬಿಲಿಗೆರೆಹುಂಡಿ ಗ್ರಾಮದಿಂದ ಆಲಸ್ತಿಕಟ್ಟೆಹುಂಡಿ ಗ್ರಾಮ ಪರಿಮಿತಿಯಲ್ಲಿ ಸಿಸಿ ಚರಂಡಿ ಮತ್ತು ಸಿಸಿ ರಸ್ತೆ ನಿರ್ಮಾಣ ಕಾಮಗಾರಿ. (RDPR/2025-26/RD/WORK_INDENT25617) **ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):** 250.00 **ಟೆಂಡರ್‌ಗಿಟ್ಟ ಇ–ಪ್ರೊಕ್ಯೂರ್‌ಮೆಂಟ್ ಮೊಬಲಗು (ರೂ.ಗಳಲ್ಲಿ):** 209.11 **ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ):** 3,14,000.00 **ಗುತ್ತಿಗೆದಾರರ ಅರ್ಹತೆ:** 2ನೇ ದರ್ಜೆ ಮತ್ತು ಮೇಲ್ಪಟ್ಟು.

ಹೆಚ್ಚಿನ ವಿವರಗಳಿಗೆ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (e-procurement portal) ವೆಬ್ ಸೈಟ್‌ನಲ್ಲಿ ಪಡೆಯಬಹುದು https://kppp.karnataka.gov.in ಈ ಬಗ್ಗೆ ಇನ್ನೂ ಹೆಚ್ಚಿನ ವಿವರಗಳಿಗಾಗಿ ಕಾರ್ಯಪಾಲಕ ಅಭಿಯಂತರು, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಕುವೆಂಪುನಗರ, ಮೈಸೂರು (ಫೋನ್ ನಂ.0821–2560853) ರವರ ಕಛೇರಿಯ ವೇಳೆಯಲ್ಲಿ ಪಡೆಯಬಹುದು.
ಮೊಬೈಲ್ ಸಂಖ್ಯೆ: ಕಿ.ಇಂ. 8971599285

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮೈಸೂರು

DIPR/DDMYS/118/KSMCA/102/2026-27

ಕಲ್ಮಾ ಪಠಿಸಲು ಸೆಕ್ಯೂರಿಟಿ ಗಾರ್ಡ್‌ಗಳಿಗೆ ಸೂಚನೆ | ನಿರಾಕರಿಸಿದಾಗ ಇಬ್ಬರಿಗೆ ಚಾಕು ಇರಿತ

ಮುಂಬಯಿನಲ್ಲಿ ಪಹಲ್ಗಾಮ್ ಮಾದರಿ ದಾಳಿ

ಮುಂಬಯಿ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್ ಮಾದರಿಯಲ್ಲೇ ಮಹಾರಾಷ್ಟ್ರದ ಮುಂಬಯಿನಲ್ಲಿ ಇಬ್ಬರ ಹತ್ಯೆಗೆ ಯತ್ನಿಸಿದ ಶಂಕಿತ ಐಸಿಸ್ ಉಗ್ರನನ್ನು ಬಂಧಿಸಲಾಗಿದೆ.

ಕಲ್ಮಾ ಪಠಿಸಲು ಒಪ್ಪದ ಇಬ್ಬರು ಭದ್ರತಾ ಸಿಬ್ಬಂದಿಗೆ ಚಾಕು ಇರಿದ ಜೈಬ್ ಜುಬೇರ್ ಅನ್ಸಾರಿಯನ್ನು ಪೊಲೀಸರು ಬಂಧಿಸಿದ್ದಾರೆ. ಸ್ನಾತಕೋತ್ತರ ಪದವಿಧರನಾದ ಆರೋಪಿ, ಕಾಯಂ ಕೆಲಸ ಸಿಗದೆ ಮೂಲಭೂತವಾದಿಯಾಗಿ ಬದಲಾಗಿದ್ದ ಎಂಬ ಸಂಗತಿ ಪ್ರಾಥಮಿಕ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಆರೋಪಿಗೆ ಐಸಿಸ್ ಸಂಘಟನೆ ನಂಟಿನ ಶಂಕೆ

ಸೋಮವಾರ ನಸುಕಿನ ಜಾವ 4 ಗಂಟೆ ಸಮಯದಲ್ಲಿ ಠಾಣೆ ಜಿಲ್ಲೆಯ ಮೀರಾ ಭಯಂದರ್ ಪ್ರದೇಶದ ನಿರ್ಮಾಣ ಹಂತದ ಕಟ್ಟಡದ ಬಳಿ ಘಟನೆ ನಡೆದಿದೆ. ಭದ್ರತಾ ಕಾರ್ಯ ನಿರ್ವಹಿಸುತ್ತಿದ್ದ ರಾಜ್ ಕುಮಾರ್ ಮಿಶ್ರಾ ಹಾಗೂ ಸುಬ್ರತೋ ಸೇನ್ ಅವರ ಬಳಿ ಆಗಮಿಸಿದ ಆರೋಪಿ ಜೈಬ್ ಜುಬೇರ್ ಅನ್ಸಾರಿ, ಇಸ್ಲಾಂನ ಕಲ್ಮಾ ಪಠಿಸುವಂತೆ ಒತ್ತಾಯಿಸಿದ್ದಾನೆ. ಕಲ್ಮಾ ಪಠಿಸಲು ಒಪ್ಪದಿದ್ದಾಗ ಇಬ್ಬರಿಗೂ ಮನಬಂದಂತೆ ಚಾಕು ಇರಿದು, ಸ್ಥಳದಿಂದ ಪರಾರಿಯಾಗಿದ್ದಾನೆ.

ಸುದ್ದಿ ತಿಳಿದು ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ರಕ್ತದ ಮಡುವಿನಲ್ಲಿ ಬಿದ್ದಿದ್ದ ಭದ್ರತಾ ಸಿಬ್ಬಂದಿಯನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಿದರು. ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಸಿಸಿಟಿವಿ ದೃಶ್ಯ ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರು, 90 ನಿಮಿಷದಲ್ಲಿ ಆರೋಪಿ ಜೈಬ್ ಜುಬೇರ್‌ನನ್ನು ಬಂಧಿಸಿದರು. ಆರೋಪಿ ಬಳಿ ಇದ್ದ ಮೊಬೈಲ್, ಎಲೆಕ್ಟ್ರಾನಿಕ್ ಉಪಕರಣ, ಡೈರಿ ಮತ್ತಿತರ ಧಾರ್ಮಿಕ ಪ್ರಚೋದನೆಯ ಬರಹಗಳ ಪುಸ್ತಕಗಳನ್ನು ವಶಪಡಿಸಿಕೊಂಡಿದ್ದಾರೆ.

ಡೈರಿಯಲ್ಲಿ ಉಗ್ರ ನಂಟು ಸುಳಿವು: ಬಂಧಿತ ಆರೋಪಿಯಿಂದ ವಶಪಡಿಸಿಕೊಂಡ ಡೈರಿಯಲ್ಲಿ ಉಗ್ರ ನಂಟಿನ ಸುಳಿವು ಲಭಿಸಿದೆ. ಜಿಹಾದ್, ಗಾಜಾ, ಒಂಟಿ ತೋಳ ಪದಗಳನ್ನು ಡೈರಿಯಲ್ಲಿ ಉಲ್ಲೇಖಿಸಿರುವುದು ಪತ್ತೆಯಾಗಿದೆ. ಜತೆಗೆ, ''ಒಂಟಿ ತೋಳಗಳು ನಿಮ್ಮ ಮೇಲೆ ದಾಳಿ ಮಾಡುತ್ತವೆ. ಇನ್ನು ಮುಂದೆ ಬಿಲಾದ್ ಹಿಂದ್‌ನಲ್ಲಿ ನಿಜವಾದ ಜಿಹಾದ್ ನೋಡುತ್ತೀರಿ,'' ಎಂಬಂತಹ ಮೂಲಭೂತವಾದದ ಒಕ್ಕಣೆ ಗಮನಿಸಿದರೆ ಬೃಹತ್ ದಾಳಿಗೆ ಸಂಚಿರಬಹುದು ಎಂಬ ಸಂಶಯ ಮೂಡಿದೆ. ಗಾಜಾದಲ್ಲಿ ನಡೆದಿರುವ ಜನರ ಸಾವು ಉಲ್ಲೇಖಿಸಿ ದ್ವೇಷದ ಸಾಲುಗಳನ್ನು ಪದೇಪದೆ ಬರೆದಿರುವುದು ಉಗ್ರರ ನಂಟಿರುವ ಬಗ್ಗೆ ಸಂದೇಹ ವ್ಯಕ್ತವಾಗಿದೆ.

ಆರೋಪಿ ಮನೆಯಲ್ಲಿ ವಶಪಡಿಸಿಕೊಳ್ಳಲಾದ ಸಂಶಯಾಸ್ಪದ ವಸ್ತುಗಳನ್ನು ಉಗ್ರ ನಿಗ್ರಹ ದಳದ (ಎಟಿಎಸ್) ಸುಪರ್ದಿಗೆ ನೀಡಲಾಗಿದೆ. ವಿಧಿ ವಿಜ್ಞಾನ ಪ್ರಯೋಗಾಲಯದ ಪರಿಣತರ ತಂಡ ಆರೋಪಿಯ ಡಿಜಿಟಲ್ ಫುಟ್‌ಪ್ರಿಂಟ್, ಮೊಬೈಲ್ ದತ್ತಾಂಶ, ಅಂತರ್ಜಾಲದ ಬ್ರೌಸಿಂಗ್ ಇತಿಹಾಸ, ಸಂವಹನ ಸಂಪರ್ಕದ, ಪ್ರಯಾಣದ ದಾಖಲೆಗಳನ್ನು ಪರಿಶೀಲಿಸುತ್ತಿದೆ.

ಚಾಕು ಇರಿತ ಘಟನೆ ಸಂಬಂಧ ಆರೋಪಿ ಮೇಲೆ ಬಿಎನ್‌ಎಸ್ ಕಾಯಿದೆ ಸೆಕ್ಷನ್ 196 (1) ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಧರ್ಮ ನಿಂದನೆ, ಜನಾಂಗೀಯ ದ್ವೇಷ ಭಿತ್ತಲು ಯತ್ನಿಸಿದ ಆರೋಪ ಹೊರಿಸಲಾಗಿದೆ. ಬಂಧಿತ ಆರೋಪಿಯನ್ನು ಠಾಣೆ ನ್ಯಾಯಾಲಯಕ್ಕೆ ಹಾಜರುಪಡಿಸಿದ ಎಟಿಎಸ್ ಪೊಲೀಸರು, ಹೆಚ್ಚಿನ ವಿಚಾರಣೆಗೆ ಮೇ 4ರವರೆಗೆ ವಶಕ್ಕೆ ಪಡೆದುಕೊಂಡಿದ್ದಾರೆ.

ಯಾರೀ ಜುಬೇರ್?

ಆರೋಪಿ ಜೈಬ್ ಜುಬೇರ್ ಅನ್ಸಾರಿ ಕುಟುಂಬದೊಂದಿಗೆ ಅಮೆರಿಕದಲ್ಲಿ ನೆಲೆಸಿದ್ದ. ರಸಾಯನಶಾಸ್ತ್ರ ವಿಷಯದಲ್ಲಿ ಪದವಿ ಪಡೆದುಕೊಂಡಿದ್ದ ಅನ್ಸಾರಿ ಎಲ್ಲೂ ಕೆಲಸ ಸಿಗದೆ ಹೋದಾಗ 2019ರಲ್ಲಿ ಭಾರತಕ್ಕೆ ಮರಳಿದ್ದ. ಕಾಯಂ ಉದ್ಯೋಗ ಸಿಗದ ಕಾರಣ ವಿವಿಧ ಶಿಕ್ಷಣ ಸಂಸ್ಥೆಗಳ ಜತೆ ಒಪ್ಪಂದ ಮಾಡಿಕೊಂಡು ಆನ್‌ಲೈನ್ ತರಗತಿ ನಡೆಸುತ್ತಿದ್ದ. ಮೀರಾ ಭಯಂದರ್ ರಸ್ತೆಯ ಸ್ಮಿತಾ ರೀಜೆನ್ಸಿ ಅಪಾರ್ಟ್‌ಮೆಂಟ್‌ನ ಮನೆಯೊಂದಲ್ಲಿ ಒಂಟಿಯಾಗಿ ವಾಸಿಸುತ್ತಿದ್ದ. ಸಾಮಾಜಿಕ ಜಾಲತಾಣಗಳಲ್ಲಿ ಮಾಡಲಾದ ಪೋಸ್ಟ್‌ಗಳು ಅನ್ಸಾರಿ ಮೂಲಭೂತವಾದಿಯಾಗಿದ್ದ ಎಂಬುದನ್ನು ಸೂಚಿಸುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ಜತೆಗಿದ್ದ ಅಫಘಾನಿಸ್ತಾನ ಮೂಲದ ಪತ್ನಿ ಇತ್ತೀಚೆಗೆ ಭಾರತ ತೊರೆದು ಅಮೆರಿಕಕ್ಕೆ ತೆರಳಿದ್ದರು ಎಂದು ತಿಳಿದು ಬಂದಿದೆ.

ಪಹಲ್ಗಾಮ್ ನೆನಪು

ಮುಂಬಯಿನಲ್ಲಿ ನಡೆದ ಚಾಕು ಇರಿತ ಘಟನೆ 2025ರ ಏಪ್ರಿಲ್ 23 ರಂದು ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿಯನ್ನು ನೆನಪಿಸಿದೆ. ಬೈಸರನ್ ಕಣಿವೆಯಲ್ಲಿ ವಿಹರಿಸುತ್ತಿದ್ದ ನಿರಾಯುಧ ಪ್ರವಾಸಿಗರ ಮೇಲೆ ಉಗ್ರರು ಮುಗಿಬಿದ್ದಿದ್ದರು. ಕಲ್ಮಾ ಪಠಿಸಲು ಒಪ್ಪದ ಜನರನ್ನು ನಿರ್ದಯವಾಗಿ ಗುಂಡಿಕ್ಕಿ ಹತ್ಯೆ ಮಾಡಿದ್ದರು. ವರ್ಷದ ಹಿಂದೆ ನಡೆದ ದುರಂತದಲ್ಲಿ 26 ಪ್ರವಾಸಿಗರು ಹುತಾತ್ಮರಾಗಿದ್ದರು.

ಆ್ಯಕ್ಟ್ ಈಸ್ಟ್, ಆ್ಯಕ್ಟ್ ಫಾಸ್ಟ್‌ಗೆ ಒತ್ತು

ಈಶಾನ್ಯ ರಾಜ್ಯಗಳು ಅಷ್ಟಲಕ್ಷ್ಮಿಯರಿದ್ದಂತೆ | ಸಿಕ್ಕಿಂನಲ್ಲಿ ಮೋದಿ ಹೇಳಿಕೆ

ಗ್ಯಾಂಗ್ಟಕ್: ನಮ್ಮ ಸರಕಾರ 'ಆ್ಯಕ್ಟ್ ಈಸ್ಟ್' ನೀತಿಗೆ ಬದ್ಧವಾಗಿರುವುದಲ್ಲದೇ, ಈಶಾನ್ಯದ ಎಂಟು ರಾಜ್ಯಗಳ ಅಭಿವೃದ್ಧಿಗೆ 'ಆ್ಯಕ್ಟ್ ಫಾಸ್ಟ್' (ನೀತಿ ನಿಯಮಗಳಲ್ಲಿ ತ್ವರಿತ ನಿರ್ಧಾರ ಕೈಗೊಳ್ಳುವುದು) ನೀತಿಯನ್ನೂ ಅಳವಡಿಸಿಕೊಂಡಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದರು.

ಗ್ಯಾಂಗ್ಟಕ್‌ನಲ್ಲಿ ಮಂಗಳವಾರ ಸಿಕ್ಕಿಂ ರಾಜ್ಯೋತ್ಸವದ 50ನೇ ವರ್ಷದ ಸುವರ್ಣ ಮಹೋತ್ಸವದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಮೋದಿ, ಈಶಾನ್ಯ ಭಾರತದ ಎಂಟು ರಾಜ್ಯಗಳು ಭಾರತದ 'ಅಷ್ಟಲಕ್ಷ್ಮಿ'ಯರು ಎಂದು ಬಣ್ಣಿಸಿದರು. ಅರುಣಾಚಲ ಪ್ರದೇಶ, ಅಸ್ಸಾಂ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಸಿಕ್ಕಿಂ ಮತ್ತು ತ್ರಿಪುರ ಈಶಾನ್ಯ ಭಾರತದ ರಾಜ್ಯಗಳಾಗಿವೆ.

ಸಿಕ್ಕಿಂನ ಅಭಿವೃದ್ಧಿಗೆ 4,000 ಕೋಟಿ ರೂ. ಮೊತ್ತದ ವಿವಿಧ ಯೋಜನೆಗಳಿಗೆ ಚಾಲನೆ ನೀಡಿದ ಮೋದಿ, ''ಪ್ರವಾಸೋದ್ಯಮ ಸಿಕ್ಕಿಂನ ಆರ್ಥಿಕತೆಯ ಬೆನ್ನೆಲುಬು. ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಸಂಪರ್ಕ ವ್ಯವಸ್ಥೆ ಬಲಪಡಿಸುವ ಸಂಬಂಧ ಮೂಲಸೌಕರ್ಯ ಅಭಿವೃದ್ಧಿಗೆ ಸರಕಾರ ಆದ್ಯತೆ ನೀಡಿದೆ,'' ಎಂದರು.

''ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸಲು ಪಶ್ಚಿಮ ಬಂಗಾಳದ ಬಾಗ್ಡೋಗ್ರಾದಿಂದ ಎಕ್ಸ್‌ಪ್ರೆಸ್ ವೇ ನಿರ್ಮಾಣ ಮತ್ತು ಗ್ಯಾಂಗ್ಟಕ್‌ನಲ್ಲಿ ರಿಂಗ್ ರೋಡ್ ನಿರ್ಮಾಣಕ್ಕೆ ಸರಕಾರ ಬದ್ಧವಾಗಿದೆ. 1,000 ಹೋಂಸ್ಟೇಗಳನ್ನು ನಿರ್ಮಿಸಲಾಗುತ್ತಿದೆ. ಮುಂದಿನ ಹಂತದಲ್ಲಿ ರಾಜ್ಯದಲ್ಲಿ ರೋಪ್‌ವೇ ಮತ್ತು ಸ್ಕೈವೇ ಯೋಜನೆಗಳೂ ಸಿದ್ಧಗೊಳ್ಳಲಿವೆ,'' ಎಂದು ಹೇಳಿದರು. ಸಿಕ್ಕಿಂನ ನಿಸರ್ಗ ಸೌಂದರ್ಯ ಹಾಗೂ ಜನರ ಸ್ವಚ್ಛತೆಯ ಕಾಳಜಿಗೆ ಮೆಚ್ಚುಗೆ ವ್ಯಕ್ತಪಡಿಸಿದ ಮೋದಿ, ''ಸಿಕ್ಕಿಂನಲ್ಲಿ ಪ್ರಕೃತಿ ಮತ್ತು ಸಂಸ್ಕೃತಿ ಮೇಳೈಸಿದೆ. ಇಲ್ಲಿನ ಸ್ವಚ್ಛ ರಸ್ತೆಗಳು ಹಾಗೂ ಶುದ್ಧ ಗಾಳಿಯು ಜನರು ಪ್ರಕೃತಿ ಸಂರಕ್ಷಣೆಯ ನಿಜವಾದ ರಾಯಭಾರಿಗಳು ಎಂಬುದನ್ನು ತೋರಿಸುತ್ತದೆ,'' ಎಂದರು. ಅಲ್ಲದೆ, ಸಿಕ್ಕಿಂ ದೇಶದ ಏಕತೆಯನ್ನು ಬಿಂಬಿಸುವ 'ಏಕ ಭಾರತ, ಶ್ರೇಷ್ಠ ಭಾರತ'ಕ್ಕೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು.

2 ಅಮೃತ್ ಭಾರತ್‌ಗೆ ಚಾಲನೆ: ತಮ್ಮ ಲೋಕಸಭೆ ಕ್ಷೇತ್ರ ವಾರಾಣಸಿಗೆ ಭೇಟಿ ನೀಡಿದ ಮೋದಿ ಅವರು 6,350 ಕೋಟಿ ರೂ. ಮೊತ್ತದ ವಿವಿಧ ಯೋಜನೆಗಳಿಗೆ ಚಾಲನೆ ನೀಡಿದರು. ಹಾಗೆಯೇ ವಾರಾಣಸಿ- ಪುಣೆ ಮತ್ತು ಅಯೋಧ್ಯೆ- ಮುಂಬಯಿ ಮಾರ್ಗದ ಅಮೃತ್ ಭಾರತ್ ರೈಲುಗಳಿಗೆ ಹಸಿರು ನಿಶಾನೆ ತೋರಿದರು.

ಮೋದಿ ಫುಟ್ಬಾಲ್ ಕಿಕ್

ಕ್ರೀಡಾ ವಲಯದಲ್ಲೂ ಸಿಕ್ಕಿಂ ವಿಶೇಷ ಗಮನ ಸೆಳೆಯುತ್ತಿದೆ. ಇಲ್ಲಿನ ಜನತೆಗೆ ಫುಟ್ಬಾಲ್ ಹಾಗೂ ಬಿಲ್ಲುಗಾರಿಕೆ ಎಂದರೆ ಅಚ್ಚುಮೆಚ್ಚು. ಈಶಾನ್ಯ ರಾಜ್ಯಗಳನ್ನು ಭಾರತದ ಫುಟ್ಬಾಲ್ ಪವರ್ ಹೌಸ್ ಎಂದು ಕರೆಯಲಾಗುತ್ತದೆ. ಇದೇ ಕಾರಣಕ್ಕೆ ಮೋದಿ ಅವರು ಮಂಗಳವಾರ ಬೆಳಗ್ಗೆ ಗ್ಯಾಂಗ್ಟಕ್‌ನಲ್ಲಿ ಉದಯೋನ್ಮುಖ ಪ್ರತಿಭೆಗಳೊಂದಿಗೆ ಫುಟ್ಬಾಲ್ ಆಡಿ ಗಮನ ಸೆಳೆದರು. ನಂತರ ಫೋಟೊಗಳನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡು ಸಂಭ್ರಮಿಸಿದರು.

ವಿಕ ಈ ದಿನ ವಿಶೇಷ — ಏಪ್ರಿಲ್ 29

ಜನುಮ ದಿನ

ರಾಜಾ ರವಿವರ್ಮ

- ಭಾರತದ ಪ್ರಸಿದ್ಧ ಚಿತ್ರಕಲಾವಿದ ರಾಜಾ ರವಿವರ್ಮ 1848ರ ಏ.29ರಂದು ಕೇರಳದ ಕಿಲಿಮನೂರ್‌ನಲ್ಲಿ ಜನಿಸಿದರು. ಯುರೋಪ್‌ನ ಶಾಸ್ತ್ರೀಯ ಚಿತ್ರಕಲಾ ಶೈಲಿಯೊಂದಿಗೆ ಭಾರತೀಯ ಸಂವೇದನೆಯನ್ನು ಬೆರೆಸಿದ್ದು ಅವರ ವಿಶೇಷತೆ. ಅವರು ತಿರುವನಂತಪುರದ ರಾಜಮನೆತನಕ್ಕೆ ಸೇರಿದವರು. ಶಾಕುಂತಲೆ, ಲಕ್ಷ್ಮಿ, ಸರಸ್ವತಿ, ದಮಯಂತಿ, ಯಶೋದ ಕೃಷ್ಣ ರವಿ ವರ್ಮರ ಕೆಲ ಜನಪ್ರಿಯ ಕಲಾಕೃತಿಗಳು.

ಸಿಸು ಸಂಗಮೇಶ

- ಮಕ್ಕಳ ಸಾಹಿತಿ ಸಿಸು ಸಂಗಮೇಶ 1929ರ ಏ.29ರಂದು ವಿಜಯಪುರದ ಯರನಾಳ ಗ್ರಾಮದಲ್ಲಿ ಜನಿಸಿದರು.

ಅಧ್ಯಾಪಕರಾಗಿದ್ದ ಅವರು ಮಕ್ಕಳ ಸಾಹಿತ್ಯ ಕ್ಷೇತ್ರವಲ್ಲದೆ ಕವಿತೆ, ಅನುವಾದ, ಸಂಪಾದನೆ ಸೇರಿದಂತೆ ಹಲವು ಪ್ರಕಾರಗಳಲ್ಲಿ ತೊಡಗಿಸಿಕೊಂಡಿದ್ದರು. ನಾಯಿ ಫಜೀತಿ, ಮಂಕು ಮರಿ, ಆಶೆಬುರುಕಿ ಆಶಾ, ದಾರಿಯ ಬುತ್ತಿ ಅವರ ಕೆಲ ಮಕ್ಕಳ ಸಾಹಿತ್ಯ ಕೃತಿಗಳು. ಅವರ 'ನನ್ನ ಗೆಳೆಯ ಜಪಾನ್‌ನ ಟಾರೊ' ಕೃತಿಗೆ ರಾಷ್ಟ್ರಪ್ರಶಸ್ತಿ ದೊರೆತಿದೆ.

ಗುಜರಾತ್ ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಜಯಭೇರಿ

ಅಹಮದಾಬಾದ್: ಗುಜರಾತ್ ನಗರ ಸ್ಥಳೀಯ ಸಂಸ್ಥೆಗಳು, ಜಿಲ್ಲಾ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಯಲ್ಲಿ ಬಿಜೆಪಿ ಕ್ಲೀನ್ ಸ್ವೀಪ್ ಮಾಡಿದ್ದು, ಕಾಂಗ್ರೆಸ್, ಆಮ್ ಆದ್ಮಿ ಪಕ್ಷಗಳು ಮಕಾಡೆ ಮಲಗಿವೆ. ಮುಸ್ಲಿಂ ಬಾಹುಳ್ಯದ ಗೋದ್ರಾದ ವಾರ್ಡ್ ಒಂದರಲ್ಲಿ ಹಿಂದೂ ಅಭ್ಯರ್ಥಿ ಜಯ ಗಳಿಸಿದ್ದಾರೆ.

ಚುನಾವಣೆ ನಡೆದ ಎಲ್ಲಾ 15 ಮಹಾನಗರ ಪಾಲಿಕೆಗಳನ್ನು ಬಿಜೆಪಿ ತೆಕ್ಕೆಗೆ ತೆಗೆದುಕೊಂಡಿದೆ. ಪ್ರತಿ ಪಾಲಿಕೆಯಲ್ಲೂ ಶೇ.50ಕ್ಕಿಂತ ಹೆಚ್ಚು ಸ್ಥಾನ ಗೆಲ್ಲುವ ಮೂಲಕ ರಾಜ್ಯದ ಸ್ಥಳೀಯ ಆಡಳಿತದ ಮೇಲೆ ಬಿಗಿ ಹಿಡಿತ ಸಾಧಿಸಿದೆ.

ಅಹಮದಾಬಾದ್, ವಡೋದರಾ, ರಾಜ್‌ಕೋಟ್, ಭಾವನಗರ, ಗಾಂಧಿ ನಗರ, ಸುರೇಂದರ್‌ನಗರ, ಜಾಮ್‌ನಗರ, ಪೋರ್‌ಬಂದರ್, ಕರ್ಮಸದ್-ಆನಂದ್, ನವಸಾರಿ, ವಾಪಿ, ಸೂರತ್, ಮೊರ್ಬಿ, ನಾಡಿಯಾಡ್, ಮೆಹ್ಸಾನಾ ಪಾಲಿಕೆಗಳು ಬಿಜೆಪಿ ಪಾಲಾಗಿವೆ.

ಒಟ್ಟು 15 ಪಾಲಿಕೆ, 84 ನಗರಸಭೆ, 34 ಜಿಲ್ಲಾ ಪಂಚಾಯತ್, 260 ತಾಲೂಕು ಪಂಚಾಯಿತಿಗಳಿಗೆ ಭಾನುವಾರ ಮತದಾನ ನಡೆದಿತ್ತು. 9,900 ವಾರ್ಡ್‌ಗಳ ಪೈಕಿ ಬಿಜೆಪಿ 6472 ವಾರ್ಡ್ ಗೆದ್ದುಕೊಂಡಿದೆ. ಕಾಂಗ್ರೆಸ್ 1,412, ಆಪ್, ಎಐಎಂಐಎಂ ಸೇರಿದಂತೆ ಇತರೆ ಪಕ್ಷಗಳು 597 ವಾರ್ಡ್‌ಗಳಲ್ಲಿ ಜಯ ಸಾಧಿಸಿವೆ.

ಶೇ.98ರಷ್ಟು ಮುಸ್ಲಿಂ ಮತದಾರರಿರುವ ಗೋದ್ರಾದ ವಾರ್ಡ್ ಸಂಖ್ಯೆ 7ರಲ್ಲಿ ಹಿಂದೂ ಅಭ್ಯರ್ಥಿ ಜಯ ಗಳಿಸಿದ್ದಾರೆ. ಪಕ್ಷೇತರ ಅಭ್ಯರ್ಥಿ ಅಪೇಕ್ಷಾ ಸೋನಿ ವಿಜಯದ ನಗೆ ಬೀರಿದ್ದಾರೆ.

ಬಂಗಾಳದಲ್ಲಿ 2ನೇ ಹಂತದ ಮತದಾನ ಇಂದು

142 ಕ್ಷೇತ್ರ | **1,478** ಕಣದಲ್ಲಿರುವ ಅಭ್ಯರ್ಥಿಗಳು | **3.22** ಕೋಟಿ ಮತದಾರರು

ಕೋಲ್ಕೊತಾ/ಹೊಸದಿಲ್ಲಿ: ಪಶ್ಚಿಮ ಬಂಗಾಳದಲ್ಲಿ 2ನೇ ಹಂತದಲ್ಲಿ 142 ಕ್ಷೇತ್ರಗಳಿಗೆ ಏ.29 ರಂದು ಮತದಾನ ನಡೆಯಲಿದ್ದು, ಸಂಜೆ ಬಹು ನಿರೀಕ್ಷಿತ ಐದು ರಾಜ್ಯಗಳ ಮತಗಟ್ಟೆ ಸಮೀಕ್ಷೆ ಹೊರ ಬೀಳಲಿದೆ.

ಪಶ್ಚಿಮ ಬಂಗಾಳದಲ್ಲಿ 2ನೇ ಹಂತದ ಮತದಾನಕ್ಕೆ ಚುನಾವಣಾ ಆಯೋಗ ಸಕಲ ಕ್ರಮ ಕೈಗೊಂಡಿದೆ. ಭದ್ರತೆಗೆ ಕೇಂದ್ರೀಯ ಸಶಸ್ತ್ರ ಮೀಸಲು ಪಡೆಗಳ 2,300 ತುಕಡಿ, ರಾಷ್ಟ್ರೀಯ ತನಿಖಾ ದಳದ ಬಾಂಬ್ ನಿಷ್ಕ್ರಿಯ ತಂಡಗಳನ್ನು ನಿಯೋಜಿಸಿದೆ.

ಸಿಂಗಂ ವರ್ಸಸ್ ಪುಷ್ಪ: ಚುನಾವಣಾ ಪೊಲೀಸ್ ವೀಕ್ಷಕರಾಗಿ ಉತ್ತರ ಪ್ರದೇಶದ ಎನ್‌ಕೌಂಟರ್ ಸ್ಪೆಷಲಿಸ್ಟ್ ಖ್ಯಾತಿಯ ಅಜಯ್ ಪಾಲ್ ಶರ್ಮಾ ಅವರನ್ನು ನೇಮಿಸಿದ ಚುನಾವಣಾ ಆಯೋಗದ ಕ್ರಮಕ್ಕೆ ಟಿಎಂಸಿ ಸೇರಿದಂತೆ ಪ್ರತಿಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಶರ್ಮಾ ಅವರನ್ನು ದಕ್ಷಿಣ 24 ಪರಗಣ ಜಿಲ್ಲೆಯ ವೀಕ್ಷಕರಾಗಿ ನೇಮಿಸಿದ ಕ್ರಮ ಮತದಾರರನ್ನು ಬೆದರಿಸುವ ತಂತ್ರಗಾರಿಕೆ ಎಂದು ಟಿಎಂಸಿ ಟೀಕಿಸಿದೆ. ಟಿಎಂಸಿ ಅಭ್ಯರ್ಥಿ ಜಹಂಗೀರ್ ಖಾನ್ ಮನೆಗೆ ತೆರಳಿ ಎಚ್ಚರಿಕೆ ನೀಡಿರುವ ಅಜಯ್ ಪಾಲ್ ಶರ್ಮಾ, ಮತದಾನಕ್ಕೆ ಅಡ್ಡಿಪಡಿಸಿದರೆ ಕಠಿಣ ಕ್ರಮದ ಎಚ್ಚರಿಕೆ ನೀಡಿದ್ದರು. ಶರ್ಮಾ ಮಾತಿಗೆ ಅದೇ ಶೈಲಿಯಲ್ಲಿ ಉತ್ತರ ಕೊಟ್ಟಿರುವ ಜಹಂಗೀರ್ ಖಾನ್, ''ಶರ್ಮಾ ಅವರು ಸಿಂಗಂ ಆದರೆ ನಾನು ಪುಷ್ಪ'' ಎಂದು ತಿರುಗೇಟು ನೀಡಿದ್ದಾರೆ. ಈ ಮಧ್ಯೆ ಅಜಯ್ ಪಾಲ್ ಶರ್ಮಾ ನೇಮಕ ಪ್ರಶ್ನಿಸಿ ಸಲ್ಲಿಸಿದ ಅರ್ಜಿಯನ್ನು ಕೋಲ್ಕೊತಾ ಹೈಕೋರ್ಟ್ ವಜಾಗೊಳಿಸಿದೆ.

ಸಂಜೆ ಮತಗಟ್ಟೆ ಸಮೀಕ್ಷೆ

ತಮಿಳುನಾಡು (234), ಕೇರಳ (140), ಅಸ್ಸಾಂ (126), ಪುದುಚೇರಿ (30), ಪಶ್ಚಿಮ ಬಂಗಾಳ (294) ವಿಧಾನಸಭೆ ಚುನಾವಣೆಯ ಮತಗಟ್ಟೆ ಸಮೀಕ್ಷೆ ಬುಧವಾರ ಸಂಜೆ ಪ್ರಕಟವಾಗಲಿದೆ. ವಿವಿಧ ಸುದ್ದಿಸಂಸ್ಥೆಗಳು, ವಿವಿಧ ಏಜೆನ್ಸಿಗಳು ನಡೆಸಿರುವ ಮತಗಟ್ಟೆ ಸಮೀಕ್ಷೆಗಳು ಬಹಿರಂಗವಾಗಲಿವೆ.

Quick ನ್ಯೂಸ್

- ದೇಶದ ರಕ್ಷಣಾ ಬಜೆಟ್ 92 ಶತಕೋಟಿ ಡಾಲರ್‌ಗೇರಿದ್ದು, ಈ ಮೂಲಕ ಅತಿ ಹೆಚ್ಚು ರಕ್ಷಣಾ ಬಜೆಟ್ ಹೊಂದಿದ ಜಗತ್ತಿನ ಐದನೇ ರಾಷ್ಟ್ರ ಎಂಬ ಹಿರಿಮೆಗೆ ಭಾರತ ಭಾಜನ
- **ಮಾಜಿ ಪ್ರಧಾನಿ ರಾಜೀವ್ ಗಾಂಧಿ ಹತ್ಯೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸಿದ್ದ ಎ.ಜಿ. ಪೆರಾರಿವಲನ್ ಈಗ ಮದ್ರಾಸ್ ಹೈಕೋರ್ಟ್‌ನಲ್ಲಿ ವಕೀಲ**
- ಶಾಂಘೈ ಶೃಂಗಸಭೆಯಲ್ಲಿ ಉಗ್ರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಆಗ್ರಹ
- **ಆರೆಸ್ಸೆಸ್‌ನ 100ನೇ ವರ್ಷಾಚರಣೆ ಕಾರ್ಯಕ್ರಮ ವಿರೋಧಿಸಿ ದಿಲ್ಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿವಿಯ ವಿದ್ಯಾರ್ಥಿಗಳಿಂದ ಪ್ರತಿಭಟನೆ**

ಷೇರುಪೇಟೆ ಇಳಿಕೆ

ಮುಂಬಯಿ: ತೈಲ ಬೆಲೆ ಏರಿಕೆ ಮತ್ತು ವಿದೇಶಿ ನಿಧಿ ಹೊರ ಹರಿವಿನಿಂದ ಮಂಗಳವಾರ ಷೇರುಪೇಟೆ ಇಳಿಕೆ ಕಂಡಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 416.72 ಅಂಕ ಇಳಿದು 76,886.91ರಲ್ಲಿ ವಹಿವಾಟು ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 97 ಅಂಕ ಕುಸಿದು 23,995.70ರಲ್ಲಿ ಸ್ಥಿರಗೊಂಡಿತು. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇ. 2.97ರಷ್ಟು ಏರಿ, ಬ್ಯಾರೆಲ್‌ಗೆ 111.4 ಡಾಲರ್ ಆಗಿದೆ.

ಡಾಲರ್ ಎದುರು ರೂಪಾಯಿ ಮೌಲ್ಯ ದಿನೇದಿನೆ ಕುಸಿಯುತ್ತಲೇ ಇದೆ. ಮಂಗಳವಾರ 41 ಪೈಸೆ ಕಡಿಮೆಯಾಗಿ 94.56 ರೂ. ಆಗಿದೆ. ಕಚ್ಚಾ ತೈಲದ ಬೆಲೆ ಏರಿಕೆ, ವಿದೇಶಿ ಬಂಡವಾಳದ ಹೊರ ಹರಿವು ಮತ್ತು ಬಗೆಹರಿಯದ ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ರೂಪಾಯಿ ಮೌಲ್ಯ ವರ್ಧನೆಯಾಗುತ್ತಿಲ್ಲ.

ಪಂಜಾಬ್ ಸ್ಫೋಟದ ಸಂಚು ಒಪ್ಪಿಕೊಂಡ ಖಲಿಸ್ತಾನಿ ಗ್ಯಾಂಗ್

ಚಂಡೀಗಢ: ಪಂಜಾಬ್‌ನ ಪಟಿಯಾಲದಲ್ಲಿ ರೈಲ್ವೆ ಹಳಿ ಸ್ಫೋಟದ ಹೊಣೆಯನ್ನು 'ಖಲಿಸ್ತಾನ್ ಟೈಗರ್ ಫೋರ್ಸ್' ಸಂಘಟನೆ ಒಪ್ಪಿಕೊಂಡಿದೆ. ಜರ್ಮನಿಯಲ್ಲಿ ನೆಲೆಸಿರುವ ಸಂಘಟನೆಯ ಮುಖಂಡ ಜಸ್ವಿಂದರ್ ಮುಲ್ತಾನಿ ಸಾಮಾಜಿಕ ಮಾಧ್ಯಮದ ಮೂಲಕ ಈ ವಿಷಯವನ್ನು ಪ್ರಕಟಿಸಿದ್ದಾನೆ.

ಸೋಮವಾರ ಮಧ್ಯರಾತ್ರಿ ಪಟಿಯಾಲದ ಶಂಭು ಬಳಿ ಸರಕು ಸಾಗಣೆ ವಿಶೇಷ ರೈಲ್ವೆ ಹಳಿಯಲ್ಲಿ ಭಾರಿ ಸ್ಫೋಟ ಸಂಭವಿಸಿತ್ತು. ರೈಲ್ವೆ ಹಳಿಯನ್ನು ಧ್ವಂಸಗೊಳಿಸುವ ಉದ್ದೇಶದಿಂದ ಡಿಟೋನೇಟರ್ ಸಕ್ರಿಯಗೊಳಿಸುತ್ತಿದ್ದಾಗ ಅದು ಹಠಾತ್ ಸ್ಫೋಟಗೊಂಡು ದುಷ್ಕರ್ಮಿ ಸ್ಥಳದಲ್ಲೇ ಮೃತಪಟ್ಟಿದ್ದ. ಮೃತನನ್ನು ತರನ್ ತರನ್ ಜಿಲ್ಲೆಯ ಪಂಜ್ವಾರ್ ಗ್ರಾಮದ ಜಗ್‌ರೂಪ್ ಸಿಂಗ್ ಎಂದು ಪೊಲೀಸರು ಗುರುತಿಸಿದ್ದಾರೆ. ದುಷ್ಕರ್ಮಿಯು ಅಮೃತಸರದಲ್ಲಿ ದ್ವಿಚಕ್ರ ವಾಹನ ನಿಲ್ಲಿಸಿ ಸ್ಫೋಟ ನಡೆದ ಸ್ಥಳದತ್ತ ಧಾವಿಸಿರುವುದನ್ನು ಸಿಸಿಟಿವಿ ದೃಶ್ಯಾವಳಿಯಲ್ಲಿ ಪೊಲೀಸರು ಪತ್ತೆ ಮಾಡಿದ್ದಾರೆ.

ಎನ್‌ಐಎ ತನಿಖೆ ನಡೆಸುವ ಸಾಧ್ಯತೆ

ಸ್ಫೋಟದ ತೀವ್ರತೆಗೆ ದುಷ್ಕರ್ಮಿಯ ಮೃತದೇಹ ಛಿದ್ರಗೊಂಡಿದ್ದು, ರೈಲ್ವೆ ಹಳಿಯ ಮೇಲೆ ಅಲ್ಲಲ್ಲಿ ದೇಹದ ಭಾಗಗಳು ಪತ್ತೆಯಾಗಿದ್ದವು. ಆರಂಭದಲ್ಲಿ ಇದೊಂದು ಲಘು ಸ್ಫೋಟವೆಂದು ಶಂಕಿಸಲಾಗಿತ್ತು. ಆದರೆ, ಹೆಚ್ಚಿನ ತನಿಖೆ ನಡೆಸಿದಾಗ ಡಿಟೋನೇಟರ್ ಮೂಲಕ ಸ್ಫೋಟ ನಡೆಸಲು ಪ್ರಯತ್ನಿಸಿರುವುದು ಖಚಿತಪಟ್ಟಿದೆ. ಕಳೆದ ಮೂರು ತಿಂಗಳಲ್ಲಿ ಪಂಜಾಬ್‌ನಲ್ಲಿ ರೈಲ್ವೆ ಹಳಿಯ ಮೇಲೆ ನಡೆದ ಎರಡನೇ ಸ್ಫೋಟ ಇದಾಗಿದ್ದು, ಪ್ರಕರಣದ ಗಂಭೀರತೆ ಹಿನ್ನೆಲೆಯಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯು ತನಿಖೆಯನ್ನು ಕೈಗೆತ್ತಿಕೊಳ್ಳುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ.

ದಾವೂದ್ ಆಪ್ತ ಸಲೀಂ ಭಾರತಕ್ಕೆ ಗಡೀಪಾರು

ಹೊಸದಿಲ್ಲಿ: ಪಾಕಿಸ್ತಾನದಲ್ಲಿ ತಲೆ ಮರೆಸಿಕೊಂಡಿರುವ ಭೂಗತ ಪಾತಕಿ ದಾವೂದ್ ಇಬ್ರಾಹಿಂನ ಆಪ್ತ ಮೊಹಮ್ಮದ್ ಸಲೀಂ ದೋಲಾನನ್ನು ಮಂಗಳವಾರ ಟರ್ಕಿಯಿಂದ ಭಾರತಕ್ಕೆ ಗಡೀಪಾರು ಮಾಡಲಾಗಿದೆ.

ಡ್ರಗ್ಸ್ ಕಳ್ಳಸಾಗಣೆ, ಪಾತಕಿ ದಾವೂದ್ ಇಬ್ರಾಹಿಂ ಜತೆಗೆ ನಂಟು ಹೊಂದಿದ ಆರೋಪ ಹೊತ್ತಿದ್ದ ಮೊಹಮ್ಮದ್ ಸಲೀಂ ದೋಲಾನನ್ನು ಇತ್ತೀಚೆಗೆ ಟರ್ಕಿಯ ಇಸ್ತಾಂಬುಲ್‌ನಲ್ಲಿ ಏ.25ರಂದು ಬಂಧಿಸಲಾಗಿತ್ತು. ಆರೋಪಿ ದೋಲಾ ಬಂಧನಕ್ಕೆ ರೆಡ್ ಕಾರ್ನರ್ ನೋಟಿಸ್ ಹೊರಡಿಸಲಾಗಿತ್ತು. ಭಾರತ ಸೇರಿದಂತೆ ವಿವಿಧ ದೇಶಗಳ ಗುಪ್ತಚರ ಸಂಸ್ಥೆಗಳ ಹಾಗೂ ಅಂತಾರಾಷ್ಟ್ರೀಯ ತನಿಖಾ ಸಂಸ್ಥೆಗಳ ಸಹಯೋಗದಲ್ಲಿ ಸಲೀಂ ದೋಲಾನನ್ನು ಬಂಧಿಸಿದ್ದ ಟರ್ಕಿ ಪೊಲೀಸರು, ಮಂಗಳವಾರ ಭಾರತಕ್ಕೆ ಹಸ್ತಾಂತರಿಸಿದರು. ಭಾರತ-ಟರ್ಕಿ ನಡುವಿನ 2001ರ ಹಸ್ತಾಂತರ ಒಪ್ಪಂದದ ಅಡಿಯಲ್ಲಿ ದೋಲಾನನ್ನು ಹಸ್ತಾಂತರಿಸಲಾಗಿದೆ.

ಇಸ್ತಾಂಬುಲ್‌ನಿಂದ ವಿಶೇಷ ವಿಮಾನದ ಮೂಲಕ ಸಲೀಂ ದೋಲಾನನ್ನು ದಿಲ್ಲಿಗೆ ಕರೆ ತರಲಾಗಿದೆ. ಔಪಚಾರಿಕ ವಿಚಾರಣೆ ಬಳಿಕ ಮಹಾರಾಷ್ಟ್ರದಲ್ಲಿ ನಡೆದಿರುವ ಅಪರಾಧ ಕೃತ್ಯಗಳ ತನಿಖೆ ಸಂಬಂಧ ಮುಂಬಯಿ ಪೊಲೀಸರ ವಶಕ್ಕೆ ಒಪ್ಪಿಸಲಿದ್ದಾರೆ.

ದಾವೂದ್ ಇಬ್ರಾಹಿಂನ ಕ್ರಿಮಿನಲ್ ನೆಟ್‌ವರ್ಕ್‌ನಲ್ಲಿ ಗುರುತಿಸಿಕೊಂಡಿದ್ದ ಸಲೀಂ ದೋಲಾ ಹಲವು ಅಪರಾಧ ಕೃತ್ಯದಲ್ಲಿ ಭಾಗಿಯಾಗಿದ್ದ. 5000 ಕೋಟಿ ರೂ. ಮೌಲ್ಯದ 'ಡಿ' ಕಂಪನಿ ಮಾದಕ ದ್ರವ್ಯ ಸಾಮ್ರಾಜ್ಯ ಈತ ಮುನ್ನಡೆಸುತ್ತಿದ್ದ.

ಡಿಜಿಟಲ್ ಅರೆಸ್ಟ್ ವಂಚನೆಗೆ ಬಳಕೆ 9,400 ವಾಟ್ಸ್‌ಆ್ಯಪ್ ಖಾತೆ ನಿಷೇಧ

ಹೊಸದಿಲ್ಲಿ: ದೇಶದಲ್ಲಿ ಹೆಚ್ಚುತ್ತಿರುವ ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಈ ದಂಧೆಯಲ್ಲಿ ಬಳಕೆಯಾಗುತ್ತಿದ್ದ 9,400 ಖಾತೆಗಳನ್ನು ಮೆಟಾ ಒಡೆತನದ ವಾಟ್ಸ್ ಆ್ಯಪ್ ನಿಷೇಧಿಸಿದೆ ಎಂದು ಕೇಂದ್ರ ಸರಕಾರ ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿದೆ.

ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣಗಳ ಕುರಿತು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು ಸ್ವಯಂ ವಿಚಾರಣೆ ನಡೆಸುತ್ತಿದೆ. ಈ ಪೀಠದ ಮುಂದೆ ವಂಚನೆ ತಡೆಗೆ 'ಭಾರತೀಯ ಸೈಬರ್ ಕ್ರೈಮ್ ಸಮನ್ವಯ ಕೇಂದ್ರ' ಕೈಗೊಂಡಿರುವ ಕ್ರಮಗಳ ವರದಿಯನ್ನು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಸಲ್ಲಿಸಿದರು. ಫೆಬ್ರವರಿ 9ರಂದು ಸುಪ್ರೀಂ ಕೋರ್ಟ್ ನೀಡಿದ್ದ ನಿರ್ದೇಶನದ ಮೇರೆಗೆ ಈ ಸಮಗ್ರ ಸ್ಥಿತಿಗತಿಯ ವರದಿಯನ್ನು ಸಲ್ಲಿಸಲಾಗಿದೆ. ಭಾರತೀಯ ಸೈಬರ್ ಕ್ರೈಮ್ ಸಮನ್ವಯ ಕೇಂದ್ರ, ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯ ಮತ್ತು ದೂರಸಂಪರ್ಕ ಇಲಾಖೆಗಳಿಂದ ಬಂದ ಮಾಹಿತಿ ಆಧರಿಸಿ ವಾಟ್ಸ್ ಆ್ಯಪ್ ಕಳೆದ 12 ವಾರಗಳಲ್ಲಿ ಒಟ್ಟು 9,400 ಖಾತೆಗಳನ್ನು ನಿಷೇಧಿಸಿದೆ.

ನಾಲ್ವರ ಸಾವಿಗೆ ಕಾರಣವಾಯಿತೆ ಕಲ್ಲಂಗಡಿ?

ಮುಂಬಯಿ: ಕಲ್ಲಂಗಡಿ ಹಣ್ಣು ಸೇವಿಸಿ ಅನುಮಾನಾಸ್ಪದವಾಗಿ ಮೃತಪಟ್ಟ ಒಂದೇ ಕುಟುಂಬದ ನಾಲ್ವರ ಸಾವಿನ ಪ್ರಕರಣದ ನಿಗೂಢತೆ ಇನ್ನೂ ಮುಂದುವರಿದಿದೆ. ಪ್ರಾಥಮಿಕ ಮೂಲಗಳ ಪ್ರಕಾರ ಕಲ್ಲಂಗಡಿ ಹಣ್ಣಿನ ಫುಡ್ ಪಾಯ್ಸನ್‌ನಿಂದ ಸಾವಿಗೀಡಾರುವ ಶಂಕೆ ವ್ಯಕ್ತವಾಗಿದೆ. ನಾಲ್ವರ ಮರಣೋತ್ತರ ವರದಿ ನಿರೀಕ್ಷಿಸಲಾಗಿದ್ದು, ವರದಿ ಬಂದ ಬಳಿಕ ಸಾವಿನ ನಿಖರ ಕಾರಣ ತಿಳಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಏಪ್ರಿಲ್ 25 ರಂದು ಮನೆಯಲ್ಲಿ ನಡೆದ ಕಾರ್ಯಕ್ರಮ ಒಂದರಲ್ಲಿ ಮೃತ ಅಬ್ದುಲ್ಲಾ, ಪತ್ನಿ ನಸ್ರೀನ್ ಮಕ್ಕಳಾದ ಆಯೇಷಾ, ಜೈನಾಬ್ ಅವರು ಬಿರಿಯಾನಿ ಸೇವಿಸಿದ್ದರು. ರಾತ್ರಿ ಕಲ್ಲಂಗಡಿ ಹಣ್ಣು ಸೇವಿಸಿ ಮಲಗಿದ್ದರು. ಏ. 26ರ ಬೆಳಗ್ಗೆ ವೇಳೆ ಅನಾರೋಗ್ಯಕ್ಕೆ ತುತ್ತಾಗಿದ್ದರು. ಕೂಡಲೇ ಆಸ್ಪತ್ರೆಗೆ ಸೇರಿಸಿ, ಚಿಕಿತ್ಸೆ ನೀಡಲಾಯಿತು. ಆದರೆ, ಚಿಕಿತ್ಸೆ ಫಲಿಸದೇ ನಾಲ್ವರು ಮೃತಪಟ್ಟಿದ್ದರು.

ಭಾರತೀಯ ವಿಜ್ಞಾನ ಸಂಸ್ಥೆ
ಬೆಂಗಳೂರು-560012

ಐಐಎಸ್‌ಸಿ/ಸಿಸಿಎಂಡಿ/ಟೆಂಡರ್ಸ್/2026-27 ದಿನಾಂಕ: 22.04.2026

ಟೆಂಡರ್ ಪ್ರಕಟಣೆ-ಐಐಎಸ್‌ಸಿ/ಟೆಂಡರ್-ಎಎಂಸಿ-02/2026-27

ಭಾರತೀಯ ವಿಜ್ಞಾನ ಸಂಸ್ಥೆಯು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ https://eprocure.gov.in/ ಮೂಲಕ ದ್ವಿ ಲಕೋಟೆ ವ್ಯವಸ್ಥೆಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ. **"ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಚೈನ್-ಲಿಂಕ್ ಬೇಲಿಗಳ ಸ್ಥಳಾಂತರ, ಟ್ರೀ ಗಾರ್ಡ್‌ಗಳ ನಿರ್ಮಾಣ, ಬೀದಿ ದೀಪಗಳು ಇತ್ಯಾದಿಗಳನ್ನು ಒಳಗೊಂಡಂತೆ ಡಿ-ಗೇಟ್‌ನಿಂದ ಬಿಇಎಲ್ ರಸ್ತೆ ಗೇಟ್‌ವರೆಗಿನ ಪಾದಚಾರಿ ಕಾರಿಡಾರ್ ಮತ್ತು ಒಳಚರಂಡಿ ವ್ಯವಸ್ಥೆಯ ನವೀಕರಣ ಮತ್ತು ಅಭಿವೃದ್ಧಿ ಕಾಮಗಾರಿಗಾಗಿ."** ಕೆಪಿಡಬ್ಲ್ಯುಡಿ/ ಸಿಪಿಡಬ್ಲ್ಯುಡಿ/ ರೈಲ್ವೇಸ್/ ಎಂಇಎಸ್/ ಕೇಂದ್ರ ಸಾರ್ವಜನಿಕ ವಲಯ ಘಟಕಗಳು/ ಅಥವಾ ಯಾವುದೇ ಸರ್ಕಾರಿ ಇಲಾಖೆಗಳ **ದರ್ಜೆ-1/ ದರ್ಜೆ ಎ ಎಲೆಕ್ಟ್ರಿಕಲ್ ಗುತ್ತಿಗೆದಾರರ** ಅಡಿಯಲ್ಲಿ ನೋಂದಾಯಿತ ಯಾವುದೇ ಪರಿಣಿತ ಸಂಸ್ಥೆಗಳು ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ಅರ್ಹರಾಗಿರುತ್ತಾರೆ. ಕಾಮಗಾರಿಯ ಅಂದಾಜು ವೆಚ್ಚ **ರೂ. 50,00,547/-**. ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕ **12ನೇ ಮೇ 2026, 15:30 ಗಂಟೆಗೆ**. ಇತರೆ ಯಾವುದೇ ವಿವರಗಳಿಗಾಗಿ ಸೆಂಟರ್ ಫಾರ್ ಕ್ಯಾಂಪಸ್ ಮ್ಯಾನೇಜ್‌ಮೆಂಟ್ & ಡೆವಲೋಪ್‌ಮೆಂಟ್, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರುರವರ ಕಛೇರಿಯಿಂದ ಯಾವುದೇ ಕೆಲಸದ ದಿನಗಳಲ್ಲಿ ಅಥವಾ ಇ-ಮೇಲ್ office.ccmd@iisc.ac.in ಮೂಲಕ ಸಂಪರ್ಕಿಸಬಹುದು.

ಸಹಿ/-, ರಿಜಿಸ್ಟ್ರಾರ್

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತರವರು ಕೆಪಿಪಿ ಪೋರ್ಟಲ್ ನಲ್ಲಿ Enquiry No: BESCOM/202627/SE0456 dated 27.04.2026 ಮೂಲಕ **RAPDRP / IPDS** ಚೌಕಟ್ಟಿನ ಅಡಿಯಲ್ಲಿ ಕೇಂದ್ರೀಕೃತ ಟಿಕೆಟಿಂಗ್ ಉಪಕರಣದ ಅನುಷ್ಠಾನಕ್ಕಾಗಿ ಏಜೆನ್ಸಿಯ ಆಯ್ಕೆ.

ಬಿಡ್ ದಾಖಲಾತಿಗಳ ಲಭ್ಯತೆ **ದಿನಾಂಕ: 04-05-2026ರ ಸಂಜೆ 5.30 ಗಂಟೆಯ ನಂತರ.** ಬಿಡ್ ದಾಖಲಾತಿಗಳನ್ನು ಸಲ್ಲಿಸುವ **ಕೊನೆಯ ದಿನಾಂಕ: 03-06-2026ರ ಸಂಜೆ 4.00 ಗಂಟೆಗೆ.** ಬಿಡ್ ದಾಖಲಾತಿಗಳನ್ನು ತೆರೆಯುವ **ದಿನಾಂಕ: 04-06-2026 ರ ಸಂಜೆ 4.00 ಗಂಟೆಗೆ.**

ಬಿಡ್ ದಾಖಲಾತಿಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಚ್ಛೆಯುಳ್ಳ ಬಿಡ್ದರ್‌ಗಳು ಕೆಪಿಪಿ ಪೋರ್ಟಲ್‌ನಲ್ಲಿ ನೊಂದಾಯಿಸಿಕೊಳ್ಳಬಹುದು ಹಾಗೂ ಬಿಡ್ದರ್‌ಗಳು ಕೆಪಿಪಿ ಸಹಾಯವಾಣಿ ಕೇಂದ್ರದ ದೂರವಾಣಿ ಸಂಖ್ಯೆ **080-46010000, 080-68948777** ದಿಂದ ಮಾರ್ಗದರ್ಶನ ಪಡೆಯಬಹುದು. ಇ-ಮೇಲ್: **support@eprochelpdesk.com.**

ಸಹಿ/- ಪ್ರಧಾನ ವ್ಯವಸ್ಥಾಪಕರು, (ಐಸಿಟಿ & ಎಂಐಎಸ್) ಬೆಂಗಳೂರು-01.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ನಗರಸಭಾ ಕಾರ್ಯಾಲಯ, ಶಿರಸಿ (ಉ.ಕ.)
CITY MUNCIPAL COUNCIL, SIRSI (U.K.)
Tel.: 08384-226338, Fax : 08384-229676
Website: www.sirsicity.gov.in, E-mail.: comm_srs@yahoo.com

ಸಂ. ನಸಶಿ/ಕಾ.ವಿ./ಪೌ.ಕಾ.ಗೃ.ಭಾ./ವಿವ/2026-27 ದಿನಾಂಕ: 27-04-2026

ಅಲ್ಪಾವಧಿ ಮರು ಟೆಂಡರು ಪ್ರಕಟಣೆ

ಈ ಕೆಳಗೆ ಸಹಿ ಮಾಡಿರುವವರು ಶಿರಸಿ ನಗರಸಭಾ ವ್ಯಾಪ್ತಿಯ ಪೌರಕಾರ್ಮಿಕರ ಗೃಹ ಭಾಗ್ಯ ಯೋಜನೆಯಡಿಯಲ್ಲಿ ಪೌರಕಾರ್ಮಿಕರ ಗೃಹಭಾಗ್ಯ ನಿರ್ಮಾಣ ಕಾಮಗಾರಿಗಾಗಿ ಪಾರದರ್ಶಕತೆ ಅಧ್ಯಾದೇಶ-1999-2000ರ ಪ್ರಕಾರ ಪಾರದರ್ಶಕತೆ ಕಾಯ್ದೆ 2000 ನಿಯಮದಂತೆ Standard bid Document KW-4 ರ ನಿಬಂಧನೆಗೊಳಪಟ್ಟಂತೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ದ್ವೀ-ಲಕೋಟಿ ಪದ್ಧತಿಯಡಿ ಪ್ರಥಮ ದರ್ಜೆ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ವಿವರ

ಅ. ನಂ.	ಕಾಮಗಾರಿ ಇಂಡೆಂಟ್ ಸಂಖ್ಯೆ	ಟೆಂಡರಿಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ. ಲಕ್ಷಗಳಲ್ಲಿ)
1	2	3	4
1	ಶಿರಸಿ ನಗರಸಭೆ ಜಾಗದ ಸರ್ವೆ ನಂ. 80/ಬಿ ನೇದರಲ್ಲಿ ಪೌರಕಾರ್ಮಿಕರ ಗೃಹಭಾಗ್ಯ ಕಟ್ಟಡ ನಿರ್ಮಾಣ (DMA/2025-26/BD/WORK_INDENT 48790/CALL-2)	216.07	3.241

ನೋಂದಾಯಿತ ಅರ್ಹ ಗುತ್ತಿಗೆದಾರರು ಕೆ.ಪಿ.ಪಿ. ಪೋರ್ಟಲ್ kpp.karnataka.gov.in ಮುಖಾಂತರ ಭಾಗವಹಿಸಬಹುದು. ಇಎಂಡಿ ಹಾಗೂ ಟೆಂಡರ್ ಪ್ರೊಸೆಸಿಂಗ್ ಫೀ ಯನ್ನು ಕೆ.ಪಿ.ಪಿ. ಪೋರ್ಟಲ್ ಮೂಲಕ ಸಲ್ಲಿಸುವುದು. ಟೆಂಡರ್ ದಿನಾಂಕ ಹಾಗೂ ವೇಳಾಪಟ್ಟಿ ಈ ಕೆಳಗಿನಂತಿದೆ.

1) ಕಾಮಗಾರಿ ಪೂರ್ಣಗೊಳಿಸಲು ನಿಗದಿಪಡಿಸಿದ ಅವಧಿ : 365 ದಿನಗಳು. 2) ಪ್ರಿ-ಬಿಡ್ ಮೀಟಿಂಗ್ ದಿನಾಂಕ: 11-05-2026, 3) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 15-05-2026 ರಂದು 17.00 ಘಂಟೆವರೆಗೆ 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ (ತಾಂತ್ರಿಕ ಬಿಡ್) : 16-05-2026 ರಂದು ಸಂಜೆ 15.00 ಗಂಟೆಗೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ: 08384-226338 ಹಾಗೂ ವೆಬ್‌ಸೈಟ್ www.sirsicity.gov.in ದಲ್ಲಿ ಪಡೆಯಬಹುದಾಗಿದೆ.

ಟೆಂಡರ್ ಶೆಡ್ಯೂಲ್ ಹಾಗೂ ಕರಾರುಗಳಲ್ಲಿ ಯಾವುದೇ ಬದಲಾವಣೆಗಳಾದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಪೌರಾಯುಕ್ತರು
ನಗರಸಭೆ, ಶಿರಸಿ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಲೋ.ಇ ವಿಶೇಷ ವಿಭಾಗ, ಶಿವಮೊಗ್ಗ
ದೂರವಾಣಿ ಸಂಖ್ಯೆ: 08182-222943 Email ID: spdivision@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ-ಲಕೋಟೆ ಪದ್ಧತಿ) (ಕೆ.ಪಿ.ಪಿ-ಪೋರ್ಟಲ್ ಮೂಲಕ)-2ನೇ ಕರೆ

ಐಎಫ್‌ಟಿ ಸಂಖ್ಯೆ. 09/2026-27 ದಿನಾಂಕ : 24.04.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆಡಬ್ಲ್ಯೂ-4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 1ನೇ ದರ್ಜೆ ಗುತ್ತಿಗೆದಾರರಿಗೆ ಭದ್ರಾವತಿ ತಾಲ್ಲೂಕಿನಲ್ಲಿ **4059-80-051-0-60-132 ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು** ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ (ಇಂಡೆಂಟ್ ನಂ.33342 & 33363) ಕಾಮಗಾರಿಗಳಿಗೆ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. **ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಗರಿಷ್ಠ ಮೊತ್ತ ರೂ.730.89 ಲಕ್ಷ ಮತ್ತು ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.438.14 ಲಕ್ಷ ಹಾಗೂ ಇ.ಎಂ.ಡಿ. ಗರಿಷ್ಠ ಮೊತ್ತ ರೂ.10.965 ಲಕ್ಷ ಮತ್ತು ಇ.ಎಂ.ಡಿ. ಕನಿಷ್ಠ ಮೊತ್ತ ರೂ.6.44 ಲಕ್ಷ. ಕಾಲಾವಧಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ನಮೂದಿಸಿದಂತೆ.** ಅರ್ಹ ಗುತ್ತಿಗೆದಾರರು ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್-2ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್-4ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು. ವಿದ್ಯುನ್ಮಾನ ಜಾಲದಲ್ಲಿ ದಿನಾಂಕ: **24.04.2026 ರಿಂದ 09.05.2026ರ 17.00 ಗಂಟೆವರೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: **09.05.2026ರ ಸಂಜೆ 5:00 ಗಂಟೆಯೊಳಗೆ** ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ಭರಿಸತಕ್ಕದ್ದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಕೆ.ಪಿ.ಪಿ.ಪಿ ಪೋರ್ಟ್‌ಲ್‌ನಲ್ಲಿ ದಿನಾಂಕ: **10.05.2026 ರಂದು ಸಂಜೆ 5.30 ಕ್ಕೆ ತೆರೆಯಲಾಗುವುದು** ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: **11.05.2026 ರ ನಂತರ ತೆರೆಯಲಾಗುವುದು.** ಪ್ರಕಟಿತ ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿಯೇ ಪ್ರಕಟಿಸಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.

ಸಹಿ/-
ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ.128-04/ ಝೇಂಕಾರ್/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.

ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ-1 /ವಿ.ಶೆ.ಶೀ /ಟೆಂಡರು /2026-27/
ದಿನಾಂಕ 23-04-2026

ಅಲ್ಪಾವಧಿ ಟೆಂಡರು ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025-26 ನೇ ಸಾಲಿನ ಕೆ.ಕೆ.ಆರ್.ಡಿ.ಪಿ ಯೋಜನೆ ಒಟ್ಟು 09 ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಆಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ-
1.RDPR/2026-27/BD/WORK_INDENT26294
2.RDPR/2026-27/BD/WORK_INDENT26341
3.RDPR/2026-27/BD/WORK_INDENT26340
4.RDPR/2026-27/BD/WORK_INDENT26290
5.RDPR/2026-27/BD/WORK_INDENT26295
6.RDPR/2026-27/BD/WORK_INDENT26292
7.RDPR/2026-27/BD/WORK_INDENT26297
8.RDPR/2026-27/BD/WORK_INDENT26296
9.RDPR/2026-27/BD/WORK_INDENT26325

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 23-04-2026 ರಿಂದ ದಿನಾಂಕ 30-04-2026 ರಂದು ಸಂಜೆ 5.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 30-04-2026 ರ 17.30** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 02-05-2026 ರಂದು ಬೆಳ್ಳಗೆ 10.30 ಗಂಟೆಗೆ** ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392-266173.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/97

ಲವಲVK

ಸ್ಟಾರ್ ನಟಿ ರಶ್ಮಿಕಾ ಮಂದಣ್ಣ ಜಪಾನ್ ಟೋಕಿಯೊದಲ್ಲಿ ನಡೆಯಲಿರುವ ಗ್ಲೋಬಲ್ ಅನಿಮ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದ ಪ್ರೆಸೆಂಟರ್ ಆಗಿ ಆಯ್ಕೆಯಾಗಿದ್ದಾರೆ.

ಬಾಲಿವುಡ್‌ನಲ್ಲಿ ಬಾಬ್ಬಿ ಡಿಯೋಲ್ ಮತ್ತು ನಿರ್ದೇಶಕ ಅನುರಾಗ್ ಕಶ್ಯಪ್ ಕಾಂಬಿನೇಶನ್‌ನ 'ಬಂದರ್' ಸಿನಿಮಾ ಜೂನ್ 5ರಂದು ಬಿಡುಗಡೆಯಾಗಲಿದೆ.

ಕೆಡಿ ಧ್ರುವ ನಾಳೆ ಎಂಟ್ರಿ

ಈ ವರ್ಷದ ಬಹುನಿರೀಕ್ಷಿತ ಸಿನಿಮಾ 'ಕೆಡಿ ದಿ ಡೆವಿಲ್' ನಾಳೆ ಜಗತ್ತಿನಾದ್ಯಂತ ತೆರೆಗೆ ಬರಲಿದೆ. ಈಗಾಗಲೇ ಹಾಡು, ಕಂಟೆಂಟ್ ಮೂಲಕ ಜನಮನ ಗೆದ್ದಿರುವ ಈ ಚಿತ್ರವನ್ನು ಯಾಕೆ ನೋಡಬೇಕು ಎಂಬ ಬಗ್ಗೆ ನಾಯಕ ನಟ ಧ್ರುವ ಸರ್ಜಾ ಇಲ್ಲಿ ಹೇಳಿದ್ದಾರೆ.

ನಟ ಧ್ರುವ ಸರ್ಜಾ ಬಹುದಿನಗಳ ನಂತರ 'ಕೆಡಿ ದಿ ಡೆವಿಲ್' ಸಿನಿಮಾ ಮೂಲಕ ತೆರೆಮೇಲೆ ಬರುತ್ತಿದ್ದಾರೆ. ಪ್ರೇಮ್ ನಿರ್ದೇಶನದ ಈ ಚಿತ್ರ ನಾಳೆ ಬಿಡುಗಡೆಯಾಗಲಿದ್ದು, ಇದು ಜನರಿಗೆ ಇಷ್ಟವಾಗುತ್ತದೆ ಎಂದು ಅವರು ಭರವಸೆ ವ್ಯಕ್ತಪಡಿಸಿದ್ದಾರೆ. ಇದರಲ್ಲಿ ಧ್ರುವ ಸರ್ಜಾರಿಗೆ ನಾಯಕಿಯಾಗಿ ನಟಿ ರೀಷ್ಮಾ ನಾಣಯ್ಯ ಅಭಿನಯಿಸಿದ್ದು, ಪ್ರಮುಖ ಪಾತ್ರಗಳಲ್ಲಿ ರವಿಚಂದ್ರನ್, ರಮೇಶ್ ಅರವಿಂದ್, ಬಾಲಿವುಡ್ ಹಿರಿಯ ನಟ ಸಂಜಯ್ ದತ್, ಶಿಲ್ಪಾ ಶೆಟ್ಟಿ, ಕಾಲಭೈರವನ ವಿಶೇಷ ಪಾತ್ರದಲ್ಲಿ ಕಿಚ್ಚ ಸುದೀಪ್ ಕಾಣಿಸಿಕೊಂಡಿದ್ದಾರೆ.

ಈ ಮಲ್ಟಿಸ್ಟಾರ್ ಸಿನಿಮಾದಲ್ಲಿ ತಮ್ಮ ಪಾತ್ರದ ಬಗ್ಗೆ ಹೇಳಿರುವ ಧ್ರುವ ಸರ್ಜಾ, 'ಬೆಂಗಳೂರಿನ ಒಂದು ವಿಂಟೇಜ್ ಕಾಲದ ರೌಡಿಸಂ ಕಥೆಯನ್ನು ಡೈರೆಕ್ಟರ್ ಪ್ರೇಮ್ ತಮ್ಮದೇ ಸ್ಟೈಲ್‌ನಲ್ಲಿ ಕಟ್ಟಿಕೊಟ್ಟಿರುವ ಸಿನಿಮಾವಿದು. ಇದು ಕಾಳಿದಾಸ ಎನ್ನುವ ಒಬ್ಬ ನಟೋರಿಯಸ್ ವ್ಯಕ್ತಿಯ ಕಥೆ. ಹಾಗಂತ ಬರೀ ರೌಡಿಸಂನ ಕಥೆಯಾಗಿರದೆ ದ್ವೇಷ, ಸೇಡು, ಅಧಿಕಾರದ ಆಸೆಯಿಂದ ಹೋರಾಡುವವರ ಕಥೆ ಹೇಳುತ್ತದೆ. ಅದಕ್ಕೆ ಪ್ರೇಮ್ ಶೈಲಿಯ ಲವ್ ಸ್ಟೋರಿ, ಮಾಸ್ ಎಲಿಮೆಂಟ್‌ಗಳನ್ನು ಸೇರಿಸಲಾಗಿದೆ. ಇಷ್ಟು ದೊಡ್ಡ ಸ್ಟಾರ್‌ಕಾಸ್ಟ್ ಜತೆಗೆ ನಟಿಸಿದ್ದರಿಂದ ನನಗೆ ಕಲಿಯಲು ಸಾಕಷ್ಟು ಅವಕಾಶ ಸಿಕ್ಕಿದೆ' ಎಂದಿದ್ದಾರೆ.

ಸಿನಿಮಾ ಯಾಕಿಷ್ಟು ವಿಳಂಬವಾಯಿತು ಅನ್ನುವುದಕ್ಕಿಂತ ಚೆನ್ನಾಗಿ ಬಂದಿದೆ ಎಂದಿರುವ ಧ್ರುವ ಸರ್ಜಾ, 'ಜನರಿಗೆ ಈ ಸಿನಿಮಾ ಖಂಡಿತಾ ಇಷ್ಟವಾಗುತ್ತದೆ. ನಾವು ಹಾಕಿರುವ ಶ್ರಮ ಇದರ ಪ್ರತಿ ಫ್ರೇಮ್‌ನಲ್ಲೂ ಕಾಣುತ್ತದೆ. ಈಗಿನ ಜನರೇಷನ್‌ನ ಆಡಿಯೆನ್ಸ್‌ಗೆ ಇಷ್ಟವಾಗುವ ಜತೆಗೆ ಇದರ ಮೇಕಿಂಗ್ ಈ ಸಿನಿಮಾವನ್ನು ನೆಕ್ಸ್ಟ್ ಲೆವೆಲ್‌ಗೆ ತೋರಿಸಲಿದೆ' ಎಂದು ವಿವರಿಸಿದ್ದಾರೆ.

ಈ ಸಿನಿಮಾವನ್ನೇ ಜನರು ಯಾಕೆ ನೋಡಬೇಕು ಎನ್ನುವುದನ್ನು ಹೇಳಿರುವ ಅವರು, 'ಕನ್ನಡ ಚಿತ್ರಪ್ರಿಯರು ಪ್ರೋತ್ಸಾಹಿಸುತ್ತ ಬಂದಿರುವುದರಿಂದಲೇ ನಮ್ಮ ಚಿತ್ರೋದ್ಯಮ ಈಗ 93 ವರ್ಷಗಳನ್ನು ಪೂರೈಸಿದೆ. ಅದೇ ಥರ 'ಕೆಡಿ' ಸಿನಿಮಾವನ್ನೂ ಎರಡೂವರೆ ಗಂಟೆ ಸಮಯ ಮಾಡಿಕೊಂಡು ನೋಡಲು ಬಂದೇ ಬರುತ್ತಾರೆ. ಅವರು ಕೊಟ್ಟ ಸಮಯ, ಹಣಕ್ಕೆ ಇದು ಪಕ್ಕಾ ಪೈಸಾ ವಸೂಲ್ ಸಿನಿಮಾ. 'ಕೆಡಿ' ಒಂದೊಳ್ಳೆಯ ಫ್ಯಾಮಿಲಿ ಎಂಟರ್‌ಟೇನರ್. ಈ ಚಿತ್ರದಲ್ಲಿ ಸಿಚುಯೇಶನ್‌ಗೆ ತಕ್ಕಂತೆ ಸ್ವಲ್ಪ ವೈಲೆನ್ಸ್ ಇದೆ ಅಷ್ಟೆ. ಪ್ರೇಕ್ಷಕರನ್ನು ಹಾಗೂ ಕಥೆಯನ್ನು ನಂಬಿ ನಿರ್ಮಾಪಕರು ಈ ಸಿನಿಮಾ ಮಾಡಿದ್ದಾರೆ. ನನ್ನನ್ನಾಗಲಿ, ನಿರ್ದೇಶಕ ಪ್ರೇಮ್‌ರನ್ನಾಗಲಿ ನಂಬಿ ಮಾಡಿಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಈ ಸಿನಿಮಾದಲ್ಲಿ ಎಲ್ಲಾ ಪಾತ್ರಗಳಿಗೆ ಪ್ರಾಮುಖ್ಯತೆ ಇದೆ, ಎಲ್ಲರೂ ಅದ್ಭುತವಾಗಿ ನಟಿಸಿದ್ದಾರೆ ಎಂದು ಅಭಿಪ್ರಾಯಪಟ್ಟಿರುವ ಧ್ರುವ ಸರ್ಜಾ, 'ಅರ್ಜುನ್ ಜನ್ಯ ಜತೆಗೆ ಇದು ನನ್ನ ಮೊದಲ ಚಿತ್ರ. ಆದರೆ ಪ್ರೇಮ್ ಹಾಗೂ ಜನ್ಯ ಕಾಂಬಿನೇಷನ್ ಈಗಾಗಲೇ ಸೂಪರ್‌ಹಿಟ್ ಹಾಡುಗಳನ್ನು ಕೊಟ್ಟಿರುವ ಹಿಟ್ ಜೋಡಿ. ಜನಪ್ರಿಯ ಹಾಡು, ಅದ್ದೂರಿ ಆ್ಯಕ್ಷನ್ ಜತೆಗೆ ಈ ಸಿನಿಮಾದಲ್ಲಿ ಅದ್ಭುತ ಭಾವನಾತ್ಮಕ ಮತ್ತು ಕಾಮಿಡಿ ದೃಶ್ಯಗಳಿವೆ. ಒಂದು ಮಾಸ್ ಮಸಾಲ ಎಂಟರ್‌ಟೈನ್‌ಮೆಂಟ್ ಸಿನಿಮಾದಲ್ಲಿರಬೇಕಾದ ಎಲ್ಲಾ ಅಂಶಗಳು ಇದರಲ್ಲಿವೆ' ಎಂದಿದ್ದಾರೆ. ■

ಇಳಕಲ್ ಸೀರೆಯಲ್ಲಿ ನಟಿ ಜೆನಿಲಿಯಾ

ಲವಲvk ಸುದ್ದಿಲೋಕ
feedbacklvk@vijaykarnataka.com

ಬಾಲಿವುಡ್ ನಟಿ ಜೆನಿಲಿಯಾ ಡಿಸೋಜಾ ಇತ್ತೀಚೆಗೆ ಕರ್ನಾಟಕದ ಸೀರೆ ಪರಂಪರೆಯಾಗಿರುವ ಇಳಕಲ್ ಸೀರೆಯಲ್ಲಿ ಫೋಟೊಶೂಟ್ ಮಾಡಿಸಿಕೊಂಡಿದ್ದಾರೆ. ತಮ್ಮ ಹಾಗೂ ಪತಿ ರಿತೇಶ್ ದೇಶ್‌ಮುಖ್ ನಟನೆಯ 'ರಾಜಾ ಶಿವಾಜಿ' ಸಿನಿಮಾ ಕಾರ್ಯಕ್ರಮ ಒಂದರಲ್ಲಿ ಅವರು ಕೆಂಪು ಬಣ್ಣದ ಬಾರ್ಡರ್ ಇರುವ ನೀಲಿ ಬಣ್ಣದ ಗೆರೆ ವಿನ್ಯಾಸದ ರೇಷ್ಮೆ ಇಳಕಲ್ ಸೀರೆ ಧರಿಸಿ ಮುತ್ತುಖಚಿತ ಚಿನ್ನದ ನೆಕ್ಲೇಸ್, ಹಸಿರು ಛಾಯೆಯ ಚಿನ್ನದ ಜುಮ್ಕಿ ಮತ್ತು ಕೆಂಪು ಹರಳಿನ ಬುಗುಡಿ, ಉದ್ದನೆಯ ಹಾರ, ಕೈಗಳಿಗೆ ತೋಡೆ ಮತ್ತು ಕೆಂಪು ಗಾಜಿನ ಬಳೆಗಳನ್ನು ಧರಿಸಿ ಅಚ್ಚ ಸಾಂಪ್ರದಾಯಿಕ ಶೈಲಿಯಲ್ಲಿ ಕಂಗೊಳಿಸಿದ್ದಾರೆ.

ಕೆಲವು ಕನ್ನಡ ಸಿನಿಮಾಗಳಲ್ಲಿಯೂ ನಟಿಸಿರುವ ಜೆನಿಲಿಯಾ ಡಿಸೋಜಾ ಅವರ ಈ ಇಳಕಲ್ ಸೀರೆ ಲುಕ್‌ಗೆ ಇಲ್ಲಿನ ಸಿನಿಪ್ರಿಯರೂ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. 'ರಾಜಾ ಶಿವಾಜಿ' ಚಿತ್ರದಲ್ಲಿ ಅವರು ಶಿವಾಜಿಯ ಪತ್ನಿ ಸಾಯಿಬಾಯಿ ಭೋಸ್ಲೆ ಪಾತ್ರದಲ್ಲಿದ್ದಾರೆ. ■

ಪ್ರೇಕ್ಷಕನಿಗೆ ಗಾಳ ಹಾಕುವ ಡಾನ್ಸ್ ದಾಳ

ಇಂದು ಅಂದರೆ ಏಪ್ರಿಲ್ 29ನ್ನು ವಿಶ್ವ ನೃತ್ಯ ದಿನವೆಂದು ಆಚರಿಸಲಾಗುತ್ತದೆ. ಈ ಪ್ರಯುಕ್ತ ಚಿತ್ರರಂಗದಲ್ಲಿ ಜನಪ್ರಿಯವಾಗಿರುವ ಹುಕ್ ಸ್ಟೆಪ್ ಬಗ್ಗೆ ಕನ್ನಡ ಚಿತ್ರರಂಗದಲ್ಲಿ ಸದ್ಯಕ್ಕೆ ಟ್ರೆಂಡಿಂಗ್‌ನಲ್ಲಿರುವ ಡಾನ್ಸ್ ಕೊರಿಯೋಗ್ರಾಫರ್‌ಗಳು ಲವಲvkಯೊಂದಿಗೆ ಮಾತನಾಡಿದ್ದಾರೆ.

ಕಿರಣ್ ಚಂದ್ರ
kiran.b@timesofindia.com

ಹಾಡೊಂದು ಹಿಟ್ ಆದರೆ ಪ್ರೇಕ್ಷಕನಿಗೆ ಆ ಸಿನಿಮಾ ನೋಡಲು ಚಿತ್ರಮಂದಿರಕ್ಕೆ ಬರಲು ಅದೇ ಒಳ್ಳೆಯ ಆಮಂತ್ರಣ. ಹಾಡಿನ ಜನಪ್ರಿಯತೆಯಿಂದಲೇ ಸಿನಿಮಾ ಗೆಲ್ಲುತ್ತದೆ ಎನ್ನುವುದು ಇಂದಿಗೂ ಚಾಲ್ತಿಯಲ್ಲಿರುವ ಫಾರ್ಮುಲಾ. ಇದರ ಕೆಟಲಿಸ್ಟ್ 'ಹುಕ್ ಸ್ಟೆಪ್'. ಇದು ಸಿನಿಮಾ ನೃತ್ಯ ನಿರ್ದೇಶನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ.

ವಿಶ್ವ ನೃತ್ಯ ದಿನ

ಈಗ ಒಂದಿಡೀ ಹಾಡಿಗೆ ನಾವೆಷ್ಟು ಶ್ರಮ ಹಾಕಿ ಡಾನ್ಸ್ ಮಾಡಿದ್ದೇವೆ ಎನ್ನುವುದು ಲೆಕ್ಕಕ್ಕೆ ಬರುವುದಿಲ್ಲ. ಒಂದೇ ಒಂದು ಸ್ಟೆಪ್ ರಿಜಿಸ್ಟರ್ ಆದರೆ ಸಾಕು, ಇನ್‌ಫ್ಲುಯೆನ್ಸರ್‌ಗಳು ಅದನ್ನು ವಿಡಿಯೊ ಮಾಡಿ ಶೇರ್ ಮಾಡಿದಾಗ ಅದೊಂದು ಹುಕ್ ಸ್ಟೆಪ್ ಆಗಿ ವೈರಲ್ ಆಗುತ್ತದೆ. ಅವರಿಗೆ ಅದು ಸುಲಭವಾಗಿದ್ದರೂ ನಾವು ಅಂಥ ಒಂದು ಹಾಡಿಗೆ 10ರಿಂದ 15 ಸ್ಟೆಪ್ಸ್ ಟ್ರೈ ಮಾಡಿರುತ್ತೇವೆ. ನಿರ್ಮಾಪಕರ ಬೇಡಿಕೆಗಿಂತ ನಾವೇ ಹಾಡನ್ನು ಹಿಟ್ ಮಾಡಲು ಹುಕ್ ಸ್ಟೆಪ್ ಅಳವಡಿಸಲು ಪ್ರಯತ್ನಿಸುತ್ತೇವೆ. ಕೆಲವೊಮ್ಮೆ ಡಾನ್ಸ್ ಬಾರದ ಇನ್‌ಫ್ಲುಯೆನ್ಸರ್‌ಗಳ ಸ್ಟೆಪ್ ವೈರಲ್ ಆಗಿ ಬಿಡುತ್ತದೆ. ನನಗೆ ಮೈಕಲ್ ಜಾಕ್ಸನ್, ಪ್ರಭುದೇವ ಅವರೇ ಡಾನ್ಸ್‌ಗೆ ಸ್ಫೂರ್ತಿ.

-ಭೂಷಣ್ I ನೃತ್ಯ ನಿರ್ದೇಶಕ

ಹೀರೊಗಳೇ ಇನ್‌ಫ್ಲುಯೆನ್ಸರ್‌ಗಳ ಜತೆಗೆ ಸಿನಿಮಾ ಪ್ರಚಾರ ಮಾಡುತ್ತಿರುವ ಈ ಕಾಲದಲ್ಲಿ ಹುಕ್ ಸ್ಟೆಪ್ ತುಂಬಾ ಮುಖ್ಯವಾಗುತ್ತಿದೆ. ವೈರಲ್ ಮಾಡಬೇಕೆಂದು ಮಾಡಿದರೆ ಎಲ್ಲಾ ಸ್ಟೆಪ್‌ಗಳು ಹುಕ್ ಆಗುತ್ತವೆ. ಸದ್ಯಕ್ಕೆ ಹಾಡು ಗೆದ್ದು ಅದರಿಂದ ಸಿನಿಮಾ ಗೆಲ್ಲಬೇಕಾದ ಅನಿವಾರ್ಯತೆ ಇದೆ. ನಾನು ಯಾವುದೋ ಸ್ಟೆಪ್‌ಗಳನ್ನು ವೈರಲ್ ರೀಲ್ಸ್ ಆಗಲಿ ಎಂದು ಮಾಡುವುದಿಲ್ಲ, ಹಾಡು ಬಯಸಿದ್ದನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ. ಒಬ್ಬರದ್ದು ಒಂದೊಂದು ಸ್ಟೈಲ್ ಇರುತ್ತದೆ. ನಾವು ಸಾಕಷ್ಟು ಆಪ್ಷನ್ ಟ್ರೈ ಮಾಡುತ್ತೇವೆ, ಅದರಲ್ಲೊಂದು ವೈರಲ್ ಮಾಡಬೇಕೆಂದಾಗ ಹುಕ್ ಸ್ಟೆಪ್ ಆಗುತ್ತದೆ. ರಾಜು ಸುಂದರಂ, ಪ್ರಭುದೇವ ಅವರೇ ನನ್ನ ನೃತ್ಯ ಜೀವನಕ್ಕೆ ಪ್ರೇರಣೆ.

-ಭಜರಂಗಿ ಮೋಹನ್ I ನೃತ್ಯ ನಿರ್ದೇಶಕ

ಜನರ ಮನದಲ್ಲಿ ಹಾಡು ಉಳಿಯಲು ಹುಕ್ ಸ್ಟೆಪ್ ಮುಖ್ಯ ಕಾರಣವಾಗುತ್ತದೆ. ಇದೀಗ ಟ್ರೆಂಡ್ ಆಗುತ್ತಿದ್ದರೂ ಎಷ್ಟೋ ವರ್ಷಗಳ ಹಿಂದೆಯೇ ಇದು ಚಾಲ್ತಿಯಲ್ಲಿತ್ತು. 'ಕುಲದಲ್ಲಿ ಕೀಳ್ಯಾವುದೋ' ಹಾಡಿನಲ್ಲೂ ಹುಕ್ ಸ್ಟೆಪ್ ಇತ್ತು. ಮೊದಲೆಲ್ಲಾ ಕೊರಿಯೋಗ್ರಾಫರ್‌ಗಳು ಇಂಥ ಸ್ಟೆಪ್ ಸೇರಿಸುವ ಪ್ರಯತ್ನ ಮಾಡುತ್ತಿದ್ದರು. ಈಗ ಸಿನಿಮಾ ತಂಡವೇ ಇದನ್ನು ಕೇಳುತ್ತದೆ ಮತ್ತು ಸಂಗೀತ ನಿರ್ದೇಶಕರೇ ಅಂಥದ್ದೊಂದು ಬಿಟ್ ಸೇರಿಸುತ್ತಾರೆ. ಮೊದಲೆಲ್ಲಾ ಸ್ಟೆಪ್ ರಿಪೀಟ್ ಆದರೆ ಕೇಳುತ್ತಿದ್ದರು, ಈಗ ರಿಪೀಟ್ ಮಾಡಿ ವೈರಲ್ ಮಾಡಿಸುವುದೇ ಟ್ರೆಂಡ್. ಹಿರಿಯ ನೃತ್ಯ ನಿರ್ದೇಶಕ ಉಡುಪಿ ಜಯರಾಮ್ ನನ್ನ ಡಾನ್ಸ್‌ಗೆ ಸ್ಫೂರ್ತಿ.

-ಧನಂಜಯ್ I ನೃತ್ಯ ನಿರ್ದೇಶಕ

ಪ್ರೇಕ್ಷಕರು ಎಂಜಾಯ್ ಮಾಡಲಿ ಎಂದೇ ಸಿನಿಮಾದಲ್ಲಿ ಹಾಡು, ಡ್ಯಾನ್ಸ್ ಇರುತ್ತದೆ. ಆ ಪ್ರೇಕ್ಷಕನೂ ಸುಲಭವಾಗಿ ಮಾಡಬಲ್ಲ ಡಾನ್ಸ್ ಸ್ಟೆಪ್‌ಗಳೇ ಈ ಹುಕ್ ಸ್ಟೆಪ್ಸ್. ಸಂಗೀತ ಪ್ರೇಮಿಗಳ ಮನ ಗೆಲ್ಲಿಸುವುದೇ ಇಂಥ ಸ್ಟೆಪ್ಸ್. ಇವು ವರ್ಕ್ ಆಗಲು ಹಾಡು, ಲಿರಿಕ್ಸ್ ಜತೆಗೆ ಸಿನಿಮಾ ಕಥೆ, ಹೀರೊ ಮ್ಯಾನರಿಸಂ ಕೂಡ ಮುಖ್ಯವಾಗುತ್ತದೆ. ಕಥೆಯ ಜತೆಗೆ ಹಾಡು, ಸ್ಟೆಪ್ ಬೆಸೆದುಕೊಂಡಾಗ ಅದು ಸುದೀರ್ಘ ಕಾಲದವರೆಗೂ ನೆನಪಲ್ಲಿ ಉಳಿಯುತ್ತದೆ. ಶಂಕರನಾಗ್, ವಿಷ್ಣುವರ್ಧನ್, ಅಣ್ಣಾವ್ರು, ರವಿಚಂದ್ರನ್ ಮುಂತಾದವರಿಗೆ ಅವರದ್ದೇ ಆದ ಸ್ಟೈಲ್ ಇದೆ. ಪ್ರಭುದೇವ, ರಾಜು ಸುಂದರಂ ಹಾಗೂ ನನಗೆ ನೃತ್ಯ ಕಲಿಸಿದ ಎಲ್ಲಾ ಗುರುಗಳು ನನಗೆ ಸ್ಫೂರ್ತಿ.

-ರಾಜಾ ಕಲೈ ಕುಮಾರ್ I ನೃತ್ಯ ನಿರ್ದೇಶಕ

ಚುರುಮುರಿ

ಭನ್ಸಾಲಿ ಜತೆ ಕೈ ಜೋಡಿಸಿದ ಧನುಷ್

ಬಾಲಿವುಡ್ ಜನಪ್ರಿಯ ನಿರ್ದೇಶಕ ಸಂಜಯ್ ಲೀಲಾ ಭನ್ಸಾಲಿಯ ಮುಂದಿನ ಪೌರಾಣಿಕ ಜಂಗಲ್ ಡ್ರಾಮಾ ಚಿತ್ರದಲ್ಲಿ ತಮಿಳು ಸ್ಟಾರ್ ನಟ ಧನುಷ್ ನಟಿಸಲಿದ್ದಾರೆ. ಈ ಮೂಲಕ ಬಾಲಿವುಡ್ ಮತ್ತು ಸೌತ್ ಇಂಡಸ್ಟ್ರಿಯ ಮತ್ತೊಂದು ಸಿನಿಮಾಗಾಗಿ ಈ ಜೋಡಿ ಪರಸ್ಪರ ಕೈಜೋಡಿಸಿದೆ. ಈ ಚಿತ್ರವನ್ನು ಪಿ.ಎಸ್. ಮಿತ್ರನ್ ನಿರ್ದೇಶಿಸಲಿದ್ದಾರೆ.

ಕ್ಯಾನ್ಸರ್‌ಗೆ ಆರಂಭಿಕ ಪರೀಕ್ಷೆ ಮುಖ್ಯ

2018ರಲ್ಲಿ ನಾಲ್ಕನೇ ಹಂತದ ಮೆಟಾಸ್ಟಾಟಿಕ್ ಕ್ಯಾನ್ಸರ್ ವಿರುದ್ಧ ಹೋರಾಡಿ ಗೆದ್ದಿರುವ ಬಾಲಿವುಡ್ ನಟಿ ಸೋನಾಲಿ ಬೇಂದ್ರೆ ಇತ್ತೀಚೆಗೆ ಕ್ಯಾನ್ಸರ್ ಅನ್ನು ನಾನು ಆರಂಭದ ಹಂತದಲ್ಲೇ ಪರೀಕ್ಷೆ ಮಾಡಿಸಿದ್ದರೆ ಎಲ್ಲವನ್ನೂ ಬದಲಾಯಿಸಬಹುದಿತ್ತು ಎಂದು ಹೇಳಿದ್ದಾರೆ. ಯಾವುದೇ ರೋಗ ಲಕ್ಷಣಗಳನ್ನು ನಿರ್ಲಕ್ಷಿಸದೆ ಪ್ರಾರಂಭದಲ್ಲೇ ಪರೀಕ್ಷಿಸಿ ಸೂಕ್ತ ಚಿಕಿತ್ಸೆ ಪಡೆದರೆ ಕ್ಯಾನ್ಸರ್‌ನಂತಹ ಮಾರಣಾಂತಿಕ ಕಾಯಿಲೆಯನ್ನು ದೂರವಿಡಬಹುದು ಎಂದಿದ್ದಾರೆ ಅವರು.

ಟ್ರೆಂಡ್‌ನಲ್ಲಿರುವ ಹೊಸ ಪಾನೀಯ ಉಬೆ

ಇನ್‌ಸ್ಟಾಗ್ರಾಮ್‌ನಲ್ಲಿ ಈಗ ಎಲ್ಲಿ ನೋಡಿದರೂ ಗಾಢ ನೇರಳೆ ಬಣ್ಣದ ಆಕರ್ಷಕ ಪಾನೀಯಗಳೇ ಕಾಣಸಿಗುತ್ತಿವೆ. ಉಬೆ ಎಂಬ ವಿಶಿಷ್ಟ ಗಡ್ಡೆಯಿಂದ ತಯಾರಿಸಿದ ಈ ಪಾನೀಯಗಳು ಈಗ ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿವೆ.

ಕೆಲವು ವರ್ಷಗಳಿಂದ ಆರೋಗ್ಯ ಪ್ರಿಯರ ಮೊದಲ ಆಯ್ಕೆಯಾಗಿದ್ದ ಗಾಢ ಹಸಿರು ಬಣ್ಣದ ಮಾಚಾ ಟೀಗೆ ಈಗ ಪ್ರಬಲ ಪೈಪೋಟಿ ಎದುರಾಗಿದೆ. ಇತ್ತೀಚಿನ ದಿನಗಳಲ್ಲಿ ಇನ್‌ಸ್ಟಾಗ್ರಾಮ್, ಫೇಸ್‌ಬುಕ್‌ನಲ್ಲಿ ಗಾಢ ನೇರಳೆ ಬಣ್ಣದ ಆಕರ್ಷಕ ಪಾನೀಯ ಮತ್ತು ಸಿಹಿ ತಿಂಡಿಗಳು ಕಾಣಸಿಗುತ್ತಿವೆ. ಫಿಲಿಪ್ಪೀನ್ಸ್ ಮೂಲದ ಉಬೆ ಎಂಬ ವಿಶಿಷ್ಟ ಗಡ್ಡೆಯಿಂದ ತಯಾರಿಸಿದ ನೇರಳೆ ಬಣ್ಣದ ಪಾನೀಯಗಳಿಗೆ ಆಹಾರ ಪ್ರಿಯರು ಮರುಳಾಗುತ್ತಿದ್ದಾರೆ.

ನೈಸರ್ಗಿಕ ಸಿಹಿಯ ಆಗರ ಉಬೆ: ಕೆಸುವಿನ ಗಡ್ಡೆಯಂಥ ತರಕಾರಿಯಾಗಿರುವ ಉಬೆಯನ್ನು ಫಿಲಿಪ್ಪೀನ್ಸ್‌ನಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತದೆ. ಇದರ ಒಳಗಿನ ಬಣ್ಣವು ಗಾಢ ನೇರಳೆಯಾಗಿದ್ದು, ನೋಡಲು ಸಿಹಿ ಗೆಣಸಿನಂತಿರುತ್ತದೆ. ಆದರೆ ಇದರ ರುಚಿ ಮತ್ತು ವಿನ್ಯಾಸ ವಿಭಿನ್ನವಾಗಿರುತ್ತದೆ. ಸ್ವಲ್ಪ ಮಟ್ಟಿಗೆ ವೆನಿಲ್ಲಾ ಮತ್ತು ತೆಂಗಿನಕಾಯಿಯ ಮಿಶ್ರಣದಂತೆ ಇರುವ ಉಬೆಯ ರುಚಿಯು ನೈಸರ್ಗಿಕವಾಗಿಯೇ ಸಿಹಿಯಾಗಿದೆ. ಇದು ಕೆನೆಯಂತಹ ಟೆಕ್ಸ್ಚರ್ ಹೊಂದಿರುವುದರಿಂದ ಇದನ್ನು ಲ್ಯಾಟೆ, ಐಸ್ ಕ್ರೀಮ್, ಕೇಕ್‌ಗಳಲ್ಲಿ ಹೆಚ್ಚು ಬಳಸಲಾಗುತ್ತದೆ.

ಆರೋಗ್ಯ ಗುಣ: ಮಾಚಾ ಚಹಾದಂತೆ ಉಬೆ ಕೂಡ ಆರೋಗ್ಯಕ್ಕೆ ಉತ್ತಮ ಎನ್ನಲಾಗಿದೆ. ಇದರಲ್ಲಿ ಆ್ಯಂಟಿಆಕ್ಸಿಡೆಂಟ್ಸ್ ಸಮೃದ್ಧವಾಗಿದ್ದು, ಮುಖ್ಯವಾಗಿ ಮಾಚಾ ಅಥವಾ ಕಾಫಿಯಂತೆ ಇದರಲ್ಲಿ ಕೆಫೀನ್ ಇರುವುದಿಲ್ಲ. ಸುಖ ನಿದ್ರೆಗೆ ಅಡ್ಡಿಯಾಗಬಾರದು ಎಂದು ಬಯಸುವವರು ರಾತ್ರಿ ವೇಳೆಯೂ ಉಬೆ ಪಾನೀಯ ಸವಿಯಬಹುದು. ಇದರಲ್ಲಿ ನಾರಿನಂಶ ಹೆಚ್ಚಿರುವುದರಿಂದ ಜೀರ್ಣಕ್ರಿಯೆಗೂ ಇದು ಸಹಕಾರಿ. ಈ ಉಬೆ ಪಾನೀಯ ಸೋಶಿಯಲ್ ಮೀಡಿಯಾದಲ್ಲಿ ಜನಪ್ರಿಯವಾಗಿದ್ದು, ಇದರಲ್ಲಿರುವ ನೇರಳೆ ಬಣ್ಣವೇ ಜನರಿಗೆ ಆಕರ್ಷಕವಾಗಿ ಕಂಡಿದೆ. ಈ ಬಣ್ಣ ಫೋಟೊಗಳಲ್ಲಿ ಅದ್ಭುತವಾಗಿ ಕಾಣುವುದರಿಂದ ಯುವಜನತೆ ಇದನ್ನು ಇನ್‌ಸ್ಟಾದಲ್ಲಿ ಹೆಚ್ಚಾಗಿ ಹಂಚಿಕೊಳ್ಳುತ್ತಿದ್ದಾರೆ. ಇದೇ ಕಾರಣಕ್ಕೆ ಕೆಫೆಗಳು ಈಗ ಮಾಚಾ ಬದಲು ಉಬೆ ಲ್ಯಾಟೆಗಳಿಗೆ ಹೆಚ್ಚು ಆದ್ಯತೆ ನೀಡುತ್ತಿವೆ. ■

ಹೊಸ ಟ್ರೆಂಡ್ ಮಾಚಾ ಟೀ ಪುಡಿಗೆ ಹೋಲಿಸಿದರೆ ಉಬೆ ಪುಡಿಯ ಬೆಲೆ ಸ್ವಲ್ಪ ಕಡಿಮೆ. ಹೀಗಾಗಿ ಕೆಫೆ ಮಾಲೀಕರಿಗೆ ಇದು ಲಾಭದಾಯಕವಾಗಿಯೂ ಪರಿಣಮಿಸಿದೆ. ಭಾರತದಲ್ಲಿ ಈಗ ಬೆಂಗಳೂರು, ಮುಂಬಯಿ ಮತ್ತು ದೆಹಲಿಯ ಪ್ರೀಮಿಯಂ ಕೆಫೆಗಳು ಉಬೆ ಲ್ಯಾಟೆ ಮತ್ತು ಉಬೆ ಮಿಲ್ಕ್ ಟೀಗಳು ಹೊಸ ಟ್ರೆಂಡ್ ಸೃಷ್ಟಿಸುತ್ತಿವೆ. ಮಾಚಾ ಟೀ ರುಚಿಗೆ ಪರ್ಯಾಯವಾಗಿ ಮತ್ತು ಕೆಫೀನ್ ಮುಕ್ತ ಪಾನೀಯ ಹುಡುಕುವವರಿಗೆ ಉಬೆ ಅತ್ಯುತ್ತಮವಾಗಿದೆ.

ವಿಕ ಕರುನಾಡ ಸ್ವಾದ ಫಿನಾಲೆಯ ಟಾಪ್ 10 ವಿಜೇತರಿಗೆ ಎಕ್ಸೊ ಬಹುಮಾನ

ಬೆಂಗಳೂರಿನ ರಾಜಾಜಿನಗರ ಕೆಎಲ್‌ಇ ಕಾಲೇಜ್‌ನಲ್ಲಿ ಭಾನುವಾರ ನಡೆದ ಪ್ರತಿಷ್ಠಿತ ವಿಕ ಕರುನಾಡ ಸ್ವಾದ ಅಡುಗೆ ಸ್ಪರ್ಧೆಯ ಗ್ರ್ಯಾಂಡ್ ಫಿನಾಲೆಯಲ್ಲಿ ಕರುನಾಡಿನ ಕಳೆದುಹೋಗಿರುವ ಖಾದ್ಯ ವಿಶೇಷಗಳನ್ನು ಪರಿಚಯಿಸಿದ ಟಾಪ್ 10 ಸ್ಪರ್ಧಿಗಳಿಗೆ ಎಕ್ಸೊ ವತಿಯಿಂದ ವಿಶೇಷ ಬಹುಮಾನ ನೀಡಿ ಗೌರವಿಸಲಾಯಿತು. ಅಂತಿಮ ಸುತ್ತಿನ ಈ ಸ್ಪರ್ಧೆಯಲ್ಲಿ ರಾಜ್ಯದ ಬೇರೆ ಬೇರೆ ಪ್ರದೇಶಗಳಿಂದ ಆಯ್ಕೆಯಾಗಿದ್ದ 26 ಸ್ಪರ್ಧಿಗಳ ಪೈಕಿ ಪ್ರಮುಖ ಹತ್ತು ಜನರನ್ನು ತೀರ್ಪುಗಾರರು ಆಯ್ಕೆ ಮಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.

ಬಾಗಲಕೋಟೆ ಜಿಲ್ಲೆಯ ಇಳಕಲ್ ಪಟ್ಟಣದ ಅನುಪಮಾ ಶೆಟ್ಟಿ, ಶಿವಮೊಗ್ಗ ಜಿಲ್ಲೆಯ ಸಾಗರದ ಅರ್ಚನಾ ಅನಿಲ್ ಕುರ್ಡೇಕರ್, ಬೆಳಗಾವಿ ಜಿಲ್ಲೆಯ ಗೋಕಾಕ್‌ನ ಶಿಲ್ಪಾ, ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯ ಅಂಬಿಕಾ ಭಟ್, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯ ಸುಪ್ರಿಯಾ ರೆಡ್ಡಿ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ವಿಜಯಾ ಆರ್. ನಾಯಕ, ಹಾಸನ ಜಿಲ್ಲೆಯ ಹೊಳೆನರಸೀಪುರದ ಕವಿತಾ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದ ಭಾರತಿ ಸುರೇಶ್, ಕೋಲಾರ ಜಿಲ್ಲೆಯ ಮುಳಬಾಗಿಲಿನ ಶಶಿಕಲಾ ಬಿ.ಎಸ್., ಹಾವೇರಿ ಜಿಲ್ಲೆಯ ಶಿಗ್ಗಾವಿಯ ಹರ್ಷಾ ಶೆಟ್ಟರ್ ಟಾಪ್ 10ನಲ್ಲಿ ಸ್ಥಾನ ಪಡೆದರು.

ಟಾಪ್ 10 ಸ್ಪರ್ಧಿಗಳಲ್ಲಿ ಅನುಪಮಾ ಉತ್ತರ ಕರ್ನಾಟಕದ ಕಡ್ಲೆಬೇಳೆ ಮಾದ್ಲಿ ಸಿಹಿ ಮತ್ತು ಕಟ್ ವಡಾ ತಯಾರಿಸಿ ಗಮನ ಸೆಳೆದರೆ, ಅರ್ಚನಾ ನವಣೆಯ ವೆಜಿಟೇಬಲ್ ದಮ್ ಬಿರಿಯಾನಿ, ಹಲಸಿನಹಣ್ಣಿನ ಕಡುಬು, ನುಗ್ಗೆ ಸೊಪ್ಪಿನ ಚಿಪ್ಸ್, ಶಿಲ್ಪಾ ಅವರು ಪಾಲಕ್ ರೈಸ್, ರಾಗಿ ಕೇಕ್, ಕಚೋರಿ, ಅಂಬಿಕಾ ಕುಚ್ಚಲಕ್ಕಿಯ ಖಾರ ಗಂಜಿ, ಹಲಸಿನಹಣ್ಣಿನ ಬೀಜದ ಪಾಯಸ, ಶರ್ಕರಪೇರಿ, ಸುಪ್ರಿಯಾ ಹುಳಿ ಬುತ್ತಿಯನ್ನ, ಸುಟ್ಟಿದ ಶ್ಯಾವಿಗೆ, ಘಾಟಿ ಉಂಡೆ ಪಕೋಡಾ, ವಿಜಯಾ ಅವರು ದಕ್ಷಿಣ ಕರ್ನಾಟಕದ ಪುಂಡಿ, ಕೂವೆಹುಡಿ ಬರ್ಫಿ, ಚಟ್ಟಂಬಡೆ, ಕವಿತಾ ಅನ್ನ ಮತ್ತು ಕಳಲೆ ಸಾಂಬಾರ್, ಕುಂಬಳಕಾಯಿ ಕಡುಬು, ಭಾರತಿ ಅವರು ಅನ್ನ ಮತ್ತು ಬಾಳೆದಿಂಡಿನ ಮೊಳಕೆ ಹುರುಳಿಕಾಳು, ಬೀಟ್ರೂಟ್ ಹಲ್ವಾ, ಶಶಿಕಲಾ ಅವರು ಪೊಂಗಲ್, ಸಿಹಿ ರಾಗಿ ಶ್ಯಾವಿಗೆ, ಕಡ್ಲೆ ಹಿಟ್ಟಿನ ಬೋಂಡಾ, ಹರ್ಷಾ ಕಂಚಿಕಾಯಿ ಚಿತ್ರಾನ್ನ, ಸಿಹಿಗುಂಬಳಕಾಯಿ ಗಾರಿಗೆ, ದೊಡ್ಡಪತ್ರೆ ಎಲೆಯ ಬಜ್ಜಿ ತಯಾರಿಸಿ ಸೈ ಅನಿಸಿಕೊಂಡರು.

ವರ್ಷಗಳ ಸಂಶೋಧನೆ ಮತ್ತು ಪ್ರಾಚೀನ ಆಯುರ್ವೇದ ಗ್ರಂಥ ಬಳಸಿ ಜಾಲಿ ತುಳಸಿ 51 ಡ್ರಾಪ್ಸ್ ಅನ್ನು ತಯಾರಿಸಲಾಗಿದೆ
ದೇಹವನ್ನು ನಿರ್ವಿಷಗೊಳಿಸುತ್ತದೆ ಮತ್ತು ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಸಹಾಯಮಾಡುತ್ತದೆ
ಪ್ರಾಯೋಗಿಕವಾಗಿ ಪರೀಕ್ಷಿಸಲ್ಪಟ್ಟಿದೆ
ತುಳಸಿಯ 5 ವಿಧದ ಸಾರ ಬಳಸಿ ಬಹಳ ವಿಶೇಷ ವಿಧಾನದಿಂದ ತಯಾರಿಸಲ್ಪಟ್ಟಿದೆ

- ಗ್ಯಾಸ್
- ಸುಡುವ ಸಂವೇದನೆ
- ಅಜೀರ್ಣ
- ಕರುಳಿನ ಆರೋಗ್ಯ
- ಮಲಬದ್ಧತೆ
- ಕೆಟ್ಟ ಶ್ವಾಸ
- ಮೊಡವೆಗಳು/ ಮೊಡವೆ
- ಕೂದಲು ಉದುರುವಿಕೆ
- ಬಾಯಿ ಹುಣ್ಣು
- ಗಮನ ಕೊರತೆ (ADHD)
- ಗಂಟಲು ನೋವು
- ಉಸಿರಾಟ ತೊಂದರೆ
- ಕೆಮ್ಮು
- ಅಲರ್ಜಿ
- ಚರ್ಮ ರೋಗ
- ತಲೆಸುತ್ತು
- ಜ್ಞಾಪಕ
- ದೌರ್ಬಲ್ಯ
- ಕಪ್ಪು ಕಲೆಗಳು ಮತ್ತು ಸುಕ್ಕುಗಳು
- ಮರಗಟ್ಟುವಿಕೆ
- ಕೀಲು ನೋವಿಗೆ ಸಹಕಾರಿ

JOLLY
CLINICALLY TESTED
ತುಳಸಿ 51 ಹನಿಗಳು
5-5 ಹನಿ ಬೆಳಿಗ್ಗೆ ಸಂಜೆ & ಮಕ್ಕಳು, ಹಿರಿಯರು ಮತ್ತು ಯುವಕರು
ಜಾಲಿ ತುಳಸಿ 51 ಬ್ರ್ಯಾಂಡ್‌ನ ಸದಾಶಯ ಮತ್ತು ಗ್ರಾಹಕರ ತಳಹದಿಯ ಲಾಭ ಪಡೆಯಲು ಇದೇ ರೀತಿಯ ಹೆಸರುಗಳೊಂದಿಗೆ ಇನ್ನೂ ಅನೇಕ ಎಷ್ಟೇ ಬಂದರೂ, ಮೆಡಿಕಲ್ ಸ್ಟೋರ್‌ನಿಂದ ಖರೀದಿಸುವಾಗ ತುಳಸಿ ಡ್ರಾಪ್ಸ್ ಬದಲು ಜಾಲಿ ತುಳಸಿ 51 ಡ್ರಾಪ್ಸ್ ಬಗ್ಗೆ ನಿರ್ದಿಷ್ಟವಾಗಿ ಕೇಳಿ ಪಡೆಯಿರಿ
Super Stockist.»Shri Rama Stores,Yellapur. M:98143-30500
Bagalkot: 9972840996, Bangalore: 8951490881, Chitradurga: 9742800795, Davangere: 9591346737, Gadag:9886715963, Gulbarga: 9886294310, Haveri:94486-30757, 9538226227, Hubli: 9980571313, Ilkal: 9448014145, Mangalore: 9964746647, 9845082957, 9945172643, Manipal: 9880451511, Mysore: 9243580210, Ranebennur: 9844323973, Sirsi: 9916250217, Udupi: 9449920235, 9845456115, Kolar: 94482-61087, Mysur: 9590562007, Raichur: 94485-70649, Davangere: 9880708064
ಎಲ್ಲಾ ಮೆಡಿಕಲ್ ಸ್ಟೋರ್‌ಗಳಲ್ಲಿ ಲಭ್ಯವಿದೆ ✆ 97813-30500 www.jollyorganic.com

RNI No. KARKAN/2016/71628
Vol. 11 Issue no. 118
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.

ಬಣ್ಣ ಬಣ್ಣದ ಹಣ್ಣುಗಳ ಚಿತ್ತಾರ ಒಳಗೊಂಡ ತ್ರಿಡಿ ನೇಲ್ ಆರ್ಟ್ ಬೇಸಿಗೆಯ ಟ್ರೆಂಡಿ ಲುಕ್‌ನಲ್ಲಿ ಪ್ರಮುಖ ಸ್ಥಾನ ಪಡೆದಿದೆ.

ತೊಂಬತ್ತರ ದಶಕದಲ್ಲಿ ಖ್ಯಾತವಾಗಿದ್ದ ದೊಡ್ಡ ಪೆಂಡೆಂಟ್ ಒಳಗೊಂಡ ಉದ್ದ ಸರ ಈಗ ಮತ್ತೆ ಬಂದಿದ್ದು, ಈ ವರ್ಷ ಮತ್ತಷ್ಟು ಸ್ಟೈಲಿಶ್ ಲುಕ್‌ನೊಂದಿಗೆ ಗಮನ ಸೆಳೆದಿದೆ.

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.

ದೂ: 9513747474

ಮೇಷ, ಸಿಂಹ, ತುಲಾ, ಕುಂಭ ರಾಶಿಯವರಿಗೆ ವಿಪರೀತ ಧನಾಗಮನ ಯೋಗ

ಮೇಷ: ದಾಖಲೆಗಳಿಲ್ಲದೆ ಕೇವಲ ನಂಬಿಕೆಯಿಂದ ಮಾಡಿದ ವ್ಯವಹಾರದಲ್ಲಿ ಮೋಸ ಹೋಗುವ ಸಂಭವವಿದೆ. ಬಹು ಜನರ ಒಡನಾಟದಿಂದ ಬಲ, ವಿಶ್ವಾಸ, ಪ್ರೀತಿ ಪಡೆಯಲಿದ್ದೀರಿ. **ಶುಭ ಸಂಖ್ಯೆ : 9, ಬಣ್ಣ: ನೀಲಿ**

(**ನಾಮಾಕ್ಷರ:** ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ದಿಟ್ಟತನದ ಜೊತೆಗೆ ಸ್ವಲ್ಪ ತಂತ್ರಗಾರಿಕೆ ತೋರಿದರೆ ಅಧಿಕಾರಿಗಳ ಗಮನ ಸೆಳೆಯಲು ಕಷ್ಟವಾಗದು. ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತೀರಿ. **ಶುಭ ಸಂಖ್ಯೆ : 7, ಬಣ್ಣ: ಹಳದಿ**

(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಉತ್ತಮ ಜೀವನಶೈಲಿ ಬಯಸುವವರು ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳಬೇಕಾಗುತ್ತದೆ. ನೀತಿ-ನಿರ್ಬಂಧಗಳಿಂದ ಸಮಾಜದಲ್ಲಿ ಒಂಟಿಯಾಗಿರಬೇಕಾಗುತ್ತದೆ. **ಶುಭ ಸಂಖ್ಯೆ : 4, ಬಣ್ಣ: ಕೆಂಪು**

(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಅಗಾಧ ಅನುಭವ ಮತ್ತು ಪ್ರಯತ್ನಬಲ, ಆತ್ಮವಿಶ್ವಾಸದಿಂದ ರಂಗಕಲೆಯಲ್ಲಿ ಹೆಸರು ಮಾಡುವಂತಾಗಲಿದೆ. ಉದ್ಯೋಗ ಬದಲಾವಣೆಯ ಬಗ್ಗೆ ತೀರ್ಮಾನಿಸಬೇಡಿ. ಪತ್ರ ವ್ಯವಹಾರದಲ್ಲಿ ಅನುಕೂಲವಾಗಲಿದೆ. **ಶುಭ ಸಂಖ್ಯೆ : 2, ಬಣ್ಣ: ಹಸಿರು**

(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ವ್ಯವಹಾರಕ್ಕೆ ಸಂಬಂಧಿಸಿದಂತೆ ಪಾಲುದಾರರೊಂದಿಗೆ ಚರ್ಚೆ ನಡೆಸಬೇಕಾದ ಪರಿಸ್ಥಿತಿ ಇದೆ. ದೀರ್ಘಕಾಲದ ಯೋಜನೆಗಳು ಮತ್ತೆ ಚಾಲನೆಗೊಳ್ಳಲಿವೆ. **ಶುಭ ಸಂಖ್ಯೆ : 1, ಬಣ್ಣ: ಬಿಳಿ**

(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಖರ್ಚಿಗೆ ಅನೇಕ ಹೊಸ ದಾರಿಗಳು ಹುಟ್ಟಿಕೊಳ್ಳುವುದರಿಂದ ಅನಗತ್ಯ ಖರೀದಿ ಬೇಡ. ಮನೆ ಬದಲಾವಣೆಯ ಯೋಚನೆಯಲ್ಲಿ ಇರುವವರಿಗೆ ಉತ್ತಮ ಸ್ಥಳ ಪ್ರಾಪ್ತಿಯಾಗಲಿದೆ. **ಶುಭ ಸಂಖ್ಯೆ : 8, ಬಣ್ಣ: ಗುಲಾಬಿ**

(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ಕಾರ್ಯರಂಗದಲ್ಲಿ ಪರಿವರ್ತನೆ ಕಂಡು ಬರುವುದರಿಂದ ದುಡುಕದೆ ಕೆಲವೊಂದು ವಿಚಾರಗಳ ಬಗ್ಗೆ ಆಲೋಚಿಸಿ. ನಿಮ್ಮ ಕ್ರಿಯಾತ್ಮಕ ರಾಜಕೀಯ ಭವಿಷ್ಯಕ್ಕೆ ಮೋಡ ಕವಿದಂತೆ ಆಗುತ್ತದೆ. **ಶುಭ ಸಂಖ್ಯೆ : 3, ಬಣ್ಣ: ಕೇಸರಿ**

(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಸಮರ್ಥವಾಗಿ ಯೋಜನೆಗಳನ್ನು ಪೂರ್ಣಗೊಳಿಸುವಿರಿ. ಹಣಕಾಸಿನ ವಿಚಾರದಲ್ಲಿ ಮುಂಜಾಗ್ರತೆ ತೆಗೆದುಕೊಳ್ಳಿ. ಸಿಬ್ಬಂದಿಯೊಂದಿಗಿನ ಮುಕ್ತ ಮಾತುಕತೆ ಕಾರ್ಯಾನುಕೂಲ ಉಂಟು ಮಾಡಲಿದೆ. **ಶುಭ ಸಂಖ್ಯೆ : 5, ಬಣ್ಣ: ಕಪ್ಪು**

(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಪದವೀಧರರಿಗೆ ಉದ್ಯೋಗ ಅನ್ವೇಷಣೆಯಲ್ಲಿ ಹೊಸ ಬೆಳವಣಿಗೆ ಕಂಡುಬರಲಿದೆ. ವೃತ್ತಿಯಲ್ಲಿ ಉನ್ನತಿ ತೋರಿಬಂದರೂ ವಿಘ್ನ ಭೀತಿ ಇರುತ್ತದೆ. ನಕಾರಾತ್ಮಕ ಭಾವನೆಯಿಂದ ಹೊರಬನ್ನಿ. **ಶುಭ ಸಂಖ್ಯೆ : 6, ಬಣ್ಣ: ಬೂದು**

(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ಸರಕಾರಿ ಕಚೇರಿಗಳಲ್ಲಿ ಈಗಾಗಲೇ ಆರಂಭಿಸಿರುವ ಕೆಲಸಗಳು ಯಶಸ್ಸಿನೊಂದಿಗೆ ಪೂರ್ಣಗೊಳ್ಳಲಿವೆ. ಶುಭ ಕಾರ್ಯಗಳಿಗೆ ಹಣ ವಿನಿಯೋಗವಾಗುವುದು. ಏಜೆನ್ಸಿ ನಡೆಸುವವರಿಗೆ ಬೇಡಿಕೆ ಹೆಚ್ಚಲಿದೆ. **ಶುಭ ಸಂಖ್ಯೆ : 7, ಬಣ್ಣ: ಕಂದು**

(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಸಂದಿಗ್ಧ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅವಲೋಕಿಸಿ. ಇಷ್ಟ ದೇವರನ್ನು ಪ್ರಾರ್ಥಿಸಿ. ಮಗಳ ಮದುವೆಯ ವಿಚಾರದಲ್ಲಿ ಇಡುವ ಹೆಜ್ಜೆ ಬಹಳ ಪ್ರಮುಖವಾದುದು. **ಶುಭ ಸಂಖ್ಯೆ : 1, ಬಣ್ಣ: ಕಿತ್ತಳೆ**

(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಮುಂದಿನ ಜೀವನದ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಎದುರಾಗಲಿದೆ. ತಂತ್ರಜ್ಞಾನ ಬಳಕೆಯಿಂದ ಕೆಲಸದಲ್ಲಿ ಬಹಳಷ್ಟು ಪ್ರಗತಿ ಕಾಣುವಿರಿ. **ಶುಭ ಸಂಖ್ಯೆ : 2, ಬಣ್ಣ: ಆಕಾಶ ನೀಲಿ**

(ದಿ,ದು,ಖ,ಝ,ಥ,ದೆ,ದೊ,ಚ,ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಬೇಸಿಗೆ ರಜೆ ಸಾರ್ಥಕತೆಗೆ ಸಪ್ತ ಸೂತ್ರ

ಮಕ್ಕಳು ತಮ್ಮ ಬೇಸಿಗೆ ರಜೆಯನ್ನು ಖುಷಿಯಿಂದ ಕಳೆಯಬೇಕು ಅಂದರೆ ಏನೆಲ್ಲ ಮಾಡಬಹುದು ಎಂಬ ವಿವರ ಇಲ್ಲಿದೆ.

ವಿಮಲಾರುಣ ಪಡ್ಡಂಬೈಲು
feedbacklvk@vijaykarnataka.com

ಬೇಸಿಗೆ ರಜೆ ಎನ್ನುವುದು ಮಕ್ಕಳ ಪಾಲಿನ ಸಂತಸದ ಕ್ಷಣ. ಬೆಳಗ್ಗೆ ಬೇಗ ಏಳುವ ಕಡ್ಡಾಯವಿಲ್ಲ, ಬ್ಯಾಗ್ ಹೊರುವ ಭಾರವಿಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ಈ ಸಂತೋಷದ ಕ್ಷಣಗಳಿಗೂ ಸ್ಪರ್ಧಾತ್ಮಕ ಮನೋಭಾವ ಮತ್ತು ನಿರೀಕ್ಷೆಗಳ ಒತ್ತಡ ಹೆಚ್ಚುತ್ತಿದೆ. ಪೋಷಕರು ತಮ್ಮ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುವ ಹಂಬಲದಲ್ಲಿ ಮಕ್ಕಳನ್ನು ಬೇಸಿಗೆ ಶಿಬಿರಗಳಿಗೆ ಸೇರಿಸುತ್ತಾರೆ. ಮಕ್ಕಳಿಗೆ ವಿವಿಧ ಕೌಶಲಗಳನ್ನು ಕಲಿಸುವುದು ಒಳ್ಳೆಯದು. ಶಿಬಿರಗಳು ವ್ಯರ್ಥವೆಂದಲ್ಲ; ಆದರೆ ಅವು ಮಕ್ಕಳ ಆಸಕ್ತಿ, ವಯಸ್ಸು, ಸಾಮರ್ಥ್ಯಗಳಿಗೆ ಅನುಗುಣವಾಗಿರಬೇಕು. ರಜೆ ಎಂದರೆ ಮಗು ಸ್ವತಂತ್ರವಾಗಿ ಯೋಚಿಸಿ, ಅನುಭವಿಸಿ, ಅನ್ವೇಷಿಸಲು ಅವಕಾಶ ದೊರೆಯುವ ಸಮಯವಾಗಬೇಕು. ಹೀಗಾಗಿ ಮಕ್ಕಳ ವಿಕಾಸಕ್ಕೆ ಪೂರಕ ಚಟುವಟಿಕೆಗಳನ್ನು ರೂಪಿಸಿ.

1 ಒತ್ತಡವಿಲ್ಲದ ಕಲಿಕೆ: ಪಠ್ಯದ ಹೊರೆ ಗಿಂತ ಪಠ್ಯೇತರ ಚಟುವಟಿಕೆಗೆ ಆದ್ಯತೆ ಇರಲಿ. ಮನೆಯ ಸಣ್ಣ ಪುಟ್ಟ ಕೆಲಸಗಳಲ್ಲಿ ಮಕ್ಕಳನ್ನು ತೊಡಗಿಸುವುದರಿಂದ ಅವರು ಜವಾಬ್ದಾರಿ ಕಲಿಯುತ್ತಾರೆ. ಅವರ ಇಷ್ಟದ ಹವ್ಯಾಸವನ್ನು ಬೆಳೆಯಲು ಪೂರಕ ವಾತಾವರಣ ಇರಲಿ.

2 ಮಣ್ಣಿನ ನಂಟು ಬೆಳೆಸಿ: ಮಣ್ಣಿನ ಸ್ಪರ್ಶ ಮತ್ತು ಪ್ರಕೃತಿಯ ಮೇಲಿನ ಅವಲಂಬನೆಯನ್ನು ಮಕ್ಕಳು ನೇರವಾಗಿ ಅನುಭವಿಸಲಿ. ಇದು ಅವರನ್ನು ಸಾಮಾಜಿಕ ಜಾಲತಾಣಗಳ ವ್ಯಸನದಿಂದ ದೂರವಿರಿಸುತ್ತದೆ. ಹೊಲದಲ್ಲಿ ಕೆಲಸ ಮಾಡುವ ಅನುಭವ, ಮಣ್ಣಿನ ಸ್ಪರ್ಶ, ಬೀಜ ಬಿತ್ತುವುದು, ಸಸಿಗಳಿಗೆ ನೀರು ಹಾಕುವುದು ಇವೆಲ್ಲ ಮಕ್ಕಳಿಗೆ ಹೊಸ ಅನುಭವ ನೀಡುತ್ತವೆ. ತಾನೆ ಬಿತ್ತಿದ ಬೀಜ ಮೊಳೆಯುವುದನ್ನು ನೋಡುವ ಸಂತೋಷವು ಅವರ ಮನಸ್ಸಿನಲ್ಲಿ ಆಳವಾದ ಪ್ರಭಾವ ಬೀರುತ್ತದೆ. ಮಕ್ಕಳಿಗೆ ಕೃಷಿಕರ ಬದುಕಿನ ಸವಾಲುಗಳು, ಶ್ರಮ, ಸಹನೆ, ಪ್ರಕೃತಿಯ ಮೇಲಿನ ಅವಲಂಬನೆ ಇತ್ಯಾದಿಗಳ ಅರಿವು ಮೂಡುತ್ತದೆ.

ರಜೆ ಮೋಜು

3 ಸಂಬಂಧಗಳ ಬೆಸುಗೆ: ಮಕ್ಕಳನ್ನು ಬಂಧುಗಳ ಮನೆಗೆ ಅಥವಾ ಕೌಟುಂಬಿಕ ಕಾರ್ಯಕ್ರಮಗಳಿಗೆ ಕರೆದೊಯ್ಯಿರಿ. ಹಿರಿಯರೊಂದಿಗೆ ಬೆರೆಯುವುದು, ಹೊಂದಾಣಿಕೆ ಮತ್ತು ಸಂಸ್ಕಾರಗಳನ್ನು ಕಲಿಯಲು ಇದು ಉತ್ತಮ ವೇದಿಕೆ. ಇದು ಅವರ ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುತ್ತದೆ. ದೊಡ್ಡವರೊಂದಿಗೆ ಮಾತನಾಡುವುದು, ಅವರ ಅನುಭವಗಳನ್ನು ಕೇಳುವುದು, ಸಹೋದರ-ಸಹೋದರಿಯರೊಂದಿಗೆ ಸಮಯ ಕಳೆಯುವ ಮೂಲಕ ಸಾಮಾಜಿಕ ಕೌಶಲಗಳು ಬೆಳೆಯುತ್ತವೆ. ಪೋಷಕರ ನೆರಳಿನಿಂದ ಸ್ವಲ್ಪ ದೂರ ಹೋಗಿ ಬಂಧುಗಳ ನಡುವೆ ಕಾಲ ಕಳೆಯುವ ಮಕ್ಕಳು ಸ್ವತಂತ್ರವಾಗಿ ಯೋಚಿಸುವ ಹಾಗೂ ಸಣ್ಣಸಣ್ಣ ನಿರ್ಧಾರಗಳನ್ನು ಸ್ವತಃ ತೆಗೆದುಕೊಳ್ಳುವ ಗುಣವನ್ನು ಬೆಳೆಸಿಕೊಳ್ಳುತ್ತಾರೆ. ಇದು ಅವರ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದರ ಜೊತೆಗೆ ಆತ್ಮವಿಶ್ವಾಸವನ್ನು ಕೂಡ ವೃದ್ಧಿಸುತ್ತದೆ.

4 ಪ್ರವಾಸ ತಾಣಗಳಿಗೆ ಭೇಟಿ: ಪ್ರವಾಸಗಳು ಮಕ್ಕಳ ಮಾನಸಿಕ ಬೆಳವಣಿಗೆಗೆ ಪೂರಕ. ಹೊಸ ಸ್ಥಳಗಳಲ್ಲಿ ಪಡೆಯುವ ಅನುಭವಗಳು, ವಿವಿಧ ಸಂಸ್ಕೃತಿಗಳನ್ನು ಅರಿಯುವುದು ಅವರ ಜ್ಞಾನದ ವಿಸ್ತಾರಕ್ಕೆ ಕಾರಣ. ಪ್ರಕೃತಿ ಸೌಂದರ್ಯ, ಐತಿಹಾಸಿಕ ಸ್ಥಳಗಳು, ವೈಜ್ಞಾನಿಕ ಕೇಂದ್ರಗಳು, ಮ್ಯೂಸಿಯಂ ಭೇಟಿ ಪಾಠಪುಸ್ತಕಗಳಲ್ಲಿ ಓದಿದ ವಿಷಯಗಳು ನೈಜ ಅನುಭವವಾಗಿ ರೂಪುಗೊಳ್ಳುತ್ತವೆ.

5 ಲೋಕಜ್ಞಾನದ ಪರಿಚಯ: ಬ್ಯಾಂಕ್, ಪಂಚಾಯಿತಿ ಕಚೇರಿ, ನ್ಯಾಯಾಲಯ ಅಥವಾ ಮಾರುಕಟ್ಟೆಗಳಿಗೆ ಕರೆದೊಯ್ಯಿರಿ. ಸಮಾಜದ ವ್ಯವಸ್ಥೆ ಹೇಗೆ ಕೆಲಸ ಮಾಡುತ್ತದೆ ಎಂಬ ಪ್ರಾಯೋಗಿಕ ಅರಿವು ಪುಸ್ತಕದ ಜ್ಞಾನಕ್ಕಿಂತ ಹೆಚ್ಚು ಪರಿಣಾಮಕಾರಿ.

6 ಡಿಜಿಟಲ್ ಲೋಕದಿಂದ ಮೈದಾನದತ್ತ: ಮೊಬೈಲ್, ಟಿವಿ ಸಮಯವನ್ನು ಕಡಿಮೆ ಮಾಡಿ ಹೊರಾಂಗಣ ಆಟಗಳಿಗೆ ಪ್ರೋತ್ಸಾಹಿಸಿ. ಆಟೋಟಗಳು ದೈಹಿಕ ಆರೋಗ್ಯದ ಜೊತೆಗೆ ನಾಯಕತ್ವದ ಗುಣ ಮತ್ತು ಸೋಲನ್ನು ಗೆಲುವಿನಷ್ಟೇ ಸಹಜವಾಗಿ ಸ್ವೀಕರಿಸುವ ಮನೋಭಾವ ಬೆಳೆಸುತ್ತವೆ.

7 ಜ್ಞಾನದ ರಹದಾರಿ: ಬಿಡುವಿನ ಸಮಯದಲ್ಲಿ ಕಥೆ ಪುಸ್ತಕ ಓದುವ ಹವ್ಯಾಸವನ್ನು ಬೆಳೆಸುವುದು ಅತ್ಯಂತ ಅಗತ್ಯ. ಪೌರಾಣಿಕ ಕಥೆಗಳು, ಜನಪದ ಕಥೆಗಳು, ಪ್ರೇರಣಾದಾಯಕ ಜೀವನ ಚರಿತ್ರೆಗಳು, ವಿಜ್ಞಾನಾಧಾರಿತ ಕಥೆಗಳು ಮಕ್ಕಳ ಜ್ಞಾನವನ್ನು ವಿಸ್ತರಿಸುತ್ತವೆ. ಕಥೆ ಹೇಳುವ ಹವ್ಯಾಸವನ್ನು ಬೆಳೆಸುವುದು ಬಹುಮುಖ್ಯ. ಇದು ಮಕ್ಕಳ ಭಾಷಾ ಕೌಶಲವನ್ನು ಹೆಚ್ಚಿಸುವುದು ಮಾತ್ರವಲ್ಲ, ಕಲ್ಪನಾಶಕ್ತಿಯ ವಿಸ್ತಾರಕ್ಕೂ ಕಾರಣವಾಗುತ್ತದೆ. ಅಜ್ಜ-ಅಜ್ಜಿ ಹೇಳುವ ಕಥೆಗಳು ಮಕ್ಕಳ ಮನಸ್ಸಿಗೆ ಮೌಲ್ಯಗಳನ್ನು ಬಿತ್ತುತ್ತವೆ. ಓದಿನ ಮೂಲಕ ಭಾಷಾ ಸಾಮರ್ಥ್ಯ ವೃದ್ಧಿಯಾಗುತ್ತದೆ. ■

ಸಮ್ಮರ್‌ಗೆ ಐಸ್ ಆ್ಯಪಲ್ ರುಚಿ

ಪ್ರಕೃತಿ ನೀಡಿರುವ ಅದ್ಭುತ ಕೊಡುಗೆ ಐಸ್ ಆ್ಯಪಲ್ ಅಂದರೆ ತಾಟಿನಿಂಗು ಬೇಸಿಗೆಯ ಬಿಸಿಲಿಗೆ ಬಹಳ ತಂಪು ಮತ್ತು ಔಷಧೀಯ ಗುಣವಿರುವ ಹಣ್ಣು.

ಮನೆ ಮನೆಯಲ್ಲೂ ಐಸ್ ಆ್ಯಪಲ್ ಶರ್ಬತ್, ಪಾಯಸ, ಸಲಾಡ್...

ಬಿಸಿಲು ಹೆಚ್ಚಾದಂತೆ ದೇಹಕ್ಕೆ ತಂಪು ನೀಡುವ ಆಹಾರಗಳಲ್ಲಿ ತಕ್ಷಣಕ್ಕೆ ಎಳನೀರು, ಕಲ್ಲಂಗಡಿ ನೆನಪಾಗುತ್ತದೆ. ಆದರೆ ಭಾರತದ ಕರಾವಳಿ ತೀರಗಳಲ್ಲಿ ಹೇರಳವಾಗಿ ಸಿಗುವ ಆದರೆ ಅಷ್ಟಾಗಿ ಪ್ರಚಾರ ಪಡೆಯದ ಅದ್ಭುತ ಹಣ್ಣೆಂದರೆ ಅದು ಐಸ್ ಆ್ಯಪಲ್. ಕನ್ನಡದಲ್ಲಿ ತಾಳೆಹಣ್ಣು ಅಥವಾ ತಾಟಿನಿಂಗು, ತುಳುವಿನಲ್ಲಿ ಇರೋಲ್, ಹಿಂದಿಯಲ್ಲಿ ತಡ್ಗೋಲಾ, ತಮಿಳಿನಲ್ಲಿ ನುಂಗು, ತೆಲುಗಿನಲ್ಲಿ ಮುಂಜಾಲು ಎಂದು ಕರೆಯಲಾಗುವ ಐಸ್ ಆ್ಯಪಲ್ ನೋಡಲು ಬಿಳಿ ಜೆಲ್ಲಿಯಂತೆ, ಎಳನೀರಿನ ತಿರುಳಿನಂತೆ ಕಾಣುತ್ತದೆ. ಈ ಹಣ್ಣು ಬೇಸಿಗೆಯ ಬಾಯಾರಿಕೆ ತಣಿಸುವುದು ಮಾತ್ರವಲ್ಲದೆ, ದೈಹಿಕ ಆರೋಗ್ಯಕ್ಕೆ ಉತ್ತಮವಾಗಿದೆ.

ಪೋಷಕಾಂಶಗಳ ಆಗರ: ತಾಟಿನಿಂಗು ಹಣ್ಣಿನಲ್ಲಿ ಶೇ.80-90ರಷ್ಟು ನೀರಿನಂಶವಿದೆ. ಇದು ಕೇವಲ ಬಾಯಾರಿಕೆ ನೀಗಿಸುವುದಲ್ಲದೆ, ಬಿಸಿಲಿನಿಂದಾಗಿ ದೇಹ ಕಳೆದುಕೊಳ್ಳುವ ಎಲೆಕ್ಟ್ರೋಲೈಟ್‌ಗಳನ್ನು ಮರುಪೂರಣ ಮಾಡುತ್ತದೆ. ಇದು ಪ್ಯಾಕ್ ಮಾಡಿದ ಜ್ಯೂಸ್‌ಗಳಿಗಿಂತ ನೈಸರ್ಗಿಕ ಮತ್ತು ಆರೋಗ್ಯಕರ. ಆಯುರ್ವೇದದ ಪ್ರಕಾರ, ತಾಟಿನಿಂಗು ಶೀತಲ ಗುಣ ಹೊಂದಿದ್ದು, ದೇಹದೊಳಗಿನ ಶಾಖ ಅಂದರೆ ಪಿತ್ತವನ್ನು ಕಡಿಮೆ ಮಾಡುತ್ತದೆ. ಬೇಸಿಗೆಯಲ್ಲಿ ಕಾಡುವ ಬೆವರುಸಾಲೆ, ಹೊಟ್ಟೆ ಉರಿ, ಬಿಸಿಲಿನ ತಲೆನೋವನ್ನು ತಡೆಯಲು ಇದು ರಾಮಬಾಣ. ಇದರಲ್ಲಿ ವಿಟಮಿನ್ ಎ, ಸಿ, ಇ, ಕೆ ಮತ್ತು ಬಿ ಕಾಂಪ್ಲೆಕ್ಸ್ ಹೇರಳವಾಗಿವೆ.

ಆರೋಗ್ಯಕ್ಕೆ ಪೂರಕ: ಪೊಟ್ಯಾಷಿಯಂ, ಕಬ್ಬಿಣ, ಸತು, ರಂಜಕದಂತಹ ಖನಿಜಾಂಶಗಳಿರುವ ಐಸ್ ಆ್ಯಪಲ್ ಕಡಿಮೆ ಕ್ಯಾಲೊರಿ ಹೊಂದಿದ್ದು, ಸಾಕಷ್ಟು ಪೋಷಕಾಂಶಗಳಿಂದ ಕೂಡಿದೆ. ಹೊಟ್ಟೆಗೆ ತುಂಬಾ ಮೃದುವಾಗಿರುವ ಇದು ಮಲಬದ್ಧತೆ, ಅಸಿಡಿಟಿ, ವಾಕರಿಕೆಯಂತಹ ಸಮಸ್ಯೆಗಳನ್ನು ನಿವಾರಿಸಲು ಸಹಾಯ ಮಾಡುತ್ತದೆ. ಗರ್ಭಿಣಿಯರಿಗೂ ಇದು ಸುರಕ್ಷಿತವಾಗಿದ್ದು, ಜೀರ್ಣಕ್ರಿಯೆಯ ತೊಂದರೆಗಳನ್ನು ಕಡಿಮೆ ಮಾಡುತ್ತದೆ. ಇದರಲ್ಲಿರುವ ಆ್ಯಂಟಿ ಆಕ್ಸಿಡಂಟ್ಸ್ ಮತ್ತು ನೀರಿನಂಶವು ತ್ವಚೆಯನ್ನು ಹೈಡ್ರೇಟ್ ಆಗಿಡಲು ಮತ್ತು ನೈಸರ್ಗಿಕ ಹೊಳಪನ್ನು ನೀಡಲು ಸಹಾಯ ಮಾಡುತ್ತದೆ. ಬಿಸಿಲಿನಿಂದ ಉಂಟಾಗುವ ಚರ್ಮದ ಕಿರಿಕಿರಿಯನ್ನು ಇದು ಕಡಿಮೆ ಮಾಡುತ್ತದೆ.

ಜನಪ್ರಿಯ ತಾಟಿನಿಂಗು ರೆಸಿಪಿ: ಈ ಹಣ್ಣಿನಿಂದ ಮಾಡಿದ ಶರ್ಬತ್, ಪಾಯಸ, ಸಲಾಡ್‌ನಂಥ ರೆಸಿಪಿಗಳ ಪೋಸ್ಟ್‌ಗಳು ಸದ್ಯಕ್ಕೆ ಸೋಶಿಯಲ್ ಮೀಡಿಯಾದಲ್ಲಿ ಹೆಚ್ಚು ಗಮನ ಸೆಳೆಯುತ್ತಿವೆ. ಇದನ್ನು ಬಲು ಸುಲಭವಾಗಿ ಮಾಡಬಹುದು.

ಸೀಸನಲ್ ಫ್ರೂಟ್

ಶರ್ಬತ್: 4ರಿಂದ 6 ತಾಟಿನಿಂಗು ತುಂಡು, ತಣ್ಣನೆಯ ನೀರು ಅಥವಾ ಎಳನೀರು, ಸಕ್ಕರೆ ಅಥವಾ ಜೇನುತುಪ್ಪ, ಸ್ವಲ್ಪ ಬ್ಲ್ಯಾಕ್ ಸಾಲ್ಟ್, ಪುದೀನ ಎಲೆಗಳೊಂದಿಗೆ ತಯಾರಿಸುವ ತಾಟಿನಿಂಗು ಶರ್ಬತ್ ಬೇಸಿಗೆಗೆ ಉತ್ತಮ ಆಯ್ಕೆ.

ಪಾಯಸ: ಸಣ್ಣಗೆ ಹೆಚ್ಚಿದ 4 ತಾಟಿನಿಂಗು, ಗಟ್ಟಿ ಹಾಲು, ಸಕ್ಕರೆ, ಬಾದಾಮಿ, ಏಲಕ್ಕಿ, ಕೇಸರಿಯಿಂದ ತಯಾರಿಸುವ ತಾಟಿನಿಂಗು ಪಾಯಸ ನಾಲಗೆ ರುಚಿಯ ಜತೆ ಹೊಟ್ಟೆಯನ್ನು ತಂಪಾಗಿರಿಸುತ್ತದೆ.

ಸಲಾಡ್: ಚಿಕ್ಕದಾಗಿ ಹೆಚ್ಚಿದ ಐಸ್ ಆ್ಯಪಲ್ 3, ಸೌತೆಕಾಯಿ, ತೆಂಗಿನ ಹಾಲು, ಸ್ಪ್ರಿಂಗ್ ಆನಿಯನ್, ಹಸಿ ಮೆಣಸಿನಕಾಯಿ, ಶುಂಠಿ, ನಿಂಬೆ ರಸ, ಚಾಟ್ ಮಸಾಲ, ಬೆಲ್ಲದ ಪುಡಿ, ದಾಳಿಂಬೆ, ತಾಜಾ ಪುದೀನ ಎಲೆಗಳಿಂದ ತಯಾರಿಸುವ ತಾಟಿನಿಂಗು ಸಲಾಡ್ ಸಮ್ಮರ್‌ಗೆ ಬೆಸ್ಟ್. ■

- ತಾಟಿನಿಂಗು ಹಣ್ಣು ಕೇವಲ ಏಪ್ರಿಲ್‌ನಿಂದ ಜೂನ್‌ವರೆಗೆ ಸಿಗುತ್ತದೆ.
- ತುಂಬಾ ಎಳೆಯದು ಮತ್ತು ಮೃದು ಹಣ್ಣುಗಳನ್ನು ಆರಿಸಿ.
- ಬಲಿತ ಹಣ್ಣನ್ನು ಜೀರ್ಣಿಸಿಕೊಳ್ಳಲು ಕಷ್ಟವಾಗಬಹುದು.
- ಈ ಹಣ್ಣನ್ನು ತಾಜಾ ಆಗಿದ್ದಾಗಲೇ ಸೇವಿಸಿ.
- ಹೆಚ್ಚು ದಿನ ಇಟ್ಟರೆ ಹುಳಿ ಅಥವಾ ಗಟ್ಟಿಯಾಗಬಹುದು.
- ಹಣ್ಣಿನ ಮೇಲಿರುವ ತಿಳಿ ಕಂದು ಬಣ್ಣದ ಸಿಪ್ಪೆಯನ್ನು ಸುಲಿದು ತಿನ್ನಬೇಕು.
- ಕೆಲವರಿಗೆ ಆ ಸಿಪ್ಪೆ ರುಚಿಸುವುದಿಲ್ಲ. ಆದರೆ ಅದರಲ್ಲಿಯೂ ಪೋಷಕಾಂಶಗಳಿರುತ್ತವೆ.

ಬಿಸಿಲಿಗೆ ಹಿತ ಟ್ರೆಂಡಿ ಟೋಪಿ

ಭಾರತಿ ಎ ಕೊಪ್ಪ
feedbacklvk@vijaykarnataka.com

ಬೇಸಿಗೆಗೆ ತಂಪು ನೀಡುವುದರ ಜತೆ ಸ್ಟೈಲಿಶ್ ಲುಕ್ ನೀಡುವ ವೈವಿಧ್ಯಮಯ ಟೋಪಿಗಳು ಟ್ರೆಂಡಿಂಗ್‌ನಲ್ಲಿವೆ. ಅಲಂಕಾರಿಕ ಟೋಪಿಗಳು ಹೆಚ್ಚಾಗಿ ಯುವತಿಯರನ್ನು ಸೆಳೆಯುತ್ತವೆ. ಈ ಟೋಪಿಗಳಲ್ಲಿ ರಿಬ್ಬನ್‌ಗಳು, ಬಿಲ್ಲುಗಳು, ಗರಿಗಳು, ಹೂವುಗಳು ಅಥವಾ ಇತರ ಅಲಂಕಾರಗಳು ಸೇರಿವೆ. ಫ್ಯಾಷನ್ ಟೋಪಿಗಳು ತಲೆಯ ಮುಂಭಾಗದಲ್ಲಿ ಧರಿಸಿರುವ ಸಣ್ಣ ಟೋಪಿಗಳನ್ನು ಸಹ ಒಳಗೊಂಡಿರುತ್ತವೆ. ಇವನ್ನು ಫ್ಯಾಸಿನೇಟರ್‌ಗಳು ಎಂದೂ ಕರೆಯುತ್ತಾರೆ. ಇಂದು ಹೆಚ್ಚಿನ ಮಹಿಳೆಯರು ಬೇಸ್‌ಬಾಲ್ ಶೈಲಿಯ ಕ್ಯಾಪ್‌ಗಳು ಮತ್ತು ಟೋಪಿಗಳನ್ನು ಧರಿಸುತ್ತಿದ್ದಾರೆ.

ಸಮ್ಮರ್ ಲುಕ್

ಟೋಪಿಯ ಆಯ್ಕೆ

ಸೂರ್ಯನ ತಾಪಮಾನದಿಂದ ರಕ್ಷಣೆ ಜತೆಗೆ ಸ್ಟೈಲಿಶ್ ಲುಕ್ ಪಡೆಯಲು ವಿಭಿನ್ನ ಬಗೆಯ ಟೋಪಿಗಳನ್ನು ಹುಡುಗಿಯರು ಧರಿಸಲು ಇದು ಸಕಾಲ. ಆದರೆ ಈ ಟೋಪಿಗಳು ಮನಸ್ಸಿಗೆ ಖುಷಿಯಾಗಿರಬೇಕು, ದೇಹಕ್ಕೆ ಹಿತವಾಗಬೇಕು. ಫ್ಯಾಷನಬಲ್ ಅನಿಸಬೇಕು. ಹುಲ್ಲಿನಿಂದ ಮಾಡಿದ ಹಾಗೂ ಡೆನಿಮ್‌ನಿಂದ ಸಿಂಗಾರಗೊಂಡ ಟೋಪಿ ಆಯ್ಕೆ ಒಳ್ಳೆಯದು. ಅತಿ ಗಾತ್ರದ ಟೋಪಿಗಳು ಮುಖಕ್ಕೆ ದೊಡ್ಡದಾಗಿ ಕಂಡರೂ ಟೋಪಿಯೇ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರುಗು ನೀಡುತ್ತದೆ. ಕೇವಲ ಫ್ಯಾಷನ್ ಅಥವಾ ಕೆಲವೇ ಸಮಯಕ್ಕೆ ಅಂತಾದರೆ ಮಣಿ, ಲೇಸುಗಳಿಂದ ಅಲಂಕೃತವಾದ ಟೋಪಿಗಳನ್ನು ಟ್ರೈ ಮಾಡಿ. ಸೂರ್ಯನ ಬಿಸಿಲಿನಿಂದ ರಕ್ಷಣೆಗೆ ಬಟ್ಟೆ ಇರುವ ಕನಿಷ್ಠ 30ರ ನೇರಳಾತೀತ ಸಂರಕ್ಷಣಾ ಅಂಶ ಹೊಂದಿರುವ ಟೋಪಿಗಳನ್ನು ಆರಿಸಿಕೊಳ್ಳುವುದು ಉತ್ತಮ. ತಲೆಯ ಸುತ್ತಲೂ ಸಂಪೂರ್ಣವಾಗಿ ಸುತ್ತುವ ಅಂಚುಗಳನ್ನು ಹೊಂದಿರುವ ಟೋಪಿಗಳು ರಕ್ಷಣಾತ್ಮಕವಾಗಿರುತ್ತವೆ. ಟೋಪಿಗಳ ಹೊಂದಾಣಿಕೆ ಮತ್ತು ಗಾಳಿಯಾಡುವಿಕೆಯನ್ನು ಪರೀಕ್ಷಿಸಿ ಖರೀದಿಸಬೇಕು. ಟೋಪಿಯು ರಕ್ಷಣಾತ್ಮಕ ಅಂಚನ್ನು ಹೊಂದಿರಬೇಕು. ಹಣೆಯ ಮಧ್ಯದಲ್ಲಿ, ಹುಬ್ಬುಗಳ ಮೇಲೆ ಆರಾಮವಾಗಿ ಕುಳಿತುಕೊಳ್ಳಬೇಕು. ಫಿಟ್ ಅನ್ನು ಪರೀಕ್ಷಿಸಲು ಉತ್ತಮ ಮಾರ್ಗವೆಂದರೆ ತಲೆ ಮತ್ತು ಕ್ಯಾಪ್ ನಡುವೆ ನಮ್ಮ ಬೆರಳನ್ನು ಇಡುವುದು. ಅದು ಸರಿಹೊಂದಿದರೆ ಸರಿಯಾದ ಗಾತ್ರವನ್ನು ಹೊಂದಿದೆ ಎಂದು ಅರ್ಥ. ಬಿಸಿಲಿನಿಂದ ಗರಿಷ್ಠ ರಕ್ಷಣೆಗಾಗಿ ಕಪ್ಪು, ನೀಲಿ ಅಥವಾ ಗಾಢ ನೀಲಿ ಬಣ್ಣಗಳು ಉತ್ತಮ. ಏಕೆಂದರೆ ಅವು ಹೆಚ್ಚು ನೇರಳಾತೀತ ಕಿರಣಗಳನ್ನು ಹೀರಿಕೊಂಡು ಚರ್ಮವನ್ನು ತಲುಪುವುದನ್ನು ತಡೆಯುತ್ತವೆ. ಫ್ಯಾಷನ್ ಮತ್ತು ಆರೋಗ್ಯ ಎರಡನ್ನೂ ಗಮನದಲ್ಲಿಟ್ಟುಕೊಂಡು ಎತ್ತರ, ನಿಲುವು, ಸ್ಟೈಲ್‌ಗೆ ಅನುಗುಣವಾಗಿ ಟೋಪಿಯನ್ನು ಬೇಸಿಗೆ ಕಾಲದಲ್ಲಿ ಬಳಸಬಹುದು. ■

ಮ್ಯಾಂಗೋ ಚುಂಡ

ಲವಲVK ಅಭಿರುಚಿ



ಗುಜರಾತಿನ ಸಾಂಪ್ರದಾಯಿಕ ವ್ಯಂಜನ ಮ್ಯಾಂಗೋ ಚುಂಡ ರುಚಿಯಲ್ಲಿ ಹುಳಿ, ಸಿಹಿ, ಖಾರಗಳ ಮಿಶ್ರಣ. ಇದು ಮಾವಿನ ಪ್ರಿಯರನ್ನು ಸುಲಭವಾಗಿ ಆಕರ್ಷಿಸುತ್ತದೆ. ದೋಸೆ, ಪೂರಿ, ಚಪಾತಿ ಇತ್ಯಾದಿಗಳಿಗೆ ಇದನ್ನು ನೆಂಚಿಕೊಳ್ಳಬಹುದು. ಮಾವಿನ ಸೀಸನ್‌ನಲ್ಲಿ ತಯಾರಿಸಿಟ್ಟುಕೊಂಡರೆ ದೀರ್ಘಕಾಲ ಬಳಸಬಹುದು.

ಸಾಮಗ್ರಿ: ಸಿಪ್ಪೆ ತೆಗೆದ ಮಾವಿನಕಾಯಿಯ ದಪ್ಪ ತುರಿ 2 ಕಪ್, ಬೆಲ್ಲದಪುಡಿ 1 ಕಪ್, ಸಕ್ಕರೆ 1 ಕಪ್, ಅಚ್ಚ ಮೆಣಸಿನಪುಡಿ 1 ಚಮಚ, ಅರಿಶಿನಪುಡಿ 1/2 ಚಮಚ, ಗರಂ ಮಸಾಲ 1/2 ಚಮಚ, ಜೀರಿಗೆ 1 ಚಮಚ, ಉಪ್ಪು 1 ಚಮಚ.

ವಿಧಾನ: ಒಂದು ಬಾಣಲೆಯಲ್ಲಿ ಮಾವಿನತುರಿ, ಅರಿಶಿನ, ಬೆಲ್ಲದಪುಡಿ, ಸಕ್ಕರೆ, ಉಪ್ಪು ಸೇರಿಸಿ ಚೆನ್ನಾಗಿ ಕಲೆಸಿ ಅರ್ಧ ಗಂಟೆ ಮುಚ್ಚಿಡಿ. ನಂತರ ಈ ಮಿಶ್ರಣವನ್ನು ಸಣ್ಣ ಉರಿಯಲ್ಲಿ ಕೈಯಾಡುತ್ತಿರಿ. ಕರಗಿದ ಬೆಲ್ಲ ಸಕ್ಕರೆ, ಒಂದೆಳೆ ಪಾಕ ಬಂದಾಗ ಉರಿ ಆರಿಸಿ. ಇದಕ್ಕೆ ಗರಂ ಮಸಾಲ, ಜೀರಿಗೆ, ಅಚ್ಚ ಮೆಣಸಿನಪುಡಿ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಮುಚ್ಚಳ ಮುಚ್ಚಿ, ತಣಿದ ನಂತರ ಗಾಜಿನ ಡಬ್ಬದಲ್ಲಿ ಶೇಖರಿಸಿಕೊಳ್ಳಿ. ■

ಕೆ.ವಿ. ರಾಜಲಕ್ಷ್ಮಿ

ಐಸ್ ವಾಟರ್ ಸ್ಕಿನ್‌ಕೇರ್ ಸೆಲೆಬ್ರಿಟಿಗಳ ಫೇವರಿಟ್

ಮಂಜುಗಡ್ಡೆ ಅಥವಾ ತಂಪಾದ ನೀರಿನಲ್ಲಿ ಮುಖವನ್ನು ತೊಳೆಯುವ ವಿಧಾನ ಸೆಲೆಬ್ರಿಟಿ ವಲಯದಲ್ಲಿ ಆಗಾಗ ಸದ್ದು ಮಾಡುತ್ತದೆ. ಆಲಿಯಾ ಭಟ್, ಅನನ್ಯಾ ಪಾಂಡೆ ಮತ್ತು ಕತ್ರಿನಾ ಕೈಫ್ ಅವರಂತಹ ಸೆಲೆಬ್ರಿಟಿಗಳು ಈ ವಿಧಾನವನ್ನು ಅನುಸರಿಸುವ ಮೂಲಕ ಗಮನ ಸೆಳೆದಿದ್ದಾರೆ. ಹಲವರು ಈ ವಿಧಾನವನ್ನು ತಮ್ಮ ಸ್ಕಿನ್ ಕೇರ್ ರುಟೀನ್‌ನಲ್ಲಿ ಅಳವಡಿಸಿಕೊಂಡಿದ್ದಾರೆ. ಬೇಸಿಗೆಯ ಹವಾಮಾನಕ್ಕೆ ತಣ್ಣೀರಿನಿಂದ ಮುಖ ತೊಳೆಯುವ ಈ ವಿಧಾನ ಹಿತಕರವೂ ಹೌದು.

ಆಲಿಯಾ ಭಟ್

ಪ್ರಯೋಜನಗಳು: ಬೇಸಿಗೆಯಲ್ಲಿ ತಣ್ಣೀರಿನಿಂದ ಮುಖ ತೊಳೆದರೆ ಇದು ರಕ್ತಪರಿಚಲನೆಯನ್ನು ಸುಧಾರಿಸಿ ಚರ್ಮಕ್ಕೆ ನೈಸರ್ಗಿಕ ಹೊಳಪನ್ನು ನೀಡುತ್ತದೆ. ಸೂರ್ಯನ ಶಾಖದಿಂದ ಉಂಟಾಗುವ ಸನ್-ಬರ್ನ್, ಬೆವರಿನ ಸಾಲೆ ಮತ್ತು ಅತಿಯಾದ ಎಣ್ಣೆ ಜಿಡ್ಡನ್ನು ನಿಯಂತ್ರಿಸಲು ಇದು ಸಹಕಾರಿ. ಕಣ್ಣಿನ ಕೆಳಭಾಗದ ಊತ ಅಥವಾ ದಣಿದ ಮುಖಕ್ಕೆ ಇದು ತಕ್ಷಣದ ಚೈತನ್ಯ ನೀಡುತ್ತದೆ. ಚರ್ಮದ ರಂಧ್ರಗಳನ್ನು ಬಿಗಿಗೊಳಿಸಲು ಮತ್ತು ಮುಖದ ಆಯಾಸವನ್ನು ಹೋಗಲಾಡಿಸಲು ಇದು ಸುಲಭವಾದ ಮನೆಮದ್ದು. ಆದರೆ ಚರ್ಮದ ಪ್ರಕಾರಕ್ಕೆ ಅನುಗುಣವಾಗಿ ಇದನ್ನು ಮಿತವಾಗಿ ಬಳಸುವುದು ಉತ್ತಮ. ಅತಿಯಾದ ತಣ್ಣೀರು ಅಥವಾ ಮಂಜುಗಡ್ಡೆಯನ್ನು ನೇರವಾಗಿ ಚರ್ಮಕ್ಕೆ ಹಚ್ಚುವುದು ಕೆಲವೊಮ್ಮೆ ಅಪಾಯವಾಗಬಹುದು. ಚರ್ಮದ ಉಷ್ಣತೆಯನ್ನು ಅತಿಯಾಗಿ ಕಡಿಮೆ ಮಾಡುವುದು ಕಿರಿಕಿರಿ ಉಂಟುಮಾಡಬಹುದು. ■

ಲವಲVK beauty ಡೈರಿ

ನಿಮಗೆ ಯಾವ ಉಡುಪು ಸೂಕ್ತ?

ದೇಹದ ಆಕಾರಕ್ಕೆ ತಕ್ಕಂತೆ ಉಡುಪು ಆಯ್ಕೆ ಮಾಡಿದರೆ ಆತ್ಮವಿಶ್ವಾಸ ಹೆಚ್ಚುತ್ತದೆ ಮತ್ತು ನೀವು ಹೆಚ್ಚು ಸ್ಟೈಲಿಶ್ ಆಗಿ ಕಾಣುತ್ತೀರಿ. ಆದರೆ ಅದಕ್ಕೂ ಮುನ್ನ ತಮ್ಮ ದೇಹದ ಆಕಾರ ತಿಳಿದುಕೊಂಡು ಅದಕ್ಕೆ ಪೂರಕ ಡ್ರೆಸ್ ಆಯ್ಕೆ ಮಾಡಿಕೊಳ್ಳುವುದು ಮುಖ್ಯ. ಸಾಮಾನ್ಯ ದೇಹದ ಆಕಾರಗಳೆಂದರೆ ಪಿಯರ್, ಆ್ಯಪಲ್, ಅವರ್‌ಗ್ಲಾಸ್, ರೆಕ್ಟಾಂಗಲ್.

ಪಿಯರ್ ಆಕಾರದವರಿಗೆ ಎ-ಲೈನ್ ಡ್ರೆಸ್ ಮತ್ತು ಡಾರ್ಕ್ ಬಾಟಮ್ ಉತ್ತಮ. ಆ್ಯಪಲ್ ಆಕಾರದವರಿಗೆ ಹೊಟ್ಟೆ ಭಾಗ ಹೆಚ್ಚು ಕಾಣುತ್ತದೆ. ಹೀಗಾಗಿ ಇವರು ಲೂಸ್ ಟಾಪ್ ಮತ್ತು ವಿ ನೆಕ್ ಬಳಸಿದರೆ ಲುಕ್ ಚೆನ್ನಾಗಿರುತ್ತದೆ. ಅವರ್‌ಗ್ಲಾಸ್ ಆಕಾರದಲ್ಲಿ ಕಟ್ಟು ಸ್ಪಷ್ಟವಾಗಿರುತ್ತದೆ. ಫಿಟ್ ಡ್ರೆಸ್ ಅಥವಾ ಬೆಲ್ಟ್ ಬಳಸಿ ಹೈಲೈಟ್ ಮಾಡಬಹುದು. ರೆಕ್ಟಾಂಗಲ್ ಆಕಾರದವರಿಗೆ ನೇರ ದೇಹ ಇರುತ್ತದೆ. ಲೇಯರಿಂಗ್ ಮತ್ತು ಡಿಸೈನ್ ಡ್ರೆಸ್ ಬಳಸಿ ಸ್ಟೈಲ್ ಹೆಚ್ಚಿಸಬಹುದು. ತುಂಬಾ ಬಿಗಿ ಅಥವಾ ತುಂಬಾ ದೊಗಲೆ ಬಟ್ಟೆಗಳನ್ನು ಧರಿಸಬೇಡಿ. ಸರಿಯಾದ ಫಿಟ್ ಮುಖ್ಯ. ಗಾಢ ಬಣ್ಣಗಳಲ್ಲಿ ದೇಹ ತೆಳ್ಳಗಿನ ಲುಕ್ ನೀಡಿದರೆ ಪ್ರಕಾಶಮಾನವಾದ ಬಣ್ಣಗಳು ದೇಹದ ಕೆಲವು ಭಾಗಗಳನ್ನು ಎದ್ದು ಕಾಣುವಂತೆ ಮಾಡುತ್ತವೆ. ■

-ವಿದ್ಯಾ ನವೀನ್

ವಿಜಯಬಂಧ - 7930



ಎಡದಿಂದ ಬಲಕ್ಕೆ

1 ಕವಿದ ಸಮಯದಲ್ಲಿ ಲಾವಣ್ಯವಾದದ್ದನ್ನೆ ಅನಾವರಣ ಮಾಡಿದಾತ 4
3 ದ್ವಾದಶಿ ದಿನ ಅನಿಲನಿಗೆ ಕೊಡುಗೆ ನೀಡಿದ ಗುಣ ಹೊಂದಿದಾತ 4
6 ಈ ಖೀರು ಭಕ್ಷಿಸಿದರೆ ಅಪಾಯವಿಲ್ಲ 3
8 ನಾಲ್ಕು ಹರದಾರಿ ದೂರದ ದೇಶೀಯ ಅಳತೆ 3
10 ಒಳ್ಳೊಳ್ಳೆ ಕುಳಗಳು ಬಂದು ಅಗೆದ ಹಳ್ಳ 2
11 ನಲ್ಲನ ಮಾತಿಗೆ ನೃತ್ಯಗಾತಿ ಹೇಳಿದ ಸಂಗೀತ 3
12 ಪ್ರಯಾಗದ ಬಳಿ ಮಾಡಿದ ಹೋಮ 2
14 ಕೌರವನ ದರ್ಬಾರಿನಲ್ಲಿ ಕೇಳಿದ ಮಾತಿನ ಶಬ್ದ 2
16 ಉತ್ಸಾಹಕ್ಕೆ ತತ್ವಾರ ಎಂದು ಕಡೆಗಣಿಸಿದ ಬಗೆ 3
18 ಪಾಟಿ ಸವಾಲು ಹಾಕಲು ಕೇಳಿದ ಭಾಗ 2
19 ನಾವಿರುವಾಗ ಈ ಸೂಕ್ಷ್ಮತೆ ಬಂತು 3
21 ಜ್ಯೋತಿಷ್ಯಗಳು ಈ ತನಕ ಬರೆದ ಕುಂಡಲಿ 3
25 ಗಿಡುಗ ಓಡಾಡಿದ ದೇಶದ ಎಲ್ಲೆ 4
26 ಚರಣ ಹಿಡಿಯಲು ಸೂಕ್ತವಾದ ಯುದ್ಧಭೂಮಿ 4

ಮೇಲಿನಿಂದ ಕೆಳಕ್ಕೆ

1 ಕೆಲಸ ಮಾಡದೆ ಆಕಳಿಸುತ್ತೆ ಈ ಗಾರ್ದಭ 2
2 ಒಳ್ಳೆಯ ಆದಾಯದ ಸಮಯದಲ್ಲೇ ನೀಡಿದ ಬೀಳ್ಕೊಡುಗೆ 3
4 ಕನಲಿ ಕೆಂಡವಾದಾಗಲೂ ತೋರಿದ ಸಂಭ್ರಮ 3
5 ಗೆಜ್ಜೆ ಕಟ್ಟಿ ಕುಣಿಯಲು ನಾಚಿಕೆ 2
6 ಪಾಳು ದೇಗುಲ ಕಾಯಲು ಮಾಡಿದ ಸರತಿ 2
7 ಸದ್ಗತಿಯನ್ನು ಹೊಂದಿದ ಹೆಂಡತಿ 2
8 ನಗಾರಿಯಿಂದ ಹೊರಹೊಮ್ಮಿದ ಸಂಗೀತ 2
9 ಯಾದವನಲ್ಲಿ ಅಡಗಿದ ಕರುಣೆ 2
10 ಕೆಟ್ಟ ವರವನ್ನು ಹೊಂದಿದ ಮಗ 3
13 ಮಲಗಿದಾಗ ಪಸರಿಸಿದ ಪರಿಮಳ 3
15 ಹೊಸಬನದೇ ಈ ತೋಟ 2
16 ತಾರುಣ್ಯದಲ್ಲಿ ಕಳಿಸುತ್ತಿದ್ದ ತಂತಿ 2
17 ಕಾರಂಜಾ ಅಣೆಕಟ್ಟು ಯೋಜನೆ ನೋಡಲು ಸಿಕ್ಕ ಸೂಟಿ 2
18 ಪಾತಕ ಹೋಗಲು ಬೆಲ್ಲ ಕುದಿಸಿ ಹದ ಮಾಡಬೇಕು 2
20 ವಿರಸದಿಂದ ಪತ್ನಿ ಬಿಟ್ಟಾಗ ಬಂದ ಅಗಲಿಕೆ ನೋವು 3
22 ತರುವಾಗ ಬಂದು ನಿಂತ ಯುವಕ 3
23 ಸನ್ಯಾಸ ಸ್ವೀಕಾರದ ಸಮಯದಲ್ಲಿ ಇರಿಸಿದ ಇಡುಗಂಟು 2
24 ಪ್ರಸಂಗದ ಸಮಯದಲ್ಲಾದ ಸ್ನೇಹ 2

ವಿಜಯಬಂಧ | 7929

ಎಡದಿಂದ ಬಲಕ್ಕೆ: 2.ಮಾಯಾವಿ 5.ದಫೇದಾರ 7.ಪ್ರಭಾವಿತ 9.ಸಮರಸ 11.ಅಂತರ್ಧಾನ 13.ಮನುಜ 14.ಹರಿಹರ 16.ನರಸಿಂಗ 18.ಸವಿನಯ 20.ಅನನ್ಯತೆ 22.ಮಯೂರಿ.

ಮೇಲಿನಿಂದ ಕೆಳಕ್ಕೆ: 1.ಊದ 2.ಮಾರ 3.ವಿಪ್ರ 4.ಮಿತ್ರ 6.ದಾವರ 8.ಭಾರತ 9.ಸನಿಹ 10.ಸಮರ 11.ಅಂಜನ 12.ನವಾಂಗ 15.ಹವನ 17.ರಸನ 18.ಸದ್ದು 19.ಯಮ 20.ಅರಿ 21.ತೆರೆ.

ಅ.ನಾ. ಪ್ರಹ್ಲಾದರಾವ್

Freedom Healthy Cooking Oils Presents

VK ಕರುನಾಡ ಸ್ವಾದ

ಅಡುಗೆಯ ಕೋಚ್‌ನ ಹುಡುಕಾಟ !

ಕರ್ನಾಟಕ ಪಾಕ ಇತಿಹಾಸದ ಸುವರ್ಣ ಅಧ್ಯಾಯ

ವಿಕ ಕರುನಾಡ ಸ್ವಾದ ವೇದಿಕೆಯಲ್ಲಿ ಅಡುಗೆ ಪ್ರತಿಭೆಗಳ ಮಹಾ ವಿಜಯೋತ್ಸವ | 77 ಪಟ್ಟಣಗಳಲ್ಲಿ, 7000 ಪಾಕಪ್ರವೀಣೆಯರ ಅನನ್ಯ ಶೋಧದ ಪಯಣ

ಗ್ರ್ಯಾಂಡ್ ಫಿನಾಲೆಯಲ್ಲಿ ಚನ್ನಪಟ್ಟಣದ ಅಶ್ವಿನಿ ಸಿ. ಪ್ರಥಮ | ಉಡುಪಿಯ ಸಂಧ್ಯಾ ಬಿ.ಎಸ್. ದ್ವಿತೀಯ | ಭದ್ರಾವತಿಯ ಪ್ರೇಮಲತಾ ಬಿ.ಎಂ. ತೃತೀಯ

ವಿಕ ಕರುನಾಡ ಸ್ವಾದ ಅಡುಗೆ ಸ್ಪರ್ಧೆ ಫೈನಲಿಸ್ಟ್‌ಗಳು

ವಿಜೇತರೊಂದಿಗೆ ಅತಿಥಿಗಳು

ಫೋಟೊಗಳು: ಕೆ.ಎಸ್.ಶ್ರೀಧರ್

ಮಸಾಲೆ ಪದಾರ್ಥಗಳ ಕಂಪು

ಸ್ಪರ್ಧಿಗಳಿಂದ ಭರ್ಜರಿ ಅಡುಗೆ ತಯಾರಿ

ಲವಲvk ಸುದ್ದಿಲೋಕ
feedbacklvk@vijaykarnataka.com

ಕರುನಾಡಿನ ಅಡುಗೆ ಇತಿಹಾಸದಲ್ಲಿ ದಾಖಲೆ ನಿರ್ಮಿಸಿದ 'ವಿಕ ಕರುನಾಡ ಸ್ವಾದ 2025-26' ಯಶಸ್ವಿಯಾಗಿ ಸಂಪನ್ನಗೊಂಡಿದೆ. ಇಂದು ತೆರೆಮರೆಗೆ ಸರಿದಿರುವ ಖಾದ್ಯ ವೈವಿಧ್ಯಗಳನ್ನು ಪರಿಚಯಿಸುವ ಮತ್ತು ಅಡುಗೆಯ ಹೊಸ ಕೋಚ್ ಹುಡುಕಾಟದ ಉದ್ದೇಶದಿಂದ ವಿಜಯ ಕರ್ನಾಟಕ ಆರಂಭಿಸಿದ ಈ ವೇದಿಕೆ ಹತ್ತು ಹಲವಾರು ವಿರಳ ಖಾದ್ಯಗಳನ್ನು ಮುನ್ನೆಲೆಗೆ ತಂದಿದೆ, ನೂರಾರು ಪಾಕಪ್ರತಿಭೆಗಳ ಮೇಲೂ ಬೆಳಕು ಚೆಲ್ಲಿದೆ.

ಬೆಂಗಳೂರಿನ ರಾಜಾಜಿನಗರದ ಕೆಎಲ್‌ಇ ಕಾಲೇಜ್‌ನಲ್ಲಿ ಭಾನುವಾರ ನಡೆದ ಪ್ರತಿಷ್ಠಿತ ವಿಕ ಕರುನಾಡ ಸ್ವಾದ ಅಡುಗೆ ಸ್ಪರ್ಧೆಯ ಗ್ರ್ಯಾಂಡ್ ಫಿನಾಲೆಯಲ್ಲಿ ಚನ್ನಪಟ್ಟಣದ ಅಶ್ವಿನಿ ಸಿ. ಪ್ರಥಮ ವಿಜೇತರಾಗಿದ್ದಾರೆ. ಇವರು ಸ್ಥಳದಲ್ಲಿಯೇ ತಯಾರಿಸಿದ ಅನ್ನ ಮತ್ತು ಸೊಪ್ಪು ಬಸ್ಸಾರು, ಆವರಿಕೆ ಹೂವಿನ ಪಾಯಸ, ಸುಂಡಕ್ಕಾಯಿ ಪಕೋಡಾ ಪ್ರಥಮ ಸ್ಥಾನ ಗೆದ್ದಿದೆ. ಮಂಡ್ಯ ಕಡೆ ಈ ಹಿಂದೆ ಅಡುಗೆಯಲ್ಲಿ ಬಳಕೆಯಲ್ಲಿದ್ದ ಮತ್ತು ಮಧುಮೇಹಕ್ಕೆ ಅತ್ಯುತ್ತಮ ಎನ್ನಲಾಗಿರುವ ಆವರಿಕೆ ಹೂವು, ಸುಂಡಕ್ಕಾಯಿಯನ್ನು ಪರಿಚಯಿಸಿ ತೀರ್ಪುಗಾರರಿಂದ ಸೈ ಅನಿಸಿಕೊಂಡರು.

Freedom Healthy Cooking Oils presents VK ಕರುನಾಡ ಸ್ವಾದ "ಅಡುಗೆಯ ಕೋಚ್‌ನ ಹುಡುಕಾಟ"

Healthy Tiffin partner: EXO | Special Partner: VIJAYALAKSHMI DEER ORID DAL | Dairy partner: ನಂದಿನಿ ಕೆಎಂಎಫ್ | Venue partner: KLE's BHM SNC

ಉಡುಪಿಯ ಸಂಧ್ಯಾ ಬಿ.ಎಸ್. ದ್ವಿತೀಯ ಸ್ಥಾನ ವಿಜೇತರಾಗಿದ್ದು, ಇವರು ತಯಾರಿಸಿದ ಕೋಸ್ಟಲ್ ಕಡ್ಲೆ ಪುಂಡಿ ಡಿಲೈಟ್, ಆಮ್ ಮನೋಹರ ಮತ್ತು ನ್ಯೂಟ್ರಿಷನ್ ಸೋಯಾ ಖಾದ್ಯಗಳಲ್ಲಿ ಕಡ್ಲೆ ಪುಂಡಿಯು ಕರಾವಳಿ ಭಾಗದ ರುಚಿ ಸೊಗಡನ್ನು ಪರಿಚಯಿಸಿ ತೀರ್ಪುಗಾರರ ಮನ ಗೆದ್ದಿತು. ಭದ್ರಾವತಿಯ ಪ್ರೇಮಲತಾ ಬಿ.ಎಂ. ತೃತೀಯ ಸ್ಥಾನ ವಿಜೇತರಾಗಿದ್ದು, ಇವರು ನವಣೆ ಅಕ್ಕಿ ಹೆಸರಿನ ಖಿಚಡಿ, ಸಿಹಿ ಕುಂಬಳಕಾಯಿ ಸಾಮೆ ನುಚ್ಚಿನ ಹಬೆ ಕಡುಬು, ಮಸಾಲ ಬೆಂಡೆಕಾಯಿ ಸ್ಟಫ್ಡ್ ಬಜ್ಜಿ ತಯಾರಿಸಿ ಹಿಂದಿನ ಕಾಲದ ಅಡುಗೆಯಲ್ಲಿ ಹೆಚ್ಚು ಬಳಕೆಯಲ್ಲಿದ್ದ ಹಾಗೂ ಇತ್ತೀಚಿನವರೆಗೂ ಮರೆತೇಹೋಗಿದ್ದ ಸಿರಿಧಾನ್ಯಗಳು ಈಗಿನವರಿಗೂ ಅತ್ಯಗತ್ಯ ಎಂದು ನಿರೂಪಿಸಿ ತೀರ್ಪುಗಾರರ ಗಮನ ಸೆಳೆದರು.

ವಿಕ ಕರುನಾಡ ಸ್ವಾದ ಗ್ರ್ಯಾಂಡ್ ಫಿನಾಲೆಗೆ ಕರ್ನಾಟಕದ ಹಲವಾರು ಪ್ರದೇಶಗಳಿಂದ ಒಟ್ಟು 26 ಸ್ಪರ್ಧಿಗಳು ಆಯ್ಕೆಯಾಗಿದ್ದರು. ಒಂದೂವರೆ ಗಂಟೆಗಳಲ್ಲಿ ಮೂರು ರೀತಿಯ ಪಾರಂಪರಿಕ ಖಾದ್ಯ ಅಂದರೆ ಸಿಹಿ, ಮೇನ್ ಡಿಶ್ ಹಾಗೂ ಎಣ್ಣೆಯಲ್ಲಿ ಕರಿದ ತಿಂಡಿ ತಯಾರಿಸುವ ಟಾಸ್ಕ್ ಅನ್ನು ಪ್ರತಿ ಸ್ಪರ್ಧಿಗಳು ಸವಾಲಾಗಿ ಸ್ವೀಕರಿಸಿ ಅತ್ಯಂತ ಚಾಕಚಕ್ಯತೆಯಿಂದ ಬಗೆಬಗೆಯ ಖಾದ್ಯಗಳನ್ನು ತಯಾರಿಸಿ ತೀರ್ಪುಗಾರರ ಮುಂದೆ ಸುಂದರವಾಗಿ ಪ್ರಸ್ತುತಪಡಿಸಿದರು. ಈ ಸ್ಪರ್ಧೆಯ ತೀರ್ಪುಗಾರರಾಗಿದ್ದ ಖ್ಯಾತ ಷೆಫ್ ಸುಜಯ್ ಶಿಂಧೆ, ಕೆಎಲ್‌ಇ ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್ ಎಚ್‌ಒಡಿ ಅಮಲನ್ ಇ. ಮತ್ತು ಷೆಫ್ ಬಾಲಾಜಿ ಪ್ರತಿ ಖಾದ್ಯಗಳ ರುಚಿ ನೋಡಿ ಅದರ ಮೂಲ, ಬಳಸಿದ ಸಾಮಗ್ರಿ, ಪೌಷ್ಟಿಕಾಂಶ ಇತ್ಯಾದಿ ಪರಿಶೀಲಿಸಿ ಸ್ಪರ್ಧಿಗಳಿಗೆ ಕೆಲವು ಅಡುಗೆ ಟಿಪ್ಸ್‌ಗಳನ್ನೂ ಹೇಳಿದರು.

ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್ ಪ್ರಸ್ತುತಪಡಿಸಿರುವ ವಿಕ ಕರುನಾಡ ಸ್ವಾದ 2026 ಅಡುಗೆ ಸ್ಪರ್ಧೆಗೆ ಎಕ್ಸೊ, ವಿಜಯಲಕ್ಷ್ಮಿ ಡೀರ್ ಬ್ರ್ಯಾಂಡ್ ಉರದ್ ದಾಲ್, ಕೆಎಂಎಫ್ ಮತ್ತು ಕೆಎಲ್‌ಇ ಕಾಲೇಜಿನ ಬಿಎಚ್‌ಎಂ ವಿಭಾಗ ಪಾರ್ಟನರ್‌ಗಳಾಗಿದ್ದವು.

ಅನ್ನ ಮತ್ತು ಸೊಪ್ಪು ಬಸ್ಸಾರು, ಆವರಿಕೆ ಹೂವಿನ ಪಾಯಸ, ಸುಂಡಕ್ಕಾಯಿ ಪಕೋಡಾ (1)

31	ಜಿಲ್ಲೆಗಳು
77	ಪಟ್ಟಣಗಳಲ್ಲಿ ಸ್ಪರ್ಧೆ
80	ಒಟ್ಟು ಕಾರ್ಯಕ್ರಮಗಳು
7,000+	ಅಡುಗೆ ಸ್ಪರ್ಧಿಗಳು
2	ರೋಮಾಂಚಕ ಸೆಮಿಫೈನಲ್‌ಗಳು
152	ಸೆಮಿ ಫೈನಲಿಸ್ಟ್‌ಗಳು
26	ಫೈನಲಿಸ್ಟ್‌ಗಳು
3	ವಿಜೇತರು
1	ಟಾಪ್ ಷೆಫ್

> ಗ್ರ್ಯಾಂಡ್ ಫಿನಾಲೆ ಸೇರಿದಂತೆ ಕಳೆದ ಐದು ತಿಂಗಳಿಂದ ನಾವು ವಿಕ ಕರುನಾಡ ಸ್ವಾದದ ಒಂದು ಭಾಗವಾಗಿದ್ದೇವೆ. ಇದೊಂದು ಅದ್ಭುತ ಪಯಣವಾಗಿದ್ದು, ಕರುನಾಡಿನ ಮೂಲೆ ಮೂಲೆಗೂ ಮತ್ತು ಪ್ರತಿ ಮನೆಗಳಿಗೂ ತಲುಪಿ ರುಚಿ ವೈವಿಧ್ಯಗಳನ್ನು ಪರಿಚಯಿಸಿದೆ. ಇದಕ್ಕೆ ಸಹಕರಿಸಿದ ಎಲ್ಲಾ ಸ್ಪರ್ಧಿಗಳಿಗೂ ಧನ್ಯವಾದ. ಕರ್ನಾಟಕದ ಸೊಗಡನ್ನು ಪರಿಚಯಿಸುವ ಇಂಥ ಇನ್ನಷ್ಟು ಕಾರ್ಯಕ್ರಮಗಳನ್ನು ವಿಜಯ ಕರ್ನಾಟಕದಿಂದ ಎದುರು ನೋಡುತ್ತಿದ್ದೇವೆ.
>
> -ಜಯ್ ಮೆಹ್ತಾ | ಮಾರ್ಕೆಟಿಂಗ್ ಮ್ಯಾನೇಜರ್, ಫ್ರೀಡಂ ಹೆಲ್ದಿ ಕುಕ್ಕಿಂಗ್ ಆಯಿಲ್

> ಫಿನಾಲೆ ಸೇರಿದಂತೆ 31 ಜಿಲ್ಲೆಗಳಲ್ಲಿ ನಡೆದ 'ವಿಕ ಕರುನಾಡ ಸ್ವಾದ'ದ ಎಲ್ಲ ಕಾರ್ಯಕ್ರಮಗಳು ಅದ್ಭುತವಾಗಿದ್ದವು. ಇದು ಫ್ರೀಡಂ ಆಯಿಲ್ ಮತ್ತು ವಿಜಯ ಕರ್ನಾಟಕ ಜತೆಗಿನ ಎಕ್ಸಲೆಂಟ್ ಜರ್ನಿ. ಇಂಥ ಉತ್ತಮ ಕಾರ್ಯಕ್ರಮಗಳಿಂದ ಕಂಫರ್ಟಬಲ್ ಆಗಿ ನಮ್ಮ ಬ್ರ್ಯಾಂಡ್ ಪ್ರಮೋಟ್ ಮಾಡಿಕೊಳ್ಳಲು ಸಾಧ್ಯವಾಗುತ್ತದೆ.
>
> -ಪಿ. ಬಾಲಸುಬ್ರಹ್ಮಣ್ಯಂ | ಏರಿಯಾ ಸೇಲ್ಸ್ ಮ್ಯಾನೇಜರ್ ಕರ್ನಾಟಕ, ವಿಜಯಲಕ್ಷ್ಮಿ ಡೀರ್ ಉರದ್ ದಾಲ್

> ಕರುನಾಡ ಸ್ವಾದ ಸ್ಪರ್ಧೆಯ ಫಿನಾಲೆಗೆ ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ಆದರೆ ಪ್ರಥಮ ಸ್ಥಾನ ವಿಜೇತೆಯಾಗುತ್ತೇನೆ ಎಂದು ನಿರೀಕ್ಷೆ ಮಾಡಿರಲಿಲ್ಲ. ಸೆಮಿಫೈನಲ್ ಸ್ಪರ್ಧೆ ಆದ್ಮೇಲೆ ನಾನು ಮಂಡ್ಯ ಕಡೆ ಹೋಗಿ ಹಳೆ ರೆಸಿಪಿಗಳ ಬಗ್ಗೆ ಹುಡುಕಾಟ ನಡೆಸಿದ್ದೆ. ಅದರಲ್ಲಿ ಅಜ್ಜಿಯೊಬ್ಬರು ಆವರಿಕೆ ಸೊಪ್ಪು ಮತ್ತು ಸುಂಡಕ್ಕಾಯಿಯಿಂದ ಮಾಡುವ ಖಾದ್ಯ ಹೇಳಿದರು. ಫಿನಾಲೆಗೆ ಅದನ್ನು ನನ್ನದೇ ರೀತಿಯಲ್ಲಿ ಮಾಡಿದೆ.
>
> -ಅಶ್ವಿನಿ ಸಿ. | ಪ್ರಥಮ ಬಹುಮಾನ ವಿಜೇತೆ

> ಕರುನಾಡ ಸ್ವಾದ ಅಡುಗೆ ಸ್ಪರ್ಧೆ ಬಗ್ಗೆ ಒಂದು ಸ್ಟೇಟಸ್‌ನಲ್ಲಿ ನೋಡಿ ಪಾಲ್ಗೊಂಡೆ. ಮೊದಲ ಸುತ್ತಿನಲ್ಲಿ ನನಗೆ ಬಹಳ ಪ್ರೋತ್ಸಾಹ ಸಿಕ್ಕಿತು. ಸೆಮಿಫೈನಲ್‌ಗೆ ಬಂದು ಫೈನಲ್‌ಗೆ ಬರುವಷ್ಟರಲ್ಲಿ ಸಾಕಷ್ಟು ಆತ್ಮವಿಶ್ವಾಸ ಬಂತು. ನನ್ನ ಅಮ್ಮ ತುಂಬಾ ಚೆನ್ನಾಗಿ ಅಡುಗೆ ಮಾಡುತ್ತಾರೆ. ಅವರಿಂದಲೇ ನನಗೆ ಪಾಕಕಲೆ ಸಿದ್ಧಿಸಿದೆ. ಈ ವೇದಿಕೆಯಲ್ಲಿ ಸಿಕ್ಕ ಪ್ರೋತ್ಸಾಹ ನನಗೆ ಮುಂದೆಯೂ ಸಹಕಾರಿಯಾಗಲಿದೆ. ಇದಕ್ಕಾಗಿ ವಿಜಯ ಕರ್ನಾಟಕಕ್ಕೆ ಥ್ಯಾಂಕ್ಸ್.
>
> -ಸಂಧ್ಯಾ ಬಿ.ಎಸ್. | ದ್ವಿತೀಯ ಬಹುಮಾನ ವಿಜೇತೆ

> ಕರುನಾಡ ಸ್ವಾದ ಸೇರಿದಂತೆ ವಿಜಯ ಕರ್ನಾಟಕ ನಡೆಸುವ ಪ್ರತಿ ಕಾರ್ಯಕ್ರಮವೂ ವಿಶ್ವಾಸಾರ್ಹ ಮತ್ತು ಪಾರದರ್ಶಕವಾಗಿರುತ್ತದೆ. ಈ ಅಡುಗೆ ಸ್ಪರ್ಧೆಯಲ್ಲಿ ಕಳೆದು ಹೋಗಿರುವ ಮತ್ತು ಆರೋಗ್ಯಕರ ಅಡುಗೆ ಪರಿಕಲ್ಪನೆಯನ್ನು ತಂದಿರುವುದು ಖುಷಿ ತಂದಿದೆ. ಇದರಿಂದ ನಮಗೆ ಬೇರೆ ಬೇರೆ ಪ್ರದೇಶಗಳ ಅಡುಗೆ ಬಗ್ಗೆಯೂ ಪರಿಚಯವಾಗಿದೆ. ಅವುಗಳನ್ನು ನಮ್ಮ ಮಕ್ಕಳಿಗೆ ಮಾಡಿ ಕೊಡಲು ಸಾಧ್ಯವಾಗಿದೆ.
>
> -ಪ್ರೇಮಲತಾ ಬಿ.ಎಂ. | ತೃತೀಯ ಬಹುಮಾನ ವಿಜೇತೆ

> ವಿಕ ಕರುನಾಡ ಸ್ವಾದ ಕಾರ್ಯಕ್ರಮದಲ್ಲಿ ಕರ್ನಾಟಕದ ಕಳೆದುಹೋಗಿರುವ ಖಾದ್ಯಗಳ ರುಚಿಯನ್ನು ಮುನ್ನೆಲೆಗೆ ತರಲು ಮಾಡಿದ ಪ್ರಯತ್ನ ಶ್ಲಾಘನೀಯ. ಊಟ ಬಲ್ಲವನಿಗೆ ರೋಗವಿಲ್ಲ ಎಂಬುದನ್ನು ಅರಿತುಕೊಂಡರೆ ಆರೋಗ್ಯ ನಮ್ಮನ್ನು ಕೈಬಿಡುವುದಿಲ್ಲ. ಈ ಅಡುಗೆ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಎಲ್ಲರೂ ಬಹುಮಾನಗಳನ್ನು ಮನೆಗೆ ಕೊಂಡೊಯ್ಯುವ ಜತೆಗೆ ಸಮಾಜದಲ್ಲಿ ತಮ್ಮ ಜವಾಬ್ದಾರಿಯನ್ನೂ ಅರಿತು ಆರೋಗ್ಯಕರ ಆಹಾರಗಳ ಬಗ್ಗೆ ಜಾಗೃತಿ ಮೂಡಿಸಬೇಕಿದೆ.
>
> -ಡಾ. ಜೆ.ಎಂ. ಮಲ್ಲಿಕಾರ್ಜುನಯ್ಯ, ಪ್ರಿನ್ಸಿಪಾಲ್, ಕೆಎಲ್‌ಇ ಲಾ ಕಾಲೇಜ್, ಬೆಂಗಳೂರು

> ಮೊದಲಿಗೆ ನಿಮ್ಮ ಬಾಯಿಯನ್ನು ಚೆನ್ನಾಗಿಟ್ಟುಕೊಂಡರೆ ನಿಮ್ಮ ಬಾಯಿ ನಿಮ್ಮನ್ನು ಚೆನ್ನಾಗಿಟ್ಟುಕೊಳ್ಳುತ್ತದೆ. ಇದಕ್ಕಾಗಿ ಪ್ರೀತಿಯಿಂದ ಖುಷಿ ಖುಷಿಯಾಗಿ ಅಡುಗೆ ಮಾಡಿ. ಮನೆಯಲ್ಲೇ ಮಾಡುವ ಅಡುಗೆ ಪ್ರತಿಯೊಬ್ಬರಿಗೂ ಆರೋಗ್ಯಕರ. ಹಿಂದಿನ ಕಾಲದಲ್ಲಿ ಅಡುಗೆ ಚೆನ್ನಾಗಿ ಮಾಡುತ್ತಿದ್ದರು. ಆಗಿನ ರುಚಿ ವಿಶೇಷ ಈಗಿನ ಮಕ್ಕಳಿಗೆ ಗೊತ್ತಿಲ್ಲ. ಈ ನಿಟ್ಟಿನಲ್ಲಿ ವಿಜಯ ಕರ್ನಾಟಕ 'ಕರುನಾಡ ಸ್ವಾದ' ಕಾರ್ಯಕ್ರಮದ ಮೂಲಕ ಹಳೆ ಕಾಲದ ಅಡುಗೆಯನ್ನು ಪರಿಚಯಿಸುತ್ತಿರುವುದು ಉತ್ತಮ ಪ್ರಯತ್ನ.
>
> -ಪ್ರಭು ಶೆಟ್ಟಿ | ಫುಡ್ ಬ್ಲಾಗರ್

> ಜನರು ಹೊಸ ಟ್ರೆಂಡ್ ಮತ್ತು ಸಂಪ್ರದಾಯಕ್ಕೆ ಅಪ್‌ಡೇಟ್ ಆಗ್ತಾ ಆಗ್ತಾ ಕ್ರಮೇಣ ಹಳೆಯ ರೆಸಿಪಿಗಳನ್ನೇ ಮರೆಯುತ್ತಿದ್ದಾರೆ. ಮುಖ್ಯವಾಗಿ ಉತ್ತರ ಕರ್ನಾಟಕ, ಮಲೆನಾಡು, ಕರಾವಳಿ, ಬಯಲುಸೀಮೆ ಮುಂತಾದ ಪ್ರದೇಶದವರು ಬೆಂಗಳೂರಿನಂಥ ಮಹಾನಗರಕ್ಕೆ ಬಂದಾಗ ಇಲ್ಲಿನ ಆಹಾರ ಶೈಲಿಗೆ ಒಗ್ಗಿಕೊಳ್ಳುತ್ತಾರೆ. ಇದರಿಂದ ಅವರ ಪ್ರಾದೇಶಿಕ ಆಹಾರ ರುಚಿ ಮರೆಯಾಗುತ್ತದೆ. ವಿಕ ಕರುನಾಡ ಸ್ವಾದ ಕಾರ್ಯಕ್ರಮದಲ್ಲಿ ಇಂಥ ಕಳೆದುಹೋಗಿರುವ ರೆಸಿಪಿಗಳನ್ನು ಪರಿಚಯಿಸುವ ಪ್ರಯತ್ನ ಉತ್ತಮವಾಗಿ ನಡೆದಿದೆ.
>
> -ಸುಜಯ್ ಶಿಂಧೆ | ಷೆಫ್

ನವಣೆ ಅಕ್ಕಿ ಹೆಸರಿನ ಖಿಚಡಿ, ಸಿಹಿ ಕುಂಬಳಕಾಯಿ ಸಾಮೆ ನುಚ್ಚಿನ ಹಬೆ ಕಡುಬು, ಮಸಾಲ ಬೆಂಡೆಕಾಯಿ ಸ್ಟಫ್ಡ್ ಬಜ್ಜಿ (3)

ಕೋಸ್ಟಲ್ ಕಡ್ಲೆ ಪುಂಡಿ ಡಿಲೈಟ್, ಆಮ್ ಮನೋಹರ, ನ್ಯೂಟ್ರಿಷನ್ ಸೋಯಾ (2)

> ವಿಕ ಕರುನಾಡ ಸ್ವಾದ ಅಡುಗೆ ಸ್ಪರ್ಧೆ ಅದ್ಭುತವಾಗಿ ನಡೆದಿದ್ದು, ಈ ಕಾರ್ಯಕ್ರಮಕ್ಕೆ ಪ್ರಾಯೋಜಕರಾಗುವ ಮೂಲಕ ಜ್ಯೋತಿ ಲ್ಯಾಬೊರೆಟರೀಸ್ ಹಾಗೂ ಅದರ ನಂಬರ್ ವನ್ ಪ್ರಾಡಕ್ಟ್ ಎಕ್ಸೊ ಇತಿಹಾಸ ಸೃಷ್ಟಿಸಿವೆ. ಮಾರುಕಟ್ಟೆ ಮೌಲ್ಯದಲ್ಲಿ ಎಕ್ಸೊ ಅತಿ ಹೆಚ್ಚು ಸ್ಥಾನ ಪಡೆದಿದ್ದು, ಭಾರತದಲ್ಲಿಯೇ ಇದು ನಂಬರ್ ವನ್ ಪ್ರಾಡಕ್ಟ್ ಆಗಿದೆ. ಎಕ್ಸೊ ಬ್ರ್ಯಾಂಡ್‌ಗೆ ಅವಕಾಶ ಕಲ್ಪಿಸಿದ ವಿಜಯ ಕರ್ನಾಟಕ ಪತ್ರಿಕೆಗೆ ಧನ್ಯವಾದಗಳು.
>
> -ಶ್ರೀಬಾಲಾಜಿ | ಅಸಿಸ್ಟೆಂಟ್ ಸೇಲ್ಸ್ ಮ್ಯಾನೇಜರ್, ಜ್ಯೋತಿ ಲ್ಯಾಬ್ಸ್ ಲಿಮಿಟೆಡ್

> ವಿಜಯ ಕರ್ನಾಟಕ 'ಕರುನಾಡ ಸ್ವಾದ' ಕಾರ್ಯಕ್ರಮದ ಮೂಲಕ ಕರುನಾಡಿನ ಕಳೆದು ಹೋಗಿರುವ ರುಚಿ ವೈವಿಧ್ಯಗಳನ್ನು ತಿಳಿಯಪಡಿಸುತ್ತಿರುವುದು ಉತ್ತಮ ಕೆಲಸ. ಅನೇಕ ಸ್ಪರ್ಧಿಗಳು ಪಾಲ್ಗೊಂಡಿರುವ ಈ ರಾಜ್ಯಮಟ್ಟದ ಅಡುಗೆ ಸ್ಪರ್ಧೆಯಲ್ಲಿ ನಂದಿನಿಯ ಹಲವು ಉತ್ಪನ್ನಗಳು ಬಳಕೆಯಾಗಿರುವುದು ಗಮನಾರ್ಹ. ಮುಖ್ಯವಾಗಿ ನಂದಿನಿ ಉತ್ಪನ್ನಗಳು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ವಿಸ್ತರಣೆಯಾಗುತ್ತಿರುವ ಈ ಸಮಯದಲ್ಲಿ ಇಂಥ ಕಾರ್ಯಕ್ರಮವು ನಮಗೆ ಪೂರಕವಾಗಿ ಪರಿಣಮಿಸಿದೆ.
>
> -ಬಿ. ಶಿವಸ್ವಾಮಿ | ವ್ಯವಸ್ಥಾಪಕ ನಿರ್ದೇಶಕರು, ಕೆಎಂಎಫ್

ಸಂಧ್ಯಾ ಬಿ.ಎಸ್., ಅಶ್ವಿನಿ ಸಿ., ಪ್ರೇಮಲತಾ ಬಿ.ಎಂ.

> ಮನೆಯಲ್ಲಿ ಅಡುಗೆ ಮಾಡುವುದೇ ಬೇರೆ, ಒಂದು ದೊಡ್ಡ ವೇದಿಕೆಯಲ್ಲಿ ಅಡುಗೆ ಮಾಡುವ ಅನುಭವವೇ ಬೇರೆ. ಈ ವಿಷಯದಲ್ಲಿ 'ವಿಕ ಕರುನಾಡ ಸ್ವಾದ' ಹೋಮ್ ಕುಕ್‌ಗಳಿಗೆ ಸಿಕ್ಕಿರುವ ಒಂದು ಉತ್ತಮ ಅವಕಾಶ. ವಿಜಯ ಕರ್ನಾಟಕ ಇಂಥ ಕಾರ್ಯಕ್ರಮಗಳನ್ನು ಇನ್ನಷ್ಟು ಮಾಡಬೇಕು. ಕರುನಾಡಿನ ರುಚಿ ವೈವಿಧ್ಯಗಳನ್ನು ಪರಿಚಯಿಸಬೇಕು.
>
> -ಅಮಲನ್ ಇ. | ಎಚ್‌ಒಡಿ, ಕೆಎಲ್‌ಇ ಇನ್ಸ್ಟಿಟ್ಯೂಟ್ ಆಫ್ ಹೋಟೆಲ್ ಮ್ಯಾನೇಜ್‌ಮೆಂಟ್

> ಮನೆಯಲ್ಲಿ ಚೆನ್ನಾಗಿ ಅಡುಗೆ ಮಾಡುತ್ತಿದ್ದವರು 'ವಿಕ ಕರುನಾಡ ಸ್ವಾದ'ದಂಥ ಇಷ್ಟೊಂದು ದೊಡ್ಡ ವೇದಿಕೆಗೆ ಬಂದು ತಮ್ಮ ಪಾಕಪ್ರತಿಭೆ ತೋರಿಸಲು ಅವಕಾಶ ಕೊಟ್ಟ ವಿಜಯ ಕರ್ನಾಟಕದ ಪ್ರಯತ್ನಕ್ಕೆ ಭೇಷ್ ಹೇಳಲೇಬೇಕು. ಎಷ್ಟೊಂದು ಊರುಗಳಿಂದ ಬಂದಿರುವ ಸ್ಪರ್ಧಿಗಳು ಬಹಳ ಪ್ಯಾಷನೇಟ್ ಆಗಿ ತಮ್ಮದೇ ಆದ ಅಡುಗೆ ಸಲಕರಣೆ, ಸಾಮಗ್ರಿಗಳನ್ನು ತಂದು ಅಡುಗೆ ಮಾಡ್ತೀನಿ ಎಂದು ತೋರಿಸಿದ ಉತ್ಸಾಹವೇ ದೊಡ್ಡ ವಿಷಯ.
>
> -ಸಿರಿ ರವಿಕುಮಾರ್ | ನಟಿ

Freedom Refined Sunflower Oil
ಇಂಡಿಯಾದ ನಂ.1* ಸನ್‌ಫ್ಲವರ್ ಆಯಿಲ್
#ಕೋಚೆಂಗ್‌ದಿಕೋಚ್
*ಭಾರತದ (U+R) ಸನ್‌ಫ್ಲವರ್ ಆಯಿಲ್ ವಿಭಾಗದ ROCP ವಿಭಾಗಕ್ಕೆ ಸಂಬಂಧಿಸಿದಂತೆ, MAT ಫೆಬ್ರವರಿ 2025 ಅವಧಿಗೆ NIQ ರಿಟೇಲ್ ಇಂಡೆಕ್ಸ್ ಡೇಟಾ ಆಧಾರದ ಮೇಲೆ ಜೆಮಿನಿ ಎಡಿಬಲ್ಸ್ ಅಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್ ಹೇಳಿಕೊಳ್ಳುತ್ತದೆ.

ಮಾರ್ಚ್ 28ರಿಂದ ಮೇ 31ರವರೆಗೆ

ಐಪಿಎಲ್ ಸಂಗ್ರಾಮ 2026ರ ಹಂಗಾಮ

2026ರ ಐಪಿಎಲ್ ಅಂಕಪಟ್ಟಿ

ತಂಡ	ಪಂದ್ಯ	ಜಯ	ಸೋಲು	ರದ್ದು	ಅಂಕ	ರನ್ ರೇಟ್
ಪಂಜಾಬ್	8	6	1	1	13	+1.043
ಬೆಂಗಳೂರು	8	6	2	0	12	+1.919
ರಾಜಸ್ಥಾನ	9	6	3	0	12	+0.617
ಹೈದರಾಬಾದ್	8	5	3	0	10	+0.815
ಗುಜರಾತ್	8	4	4	0	08	-0.475
ಚೆನ್ನೈ	8	3	5	0	06	-0.121
ಡೆಲ್ಲಿ	8	3	5	0	06	-1.060
ಕೋಲ್ಕೊತಾ	8	2	5	1	05	-0.751
ಮುಂಬಯಿ	7	2	5	0	04	-0.736
ಲಖನೌ	8	2	6	0	04	-1.106

400 ರನ್ — **ವೈಭವ್ ಸೂರ್ಯವಂಶಿ**, ರಾಜಸ್ಥಾನ ರಾಯಲ್ಸ್

14 ವಿಕೆಟ್ — **ಭುವನೇಶ್ವರ ಕುಮಾರ್**, ರಾಯಲ್ ಚಾಲೆಂಜರ್ಸ್

ಜೈಸ್ವಾಲ್, ವೈಭವ್ ಮಿಂಚಿನಾಟ । ರಾಜಸ್ಥಾನ ರಾಯಲ್ಸ್‌ಗೆ 6 ವಿಕೆಟ್ ಜಯ

ಪಂಜಾಬ್ ಜಯದ ಓಟಕ್ಕೆ ತಡೆ

ಮುಲ್ಲಾನ್‌ಪುರ: ಯಶಸ್ವಿ ಜೈಸ್ವಾಲ್(51; 27 ಎಸೆತ) ಮತ್ತು ಡೊನೊವಾನ್ ಫೆರೇರಾ (52*; 26 ಎಸೆತ) ಅವರ ಸ್ಫೋಟಕ ಬ್ಯಾಟಿಂಗ್ ಜತೆಗೆ ಅಗ್ರ ಕ್ರಮಾಂಕದ ಬ್ಯಾಟರ್‌ಗಳ ಅಮೋಘ ಆಟದ ಫಲವಾಗಿ ರಾಜಸ್ಥಾನ ರಾಯಲ್ಸ್ ತಂಡ ಐಪಿಎಲ್ 40ನೇ ಪಂದ್ಯದಲ್ಲಿ 6 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ತಂಡವನ್ನು ಬಗ್ಗು ಬಡಿಯಿತು. ಇದರೊಂದಿಗೆ ಹಾಲಿ ಟೂರ್ನಿಯಲ್ಲಿ ಪಂಜಾಬ್ ಗೆಲುವಿನ ಓಟಕ್ಕೆ ರಾಯಲ್ಸ್ ತಡೆಯೊಡ್ಡುವಲ್ಲಿ ಯಶಸ್ವಿಯಾಯಿತು.

ಮಹಾರಾಜ ಯಾದವೀಂದ್ರ ಸಿಂಗ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಪಂಜಾಬ್, 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 222 ರನ್ ಕಲೆಹಾಕಿತು. ಇದು ರಾಜಸ್ಥಾನ ವಿರುದ್ಧ ಪಂಜಾಬ್ ಗಳಿಸಿದ ಎರಡನೇ ಗರಿಷ್ಠ ಮೊತ್ತ. ಈ ಮೊದಲು 2020ರಲ್ಲಿ ಶಾರ್ಜಾದಲ್ಲಿ 2 ವಿಕೆಟ್‌ಗೆ 223 ರನ್ ಗಳಿಸಿದ್ದು ದಾಖಲೆ.

223 ರನ್‌ಗಳ ಕಠಿಣ ಗುರಿ ಬೆನ್ನಟ್ಟಿದ ರಾಯಲ್ಸ್, 4 ಎಸೆತಗಳು ಬಾಕಿ ಇರುವಂತೆಯೇ 4 ವಿಕೆಟ್‌ಗೆ 228 ರನ್ ಪೇರಿಸಿತು. ಜೈಸ್ವಾಲ್ ಮತ್ತು ವೈಭವ್ ಹಾಕಿಕೊಟ್ಟ ಬುನಾದಿ ಮೇಲೆ ಇನಿಂಗ್ಸ್ ಕಟ್ಟಿದ ಇತರ ಬ್ಯಾಟರ್‌ಗಳು ತಂಡವನ್ನು ಗೆಲುವಿನ ಲಯಕ್ಕೆ ಮರಳಿಸಿದರು. ಅದರಲ್ಲೂ ಡೊನೊವಾನ್ ಫೆರೇರಾ ಮತ್ತು ಶುಭಂ ದುಬೆ (31*) ಮುರಿಯದ 5ನೇ ವಿಕೆಟ್‌ಗೆ ಕೇವಲ 32 ಎಸೆತಗಳಲ್ಲಿ 77 ರನ್ ಗಳಿಸಿ ತಂಡವನ್ನು ಜಯದ ದಡ ಹತ್ತಿಸಿದರು. ಕಿಂಗ್ಸ್ ಪರ ಯಜ್ವೇಂದ್ರ ಚಹಲ್ 3 ವಿಕೆಟ್ ಕಿತ್ತು ಗಮನ ಸೆಳೆದರು. ಕಿಂಗ್ಸ್ ಹಾಲಿ ಟೂರ್ನಿಯಲ್ಲಿ 7 ಪಂದ್ಯಗಳ ನಂತರ ಮೊದಲ ಸೋಲಿಗೆ ಗುರಿಯಾಯಿತು.

ಯಶಸ್ವಿ ಜೈಸ್ವಾಲ್

ಇದಕ್ಕೂ ಮುನ್ನ 17 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 167 ರನ್ ಗಳಿಸಿದ ಕಳೆದ ಬಾರಿಯ ರನ್ನರ್ ಅಪ್ ಪಂಜಾಬ್, ಮಾರ್ಕಸ್ ಸ್ಟೋಯಿನ್ಸ್(62; 22 ಎಸೆತ, 4 ಫೋರ್, 6 ಸಿಕ್ಸರ್) ಅವರ ಸ್ಫೋಟಕ ಬ್ಯಾಟಿಂಗ್ ಸಾಹಸದಿಂದ ರನ್ ಮಳೆಯಲ್ಲಿ ಮಿಂದೆದ್ದಿತು. ಕೊನೆಯ ಮೂರು ಓವರ್‌ಗಳಲ್ಲಿ 55 ರನ್ ಕಲೆಹಾಕುವ ಮೂಲಕ 200ಕ್ಕೂ ಅಧಿಕ ರನ್ ಗಳಿಸುವಲ್ಲಿ ಯಶಸ್ವಿಯಾಯಿತು. ಬ್ರಿಜೇಶ್ ಶರ್ಮ ಎಸೆದ 20ನೇ ಓವರ್‌ನಲ್ಲಿ ಮಿಂಚಿನ ಆಟವಾಡಿದ ಸ್ಟೋಯಿನ್ಸ್, ಮೂರು ಫೋರ್, 2 ಸಿಕ್ಸರ್ ಸಹಿತ 24 ರನ್ ಸೂರೆಗೊಂಡರಲ್ಲದೆ, ಅರ್ಧ ಶತಕ ಗಳಿಸಿ ಕಂಗೊಳಿಸಿದರು.

ಇದಕ್ಕೂ ಮುನ್ನ 35 ಎಸೆತಗಳಲ್ಲಿ ಅರ್ಧ ಶತಕ ಪೂರೈಸಿದ ಪ್ರಭ್ ಸಿಮ್ರನ್ ಸಿಂಗ್, 44 ಎಸೆತಗಳಲ್ಲಿ 6 ಫೋರ್, 1 ಸಿಕ್ಸರ್ ಸಹಿತ 59 ರನ್ ಗಳಿಸಿ ತಂಡಕ್ಕೆ ಉತ್ತಮ ಅಡಿಪಾಯ ಹಾಕಿದರು. ಆದರೆ ಅಗ್ರ ಕ್ರಮಾಂಕದ ಪ್ರಿಯಾಂಶ್ ಆರ್ಯ(29; 11 ಎಸೆತ), ಕೂಪರ್ ಕನೋಲಿ(30; 14 ಎಸೆತ) ಮತ್ತು ನಾಯಕ ಶ್ರೇಯಸ್ ಅಯ್ಯರ್(30; 27 ಎಸೆತ) ಅವರ ಬಿರುಸಿನ ಬ್ಯಾಟಿಂಗ್ ನಡೆಸಿದರೂ ವೈಯಕ್ತಿಕ ಮೊತ್ತವನ್ನು ದೊಡ್ಡದಾಗಿ ಪರಿವರ್ತಿಸಲು ಸಾಧ್ಯವಾಗಲಿಲ್ಲ.

ಸಂಕ್ಷಿಪ್ತ ಸ್ಕೋರ್

ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 222 (ಪ್ರಭ್‌ಸಿಮ್ರನ್ ಸಿಂಗ್ 59, ಮಾರ್ಕಸ್ ಸ್ಟೋಯಿನ್ಸ್ 62*, ಶ್ರೇಯಸ್ 30, ಕನೋಲಿ 30, ಪ್ರಿಯಾಂಶ್ ಆರ್ಯ 29; ಯಶ್ ರಾಜ್ ಪುಂಜ 41ಕ್ಕೆ 2).

ರಾಜಸ್ಥಾನ ರಾಯಲ್ಸ್: 19.2 ಓವರ್‌ಗಳಲ್ಲಿ 228 (ಜೈಸ್ವಾಲ್ 51, ಡೊನೊವಾನ್ 52*, ಸೂರ್ಯವಂಶಿ 43, ದುಬೆ 31*, ಪರಾಗ್ 29; ಯಜ್ವೇಂದ್ರ 36ಕ್ಕೆ 3).

ಮುಂಬಯಿ ಇಂಡಿಯನ್ಸ್‌ಗೆ ಸನ್‌ರೈಸರ್ಸ್ ಸತ್ವ ಪರೀಕ್ಷೆ

ಪುಟಿದೇಳುವ ಒತ್ತಡದಲ್ಲಿ ಹಾರ್ದಿಕ್ ಪಡೆ

ಮುಂಬಯಿ: ಅಸ್ಥಿರ ಪ್ರದರ್ಶನದಿಂದ ಬಸವಳಿದಿರುವ ಮುಂಬಯಿ ಇಂಡಿಯನ್ಸ್ ತಂಡ ಐಪಿಎಲ್ 41ನೇ ಪಂದ್ಯದಲ್ಲಿ ಬುಧವಾರ ಸನ್‌ರೈಸರ್ಸ್ ಹೈದರಾಬಾದ್ ತಂಡದ ಸತ್ವ ಪರೀಕ್ಷೆಯನ್ನು ಎದುರಿಸಲಿದೆ.

ಐದು ಬಾರಿಯ ಚಾಂಪಿಯನ್ ಮುಂಬಯಿ ಈ ಬಾರಿ ನಿರೀಕ್ಷಿತ ಪ್ರದರ್ಶನ ನೀಡಿಲ್ಲ. ಟೂರ್ನಿಯ ಅರ್ಧ ಭಾಗ ಮುಗಿದಿರುವ ಕಾರಣ ಮುಂದಿನ ಪಂದ್ಯಗಳು ತಂಡದ ಅಸ್ತಿತ್ವಕ್ಕೆ ಅತ್ಯಂತ ಮಹತ್ವದ್ದಾಗಿವೆ. ಅದರಲ್ಲೂ ಆಡಿರುವ ಏಳು ಪಂದ್ಯಗಳಲ್ಲಿ ಕೇವಲ 2ರಲ್ಲಿ ಜಯ ಹಾಗೂ 5ರಲ್ಲಿ ಸೋಲು ಕಂಡಿರುವ ಇಂಡಿಯನ್ಸ್, ಮುಂದಿನ ಹಂತವನ್ನು ಸುಗಮ ಮಾಡಿಕೊಳ್ಳಬೇಕಾದರೆ, ಗೆಲುವಿನ ಲಯವನ್ನು ಕಂಡುಕೊಳ್ಳುವುದು ಅನಿವಾರ್ಯವಾಗಿದೆ.

ಸತತ 4 ಸೋಲುಗಳ ನಂತರ ಗುಜರಾತ್ ಟೈಟನ್ಸ್ ವಿರುದ್ಧ ಜಯದ ಹಳಿಗೆ ಮರಳಿದ್ದ ಮುಂಬಯಿ, ಸಾಂಪ್ರದಾಯಿಕ ಎದುರಾಳಿ ಚೆನ್ನೈ ಎದುರು ಮುಗ್ಗರಿಸಿರುವುದು ತಂಡದ ಆತ್ಮಸ್ಥೈರ್ಯವನ್ನು ಕುಗ್ಗಿಸಿದೆ. ಆದಾಗ್ಯೂ, ಪ್ಲೇಆಫ್ ಹಾದಿಯಲ್ಲಿ ಮುನ್ನಡೆಯಬೇಕಾದರೆ, ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಸ್ಥಿರತೆ ಕಾಯ್ದುಕೊಂಡಿರುವ ಸನ್‌ರೈಸರ್ಸ್ ವಿರುದ್ಧ ಪುಟಿದೇಳಲೇಬೇಕಿದೆ. ಇನ್ನೊಂದು ಪಂದ್ಯ ಸೋತರೂ ಮುಂಬಯಿ ಮುಂದಿನ ಹಾದಿಯನ್ನು ದುರ್ಗಮ ಮಾಡಿಕೊಳ್ಳಲಿದೆ. ಹೀಗಾಗಿ ಹಾರ್ದಿಕ್ ಮತ್ತು ತಂಡಕ್ಕೆ ಹೈದರಾಬಾದ್ ಎದುರಿನ ಪಂದ್ಯ ನಿರ್ಣಾಯಕವಾಗಿದೆ.

ಅತ್ತ ಸತತ 4 ಗೆಲುವುಗಳಿಂದ ಬೀಗುತ್ತಿರುವ ಹೈದರಾಬಾದ್, 10 ಅಂಕಗಳೊಂದಿಗೆ ಉತ್ತಮ ಸ್ಥಿತಿಯಲ್ಲಿದೆ. ಕನಿಷ್ಠ ಇನ್ನೆರಡು ಪಂದ್ಯಗಳಲ್ಲಿ ಗೆದ್ದು ಪ್ಲೇಆಫ್ ಹಂತವನ್ನು ಹತ್ತಿರವಾಗಿಸಿಕೊಳ್ಳುವ ಗುರಿಯಲ್ಲಿರುವ ಹೈದರಾಬಾದ್, ಮತ್ತೊಂದು ಜಯದ ನಿರೀಕ್ಷೆಯಲ್ಲಿದೆ. ಉಭಯ ತಂಡಗಳು 25ರಲ್ಲಿ ಮುಖಾಮುಖಿಯಾಗಿದ್ದು, 15ರಲ್ಲಿ ಮುಂಬಯಿ ಹಾಗೂ 10ರಲ್ಲಿ ಹೈದರಾಬಾದ್ ಜಯ ಗಳಿಸಿವೆ.

ಪಂದ್ಯ ಆರಂಭ: ರಾತ್ರಿ 7.30
ಸ್ಥಳ: ವಾಂಖೆಡೆ ಕ್ರೀಡಾಂಗಣ, ಮುಂಬಯಿ
ನೇರ ಪ್ರಸಾರ: ಸ್ಟಾರ್‌ಸ್ಪೋರ್ಟ್ಸ್

ರೋಹಿತ್ ಶರ್ಮ

ಪ್ಯಾಟ್ ಕಮಿನ್ಸ್

ಆದ್ಯ, ಶ್ರೇಯಾ ಚಾಂಪಿಯನ್ಸ್

ಮೈಸೂರು: ಬೆಂಗಳೂರಿನ ಆದ್ಯ ಗೌಡ ಇಲ್ಲಿ ನಡೆದ ರಾಜ್ಯಮಟ್ಟದ 13 ವರ್ಷದೊಳಗಿನವರ ಮುಕ್ತ ಮತ್ತು ಬಾಲಕಿಯರ ಚೆಸ್ ಚಾಂಪಿಯನ್‌ಷಿಪ್‌ನ ಮುಕ್ತ ವಿಭಾಗದಲ್ಲಿ ಚಾಂಪಿಯನ್ ಪಟ್ಟ ಗೆದ್ದುಕೊಂಡರು. ಬಾಲಕಿಯರಿಗಾಗಿ ಪ್ರತ್ಯೇಕ ವಿಭಾಗವಿದ್ದರೂ ಮುಕ್ತ ವಿಭಾಗದಲ್ಲಿ ಸ್ಪರ್ಧಿಸಿದ ಆದ್ಯ ಎಲ್ಲರ ಸವಾಲನ್ನು ಮೆಟ್ಟಿನಿಂತು ಒಟ್ಟಾರೆ 8 ಅಂಕಗಳೊಂದಿಗೆ ಪ್ರಶಸ್ತಿಗೆ ಮುತ್ತಿಟ್ಟರು. ಬೆಂಗಳೂರಿನ ಇಶಾನ್ ಭನ್ಸಾಲಿ 7.5 ಅಂಕಗಳೊಂದಿಗೆ ರನ್ನರ್ ಅಪ್ ಆದರು.

13 ವರ್ಷದೊಳಗಿನವರ ಚೆಸ್ ಚಾಂಪಿಯನ್‌ಷಿಪ್

ಬಾಲಕಿಯರ ವಿಭಾಗದಲ್ಲಿ ಬೆಂಗಳೂರಿನ ಶ್ರೇಯಾ ರಾಜೇಶ್ (7.5 ಅಂಕ) ಮತ್ತು ಬೆಂಗಳೂರಿನವರೇ ಆದ ಇಂದು ಶೀತಲ(7.5) ಕ್ರಮವಾಗಿ ಮೊದಲೆರಡು ಸ್ಥಾನಗಳನ್ನು ಹಂಚಿಕೊಂಡರು. ಶ್ರೇಯಾ ರಾಜೇಶ್ ಟೈಬ್ರೇಕರ್ ಮೂಲಕ ಪ್ರಶಸ್ತಿಗೆ ಪಾತ್ರರಾದರು.

ಇಂಗ್ಲೆಂಡ್ ಟಿ20 ತಂಡ ಪ್ರಕಟ

ಮಹಿಳಾ ಟಿ20 ವಿಶ್ವಕಪ್

ಲಂಡನ್: ಜೂನ್ 12ರಿಂದ ಆರಂಭವಾಗಲಿರುವ ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಆಲ್ ರೌಂಡರ್ ನ್ಯಾಟ್ ಸ್ಕಿವರ್ ಬ್ರಂಟ್ 15 ಸದಸ್ಯರ ಇಂಗ್ಲೆಂಡ್ ತಂಡವನ್ನು ಮುನ್ನಡೆಸಲಿದ್ದಾರೆ ಎಂದು ಇಸಿಬಿ ಮಂಗಳವಾರ ಘೋಷಿಸಿದೆ. ಬ್ರಂಟ್ ನೇತೃತ್ವದ ಅದೇ ಇಂಗ್ಲೆಂಡ್ ತಂಡವು ಮೇ-ಜೂನ್‌ನಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ವಿರುದ್ಧದ ಸರಣಿಯಲ್ಲೂ ಪಾಲ್ಗೊಳ್ಳಲಿದೆ. ಜಾಗತಿಕ ಟಿ20 ಟೂರ್ನಿಯಲ್ಲಿ ಬ್ರಂಟ್ 7ನೇ ಸಲ ಪಾಲ್ಗೊಳ್ಳುತ್ತಿದ್ದಾರೆ.

ಇಂಗ್ಲೆಂಡ್ ಮಹಿಳಾ ತಂಡ: ನ್ಯಾಟ್ ಸ್ಕಿವರ್ ಬ್ರಂಟ್ (ನಾಯಕಿ), ಲಾರೆನ್ ಬೆಲ್, ಆಲಿಸ್ ಕ್ಯಾಪ್ಸಿ, ಟಿಲ್ಲಿ ಕಾರ್ಟೀನ್-ಕೋಲ್ಮನ್, ಚಾರ್ಲಿ ಡೀನ್, ಸೋಫಿಯಾ ಡಂಕ್ಲಿ, ಸೋಫಿ ಎಕ್ಲೆಸ್ಟೋನ್, ಲಾರೆನ್ ಫೈಲರ್, ಡ್ಯಾನಿ ಗಿಬ್ಸನ್, ಆಮಿ ಜೋನ್ಸ್, ಫ್ರೇಯಾ ಕೆಂಪ್, ಹೀದರ್ ನೈಟ್, ಲಿನ್ಸೆ ಸ್ಮಿತ್, ಇಸ್ಸಿ ವಾಂಗ್, ಡ್ಯಾನಿ ವ್ಯಾಟ್-ಹಾಡ್ಜ್.

ಭಾರತಕ್ಕೆ ನಾಲ್ಕು ಚಿನ್ನ

ಹೊಸದಿಲ್ಲಿ: ಸಮೋವಾದ ಆಪಿಯಾದಲ್ಲಿ ನಡೆಯುತ್ತಿರುವ ಕಾಮನ್‌ವೆಲ್ತ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್ ಮತ್ತು ಯೂನಿವರ್ಸಲ್ ಕಪ್‌ನಲ್ಲಿ(ಸೀನಿಯರ್) ಭಾರತೀಯ ಲಿಫ್ಟರ್‌ಗಳು ನಾಲ್ಕು ಚಿನ್ನದ ಪದಕಗಳನ್ನು ಜಯಿಸಿದ್ದಾರೆ.

ಕಾಮನ್‌ವೆಲ್ತ್ ಯೂತ್ ಚಾಂಪಿಯನ್‌ಷಿಪ್

ಮಂಗಳವಾರ ನಡೆದ ಪುರುಷರ 65 ಕೆ.ಜಿ ವಿಭಾಗದ ಸ್ಪರ್ಧೆಯಲ್ಲಿ ಸುನಿಲ್ ಸಿಂಗ್ 271 ಕೆ.ಜಿ ಭಾರ ಎತ್ತುವುದರೊಂದಿಗೆ ಚಿನ್ನ ಗೆದ್ದರೆ, ಐಸಂಗ್ವಾ ಗೊಗೊಯ್ ಮಹಿಳೆಯರ 58 ಕೆ.ಜಿ ವಿಭಾಗ ಮತ್ತು ಅಭಿನೋಬ್ ಗೊಗೊಯ್ ಪುರುಷರ 71 ಕೆ.ಜಿ ವಿಭಾಗದದಲ್ಲಿ ಚಿನ್ನದ ಸಾಧನೆ ಮಾಡಿದರು. ಯೂನಿವರ್ಸಲ್ ಕಪ್‌ನ ಪುರುಷರ 65 ಕೆ.ಜಿ ವಿಭಾಗದಲ್ಲಿ ಚಾರು ಪೆಸಿ 289 ಕೆ.ಜಿ ತೂಕ ಎತ್ತುವುದರೊಂದಿಗೆ ಮೊದಲ ಪೋಡಿಯಂ ಸ್ಥಾನ ಗಳಿಸಿದರು.

ಭಾರತ ಅಭಿಯಾನ ಅಂತ್ಯ

ಉಬೆರ್ ಕಪ್

ಹಾರ್ಸೆನ್ಸ್ (ಡೆನ್ಮಾರ್ಕ್): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧೂ ಅವರ ಉಪಸ್ಥಿತಿಯ ನಡುವೆಯೂ ಭಾರತ ಮಹಿಳಾ ತಂಡ ಬಲಿಷ್ಠ ಚೀನಾ ಎದುರು 0-5 ಅಂತರದಲ್ಲಿ ಮಂಡಿಯೂರಿತು. ಹೀಗಾಗಿ ಉಬೆರ್ ಕಪ್ ಫೈನಲ್ಸ್‌ನಲ್ಲಿ ಭಾರತ ಗುಂಪು ಹಂತದಲ್ಲೇ ಅಭಿಯಾನ ಕೊನೆಗೊಳಿಸಿದೆ.



ಆತಿಥೇಯ ಡೆನ್ಮಾರ್ಕ್ ವಿರುದ್ಧ 2-3ರಲ್ಲಿ ವೀರೋಚಿತ ಸೋಲಿನೊಂದಿಗೆ ಅಭಿಯಾನ ಆರಂಭಿಸಿದ ಭಾರತ, ಉಕ್ರೇನ್ ವಿರುದ್ಧ 4-1ರಲ್ಲಿ ಪುಟಿದೆದ್ದಿತು. ಆದರೆ ಉಬೆರ್ ಕಪ್ ಇತಿಹಾಸದಲ್ಲಿ 16 ಬಾರಿ ಪ್ರಶಸ್ತಿ ಗೆದ್ದಿರುವ ಚೀನಾ ತಂಡದ ಸವಾಲನ್ನು ಮೆಟ್ಟಿನಿಲ್ಲಲು ಭಾರತಕ್ಕೆ ಸಾಧ್ಯವಾಗಲಿಲ್ಲ. ಸಿಂಧೂ ಅವರಲ್ಲದೆ, ಇಶಾರಾಣಿ , ದೇವಿಕಾ ಸಿಹಾಗ್, ಉನ್ನತಿ ಹೂಡಾ ಮತ್ತು ತನ್ವಿ ಶರ್ಮ ಸೇರಿದಂತೆ ಯಾರೊಬ್ಬರೂ ಸುಧಾರಿತ ಪ್ರದರ್ಶನ ನೀಡಲು ವಿಫಲಗೊಂಡರು.

ಪುರುಷರ ಮೇಲೆ ಎಲ್ಲರ ಕಣ್ಣು: ಮಹಿಳೆಯರ ಹೋರಾಟ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಎಲ್ಲರ ಚಿತ್ತ ಪುರುಷರ ತಂಡದತ್ತ ನೆಟ್ಟಿದೆ. ಬುಧವಾರ ನಡೆಯಲಿರುವ ಥಾಮಸ್ ಕಪ್‌ನ ಗುಂಪು ಹಂತದ ಅಂತಿಮ ಪಂದ್ಯದಲ್ಲಿ ಭಾರತ ತಂಡವು ಬಲಿಷ್ಠ ಚೀನಾ ತಂಡದ ಸವಾಲು ಎದುರಿಸಲಿದೆ. 2022ರ ಚಾಂಪಿಯನ್ಸ್ ಭಾರತ, ಕೆನಡಾ ಮತ್ತು ಆಸ್ಟ್ರೇಲಿಯಾ ವಿರುದ್ಧ ಗೆದ್ದು ಈಗಾಗಲೇ ಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ. ಸದ್ಯ 'ಎ' ಗುಂಪಿನ ಅಗ್ರಸ್ಥಾನಕ್ಕಾಗಿ ಚೀನಾ ಎದುರು ಸೆಣಸಬೇಕಿದೆ.

ಈಶಾನ್ಯ ರಾಜ್ಯಗಳಿಗೆ 6 ಒಳಾಂಗಣ ಕ್ರಿಕೆಟ್ ಅಕಾಡೆಮಿ ಉದ್ಘಾಟಿಸಿದ ಪ್ರಧಾನಿ ಮೋದಿ

ಗ್ಯಾಂಗ್ಟಕ್: ಈಶಾನ್ಯ ಭಾರತದಾದ್ಯಂತ ಆರು ಅತ್ಯಾಧುನಿಕ ಒಳಾಂಗಣ ಕ್ರಿಕೆಟ್ ಅಕಾಡೆಮಿಗಳನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಉದ್ಘಾಟಿಸಿದರು.

ರಂಗ್ಪೋ (ಸಿಕ್ಕಿಂ), ದೋಯಿಮುಖ್ (ಅರುಣಾಚಲ ಪ್ರದೇಶ), ಇಂಫಾಲ್ (ಮಣಿಪುರ), ಮದನ್ ಕುರ್ಕ್ಲಾಂಗ್ (ಮೇಘಾಲಯ), ಐಜ್ವಾಲ್ (ಮಿಜೋರಾಂ) ಮತ್ತು ದಿಮಾಪುರ (ನಾಗಾಲ್ಯಾಂಡ್)ದಲ್ಲಿ ಅಕಾಡೆಮಿಗಳನ್ನು ಸ್ಥಾಪಿಸಲಾಗಿದೆ.

ಸಿಕ್ಕಿಂನ ಗ್ಯಾಂಗ್ಟಕ್‌ನಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ಅವರು ವರ್ಚುವಲ್ ಮೂಲಕ ಸೌಲಭ್ಯಗಳನ್ನು ಉದ್ಘಾಟಿಸಿದರು. ಇದು ಕ್ರೀಡಾ ಮೂಲಸೌಕರ್ಯಗಳನ್ನು ಬಲಪಡಿಸುವ ಮತ್ತು ಈಶಾನ್ಯ ಪ್ರದೇಶದ ಅಪಾರ ಕ್ರೀಡಾ ಸಾಮರ್ಥ್ಯವನ್ನು ಅನಾವರಣಗೊಳಿಸುವ ಮಹತ್ವದ ಹೆಜ್ಜೆಯಾಗಿದೆ ಎಂದು ಬಿಸಿಸಿಐ ಪ್ರಕಟಣೆಯಲ್ಲಿ ತಿಳಿಸಿದೆ. ಉದ್ಘಾಟನಾ ಸಮಾರಂಭದಲ್ಲಿ ಐಸಿಸಿ ಅಧ್ಯಕ್ಷ ಜಯ್ ಶಾ ಮತ್ತು ಬಿಸಿಸಿಐನ ಎಲ್ಲ ಪದಾಧಿಕಾರಿಗಳು ಭಾಗವಹಿಸಿದ್ದರು.

ವಿರಾಟ್ ಕೊಹ್ಲಿ ಹಸ್ತಾಕ್ಷರ ಪಡೆಯಲಾಗದೆ ಕಣ್ಣೀರಿಟ್ಟ ಬಾಲಕ

ಹೊಸದಿಲ್ಲಿ: ಬ್ಯಾಟಿಂಗ್ ತಾರೆ ವಿರಾಟ್ ಕೊಹ್ಲಿ ಅವರ ಹಸ್ತಾಕ್ಷರ ಪಡೆಯಲಾಗದೆ ಬಾಲಕನೊಬ್ಬ ಕಣ್ಣೀರಿಟ್ಟ ಸಂಗತಿ ಸಾಮಾಜಿಕ ತಾಣದಲ್ಲಿ ವೈರಲ್ ಆಗಿದೆ.

ಹೋಟೆಲ್‌ನಿಂದ ಹೊರಹೋಗುವ ವೇಳೆ ಕೊಹ್ಲಿ ಅವರ ಆಟೋಗ್ರಾಫ್ ಪಡೆಯಲು ಬಾಲಕ ಪ್ರಯತ್ನಿಸುತ್ತಾನೆ. ಆದರೆ ಭದ್ರತಾ ಸಿಬ್ಬಂದಿ ಆ ಮಗುವನ್ನು ತಡೆಯುತ್ತಾರೆ. ಈ ಕುರಿತ ವಿಡಿಯೊ ಸಾಮಾಜಿಕ ತಾಣಗಳಲ್ಲಿ ಹರಿದಾಡಿದೆ. ಆದರೆ ಇನ್ನೊಂದೆಡೆ ಮಗು ಒಂದೆರಡು ಬಾರಿ ಕೊಹ್ಲಿಯನ್ನು ಸಂಪರ್ಕಿಸಲು ಯತ್ನಿಸಿತು. ಆದರೆ ಅಧಿಕಾರಿಗಳು ಆತನನ್ನು ತಡೆದರು ಎಂದು ಸುದ್ದಿಯಾಗಿದೆ. ಬಾಲಕನನ್ನು ಗಮನಿಸದ ಕೊಹ್ಲಿ ಹಾಗೆಯೇ ಹೋಗುತ್ತಾರೆ. ಇದರಿಂದ ಹತಾಶೆಗೆ ಒಳಗಾಗುವ ಮಗು ಕಣ್ಣೀರು ಸುರಿಸಿ ಬೇಸರದಿಂದ ತನ್ನ ಬ್ಯಾಟ್ ಅನ್ನು ಎಸೆಯುತ್ತದೆ. ಕೊಹ್ಲಿ ಅವರ ನಡವಳಿಕೆಯ ಬಗ್ಗೆ ಪರ ಹಾಗೂ ವಿರೋಧ ವ್ಯಕ್ತವಾಗಿದೆ.

ಸ್ಪರ್ಧೆಗಿಳಿಯಲು ವಿನೇಶ್ ಸಜ್ಜು

ಹೊಸದಿಲ್ಲಿ: ಉತ್ತರ ಪ್ರದೇಶದ ಗೊಂಡಾದಲ್ಲಿ ಮೇ 10 ರಿಂದ 12 ರವರೆಗೆ ನಡೆಯಲಿರುವ ರ್‍ಯಾಂಕಿಂಗ್ ಕುಸ್ತಿ ಸ್ಪರ್ಧೆಗಳಿಗೆ ಹೆಸರು ನೋಂದಾಯಿಸಿಕೊಂಡಿರುವುದಾಗಿ ಸ್ಟಾರ್ ಕುಸ್ತಿ ಪಟು ವಿನೇಶ್ ಫೋಗಟ್ ಮಂಗಳವಾರ ತಿಳಿಸಿದ್ದಾರೆ.

ಆರಂಭದಲ್ಲಿ ಹೆಸರು ನೋಂದಾಯಿಸಲು ಸಾಧ್ಯವಾಗದ ಕಾರಣ ವಿನೇಶ್ ಅವರು, ತಾವು ಸ್ಪರ್ಧೆಗಳಲ್ಲಿ ಭಾಗವಹಿಸುವುದಕ್ಕೆ ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ತಡೆ ಹಾಕುತ್ತಿದೆ ಎಂದು ಸೋಮವಾರ ಆರೋಪಿಸಿದ್ದರು. ಈ ಸಂಬಂಧ ಕುಸ್ತಿ ಒಕ್ಕೂಟ ಸ್ಪಷ್ಟನೆ ನೀಡಿದ್ದು, ''ವಿನೇಶ್ ಅವರಿಗಷ್ಟೇ ಅಲ್ಲ, ಹಲವು ಕುಸ್ತಿ ಸ್ಪರ್ಧಿಗಳಿಗೂ ಪೋರ್ಟಲ್‌ನಲ್ಲಾದ ತಾಂತ್ರಿಕ ದೋಷದಿಂದಾಗಿ ಅಗತ್ಯ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಿರಲಿಲ್ಲ,'' ಎಂದು ಹೇಳಿದೆ. ಪ್ರವೇಶ ಪ್ರಕ್ರಿಯೆಗೆ ಸಂಬಂಧಿಸಿದ ಲಿಂಕ್ ಮಂಗಳವಾರ ಬೆಳಗ್ಗೆ ಲಭ್ಯವಾದ ತಕ್ಷಣ ವಿನೇಶ್ ಹೆಸರು ನೋಂದಾಯಿಸಿಕೊಂಡಿದ್ದಾರೆ.

''ಮುಂಬರುವ ರ್‍ಯಾಂಕಿಂಗ್ ಟೂರ್ನಿಯಲ್ಲಿ ಪಾಲ್ಗೊಳ್ಳಲು ನನ್ನ ಪ್ರವೇಶ ಪ್ರಕ್ರಿಯೆ ಮಂಗಳವಾರ ಬೆಳಗ್ಗೆ ಪೂರ್ಣಗೊಂಡಿದೆ. ಸೋಮವಾರ ಲಿಂಕ್ ಸ್ಥಗಿತಗೊಂಡ ಕಾರಣ ನನಗೆ ಇದನ್ನು ಪೂರೈಸಲು ಆಗಿರಲಿಲ್ಲ, ನಿಮ್ಮೆಲ್ಲರ ಬೆಂಬಲಕ್ಕಾಗಿ ಧನ್ಯವಾದಗಳು,'' ಎಂದು ಸಾಮಾಜಿಕ ಜಾಲತಾಣದಲ್ಲಿ ಅವರು ಬರೆದುಕೊಂಡಿದ್ದಾರೆ.

ಭಾರತ ಪುರುಷರ ತಂಡ ಶುಭಾರಂಭ

ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್

ಲಂಡನ್: ಭಾರತ ಪುರುಷರ ತಂಡವು ಇಲ್ಲಿ ಆರಂಭವಾದ ವಿಶ್ವ ತಂಡ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿದೆ. ಇದೇ ವೇಳೆ ಮಹಿಳಾ ತಂಡವು ಮೊದಲ ಸುತ್ತಿನಲ್ಲಿ ವಾಕ್ ಓವರ್ ಪಡೆದಿದೆ.

ಮಂಗಳವಾರ ನಡೆದ ಆರಂಭಿಕ ಪಂದ್ಯದಲ್ಲಿ ಪುರುಷರ ತಂಡ 3-0 ಅಂತರದಲ್ಲಿ ಟುನಿಷಿಯಾಗೆ ಆಘಾತ ನೀಡಿತು. ಮನುಷಾ ಶಾ, ಮನವ್ ಠಕ್ಕರ್ ಮತ್ತು ಹರ್ಮೀತ್ ದೇಸಾಯಿ ಭಾರತದ ಪರ ಗಮನಾರ್ಹ ಪ್ರದರ್ಶನ ನೀಡಿದರು. ಠಕ್ಕರ್ ಮತ್ತು ದೇಸಾಯಿ ತಲಾ 3-0 ಅಂತರದಲ್ಲಿ ತಮ್ಮ ಎದುರಾಳಿಗಳನ್ನು ಮಣಿಸುವ ಮುನ್ನ ಶಾ 3-1ರಲ್ಲಿ ತಮ್ಮ ಎದುರಾಳಿಯನ್ನು ಸೋಲಿಸಿದರು.

ಗ್ರೂಪ್ 7ರಲ್ಲಿ ಸ್ಥಾನ ಪಡೆದಿರುವ ಭಾರತ ಪುರುಷರ ತಂಡವು, ಸ್ಲೊವಾಕಿಯಾ ಮತ್ತು ಗ್ವಾಟೆಮಾಲಾ ತಂಡಗಳನ್ನು ಎದುರಿಸಲಿದೆ. ಈ ಮಧ್ಯೆ, ಭಾರತ ಮಹಿಳಾ ತಂಡವು ಉಗಾಂಡದಿಂದ ವಾಕ್ ಓವರ್ ಪಡೆಯಿತು.

ಹಾರ್ಸ್ ಪವರ್

ದೆಹಲಿ ರೇಸ್ ■ ಅಶ್ವಬಂಧು

ಗೆಲುವಿನ ತವಕದಲ್ಲಿ ಡಿವಿಟ್

ಜುಲ್ಫಿಕರ್ ಖಾನ್ ತರಬೇತಿಯಲ್ಲಿ ಪಳಗಿರುವ ಡಿವಿಟ್ ಬುಧವಾರದ ದೆಹಲಿ ರೇಸ್‌ಗಳ ಪ್ರಧಾನ ಆಕರ್ಷಣೆ ಅರ್ಬನ್ ಗ್ಯಾಲಪ್ ಪ್ಲೇಟ್ ಗೆಲ್ಲುವ ಅವಕಾಶ ಹೊಂದಿದೆ. 6 ರೇಸ್‌ಗಳನ್ನು ಏರ್ಪಡಿಸಿದ್ದು, 1ನೇ ರೇಸ್ ಮಧ್ಯಾಹ್ನ 3:30ಕ್ಕೆ ಪ್ರಾರಂಭವಾಗಲಿವೆ.

ನಮ್ಮ ಆಯ್ಕೆ

- 1ನೇ ರೇಸ್: ನಿಜ್ಜಾಟಿ ಮಲಾಂಗ್ 4, ಗರ್ಲ್ ಪವರ್ 3, ಮಾಸ್ಟರ್ ಬಾಂಬರ್ 1
- 2ನೇ ರೇಸ್: ಇನ್ಸ್ಟಾ ಮಿಲಿಯನೇರ್ 5, ವೆರೊನಿಕ 3, ಬ್ರೆಡ್ ಎನ್ ಬಟರ್ 6
- 3ನೇ ರೇಸ್: ಜೆಟ್ ಥಂಡರ್ 5, ಅಶ್ವಜುಬಿಲಿ 2, ಡ್ಯಾಶಿಂಗ್ ಹ್ಯಾರಿ 3
- 4ನೇ ರೇಸ್: ಬಹದೂರ್ 1, ಬೆಸ್ಟ್ ಇನ್ ಬ್ಯೂಸಿನೆಸ್ 2, ಬಿಗ್ ಟೈಮರ್ 3
- 5ನೇ ರೇಸ್: ಡಿವಿಟ್ 9, ರಾಕೆಟ್ ರಾಡ್ 4, ಫಸ್ಟ್ ಕ್ಲಾಸ್ 7
- 6ನೇ ರೇಸ್: ಹೀರ್ 2, ಅಶ್ವಡೆನಾಲಿ 1, ಲೇಡಿ ಡೇಂಜರ್ 5

ಮಲ್ಟಿ-ಲೆಗ್ ಪೂಲ್ಸ್:

- ಜಾಕ್ಪಾಟ್: 2,3,4,5,6; ಟ್ರೆಬಲ್: 4,5,6

ಅತ್ಯುತ್ತಮ ಬೆಟ್ : ನಿಜ್ಜಾಟಿ ಮಲಾಂಗ್

ಟಿ20 ರ‍್ಯಾಂಕಿಂಗ್: ಮಂಧಾನ ಕುಸಿತ, ದೀಪ್ತಿ ಜಿಗಿತ

ದುಬೈ: ಭಾರತ ಮಹಿಳಾ ಕ್ರಿಕೆಟ್ ತಂಡದ ಉಪನಾಯಕಿ ಸ್ಮೃತಿ ಮಂಧಾನ ಐಸಿಸಿ ಮಂಗಳವಾರ ಬಿಡುಗಡೆ ಮಾಡಿದ ನೂತನ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ಪಟ್ಟಿಯಲ್ಲಿ ಒಂದು ಸ್ಥಾನ ಕುಸಿದು ಐದನೇ ಸ್ಥಾನ ಗಳಿಸಿದ್ದಾರೆ. ಏತನ್ಮಧ್ಯೆ, ಆಲ್ ರೌಂಡರ್ ದೀಪ್ತಿ ಶರ್ಮ ಬೌಲರ್‌ಗಳ ಪಟ್ಟಿಯಲ್ಲಿ 4ನೇ ಸ್ಥಾನಕ್ಕೆ ಬಡ್ತಿ ಪಡೆದಿದ್ದಾರೆ.

ಬ್ಯಾಟರ್‌ಗಳ ಪಟ್ಟಿಯಲ್ಲಿ ಇತರ ಮಹತ್ವದ ಬೆಳವಣಿಗೆಯೆಂದರೆ ಟೀಮ್ ಇಂಡಿಯಾದ ನಾಯಕಿ ಹರ್ಮನ್‌ಪ್ರೀತ್ ಕೌರ್ 646 ರೇಟಿಂಗ್ ಅಂಕಗಳೊಂದಿಗೆ ಮತ್ತೆ ಅಗ್ರ 10ರೊಳಗೆ ಸ್ಥಾನ ಗಿಟ್ಟಿಸಿದ್ದಾರೆ. ಇತ್ತೀಚೆಗೆ ಮುಕ್ತಾಯಗೊಂಡ ದ.ಆಫ್ರಿಕಾ ವಿರುದ್ಧದ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಕಾರಣ ಕೌರ್ ರ‍್ಯಾಂಕಿಂಗ್‌ನಲ್ಲಿ ಏರಿಕೆ ಕಂಡಿದ್ದಾರೆ.

'ನಿಯಮಗಳಿರಬೇಕು, ಅರಾಜಕತೆ ಅಲ್ಲ'

ಹೊಸದಿಲ್ಲಿ: ಯಾವುದೇ ಧಾರ್ಮಿಕ ಸಂಸ್ಥೆಯು ಸುಸೂತ್ರವಾಗಿ ನಡೆಯಬೇಕಾದರೆ ಅಲ್ಲಿ ರಚನಾತ್ಮಕ ವ್ಯವಸ್ಥೆ ಮತ್ತು ನೀತಿ ನಿಯಮಗಳ ಶಿಸ್ತು ಇರಬೇಕು. ಅರಾಜಕತೆಗೆ ಅವಕಾಶವಿರಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೇರಳದ ಶಬರಿಮಲೆ ಸೇರಿದಂತೆ ಕೆಲವು ದೇವಸ್ಥಾನಗಳಲ್ಲಿ ಮಹಿಳೆಯರ ವಿರುದ್ಧದ ತಾರತಮ್ಯ ಮತ್ತು ವಿವಿಧ ಧರ್ಮಗಳು ಆಚರಿಸುವ ಧಾರ್ಮಿಕ ಸ್ವಾತಂತ್ರ್ಯದ ವ್ಯಾಪ್ತಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ವೇಳೆ ನ್ಯಾಯಪೀಠ ಸಿಜೆಐ ಸೂರ್ಯಕಾಂತ್ ನೇತೃತ್ವದ 9 ಸದಸ್ಯರ ಸಾಂವಿಧಾನಿಕ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಧಾರ್ಮಿಕ ಸಂಸ್ಥೆಗಳಲ್ಲಿ ಅರಾಜಕತೆ ಇರಬಾರದು ಎಂದು ಹೇಳಿದ ನ್ಯಾಯಪೀಠವು, ''ಧಾರ್ಮಿಕ ಸಂಸ್ಥೆಯನ್ನು ನಿರ್ವಹಿಸುವ ಹಕ್ಕು ಎಂದರೆ ನಿರ್ದಿಷ್ಟ ವ್ಯವಸ್ಥೆ ಇಲ್ಲದೇ ನಡೆಯಬೇಕು ಎಂದರ್ಥವಲ್ಲ. ಆದರೆ ಕಾರ್ಯನಿರ್ವಹಣೆಗೆ ಸ್ಪಷ್ಟವಾದ ವಿಧಾನ ಮತ್ತು ಮಾನದಂಡಗಳು ಇರಬೇಕು,'' ಎಂದು ಹೇಳಿತು.

ವಿಚಾರಣೆಯ ಒಂದು ಹಂತದಲ್ಲಿ ಹಜರತ್ ಖ್ವಾಜಾ ನಿಜಾಮುದ್ದೀನ್ ಔಲಿಯಾ ದರ್ಗಾಕ್ಕೆ ಸಂಬಂಧಿಸಿದ ಚಿಸ್ತಿ ನಿಜಾಮಿ ವಂಶದ ನೇರ ವಂಶಸ್ಥರಾದ ಪೀರ್ಜಾದಾ ಸೈಯದ್ ಅಲ್ತಮಾಶ್ ನಿಜಾಮಿ ಪರ ಹಾಜರಿದ್ದ ವಕೀಲರು, ''ದರ್ಗಾವು ಸಂತರನ್ನು ಸಮಾಧಿ ಮಾಡಿದ ಸ್ಥಳವಾಗಿದೆ,'' ಎಂದು ವಾದಿಸಿದರು. ''ಇಸ್ಲಾಂ ಧರ್ಮದೊಳಗೆ ಮರಣದ ನಂತರ ಸಂತರ ಸ್ಥಾನಮಾನದ ಬಗ್ಗೆ ವಿಭಿನ್ನ ದೃಷ್ಟಿಕೋನಗಳಿವೆ. ಆದರೆ ಸೂಫಿ ನಂಬಿಕೆಯಲ್ಲಿ ಸಂತರನ್ನು ಸಮಾಧಿ ಮಾಡಿದ ಸ್ಥಳಕ್ಕೆ ಅಗಾಧವಾದ ಗೌರವ ಮತ್ತು ಭಕ್ತಿ ಭಾವನೆ ಇದೆ. ಧಾರ್ಮಿಕ ಸಂಸ್ಥೆಯಲ್ಲಿ ಪ್ರವೇಶವನ್ನು ನಿಯಂತ್ರಿಸುವ ಹಕ್ಕು ನಿರ್ವಹಣೆಯ ಭಾಗವಾಗಿದೆ,'' ಎಂದರು.

ಆಗ ನ್ಯಾಯಮೂರ್ತಿ ಅಹ್ಸಾನುದ್ದೀನ್ ಅಮಾನುಲ್ಲಾ ಅವರು, ''ನಿರ್ವಹಣೆಯ ಹಕ್ಕು ಎಂದರೆ ಅಲ್ಲಿ ಯಾವುದೇ ಸಾಂಸ್ಥಿಕ ಚೌಕಟ್ಟು ಇರಬಾರದು ಎಂದರ್ಥವಲ್ಲ. ಎಲ್ಲದಕ್ಕೂ ಒಂದು ನಿರ್ದಿಷ್ಟ ಕಾರ್ಯವಿಧಾನ ಇರಬೇಕು,'' ಎಂದರು.

ಸಂದಿಗ್ಧ ಸ್ಥಿತಿಯಲ್ಲಿ ಉಭಯ ದೇಶಗಳ ಶಾಂತಿ ಮಾತುಕತೆ । ಮಧ್ಯಸ್ಥಿಕೆಗೆ ಸಿದ್ಧವೆಂದ ರಷ್ಯಾ

ಇರಾನ್ ಸಂಧಾನ ಸೂತ್ರ ತಿರಸ್ಕರಿಸಿದ ಅಮೆರಿಕ

ಮಧ್ಯಪ್ರಾಚ್ಯ ರಣಾಂಗಣ

ವಾಷಿಂಗ್ಟನ್/ಟೆಹ್ರಾನ್: ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗಾಣಿಸಲು ಇರಾನ್ ಮುಂದಿಟ್ಟಿದ್ದ ಮೂರು ಹಂತದ ಸಂಧಾನ ಸೂತ್ರವನ್ನು ಅಮೆರಿಕ ತಿರಸ್ಕರಿಸಿದೆ. ಹರ್ಮುಜ್ ಜಲಸಂಧಿ ಮುಂದಿಟ್ಟುಕೊಂಡು ಮಂಡಿಸಿದ ಪ್ರಸ್ತಾಪ ಸ್ವೀಕರಾರ್ಹವಲ್ಲ ಎಂದು ಸ್ಪಷ್ಟಪಡಿಸಿದೆ.

''ಸಂಧಾನಕ್ಕೆ ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನ ಮೂಲಕ ಇರಾನ್ ರವಾನಿಸಿದ್ದ ಮೂರು ಹಂತದ ಸೂತ್ರವನ್ನು ಅಮೆರಿಕ ಮಾತ್ರವಲ್ಲ, ಯಾವ ದೇಶವೂ ಒಪ್ಪಲು ಸಾಧ್ಯವಿಲ್ಲ,'' ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.



ಯುದ್ಧ ಅಂತ್ಯ, ಹರ್ಮುಜ್ ಜಲಸಂಧಿ ಸಂಚಾರಕ್ಕೆ ಮುಕ್ತಗೊಳಿಸಲು ಕೆಲವೊಂದು ಷರತ್ತುಗಳ ಜತೆ ಮೂರು ಹಂತದ ಸಂಧಾನ ಸೂತ್ರವನ್ನು ಇರಾನ್ ಮಂಡಿಸಿದೆ.

ಇರಾನ್ ಪ್ರಸ್ತಾಪಿತ ಸಂಧಾನ ಸೂತ್ರವನ್ನು ಬಲವಾಗಿ ಟೀಕಿಸಿದ ರುಬಿಯೊ, ''ಇರಾನ್ ಷರತ್ತಿಗೆ ಸಮ್ಮತಿಸಿದರೆ ಅಂತಾರಾಷ್ಟ್ರೀಯ ಜಲಮಾರ್ಗ ಕಟ್ಟುನಿಟ್ಟಿನ ನಿಯಂತ್ರಣ ಕ್ರಮಗಳಿಗೆ ಒಳಪಡುತ್ತದೆ. ಜಲಸಂಧಿ ಮೇಲೆ ಹಿಡಿತ ಸಾಧಿಸುವ ಪ್ರಯತ್ನವನ್ನು ವಿಶ್ವದ ಯಾವ ದೇಶವೂ ಒಪ್ಪಿಕೊಳ್ಳುವುದಿಲ್ಲ. ಜಾಗತಿಕ ಜಲಮಾರ್ಗಗಳು ಹೇಗೆ ಕಾರ್ಯನಿರ್ವಹಿಸಬೇಕು ಎಂಬ ನಿಯಮಗಳನ್ನು ಮೀರಿದ ಇರಾನ್ ಷರತ್ತುಗಳಿಗೆ ಅಮೆರಿಕದ ಸಮ್ಮತಿ ಇಲ್ಲ,'' ಎಂದು ಹೇಳಿದ್ದಾರೆ.

ಮತ್ತೆ ಪಾಕ್‌ಗೆ ಅರಾಘಚಿ: ಅಮೆರಿಕ ಜತೆಗಿನ 2ನೇ ಸುತ್ತಿನ ಸಂಧಾನ ಸಭೆ ನಿಗದಿಯಾದ ಬಳಿಕ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ ಪಾಕಿಸ್ತಾನದ ಇಸ್ಲಾಮಾಬಾದ್‌ಗೆ ಮೂರು ಬಾರಿ ಭೇಟಿ ನೀಡಿದ್ದಾರೆ. ಶುಕ್ರವಾರ ಮಾತುಕತೆಗೆ ತೆರಳಿದ್ದ ಅರಾಘಚಿ ಅಮೆರಿಕ ನಿಯೋಗ ಬರುವ ಮೊದಲೇ ಒಮನ್‌ಗೆ ತೆರಳಿದ್ದರು. ಶನಿವಾರ ರಷ್ಯಾಗೆ ತೆರಳುವ ಮಾರ್ಗ ಮಧ್ಯೆ ಇಸ್ಲಾಮಾಬಾದ್‌ಗೆ ಮರಳಿ ಸಂಕ್ಷಿಪ್ತ ಮಾತುಕತೆ ನಡೆಸಿ, 3 ಹಂತದ ಸಂಧಾನ ಸೂತ್ರ ಮಂಡಿಸಿದ್ದರು. ರಷ್ಯಾದ ಸೇಂಟ್ ಪೀಟರ್ಸ್‌ಬರ್ಗ್‌ಗೆ ತೆರಳಿ ಅಧ್ಯಕ್ಷ ಪುಟಿನ್ ಜತೆ ಮಾತುಕತೆ ನಡೆಸಿದ ಬಳಿಕ ಟೆಹ್ರಾನ್‌ಗೆ ತೆರಳುವ ಮಾರ್ಗ ಮಧ್ಯೆ ಇಸ್ಲಾಮಾಬಾದ್‌ಗೆ ಮರಳಿದ್ದರು. ನೂರ್ ಖಾನ್ ವಾಯುನೆಲೆಯಲ್ಲಿ ಪಾಕ್ ನಾಯಕರ ಜತೆ ಔಪಚಾರಿಕ ಮಾತುಕತೆ ನಡೆಸಿದ್ದರು.

ಈ ಮಧ್ಯೆ, ಅಮೆರಿಕ ಜತೆಗಿನ ಸಂಧಾನ ಸಭೆಗೆ ಹರ್ಮುಜ್ ಜಲಸಂಧಿ ವಿಚಾರ ಇನ್ನೂ ನಿರ್ಣಾಯಕ ಅಂಶವಾಗಿ ಉಳಿದಿರುವುದರಿಂದ ಟೆಹ್ರಾನ್ ಇನ್ನೂ ಯುದ್ಧದ ಸ್ಥಿತಿಯಲ್ಲಿದೆ ಎಂದು ಇರಾನ್ ಸೇನೆ ಹೇಳಿದೆ.

ಇದರ ನಡುವೆ ಕೊಲ್ಲಿ ರಾಷ್ಟ್ರಗಳು ಜೆಡ್ಡಾದಲ್ಲಿ ಸಭೆ ನಡೆಸಿ, ಮುಂದಿನ ಸ್ಥಿತಿಗತಿಯ ಕುರಿತು ಚರ್ಚೆ ನಡೆಸುತ್ತಿವೆ. ಸಂಘರ್ಷದಲ್ಲಿ ತಮ್ಮ ದೇಶಗಳು ಗುರಿಯಾದ ನಂತರ ಕೊಲ್ಲಿ ರಾಷ್ಟ್ರಗಳ ನಾಯಕರ ಮೊದಲ ಮುಖಾಮುಖಿ ಇದಾಗಿದೆ.

ಇರಾನ್ ಕುಸಿದು ಬೀಳಲಿದೆ

''ಹರ್ಮುಜ್ ಜಲಸಂಧಿ ಮೇಲಿನ ದಿಗ್ಬಂಧನ ತೆರವುಗೊಳಿಸುವಂತೆ ಇರಾನ್ ದುಂಬಾಲು ಬಿದ್ದಿದೆ. ಬಂದರುಗಳ ಮೇಲಿನ ನಿರ್ಬಂಧ ಸಡಿಲಗೊಳಿಸುವಂತೆ ಗೋಗರೆಯುತ್ತಿದೆ,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೊಂಡಿದ್ದಾರೆ. ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿದ ಟ್ರಂಪ್, ''ಕಳೆದ 2 ತಿಂಗಳ ಸಂಘರ್ಷ, ಹರ್ಮುಜ್ ದಿಗ್ಬಂಧನದಿಂದ ಇರಾನ್ ಕುಸಿದು ಬೀಳುವ ಸ್ಥಿತಿ ತಲಪಿದೆ,'' ಎಂದಿದ್ದಾರೆ.

3 ದಿನದ ಬಳಿಕ ಮುಂದೇನು?

ಇರಾನ್ ವಿರುದ್ಧ ಯುದ್ಧ ಮುಂದುವರಿಸಲು ಅಮೆರಿಕ ಅಧ್ಯಕ್ಷ ಟ್ರಂಪ್‌ಗೆ ಮೂರು ದಿನ ಮಾತ್ರ ಉಳಿದಿದ್ದು, ಮುಂದಿನ ನಡೆಯ ಬಗ್ಗೆ ಕುತೂಹಲ ಮೂಡಿದೆ. ಅಮೆರಿಕದ ಯುದ್ಧ ಅಧಿಕಾರ ಕಾಯಿದೆ ಪ್ರಕಾರ ಸಂಸತ್ ಅನುಮೋದನೆ ಇಲ್ಲದೇ 60 ದಿನಗಳಿಗಿಂತ ಹೆಚ್ಚು ದಿನ ಯುದ್ಧ ನಡೆಸುವಂತಿಲ್ಲ. ಮೇ 1ಕ್ಕೆ ಇರಾನ್ ಯುದ್ಧಕ್ಕೆ 60 ದಿನ ಪೂರೈಸಲಿದ್ದು, ಸಮರ ಮುಂದುವರಿಸಲು ಸಂಸತ್ ಅನುಮೋದನೆ ಪಡೆಯಬೇಕಾಗುತ್ತದೆ. ಮೇ 1ರೊಳಗೆ ಶಾಂತಿ ಒಪ್ಪಂದ ಮೂಡಿದರೆ ಟ್ರಂಪ್ ಆಡಳಿತ ನಿರಾಳವಾಗಲಿದೆ. ಇಲ್ಲವಾದಲ್ಲಿ ಸಂಸತ್‌ನಲ್ಲಿ ಅಗ್ನಿ ಪರೀಕ್ಷೆ ಎದುರಿಸಬೇಕಾಗುತ್ತದೆ. ಯುದ್ಧ ಮುಂದುವರಿಸಲು ಮಿಲಿಟರಿ ಬಲದ ಅಧಿಕಾರ ಬಳಸಿಕೊಳ್ಳುವ ಅವಕಾಶವಿದೆಯಾದರೂ ಡೆಮಾಕ್ರಟಿಕ್ ಪಕ್ಷದ ಪ್ರಬಲ ವಿರೋಧ ಎದುರಿಸಬೇಕಾಗಬಹುದು.

ಟೆಹ್ರಾನ್‌ಗೆ ರಷ್ಯಾ ಬೆಂಬಲ

ಅಮೆರಿಕ-ಇರಾನ್ ಸಂಘರ್ಷ ಕೊನೆಗಾಣಿಸಲು ಮಧ್ಯಸ್ಥಿಕೆ ವಹಿಸಲು ಸಿದ್ಧ ಇರುವುದಾಗಿ ರಷ್ಯಾ ಹೇಳಿಕೊಂಡಿದೆ. ''ಪಶ್ಚಿಮ ಹಾಗೂ ಮಧ್ಯ ಏಷ್ಯಾದಲ್ಲಿ ಶಾಂತಿ, ಸ್ಥಿರತೆ ಸ್ಥಾಪಿಸಲು ಯುದ್ಧ ಪೀಡಿತ ಉಭಯ ದೇಶಗಳು ಸಮ್ಮತಿಸಿದರೆ ಸಂಧಾನಕಾರ ಪಾತ್ರವಹಿಸಲಾಗುವುದು,'' ಎಂದು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಘೋಷಿಸಿದ್ದಾರೆ. ರಷ್ಯಾ ಪ್ರವಾಸದಲ್ಲಿರುವ ಇರಾನ್ ವಿದೇಶಾಂಗ ಸಚಿವ ಸೈಯ್ಯದ್ ಅಬ್ಬಾಸ್ ಅರಾಘಚಿ ಅವರು ಸೇಂಟ್ ಪೀಟರ್ಸ್ ಬರ್ಗ್‌ನಲ್ಲಿ ಪುಟಿನ್‌ರನ್ನು ಭೇಟಿಯಾಗಿ ಪ್ರಸ್ತುತ ಸಂಘರ್ಷ, ರಾಜತಾಂತ್ರಿಕ ಬೆಳವಣಿಗೆ ಕುರಿತು ಸಮಾಲೋಚಿಸಿದರು.



ಹರ್ಮುಜ್ ದಾಟಿದ ಎಲ್‌ಎನ್‌ಜಿ ಶಿಪ್

ಫೆಬ್ರವರಿ 28ರಂದು ಇರಾನ್-ಅಮೆರಿಕ ನಡುವೆ ಯುದ್ಧ ಶುರುವಾದ ನಂತರ ಇದೇ ಮೊದಲ ಬಾರಿಗೆ ಎಲ್‌ಎನ್‌ಜಿ ಟ್ಯಾಂಕರ್ ಶಿಪ್ 'ಮುಬಾರಕ್' ಹರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದೆ. ಅಬುದಾಬಿಯ ನ್ಯಾಷನಲ್ ಆಯಿಲ್ ಕಂಪನಿಗೆ ಸೇರಿದ ದಾಸ್ ದ್ವೀಪದಲ್ಲಿ ಮಾರ್ಚ್ ಮೊದಲ ವಾರದಲ್ಲಿ ಶಿಪ್‌ಗೆ ಎಲ್‌ಎನ್‌ಜಿ ಲೋಡ್ ಆಗಿತ್ತು. ಅದು ಈಗ ಭಾರತದತ್ತ ಹೊರಟಿದೆ ಎಂದು ಶಿಪ್ ಟ್ರ್ಯಾಕಿಂಗ್ ದತ್ತಾಂಶ ತಿಳಿಸಿದೆ.

8ನೇ ವೇತನ ಆಯೋಗ

ಯಾರಿಗೆ ಹೆಚ್ಚು ಲಾಭ?

ವಿಜಯ ಕರ್ನಾಟಕ ವಿಕ INFO

ಕೇಂದ್ರ ಸರಕಾರಿ ನೌಕರರ ವೇತನ, ಭತ್ಯೆಗಳು ಮತ್ತು ನಿವೃತ್ತಿ ಸೌಲಭ್ಯಗಳ ಪರಿಷ್ಕರಣೆಗಾಗಿ ರಚಿಸಲಾಗಿರುವ 8ನೇ ಕೇಂದ್ರ ವೇತನ ಆಯೋಗವು ಮಂಗಳವಾರದಿಂದ ಸಂಬಂಧಿಸಿದ ಭಾಗಿದಾರರ ಜತೆ ಸಮಾಲೋಚನೆ ಆರಭಿಸಿದೆ. ಈ ಪ್ರಕ್ರಿಯೆ ಮೂರು ದಿನ ನಡೆಯಲಿದೆ.

ಹೊಸ ವೇತನ ಶ್ರೇಣಿಗಳು ಪ್ರಸಕ್ತ ವರ್ಷ ಜನವರಿ 1ರಿಂದ ಪೂರ್ವಾನ್ವಯವಾಗುವ ರೀತಿಯಲ್ಲಿ ಜಾರಿಯಾಗುವ ನಿರೀಕ್ಷೆ ಇದೆ. ಆದರೆ 8ನೇ ವೇತನ ಆಯೋಗದ ಪೂರ್ಣ ಜಾರಿಗೆ 2028ರ ತನಕ ಸಮಯ ಬೇಕಾಗಬಹುದು. ಆಗ ನೌಕರರು 17-18 ತಿಂಗಳ ಬಾಕಿಯನ್ನು ಒಟ್ಟು ಮೊತ್ತ ಇಲ್ಲವೇ ಕಂತುಗಳಲ್ಲಿ ಪಡೆಯುವರು.

ಮೂಲ ವೇತನ ಹೆಚ್ಚಳಕ್ಕೆ ಆಧಾರ: ಮೂಲ ವೇತನದ ಹೆಚ್ಚಳವು ಎರಡು ಪ್ರಮುಖ ಅಂಶಗಳ ಮೇಲೆ ಅವಲಂಬಿತವಾಗಿರುತ್ತದೆ. ಅವುಗಳೆಂದರೆ ಫಿಟ್ಮೆಂಟ್ ಫ್ಯಾಕ್ಟರ್ ಹಾಗೂ ಡಿಎ ವಿಲೀನ. 7ನೇ ವೇತನ ಆಯೋಗದಲ್ಲಿ ಫಿಟ್ಮೆಂಟ್ ಫ್ಯಾಕ್ಟರ್ 2.57 ಆಗಿತ್ತು. 8ನೇ ವೇತನ ಆಯೋಗಕ್ಕೆ ಇದು 2.46 ಆಗುವ ನಿರೀಕ್ಷೆಯಿದೆ. ಪ್ರತಿ ಹೊಸ ವೇತನ ಆಯೋಗದಲ್ಲಿ ತುಟ್ಟಿಭತ್ಯೆ (ಡಿಎ)ಯನ್ನು ಶೂನ್ಯಕ್ಕೆ ಮರುಹೊಂದಿಸಲಾಗುತ್ತದೆ. ಏಕೆಂದರೆ ಪರಿಷ್ಕೃತ ಮೂಲ ವೇತನವು ಈಗಾಗಲೇ ಹಣದುಬ್ಬರವನ್ನು ಒಳಗೊಂಡಿರುತ್ತದೆ. ಬಳಿಕ ಕೇಂದ್ರ ಸರಕಾರ ಕಾಲಕಾಲಕ್ಕೆ ಡಿಎ ದರವನ್ನು ನಿರ್ಧರಿಸುತ್ತದೆ. ಫಿಟ್ಮೆಂಟ್ ಅನ್ನು ಹಣದುಬ್ಬರ, ಜೀವನ ವೆಚ್ಚ ಮತ್ತು ವಿತ್ತೀಯ ಸ್ಥಿರತೆಯ ಸಾಧ್ಯತೆಯನ್ನು ಪರಿಗಣಿಸಿ ಲೆಕ್ಕ ಹಾಕಲಾಗುತ್ತದೆ.

ವೇತನ ಹೆಚ್ಚಳ ಎಷ್ಟಾಗಬಹುದು?: ಪ್ರಸ್ತುತ ಡಿಎ ಮೂಲವೇತನದ ಶೇ.60 ರಷ್ಟಿದೆ. ವಿಲೀನಗೊಂಡ ನಂತರ ಒಟ್ಟು ಸಂಬಳದ ಹೆಚ್ಚಳವು (ಮೂಲ ವೇತನ + ಡಿಎ + ಎಚ್‌ಆರ್‌ಎ) ಆರಂಭದಲ್ಲಿ ಚಿಕ್ಕದಾಗಿ ಕಾಣಿಸಬಹುದು.

ಫಲಾನುಭವಿಗಳು

- ಕೇಂದ್ರ ಸರಕಾರಿ ನೌಕರರು
- ರಕ್ಷಣಾ ಸಿಬ್ಬಂದಿ
- ರೈಲ್ವೆ ನೌಕರರು
- ಕೇಂದ್ರೀಯ ಶಿಕ್ಷಣ ಸಂಸ್ಥೆಗಳ ಶಿಕ್ಷಕರು
- ಸರಕಾರಿ ಸ್ವಾಮ್ಯದ ಉದ್ದಿಮೆಗಳು
- ಕೇಂದ್ರ ಸರಕಾರದ ಪಿಂಚಣಿದಾರರು

ಯಾರಿಗೆ ಅನ್ವಯವಾಗುವುದಿಲ್ಲ?

- ರಾಜ್ಯ ಸರಕಾರಿ ನೌಕರರು (ರಾಜ್ಯ ಸರಕಾರಗಳು ಪ್ರತ್ಯೇಕ ವೇತನ ಆಯೋಗಗಳನ್ನು ನೇಮಿಸುತ್ತವೆ)
- ಸಾರ್ವಜನಿಕ ವಲಯದ ಬ್ಯಾಂಕ್ ನೌಕರರು (ಇವರು ಐಬಿಎ ಜೊತೆಗಿನ ದ್ವಿಪಕ್ಷೀಯ ಒಪ್ಪಂದಗಳನ್ನು ಅನುಸರಿಸುತ್ತಾರೆ)
- ಆರ್‌ಬಿಐ ಮತ್ತು ಇತರ ನಿಯಂತ್ರಕ ಸಂಸ್ಥೆಗಳ ನೌಕರರು
- ಬ್ಯಾಂಕ್ ಪಿಂಚಣಿದಾರರು

ಉದಾಹರಣೆ: 6ನೇ ಹಂತದ ಶ್ರೇಣಿ ನೌಕರರ ಮೂಲ ವೇತನವು 7ನೇ ವೇತನ ಆಯೋಗದ ಶಿಫಾರಸಿನಂತೆ ಪ್ರಸ್ತುತ 35,400 ರೂ. ಅದಕ್ಕೆ ಶೇ.60ರಷ್ಟು ಡಿ.ಎ (21,240 ರೂ.) ಮತ್ತು ಶೇ.27ರಷ್ಟು ಎಚ್‌ಆರ್‌ಎ (9,558 ರೂ.) ಸೇರಿದರೆ ಒಟ್ಟು ಸಂಬಳ: 66,198 ರೂ. ಆಗುತ್ತದೆ. ಇದು 8ನೇ ವೇತನ ಆಯೋಗದ ಅಡಿಯಲ್ಲಿ (ಫಿಟ್‌ಮೆಂಟ್ ಫ್ಯಾಕ್ಟರ್ 2.46) ಎಂದು ಪರಿಗಣಿಸಿದರೆ, ಹೊಸ ಮೂಲ ವೇತನ: 35,400 X 2.46 = 87,084 ರೂ., ಶೇ.27ರಷ್ಟು ಎಚ್‌ಆರ್‌ಎ (23,513 ರೂ.) ಸೇರಿಸಿದರೆ ಒಟ್ಟು ಸಂಬಳ: 1,10,597 ರೂ. ಆಗಲಿದೆ. ಇಲ್ಲಿ ಡಿ.ಎಯನ್ನು ಶೂನ್ಯ ಎಂದು ಪರಿಗಣಿಸಲಾಗುತ್ತದೆ.